WANTED APARTMENT Maintenance Supervisors Exp:5–10years Salary:45,000/- Age Below 45years Two Wheeler`is Mandate Free Family Accommodation Call:7338084555 9845053636:Mail saiconstructions7889@gmail.com Interview Time: 10am`to`1pm

FOR MEDICINE DISTRIBUTORS DELIVERY BOYS- with 2 Wheeler & License OFFICE EXECUTIVE- Degree, MS Excel MARKETING EXECUTIVE- Exp and 2 wheeler Good Salary +ESI, PF, Petrol Allowance Bonus etc., Contact: Zenex International 77/k, 1st floor 17th cross 4th stage 4th block Basaveswaranagar Bangalore. Phone: 9513522201 zenexmannapur@gmail.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

RENTAL PROPERTIES

Accommodation Available

Flats

ONE 3 BR +1STUDY ROOM FLAT IN FF WTH 3 BATHROOMS PUJA ROOM MODULAR KITCHEN WARDROBES COVERED CAR +2 WHEELER PARKING IN NANJAMMA L/O RTNAGAR RENT RS 35000+MAINT 9449288775/9480021317

Godown

BUILT TO Suit for Rent- Vacant Land with clear title suitable for Godown/ Ware House/ Logistics, North facing property with 25feet road Access. Near to Sir M. Vishweshwaraiah Railway Terminal, Old Byappanahalli, Bangalore-560033, measuring 30x60, totally 1800sqft. Raja: 9448052352, 9008229843

REAL ESTATE BUYING

Sites

HSR Layout

WANTED 50X80 HSR Layout 1, 2, 3, 4 and 7th Sector Immediate Settlement Contact Ullas_Aswath 9845074355

PERSONAL

Change of Name

ROMA KUMARI, Wife/o 6495219W, HAV, AMARJEET KUMAR RAY, Vill- Fateh Pur Kamali, Mahanar Veshali, BIHAR changed name ROMA KUMARI to ROMA DEVI, 01/05/2023, Notary K.V. Mani, Bangalore

I, MOHINDRU VIKRAM KIRAN S/o.Kiran Mohindru R/a Sobha Indraprastha Flat#2032, 3rd Floor Rajajinagar 2nd stage behind Lulu Hypermarket mall Gopalapura, Bangalore- 560023 Have changed my name to VIKRAM MOHINDRU vide affidavit dated 28-04-2023 before Notary L.Gopalakrishna, Bangalore

AMIT KUMAR, 6506844A, SEP, Vill- Vinayakpur, Lakhanmau, Karhal, Mainpuri, Uttar Pradesh changed Son's name RIHANS to RIHANSH YADAV, 01/05/2023, Notary K.V. Mani, Bangalore

I MUNIRAJU BHADRAPPA R/a. #50, Hridhaya, SCR Layout, Gollahalli Anjanapura, JP Nagar 9th phase, Bangalore- 560062 Changed my Minor Daughter's Name From KSHITI MUNIRAJU GOWDA To KSHITI KUNCHA Vide Affidavit Dated 02/05/2023 before Notary Mohammed Hussain. K Bangalore.

CHANGE OF NAME
I, FEROZ GUARD S/o. Abdul Sattar R/o H.No. 34, Desai Park, opposite Krishna Apartment, Keshwapur, Hubballi-580023 District Dharwad. Have changed my Son's Name from AAQIL FEROZ GUARD (Old Name) to AAQIL GUARD (New Name) vide affidavit dated 17-03-2023 before Notary Honakerappa Horakeri, Hubballi.

CHANGE OF NAME
I, PALANI KALAIVANAN R/@ No. 118, 1st Main Road, Dayanandanagar, Srirampura, Bengaluru-560021, have changed my name to **S.P. KALAI** vide affidavit dated 02.05.2023 before Notary B.R. Shashikala, Bangalore. Henceforth I shall be known / called **S.P. KALAI** only

CHANGE OF NAME
I, SURESH K S/o K. Kesava Pillai,employed as Major General in the appointment of Director, DIQA, Bengaluru-46, R/@ No. A-1, DIQA House, Officers Residential Complex, JC Nagar Post, Bengaluru-560006, have changed my name to **SURESH K PILLAI** vide affidavit dated 01.05.2023 before Notary Sivakumara M.N., Bangalore.

Lost

I, VAISHNAVI GANESH D/o. Ganesh Lost my ICSE 10th marks card 2017 Unique ID.6464248 Akash international school, Bangalore. If anybody found please Call:9686139345 nearby police station.

DOCUMENT LOST
I, Krishnamurthy M Residing at Chikkabanavara behind Gangamma Temple Near Bus Stop, Hesaraghatta Main Road have lost Registered Sale Deed No 4095- dt 02/09/1964, Survey No 118/2 , Site no. 7 and 8. Chikkabanavara Lost Report No.0541307/2023 Finders Please contact Krishnamurthy M 9741611114

CONNECT ಕ್ಲಾಸಿಫೈಡ್ಸ್

GOODWILL CHRISTIAN COLLEGE FOR WOMEN
No.10, Promenade Road, Frazer Town (Opp. Coles Park) Bengaluru - 560 005
CSI Karnataka Central Diocese
Affiliated to Bengaluru North University
NAAC ACCREDITED
Phone: 080 - 41516793, 41100422, 7022905576
Website: www.goodwillchristiancollege.com
E-mail: goodwillchristiancollege@gmail.com
Instagram: goodwillchristiancollege
ADMISSIONS OPEN 2023 - 2024
COURSES OFFERED
B.Com BBA BCA B.Sc B.A.
ROUNAQH

MYSORE EDUCATION SOCIETY
"Brahmi", No. 62, 10th Main, 15th Cross, Malleswaram, Bengaluru - 560003
and
MES College of Arts, Commerce & Science
'Vidyasagara', Prof. M.P.L. Sastry Road, 15th cross, Malleswaram, Bengaluru - 560003.
website: www.mesacs.in (Affiliated to Bengaluru City University)
Take pride in congratulating our Rank holders
Batch 2019 - 2022

NAYANA S.
1st Rank B.Sc., (PMCS)
Reg. No. S1914090

SANJAY B
6th Rank B.Sc., (PMS)
Reg. No. S1914158

PRANAMYA N P
8th Rank B.Sc., (BZPy)
Reg. No. S1913833

PREETHA D V
4th Rank B.A., (PES)
Reg. No. A1917410

SHUBRA C.DIVAKARA
8th Rank B.A., (PES)
Reg. No. A1917415

KEERTHANA P.S.
10th Rank B.A., (HES)
Reg. No. A1917471

Batch 2020 - 2022

CHANDANA P.
4th Rank M.Sc., (Mathematics)
Reg. No. MT200608

MES College of Arts, Commerce & Science
'Vidyasagara', Prof. M.P.L. Sastry Road, 15th cross, Malleswaram, Bengaluru - 560003.
(Affiliated to Bengaluru City University)
Admissions open to B.A., B.Sc., B.Com 2023-24
- Value based Education
- Experienced Faculty
- Effective transaction of curriculum
- Excellent Infrastructure
- Wi-fi enabled campus
- Guest lectures, workshops and seminars
- Co-curricular and extracurricular activities
- Add-on courses
- Industrial visits and field trips
- Student-centric research projects
- Student-centric committees/clubs
- NSS, NCC, Rotaract Club, Rangers & Rovers, Youth Red Cross
- Mentorship & Counselling
- Collaborations / MoUs with Industries / Organisations towards internships
- Pre placement training & Campus Placements

Management — Principal & Staff

NavaShakthi Chits Pvt. Ltd.

Sl. No.	Chit Value	No. Of Months	Monthly Subscription
1	1,00,000	25	4,000
2	1,50,000	30	5,000
3	3,00,000	30	10,000
4	5,00,000	40	12,500
5	5,00,000	25	20,000
6	10,00,000	40	25,000
7	10,00,000	25	40,000
8	20,00,000	40	50,000
9	25,00,000	25	1,00,000
10	30,00,000	30	1,00,000
11	50,00,000	40	1,25,000
12	50,00,000	25	2,00,000
13	1,00,00,000	40	2,50,000
14	1,00,00,000	25	4,00,000

*T & C Apply
Reg. Off : No. 553/7th Cross, 3rd Main, Ayyappa Temple Road, Prakash Nagar, Bengaluru - 560 021, Karnataka
Phone : 91 80 - 234203611 / 2332 8880
Mobile : 9538277677 / 7829330324
E-mail : info@navashakthichits.com
Website : www.navashakthichits.com | www.shakthigroup.com
An Initiative of Shakthi Group

ವಿಶ್ವವಿಖ್ಯಾತ ಕೇರಳ ಜ್ಯೋತಿಷ್ಯರು
ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್
ಕಳೆದ 35 ವರ್ಷಗಳಿಂದ ಬೆಂಗಳೂರಿನಲ್ಲಿ ನಿರಂತರವಾಗಿ ನೆಲೆಸಿದ್ದಾರೆ. ಇವರನ್ನು ಇಂದೇ ಭೇಟಿಮಾಡಿ ನಿಮ್ಮ ಉದ್ಯೋಗ, ವ್ಯಾಪಾರ, ಅದೃಷ್ಟ, ಕುಟುಂಬ ಸಮಸ್ಯೆ,ಮದುವೆಯೋಗ, ಪ್ರೇಮ–ಪ್ರೀತಿ, ಆರೋಗ್ಯ, ವಿದೇಶ ಪ್ರಯಾಣ, ಶತ್ರು ದೋಷ, ಲಕ್ಷ್ಮಿಯೋಗ ಮತ್ತು ಮಕ್ಕಳ ವಿದ್ಯಾಭ್ಯಾಸ ಮತ್ತು ನಿಮ್ಮ ಜೀವನವು ಉತ್ತಮವಾಗಿ ಮೂಡಿಬರಲು ಕೇರಳ ಜ್ಯೋತಿಷ್ಯ ಶಕ್ತಿಯ ಮೂಲಕವಾಗಿಯೂ, ಗುರೂಜಿಯ ದಿವ್ಯಶಕ್ತಿಯಿಂದಲೂ, ಶಕ್ತಿಯುತವಾದ ಪರಿಹಾರ ನೀಡುವರು.
ಸೂಚನೆ : ಇಲ್ಲಿ ಹೇಳುವ ವಿಚಾರಗಳನ್ನು ರಹಸ್ಯವಾಗಿ ಇಡಲಾಗುತ್ತದೆ.
ಸಂದರ್ಶನದ ಸ್ಥಳ: ಶ್ರೀ ಗುರೂಜಿ ಜಿ.ಕೆ.ಡಿ. ದಿವ್ಯದಾಸನ್ (ಕೇರಳ)
ಹೋಟೆಲ್ ಸಭಾರ್‌ವಾಲ್ ವೈಸ್‌ರಾಯ್, ರೂಂ ನಂ. 102, ಲಾಲ್‌ಬಾಗ್ ಫೋರ್ಟ್ ರಸ್ತೆ, ಮಿನರ್ವ ವೃತ್ತ, (ನಂದಿನಿ ಹೋಟೆಲ್ ಎದುರು) ಬೆಂಗಳೂರು–04.
ನಂ. 24, 1ನೇ ಅಡ್ಡರಸ್ತೆ, ಕಮ್ಮನಹಳ್ಳಿ, ಕುಳ್ಳಪ್ಪ ವೃತ್ತ, ಬಾಣಸವಾಡಿ, ಸಿಟಿ ಸೂಪರ್ ಮಾರ್ಕೆಟ್ ಹತ್ತಿರ, ಬೆಂಗಳೂರು–84.
Ph: 080 25420833, 98441 65272 / 99727 41083
ಭೇಟಿಯ ವೇಳೆ: ಬೆಳಗ್ಗೆ 9 ರಿಂದ ಮಧ್ಯಾಹ್ನ 1 ರವರೆಗೆ
ಸಂಜೆ 3 ರಿಂದ ರಾತ್ರಿ 8 ರವರೆಗೆ (ಭಾನುವಾರವೂ ತೆರೆದಿರುತ್ತದೆ)

DH ಪ್ರಜಾವಾಣಿ
Classifieds
Education Special
For More Details Contact:
9731810277 | 9901641752
9845114560 | 9886213331
080- 45557163 | 45557164
Email : dhclassifieds@deccanherald.co.in
SPECIAL RATES FOR
Admission Notice
Education Success
Congratulation Ads
*conditions apply

NARGUND GROUP OF INSTITUTIONS
SET's Bangalore Since 1992

ADMISSION OPEN FOR 2023-2024
+91 8026720604 | +91 9886201746
+91 7019425622 | +91 9448270604
office@nargund.edu.in
www.nargund.edu.in
2nd main, Dattatreyanagar, BSK 3rd stage, Bangalore-85

BANGALORE CAMPUS		KOPPAL CAMPUS	
Nargund College of Pharmacy	B. Pharm | D. Pharm | Pharm. D M. Pharm | Ph. D	Dr. Gurachar Nargund College of Pharmacy	B. PHARM | D. PHARM
Nargund College of Physiotherapy	Bachelor of Physiotherapy	Bheemajja PU College	PCMB | HEBA
Nargund Independent PU College	PCMB | HEBA		

ನಿರ್ಮಾಣ ಹಂತದಲ್ಲಿರುವ ಮನೆಗಳು ಜಲಾವೃತ; ಹಳ್ಳಕೊಳ್ಳಗಳು ಭರ್ತಿ

ಕುಶಾಲನಗರ: 3 ತಾಸು ಮಳೆ

ಪ್ರಜಾವಾಣಿ ವಾರ್ತೆ

ಕುಶಾಲನಗರದಲ್ಲಿ ಮಂಗಳವಾರ ಸುರಿದ ಮಳೆಗೆ ನಿರ್ಮಾಣ ಹಂತದಲ್ಲಿದ್ದ ಮನೆಗಳು ಜಲಾವೃತವಾದವು

ಕುಶಾಲನಗರ (ಕೊಡಗು ಜಿಲ್ಲೆ): ಪಟ್ಟಣದಲ್ಲಿ ಮಂಗಳವಾರ ಮೂರು ತಾಸು ಗುಡುಗು, ಸಿಡಿಲಿನ ಆರ್ಭಟದೊಂದಿಗೆ ನಿರಂತರವಾಗಿ ಮಳೆ ಸುರಿಯಿತು. ಚೈತ್ರಾ ಬಡಾವಣೆ, ಕಾರು ಚಾಲಕರ ಬಡಾವಣೆ, ಕಾಳೇಗೌಡ ಬಡಾವಣೆಯಲ್ಲಿ ಚರಂಡಿ, ರಸ್ತೆ, ಉದ್ಯಾನ ಹಾಗೂ ನಿರ್ಮಾಣ ಹಂತದಲ್ಲಿರುವ ಮನೆಗಳು ನೀರಿನಿಂದ ಜಲಾವೃತಗೊಂಡವು.

ಮಡಿಕೇರಿ ನಗರದಲ್ಲೂ ಸಂಜೆ ನಂತರ ಬಿರುಸಿನ ಮಳೆ ಸುರಿಯಿತು. ಪೊನ್ನಂಪೇಟೆ, ಗೋಣಿಕೊಪ್ಪಲು, ತಿತಿಮತಿ, ನಾಗರಹೊಳೆ, ಶ್ರೀಮಂಗಲದಲ್ಲೂ ಸಾಧಾರಣ ಮಳೆಯಾಗಿದೆ.

ವಿರಾಜಪೇಟೆ ತಾಲ್ಲೂಕಿನ ಕಾಕೋಟುಪರಂಬುವಿನಲ್ಲಿ 8 ಸೆಂ.ಮೀ ಹಾಗೂ ಕುಶಾಲನಗರ ಸಮೀಪದ ಗುಡ್ಡೆಹೊಸೂರಿನಲ್ಲಿ 7 ಸೆಂ.ಮೀನಷ್ಟು ಮಳೆ ಸುರಿದಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು ತಿಳಿಸಿವೆ.

ಹಾಸನದಲ್ಲಿ ಉತ್ತಮ ಮಳೆ: ನಗರದಲ್ಲಿ ಉತ್ತಮ ಮಳೆಯಾಗಿದೆ. ಸಂಜೆ 6.15 ರಿಂದ ಆರಂಭವಾದ ಮಳೆ ನಿರಂತರವಾಗಿ ಸುರಿಯಿತು. ಜಿಲ್ಲೆಯ ಅರಕಲಗೂಡು ಸೇರಿದಂತೆ ಹಲವು ಗ್ರಾಮಗಳಲ್ಲಿ ಒಳ್ಳೆಯ ಮಳೆ ಬಿದ್ದಿದೆ.

ಮನೆ ಕುಸಿದು ಮಗು ಸೇರಿ ಇಬ್ಬರ ಸಾವು

ಕನಕಗಿರಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಜೀರಾಳ ಗ್ರಾಮದಲ್ಲಿ ಮಳೆಗೆ ಶಿಥಿಲಗೊಂಡಿದ್ದ ಮನೆಯ ಗೋಡೆ ಮತ್ತು ಚಾವಣಿ ಮಂಗಳವಾರ ಬೆಳಗಿನ ಜಾವ ಕುಸಿದು 24 ದಿನದ ಹೆಣ್ಣು ಮಗು ಮತ್ತು ಫಕೀರಮ್ಮ ತಿಮ್ಮಣ್ಣ ಭೋವಿ (60) ಎಂಬುವರು ಮೃತಪಟ್ಟಿದ್ದಾರೆ.

‘ಕನಕಮ್ಮ ಅವರು ಈಚೆಗೆ ಹೆಣ್ಣುಮಗುವಿಗೆ ಜನ್ಮನೀಡಿದ್ದರು. ಅವರ ತಾಯಿ ಫಕೀರಮ್ಮ ಮತ್ತು ಹೆಣ್ಣುಮಗು ಮೃತಪಟ್ಟಿದೆ. ಕನಕಮ್ಮ ಅವರ ಕಾಲಿಗೆ ಪೆಟ್ಟು ಬಿದ್ದಿದ್ದು, ಅವರ ಪತಿ ಕನಕಪ್ಪ ಮನೆಯ ಹೊರಗಡೆ ಮಲಗಿದ್ದು ಯಾವುದೇ ಅಪಾಯವಾಗಿಲ್ಲ. ಎರಡು ದಿನಗಳ ಹಿಂದೆ ಸುರಿದ ಜೋರು ಮಳೆಗೆ ಮನೆಯ ಗೋಡೆ ಶಿಥಿಲಗೊಂಡಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬೆಳಗಿನ ಜಾವ ಜೋರಾಗಿ ಬೀಸಿದ ಗಾಳಿಗೆ ಚಾವಣಿಗೆ ಹಾಕಲಾಗಿದ್ದ ಸಿಮೆಂಟ್ ಶೀಟುಗಳು ಮನೆಯಲ್ಲಿ ಮಲಗಿದವರ ಮೇಲೆ ಬಿದ್ದು ಪುಡಿಪುಡಿಯಾದವು. ಮನೆ ಸೇರಿದಂತೆ ಗೃಹಬಳಕೆ ವಸ್ತುಗಳು ಹಾನಿಯಾಗಿವೆ’ ಎಂದು ಅವರು ತಿಳಿಸಿದ್ದಾರೆ.

ಮಧುಚಂದ್ರಕ್ಕೆ 60 ದಿನ ಪೆರೋಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಪ್ರೇಯಸಿಯನ್ನು ಮದುವೆಯಾಗಲು ಕೊಲೆ ಅಪರಾಧಿಯೊಬ್ಬರಿಗೆ 15 ದಿನಗಳ ಅವಕಾಶ ಕಲ್ಪಿಸಿದ್ದ ಹೈಕೋರ್ಟ್ ಇದೀಗ; ಮಧುಚಂದ್ರ ಮತ್ತು ಇತರೆ ಧಾರ್ಮಿಕ ಕಾರ್ಯಕ್ರಮಗಳಿಗೆಂದು ಪೆರೋಲ್ ಅವಧಿಯನ್ನು 60 ದಿನಗಳ ಕಾಲ ವಿಸ್ತರಿಸಿದೆ.

ಈ ಸಂಬಂಧ ಕೈದಿ ಆನಂದ್ ಎಂಬುವರು ಸಲ್ಲಿಸಿದ್ದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿರುವ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಅರ್ಜಿದಾರರು ಪೆರೋಲ್ ಅವಧಿಯಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 5 ಗಂಟೆಯೊಳಗೆ ಸಂಬಂಧಪಟ್ಟ ಠಾಣೆಗೆ ಹಾಜರಾಗಬೇಕು’ ಎಂಬ ಷರತ್ತಿನೊಂದಿಗೆ ಅವಧಿ ವಿಸ್ತರಿಸಿದೆ.

‘ನಾನು ನನ್ನ ಪ್ರೇಯಸಿಯನ್ನು 2023ರ ಏಪ್ರಿಲ್ 11ರಂದು ನೋಂದಣಾಧಿಕಾರಿ ಸಮ್ಮುಖದಲ್ಲಿ ಕಾನೂನುಬದ್ಧವಾಗಿ ವಿವಾಹವಾಗಿದ್ದೇನೆ. ಆದರೆ, ನನ್ನ ಪತ್ನಿಯ ಕಡೆಯವರು ಹಿಂದೂ ಧರ್ಮದ ಸಂಪ್ರದಾಯಗಳಿಗೆ ಅನುಗುಣವಾಗಿ ಜೂನ್ ಮೊದಲ ವಾರದಲ್ಲಿ ಬಂಧು–ಬಾಂಧವರ ಉಪಸ್ಥಿತಿಯಲ್ಲಿ ಕಲ್ಯಾಣ ಮಂಟಪದಲ್ಲಿ ನಮ್ಮ ಲಗ್ನ ನೆರವೇರಿಸಲು ನಿಶ್ಚಯಿಸಿದ್ದಾರೆ. ಹೀಗಾಗಿ, ಲಗ್ನದ ನಂತರದ ಮಧುಚಂದ್ರ ಮತ್ತು ದೇವಸ್ಥಾನಗಳಿಗೆ ಭೇಟಿ ನೀಡುವ ಅನೂಚಾನ ಕಾರ್ಯಕ್ರಮಗಳಲ್ಲಿ ಭಾಗಿಯಾಗಲು ನನಗೆ ಇನ್ನಷ್ಟು ಸಮಯ ಬೇಕಿದೆ. ಆದರೆ, ಈ ಹಿಂದೆ ಮಂಜೂರು ಮಾಡಿರುವ ಪೆರೋಲ್ ಅವಧಿ ಏಪ್ರಿಲ್ 20ಕ್ಕೆ ಕೊನೆಯಾಗಲಿದ್ದು ಸಾಂಪ್ರದಾಯಿಕ ವಿಧಿವಿಧಾನಗಳನ್ನು ಪೂರೈಸಲು ಪುನಃ 60 ದಿನಗಳ ಕಾಲ ಪೆರೋಲ್ ಅವಧಿ ವಿಸ್ತರಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಅರ್ಜಿದಾರರ ಪರ ವಕೀಲ ಡಿ. ಮೋಹನ್ ಕುಮಾರ್, ಕೆ.ರಾಘವೇಂದ್ರ ಗೌಡ ಮತ್ತು ರಾಜ್ಯ ಪ್ರಾಸಿಕ್ಯೂಷನ್ ಪರವಾಗಿ ಎಂ. ವಿನೋದ್ ಕುಮಾರ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಸ್ಥಿರಾಸ್ತಿ ವ್ಯಾಜ್ಯವೊಂದಕ್ಕೆ ಸಂಬಂಧಿಸಿ 2015ರ ಆಗಸ್ಟ್ 16ರಂದು ಮಾಸ್ತಿ ಹೋಬಳಿಯ ನಾಗದೇನಹಳ್ಳಿಯಲ್ಲಿ ನಡೆದಿದ್ದ ವ್ಯಕ್ತಿಯೊಬ್ಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಆನಂದ್ (ಘಟನೆ ನಡೆದಾಗ 21 ವರ್ಷ) ಅವರನ್ನು ಮಾಸ್ತಿ ಠಾಣೆ ಪೊಲೀಸರು 2015ರ ಆಗಸ್ಟ್ 17ರಂದು ಬಂಧಿಸಿದ್ದರು. ನಂತರ ಸೆಷನ್ಸ್ ನ್ಯಾಯಾಲಯ 2019ರಲ್ಲಿ ಆರೋಪಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಇದನ್ನು ಪ್ರಶ್ನಿಸಲಾದ ಮೇಲ್ಮನವಿಯಲ್ಲಿ ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ಶಿಕ್ಷೆಯ ಪ್ರಮಾಣವನ್ನು 10 ವರ್ಷಗಳಿಗೆ ಇಳಿಸಿದೆ.

‘ಕೈದಿ ಆನಂದನನ್ನು ನಾನು ಕಳೆದ ಒಂಬತ್ತು ವರ್ಷಗಳಿಂದ ಮನದುಂಬಿ ಪ್ರೀತಿಸುತ್ತಿದ್ದೇನೆ. ಈಗ ಅವನನ್ನೇ ಮದುವೆಯಾಗಬೇಕು. ಆದ್ದರಿಂದ, ಇದಕ್ಕಾಗಿ ಅವಕಾಶ ಮಾಡಿಕೊಡುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು’ ಎಂದು ಕೋಲಾರ ಜಿಲ್ಲೆಯ ದಿಣ್ಣೆಕೊತ್ತೂರಿನ ಜಿ.ನೀತಾ (30) ಎಂಬುವರು (ಕೈದಿಯ ಪ್ರಿಯತಮೆ) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಈ ಮೊದಲು ಪುರಸ್ಕರಿಸಿದ್ದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಆನಂದ್‌ಗೆ ಮದುವೆಗೆಂದು ಪೆರೋಲ್ ನೀಡಿತ್ತು.

ರಾಹುಲ್‌ಗಿಲ್ಲ ಹೈಕೋರ್ಟ್ ಮಧ್ಯಂತರ ರಕ್ಷಣೆ

ಒಂದನೇ ಪುಟದಿಂದ...

ರಾಹುಲ್ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲ ಅಭಿಷೇಕ್ ಮನು ಸಿಂಘ್ವಿ, ‘ಹೈಕೋರ್ಟ್‌ಗೆ ಒಂದು ತಿಂಗಳು ಬೇಸಿಗೆ ರಜೆ ಇರುವುದರಿಂದಾಗಿ ಅಂತಿಮ ಆದೇಶ ಪ್ರಕಟಿಸಬೇಕು. ಇಲ್ಲವೇ ತಮ್ಮ ಕಕ್ಷಿದಾರರಿಗೆ ಮಧ್ಯಂತರ ರಕ್ಷಣೆ ನೀಡಬೇಕು’ ಎಂದು ಮನವಿ ಮಾಡಿದರು.

‘ನಾನು ವಿದೇಶ ಪ್ರಯಾಣ ಕೈಗೊಳ್ಳುತ್ತಿದ್ದೇನೆ. ಹೀಗಾಗಿ ಬೇಸಿಗೆ ರಜೆ ಬಳಿಕವೇ ಅಂತಿಮ ತೀರ್ಪು ಪ್ರಕಟಿಸಲಾಗುವುದು’ ಎಂದು ನ್ಯಾಯಮೂರ್ತಿ ಹೇಮಂತ್ ಹೇಳಿದರು.

‘ಮಾನಹಾನಿ ಪ್ರಕರಣದಲ್ಲಿ ವ್ಯಕ್ತಿಯೊಬ್ಬರಿಗೆ ಗರಿಷ್ಠ ಶಿಕ್ಷೆ ವಿಧಿಸಿರುವುದು ಇದೇ ಮೊದಲು. ರಾಹುಲ್ ವಿರುದ್ಧದ ಪ್ರಕರಣವು ಗಂಭೀರವಾದುದಲ್ಲ. ಅದು ಸಮಾಜ ವಿರೋಧಿ ಕೃತ್ಯದ ವ್ಯಾಪ್ತಿಗೂ ಒಳಪಡುವುದಿಲ್ಲ. ಶಿಕ್ಷೆಗೆ ತಡೆ ನೀಡಬೇಕು’ ಎಂದೂ ಸಿಂಘ್ವಿ ಕೋರಿದರು.

ಗುಜರಾತ್‌ನ ಬಿಜೆಪಿ ಶಾಸಕ, ದೂರುದಾರ ಪೂರ್ಣೇಶ್ ಮೋದಿ ಪರ ವಕೀಲ ನಿರುಪಮ್ ನಾನಾವತಿ ವಾದಿಸಿದರು. ‘ಮೋದಿ ಉಪನಾಮ ಹೊಂದಿರುವವರೆಲ್ಲರೂ ಕಳ್ಳರು ಎಂದು ನೀವು ಹೇಳುತ್ತೀರಿ. ಇದು ನೈತಿಕ ಅಧಃಪತನವಲ್ಲವೇ? ನಿಮ್ಮ ಹೇಳಿಕೆ ಮೂಲಕ ಜಗತ್ತಿಗೆ ಯಾವ ಸಂದೇಶ ನೀಡುತ್ತಿದ್ದೀರಿ? ವಿರೋಧ ಪಕ್ಷದ ನಾಯಕರಾದವರು ಸಾವಿರಾರು ಜನರ ಮುಂದೆ ಪ್ರಧಾನಿಯನ್ನು ಕಳ್ಳ ಎಂದು ಬಿಂಬಿಸುವುದು ಸರಿಯೇ? ನೀವು ಪ್ರಯೋಗಿಸಿದ್ದು ಸರಿಯಾದ ಭಾಷೆಯೇ’ ಎಂದು ಪ್ರಶ್ನಿಸಿದರು.

ಕ್ಷಮೆ ಕೇಳುವುದಿಲ್ಲವೆಂದು ರಾಹುಲ್ ನೀಡಿದ್ದ ಹೇಳಿಕೆಯ ವರದಿ ಉಲ್ಲೇಖಿಸಿದ ನಾನಾವತಿ, ‘ಇದು ನಿಮ್ಮ ನಿಲುವಾಗಿದ್ದರೆ ಮಧ್ಯಂತರ ತಡೆ ಕೋರಿ ಈ ನ್ಯಾಯಾಲಯಕ್ಕೆ ಬರಲೇಬೇಡಿ. ತಮ್ಮ (ರಾಹುಲ್) ರಾಜಕೀಯ ಜೀವನ ಅಪಾಯಕ್ಕೆ ಸಿಲುಕಿದೆ ಎಂದು ಅವರು ಅಳಲು ತೋಡಿಕೊಳ್ಳಬಾರದು. ಒಂದೋ ತಮ್ಮ ನಿಲುವಿಗೆ ಬದ್ಧರಾಗಿರಬೇಕು. ಇಲ್ಲವೇ ತಮ್ಮ ಉದ್ದೇಶ ಬೇರೆಯದ್ದೇ ಆಗಿತ್ತು ಎಂದು ಹೇಳಬೇಕು’ ಎಂದೂ ಒತ್ತಾಯಿಸಿದರು.

ಅಪರಾಧ ನಿರ್ಣಯ ಮತ್ತು ಶಿಕ್ಷೆ ಪ್ರಶ್ನಿಸಿದ್ದ ರಾಹುಲ್ ಅರ್ಜಿಯನ್ನು ಸೂರತ್‌ನ ಸೆಷನ್ಸ್ ನ್ಯಾಯಾಲಯ ವಜಾಗೊಳಿಸಿತ್ತು. ರಾಹುಲ್ ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಮೂರ್ತಿ ಗೀತಾ ಗೋಪಿ ವಿಚಾರಣೆಯಿಂದ ಹಿಂದೆ ಸರಿದಿದ್ದರಿಂದಾಗಿ ನ್ಯಾಯಮೂರ್ತಿ ಹೇಮಂತ್ ಅವರು ವಿಚಾರಣೆ ನಡೆಸುತ್ತಿದ್ದಾರೆ.

ದ್ವಿತೀಯ ಪಿಯು ಪೂರಕ ಪರೀಕ್ಷೆ 22ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪೂರಕ ಪರೀಕ್ಷೆಗಳನ್ನು ಮೇ 22ರಿಂದ ಜೂನ್ 2ರವರೆಗೆ ನಡೆಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ ನಿರ್ಧರಿಸಿದೆ.

ಬಹುತೇಕ ವಿಷಯಗಳ ಪರೀಕ್ಷೆಗಳು ಪ್ರತಿ ದಿನ ಬೆಳಿಗ್ಗೆ 10.15ರಿಂದ ಮಧ್ಯಾಹ್ನ 1.30ರವರೆಗೆ, ಮೇ 24 ಹಾಗೂ 27ರಂದು ಕೆಲ ವಿಷಯಗಳ ಪರೀಕ್ಷೆಗಳು ಮಧ್ಯಾಹ್ನ 2.15ರಿಂದ ಸಂಜೆ 5.30ರವರೆಗೆ ನಡೆಯಲಿವೆ.

ಮೇ 22ರಂದು ಕನ್ನಡ, ಅರೇಬಿಕ್, 23ರಂದು ಐಚ್ಛಿಕ ಕನ್ನಡ, ರಸಾಯನಶಾಸ್ತ್ರ, ಮೂಲ ಗಣಿತ, 24ರಂದು ಇಂಗ್ಲಿಷ್ (ಬೆಳಿಗ್ಗೆ), ಮಾಹಿತಿ ತಂತ್ರಜ್ಞಾನ, ರೀಟೈಲ್, ಆಟೊಮೊಬೈಲ್, ಹೆಲ್ತ್‌ಕೇರ್, ಬ್ಯೂಟಿ ಆ್ಯಂಡ್ ವೆಲ್‌ನೆಸ್ (ಮಧ್ಯಾಹ್ನ), 25ರಂದು ಸಮಾಜಶಾಸ್ತ್ರ, ವಿದ್ಯುನ್ಮಾನ ಶಾಸ್ತ್ರ, ಗಣಕ ವಿಜ್ಞಾನ, 26ರಂದು ಇತಿಹಾಸ, ಸಂಖ್ಯಾಶಾಸ್ತ್ರ, 27ರಂದು ಹಿಂದಿ (ಬೆಳಿಗ್ಗೆ), ತೆಲುಗು, ತಮಿಳು, ಮರಾಠಿ, ಉರ್ದು, ಸಂಸ್ಕೃತ, ಫ್ರೆಂಚ್, ಮಲೆಯಾಳಂ (ಮಧ್ಯಾಹ್ನ), 29ರಂದು ಭೂಗೋಳಶಾಸ್ತ್ರ, ಮನಃಶಾಸ್ತ್ರ, ಭೌತಶಾಸ್ತ್ರ, 30ರಂದು ಲೆಕ್ಕಶಾಸ್ತ್ರ, ಭೂಗರ್ಭಶಾಸ್ತ್ರ, ಶಿಕ್ಷಣಶಾಸ್ತ್ರ, ಗೃಹ ವಿಜ್ಞಾನ, 31ರಂದು ರಾಜ್ಯಶಾಸ್ತ್ರ, ಗಣಿತ, ಜೂನ್ 1ರಂದು ತರ್ಕಶಾಸ್ತ್ರ, ಹಿಂದೂಸ್ತಾನಿ ಸಂಗೀತ, ವ್ಯವಹಾರ ಅಧ್ಯಯನ, 2ರಂದು ಅರ್ಥಶಾಸ್ತ್ರ, ಜೀವಶಾಸ್ತ್ರ ಪರೀಕ್ಷೆಗಳು ನಿಗದಿಯಾಗಿವೆ.

2022–23ನೇ ಸಾಲಿನಲ್ಲಿ 7,02,067 ವಿದ್ಯಾರ್ಥಿಗಳು ದ್ವಿತೀಯ ಪಿಯು ಮುಖ್ಯ ಪರೀಕ್ಷೆ ಬರೆದಿದ್ದರು. ಏ.21ರಂದು ಫಲಿತಾಂಶ ಪ್ರಕಟವಾಗಿತ್ತು. 5,24,209 (ಶೇ 74.67) ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದರು. ಅನುತ್ತೀರ್ಣರಾದ ವಿದ್ಯಾರ್ಥಿಗಳು ಪೂರಕ ಪರೀಕ್ಷೆಗೆ ಮೇ 4ರ ಒಳಗೆ ದಂಡ ಸಹಿತ ಶುಲ್ಕ ಪಾವತಿಸಬಹುದು.

KARNATAKA STATE PHARMACY COUNCIL
NOTICE

For The Information of All Those Who Are Engaged in Dispensing of Medicines (Druggists & Chemists Shop/Hospital /Nursing Homes/Chain Stores/ Janaushadhi Kendra engaged in dispensing of medicines)

Section 42 of the Pharmacy Act 1948 mandates that no person other than a Registered Pharmacist shall compound, prepare, mix, or dispense any drugs/medicines on the prescription of a Medical Practitioner

Section 26 A of the Pharmacy Act 1948 empowers a State Council to appoint Inspectors for the purpose of Chapter III, IV and V of the Pharmacy Act 1948 and Rules made there under.
In exercise of powers conferred under the said section 26A, Karnataka State Pharmacy Council has appointed Inspectors to exercise powers and duties conferred under clause (a) to (e) of sub section (2) of section 26 A.
Every Inspector so appointed is a public servant within the meaning of section 21 of the Indian Penal Code (45 of 1860) and his duties and powers include :-

a. inspect any premises where drugs are compounded or dispensed ;
b. enquire whether a person who is engaged in compounding or dispensing of drugs is a registered pharmacist;
c. investigate any complaint made in writing in respect of any contravention of Pharmacy Act / Rules ;
d. institute prosecution ;
e. exercise such other powers as may be necessary.

The inspectors so appointed have been issued with identity card signed by the Registrar of the Council and bear the seal of the Council to establish their bonafide.

The term " Dispensing " in relation to a medicine means supplying a medicine on and in accordance with the prescription duly given by a Registered Medical Practitioner, a Registered Dentist or a Qualified Veterinary Surgeon.

All those persons, firms, hospitals, nursing homes or institutions engaged in dispensing of drugs / medicines are hereby informed to allow the Inspectors to carry out their duties in accordance with the provisions of Pharmacy Act 1948.

It is further informed that as per section sub section (3) 26 A, any person wilfully obstructing an Inspector in the exercise of the powers conferred on him by or under this Act or any rules made thereunder shall be punishable with imprisonment for a term which may extend to six months, or with fine not exceeding one thousand rupees, or with both.

BENGALURU
DATE : 03/05/2023

S/d
REGISTRAR
KARNATAKA STATE PHARMACY COUNCIL

Karnataka State Pharmacy Council
514/E, I Main, 2nd Stage, Vijayanagar, Bengaluru-560104
Ph: 080-23383142; 23404000
Email: kspcblr@gmail.com, Website : www.kspcdic.com

ಪ್ರಜಾವಾಣಿ ಪ್ರಜಾಧ್ವನಿ ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಅಲ್ಲ 70% ಹೌದು 30%

ರಾಜಕೀಯ ಪಕ್ಷಗಳು ಅಧಿಕಾರಕ್ಕೆ ಬಂದರೆ ತಮ್ಮ ಪ್ರಣಾಳಿಕೆಯಲ್ಲಿ ನೀಡುವ ಭರವಸೆಗಳನ್ನು ಈಡೇರಿಸುತ್ತಾರೆ ಎನ್ನುವ ವಿಶ್ವಾಸ ಇದೆಯೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಮೂರು ಜಿಲ್ಲೆಗಳಲ್ಲಿ ‘ಯೆಲ್ಲೊ ಅಲರ್ಟ್’

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಮುಂದಿನ 24 ಗಂಟೆಗಳಲ್ಲಿ ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಮೈಸೂರು, ಚಾಮರಾಜನಗರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಬುಧವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ.

ಕರಾವಳಿ ವ್ಯಾಪ್ತಿಯ ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ, ಉತ್ತರ ಒಳನಾಡು ಭಾಗದ ಬೀದರ್, ಕಲಬುರಗಿ, ರಾಯಚೂರು, ಯಾದಗಿರಿ, ಕೊಪ್ಪಳ ಜಿಲ್ಲೆಯ ಹಲವೆಡೆ ಮಳೆಯಾಗುವ ಸಾಧ್ಯತೆಯಿದೆ ಎಂದು ಐಎಂಡಿ ತಿಳಿಸಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ವೇಳೆಯಲ್ಲಿ ಗುಡುಗು ಸಹಿತ ಮಳೆಯಾಗಲಿದೆ ಎಂದು ಸೂಚನೆ ನೀಡಿದೆ.

ಸುಡಾನ್‌ನಿಂದ ಮರಳಿದ 231 ಜನ

ಅಹಮದಾಬಾದ್ (ಪಿಟಿಐ): ಸುಡಾನ್‌ನಲ್ಲಿ ಸಿಲುಕಿದ್ದ 231 ಭಾರತೀಯರನ್ನು ಮಂಗಳವಾರ ಆಪರೇಷನ್ ಕಾವೇರಿ ಕಾರ್ಯಾಚರಣೆಯಡಿ ಕರೆತರಲಾಯಿತು. ಅನಿವಾಸಿ ಗುಜರಾತಿ (ಎನ್‌ಆರ್‌ಜಿ) ವಿಭಾಗ ನಿರ್ವಹಿಸುವ ಗುಜರಾತ್‌ನ ಗೃಹ ಖಾತೆ ರಾಜ್ಯ ಸಚಿವ ಹರ್ಷ ಸಾಂಘ್ವಿ ಅವರು, ಜಿದ್ದಾದಿಂದ ವಿಶೇಷ ವಿಮಾನದಲ್ಲಿ ಬಂದ ಗುಜರಾತ್ ನಿವಾಸಿಗಳನ್ನು ಬರಮಾಡಿಕೊಂಡರು.

ಉದ್ಯೋಗ ವಾಣಿ

WANTED

For School, PU College, Degree College, Coaching, Publication, Hostels, Transports

No	Name of the Post
1.	Principals | Headmistress | Lecturers
2.	Co-Ordinator | Teachers Staff
3.	Administrative Staff | Editors
4.	Counseling | Counselors
5.	Accountants | Senior & Junior
6.	Supervisor | Mangers
7.	Social & Digital Media Staff
8.	Marketing Representatives | PRO's
9.	Drivers & Helpers Staff
10.	Wardens | Attenders | Helpers Staff

Competent personalities good at English, Male| Female, Qualified graduates & post graduates, having good experience, discipline & dedication. Candidates can apply for the Vacancies in the reputed Educational Organisation in Dharwad City.

House wives, retired bank officers or any officers can also apply for the different posts.

Walk in Interview 9980552084

Confirm your visit & mail your resume to classicnewunit@gmail.com

INTERVIEWS on May 12,13 & 14th

Classic Group of Organisations, Dharwad

RAILWAY GOODS SHED WORKERS WELFARE CO. OP SOCIETY
(A Multi-State Cooperative Society, Registration No 3618/2001)
Railway Colony, Basant Road, Pahar Ganj, New Delhi 110055.
Email : helpdesk@rmgs.org, Website : www.rmgs.org

RECRUITMENT NOTIFICATION

RGSWWCS was Established in 2001 Under Multi-State Cooperative Societies Act, With the Primary Purpose of Providing the Workers at Railway Maal Godam sheds with the Fundamental Rights and amenities necessary for them to live Dignified Life. RGSWWCS invites applications for the post of Welfare Officer, Junior Assistants and Junior Timekeeper in Karnataka Division.

Posts	Initial Pay (Rs.)	Vacancies
Welfare Officer	Rs. 40000/-	61
Junior Assistants	Rs.34000/-	89
Junior Time Keeper	Rs.28000/-	168

Application Submission Last Date 25.05.2023,
For Detailed Notification and Vacancies Details Visit Official Website: www.rmgs.org

रक्षा इलेक्ट्रॉनिकी से कहीं अधिक

भारत इलेक्ट्रॉनिक्स BHARAT ELECTRONICS
QUALITY. TECHNOLOGY. INNOVATION.

ಭಾರತ್ ಇಲೆಕ್ಟ್ರಾನಿಕ್ಸ್ ಲಿಮಿಟೆಡ್
(ರಕ್ಷಣಾ ಸಚಿವಾಲಯದ ಅಡಿಯಲ್ಲಿ ಭಾರತ ಸರ್ಕಾರದ ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಗೆ ಬೆಂಗಳೂರು ಸಂಕೀರ್ಣದ ವಿವಿಧ ಕಾರ್ಯನೀತಿ ವ್ಯವಹಾರ ಘಟಕಗಳಿಗೆ ಶಿಕ್ಷಣಾರ್ಥಿ ಇಂಜಿನಿಯರ್ – ೧ ಮತ್ತು ಯೋಜನಾ ಇಂಜಿನಿಯರ್-೧ ರ ಹುದ್ದೆಗೆ ಈ ಕೆಳಕಂಡ ಆವಶ್ಯಕತೆಗಳೊಂದಿಗೆ ಅಭ್ಯರ್ಥಿಗಳು ಬೇಕಾಗಿದ್ದಾರೆ.

ಹುದ್ದೆ	ಹುದ್ದೆಗಳ ಸಂಖ್ಯೆ	ವಿಷಯ	ಅನುಭವ
ಯೋಜನಾ ಇಂಜಿನಿಯರ್-೧	ಎಲೆಕ್ಟ್ರಾನಿಕ್ಸ್ – ೧೬೪ ಮೆಕ್ಯಾನಿಕಲ್-೧೦೬ ಕಂಪ್ಯೂಟರ್ ಸೈನ್ಸ್-೪೭ ಎಲೆಕ್ಟ್ರಿಕಲ್-೦೭ ಕೆಮಿಕಲ್ – ೦೧ ಏರೋಸ್ಪೇಸ್ ಇಂಜಿನಿಯರಿಂಗ್- ೦೨ ಒಟ್ಟು ಹುದ್ದೆಗಳು - ೩೨೭	ಮಾನ್ಯತೆ ಪಡೆದ ವಿಶ್ವವಿದ್ಯಾಲಯ / ಸಂಸ್ಥೆ / ಕಾಲೇಜ್ ನಿಂದ ಸಾಮಾನ್ಯ / ಇ ಡಬ್ಲ್ಯೂ ಎಸ್ / ಇ.ಹಿ.ವ. ದ ಅಭ್ಯರ್ಥಿಗಳಿಗೆ ಶೇಕಡ ೫೫ ಮತ್ತು ಅದಕ್ಕೂ ಹೆಚ್ಚು ಹಾಗೂ ಪ.ಜಾ./ಪ.ಪಂ. / ಪಿಡಬ್ಲ್ಯೂ ಬಿಡಿ ಅಭ್ಯರ್ಥಿಗಳಿಗೆ ಶೇಕಡ ೫೫ ಕ್ಕಿಂತ ಕಡಿಮೆ ಅಂಕಗಳೊಂದಿಗೆ ಸಂಗತ ವಿಷಯದಲ್ಲಿ ಬಿ.ಇ. / ಬಿ.ಟೆಕ್ / ಬಿ.ಎಸ್.ಸಿ (೪ ವರ್ಷಗಳ ಅಧ್ಯಯನ) ಇಂಜಿನಿಯರಿಂಗ್ ಸ್ನಾತಕ ಪದವಿ	ಕನಿಷ್ಠ ೦೨ ವರ್ಷಗಳು
ಶಿಕ್ಷಣಾರ್ಥಿ ಇಂಜಿನಿಯರ್-೧	ಎಲೆಕ್ಟ್ರಾನಿಕ್ಸ್ – ೧೦೦ ಏರೋಸ್ಪೇಸ್ ಇಂಜಿನಿಯರಿಂಗ್- ೦೧ ಒಟ್ಟು ಹುದ್ದೆಗಳು-೧೦೧		ಶೂನ್ಯ

ವಿವರಣಾತ್ಮಕ ಜಾಹೀರಾತಿಗೆ ನಮ್ಮ ಅಧಿಕೃತ ವೆಬ್ ಸೈಟ್ www.bel-india.in ಅನ್ನು ವೀಕ್ಷಿಸಿ

‘हर एक काम देश के नाम’

ವಿಕಾಸ ಬ್ಯಾಂಕ್
ವಿಕಾಸ ಸೌಹಾರ್ದ ಕೋ-ಆಪರೇಟಿವ್ ಬ್ಯಾಂಕ್ ಲಿ.,

ಪ್ರಧಾನ ಕಚೇರಿ : ಸ್ಟೇಷನ್ ರಸ್ತೆ, ಹೊಸಪೇಟೆ –583201 (ವಿಜಯನಗರ ಜಿಲ್ಲೆ)
ದೂ: 08394–226411, 229771 ಮೊಬೈಲ್ :8147176491

ಪರೀಕ್ಷಾರ್ಥಿ ಅಧಿಕಾರಿಗಳ (ಪಿ.ಓ.)ಹುದ್ದೆಗೆ ಅರ್ಜಿ ಆಹ್ವಾನ

ವಿಕಾಸ ಬ್ಯಾಂಕಿನ ವಿವಿಧ ಶಾಖೆಗಳಲ್ಲಿ ಕಾರ್ಯನಿರ್ವಹಿಸಲು ಪರೀಕ್ಷಾರ್ಥಿ ಅಧಿಕಾರಿಗಳ (ಪಿ.ಓ.) ಹುದ್ದೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ವಿದ್ಯಾರ್ಹತೆ : ಯಾವುದೇ ಪದವಿಯಲ್ಲಿ ಕನಿಷ್ಟ 50% ಅಂಕಗಳನ್ನು ಪಡೆದಿರಬೇಕು
ತಾಂತ್ರಿಕ ಅರ್ಹತೆ : ಕಂಪ್ಯೂಟರ್ ಬಳಕೆ ಜ್ಞಾನಕಡ್ಡಾಯ
ಭಾಷಾಜ್ಞಾನ : ಕನಿಷ್ಟ ಕನ್ನಡ ಮತ್ತು ಇಂಗ್ಲೀಷ ಭಾಷಾ ಜ್ಞಾನ ಕಡ್ಡಾಯ
ಅನುಭವ : ಹಣಕಾಸು ಸಂಸ್ಥೆ ಅಥವಾ ಸಹಕಾರ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸಿದ ಅನುಭವ ಅಪೇಕ್ಷಣೀಯ ಅನುಭವ ಇಲ್ಲದವರೂ ಕೂಡ ಅರ್ಜಿ ಸಲ್ಲಿಸಬಹುದು.

ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಕಾರ್ಯನಿರ್ವಹಿಸಲು ಆಸಕ್ತರು ಮಾತ್ರ ಅರ್ಜಿ ಸಲ್ಲಿಸಬೇಕು.

ವಯಸ್ಸು : 1 ಏಪ್ರಿಲ್ 2023 ಕ್ಕೆ 30 ವರ್ಷಗಳನ್ನು ಮೀರಿರಬಾರದು.

ಪರೀಕ್ಷಾ ಶುಲ್ಕ ರೂ.500/– ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 18 ಮೇ, 2023. ಪರೀಕ್ಷೆ ನಡೆಯುವ ದಿನಾಂಕ 21 ಮೇ, 2023 ಬೆಳಿಗ್ಗೆ 11 ಗಂಟೆಗೆ ಹೊಸಪೇಟೆಯಲ್ಲಿ ಆನ್‌ಲೈನ್ ಮೂಲಕ

ವಿಕಾಸ ಬ್ಯಾಂಕಿನ ಶಾಖೆಗಳು: ಹೊಸಪೇಟೆ, ಸಿಂಧನೂರು, ಹುಬ್ಬಳ್ಳಿ, ಗಂಗಾವತಿ, ಬಳ್ಳಾರಿ, ಕೊಟ್ಟೂರು, ತೋರಣಗಲ್ಲು ಹಾಗೂ ಬೀದರ್.

ಉದ್ದೇಶಿತ ನೂತನ ಶಾಖೆಗಳು: ಹಗರಿಬೊಮ್ಮನಹಳ್ಳಿ, ಹರಪನಹಳ್ಳಿ, ದಾವಣಗೇರೆ, ಕೊಪ್ಪಳ, ಗದಗ, ರಾಯಚೂರು, ಲಿಂಗಸೂಗೂರು, ಗಜೇಂದ್ರಗಡ ಹಾಗೂ ಕುಕನೂರು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು, ಶುಲ್ಕ ತುಂಬಲು ಹಾಗೂ ಹೆಚ್ಚಿನ ಮಾಹಿತಿಗಾಗಿ ವಿಕಾಸ ಬ್ಯಾಂಕಿನ ವೆಬ್‌ಸೈಟ್ www.vikasbank.com ಸಂದರ್ಶಿಸಿ.

ರಕ್ಷಣಾ ವಿದ್ಯುನ್ಮಾನ ಮತ್ತು ಅದಕ್ಕೂ ಮೀರಿದ

भारत इलेक्ट्रॉनिक्स BHARAT ELECTRONICS
QUALITY. TECHNOLOGY. INNOVATION.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್
(ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯದ ಒಂದು ಉದ್ಯಮ)
(CIN: L32309KA1954GOI000787)

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್, ರಕ್ಷಣಾ ಮಂತ್ರಾಲಯದ ಅಧೀನ ಒಂದು ನವರತ್ನ ಕಂಪನಿ ಮತ್ತು ಭಾರತದ ಪ್ರಮುಖ ವೃತ್ತಿಪರ ಎಲೆಕ್ಟ್ರಾನಿಕ್ಸ್ ಕಂಪನಿಯು ತನ್ನ ಎನ್ ಎಸ್ (ಎಸ್ ಮತ್ತು ಸಿ ಎಸ್) ಮತ್ತು ಎನ್ ಎಸ್ (ಆರ್ ಮತ್ತು ಎಫ್ ಸಿ ಎಸ್) ಎಸ್ ಬಿ ಯು ಗಾಗಿ ಗುತ್ತಿಗೆ ಆಧಾರದ ಮೇಲೆ ಈ ಕೆಳಕಂಡ ಸಿಬ್ಬಂದಿಗಳ ಆವಶ್ಯಕತೆ ಇವೆ.

ಹುದ್ದೆ	ಶೈಕ್ಷಣಿಕ ಅರ್ಹತೆ	ಹುದ್ದೆಗಳ ಸಂಖ್ಯೆ	ಅನುಭವ	ಪ್ರತಿ ತಿಂಗಳ ಕ್ರೋಢೀಕೃತ ಸಂಭಾವನೆ	ನಿಯೋಜನ ಸ್ಥಳ
ಎನ್ ಎಸ್ (ಎಸ್ ಮತ್ತು ಸಿ ಎಸ್) ಎಸ್ ಬಿ ಯು ಗಾಗಿ ಶಿಕ್ಷಣಾರ್ಥಿ ಇಂಜಿನಿಯರ್ – 1	ಎಲೆಕ್ಟ್ರಾನಿಕ್ಸ್/ಮೆಕ್ಯಾನಿಕಲ್/ ಮಾಹಿತಿ ವಿಜ್ಞಾನ/ ಮಾಹಿತಿ ತಂತ್ರಜ್ಞಾನ/ ಕಂಪ್ಯೂಟರ್ ವಿಜ್ಞಾನದ ವಿಷಯದಲ್ಲಿ 4 ವರ್ಷಗಳ ಪೂರ್ಣಕಾಲಿಕ ಬಿ.ಇ./ಬಿ.ಟೆಕ್ / ಬಿ.ಎಸ್ ಸಿ ಇಂಜಿನಿಯರಿಂಗ್	18	ಸಾಫ್ಟ್ ವೇರ್ ಅಭಿವೃದ್ಧಿ ಚಟುವಟಿಕೆಗಳಲ್ಲಿ ಕನಿಷ್ಠ 6 ತಿಂಗಳ ಅನುಭವ	1ನೇ ವರ್ಷ ರೂ.30,000/– 2ನೇ ವರ್ಷ ರೂ.35,000/– 3ನೇ ವರ್ಷ ರೂ.40,000/–	ಕೊಚ್ಚಿ
ಎನ್ ಎಸ್ (ಆರ್ ಮತ್ತು ಎಫ್ ಸಿ ಎಸ್) ಎಸ್ ಬಿ ಯು ಗಾಗಿ ಶಿಕ್ಷಣಾರ್ಥಿ ಇಂಜಿನಿಯರ್ – 1	ಎಲೆಕ್ಟ್ರಾನಿಕ್ಸ್/ಇ ಮತ್ತು ಸಿ /ಇ ಮತ್ತು ಟಿ / ಕಮ್ಯೂನಿಕೇಶನ್ / ಟೆಲಿಕಮ್ಯೂನಿಕೇಶನ್ ವಿಷಯದಲ್ಲಿ 4 ವರ್ಷಗಳ ಪೂರ್ಣಕಾಲಿಕ ಬಿ.ಇ./ ಬಿ.ಎಸ್ ಸಿ ಇಂಜಿನಿಯರಿಂಗ್	25	0–6 ತಿಂಗಳ ಔದ್ಯೋಗಿಕ ಅನುಭವ	1ನೇ ವರ್ಷ ರೂ.30,000/– 2ನೇ ವರ್ಷ ರೂ.35,000/– 3ನೇ ವರ್ಷ ರೂ.40,000/–	ಪೋರಬಂದರ್ / ಗಾಂಧೀನಗರ / ಮುಂಬಯಿ / ಗೋವಾ / ಮಂಗಳೂರು / ಕೊಚ್ಚಿ /ಟೂಟಿಕಾರ್ನ್/ ಚೆನ್ನೈ/ಪಾಂಡಿಚೇರಿ/ ವೈಜಾಗ್/ಪಾರದೀಪ / ಕೋಲ್ಕತ್ತ / ಹಾಲ್ದಿಯಾ / ಪೋರ್ಟ್ ಬ್ಲೇರ್

ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 20.05.2023. ಅರ್ಜಿ ಸಲ್ಲಿಸಲು ವಿಸ್ತೃತ ಜಾಹೀರಾತು ಮತ್ತು ಸೂಚನೆಗಳಿಗಾಗಿ ದಯವಿಟ್ಟು ಅಧಿಕೃತ ವೆಬ್ ಸೈಟ್ www.bel-india.in ನ ಕ್ಯಾರಿಯರ್ಸ್ ಲಿಂಕ್ ನಲ್ಲಿ ವೀಕ್ಷಿಸಿರಿ.

‘Har Ek Kaam Desh Ke Naam’

ಬಿಜೆಪಿ ಕರ್ನಾಟಕ

ಡಬಲ್ ಎಂಜಿನ್ ಸರ್ಕಾರ
ಕರ್ನಾಟಕದ ಅಭಿವೃದ್ಧಿಯ ಸಾಕಾರ
#ಬಿಜೆಪಿಯೇಭರವಸೆ

ಚುನಾವಣಾ ಪ್ರಚಾರ ಸಭೆಗಳು
3 ಮೇ 2023 | ಬುಧವಾರ

ಶ್ರೀ ಜಗತ್ ಪ್ರಕಾಶ್ ನಡ್ಡಾ
ಮಾನ್ಯ ರಾಷ್ಟ್ರೀಯ ಅಧ್ಯಕ್ಷರು, ಬಿಜೆಪಿ
ಮ. 12:30 ಹಾರೋಹಳ್ಳಿ (ರಾಮನಗರ) -ರೋಡ್ ಶೋ
ಮ. 2:30 ಮಾಗಡಿ-ರೋಡ್ ಶೋ

ಶ್ರೀ ನಿತಿನ್ ಗಡ್ಕರಿ
ಮಾನ್ಯ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರು
ಮ. 1:30 ಸಂಕೇಶ್ವರ (ಹುಕ್ಕೇರಿ)
ಮ. 3:30 ಕಾಗವಾಡ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಶ್ರೀ ಎನ್. ರವಿಕುಮಾರ್
ಮಾನ್ಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳು, ಬಿಜೆಪಿ ಹಾಗೂ ವಿಧಾನ ಪರಿಷತ್ ಸದಸ್ಯರು
ಬೆ. 10:00 ಬೀದರ್ ದಕ್ಷಿಣ ಮ. 3:00 ಶಹಾಪುರ್
ಮ. 12:00 ಔರಾದ್ ಸಂ. 4:30 ಗುರುಮಿಠ್ಕಲ್

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ
ಸಂ. 5:00 ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ -ರೋಡ್ ಶೋ

ಶ್ರೀ ಡಿ.ವಿ. ಸದಾನಂದ ಗೌಡ
ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರು
ಬೆ. 10:30 ವಿರಾಜಪೇಟೆ
ಮ. 12:30 ಕುಶಾಲನಗರ-ರೋಡ್ ಶೋ

ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿಗಳು
ಬೆ. 9:00 ಯರಾಡ (ಹಡಗಲಿ)
ಬೆ. 11:00 ಹಗರಿಬೊಮ್ಮನಹಳ್ಳಿ
ಮ. 3:30 ಗುಗ್ಗರಹಟ್ಟಿ (ಬಳ್ಳಾರಿನಗರ)

ಶ್ರೀ ಆರ್. ಅಶೋಕ್
ಮಾನ್ಯ ಕಂದಾಯ ಸಚಿವರು, ಕರ್ನಾಟಕ ಸರ್ಕಾರ
ಬೆ. 9:30 ಬಸವನಗುಡಿ
ಮ. 3:30 ದಾಸರಹಳ್ಳಿ

ಶ್ರೀಮತಿ ಸ್ಮೃತಿ ಇರಾನಿ
ಮಾನ್ಯ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ಅಲ್ಪ ಸಂಖ್ಯಾತ ಕಲ್ಯಾಣ ಸಚಿವರು
ಸಂ. 4:00 ಬ್ಯಾಟರಾಯನಪುರ
ಸಂ. 6:30 ಜಯನಗರ (ಮಹಿಳಾ ಉದ್ಯಮಿಗಳೊಂದಿಗೆ ಸಂವಾದ)

ಸಾಧ್ವಿ ನಿರಂಜನ್ ಜ್ಯೋತಿ
ಮಾನ್ಯ ಕೇಂದ್ರ ಸಹಾಯಕ ಗ್ರಾಹಕ ವ್ಯವಹಾರ ಹಾಗೂ ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ಸಚಿವರು
ಮ 2:00 ಗುರುಮಿಠ್ಕಲ್

ಶ್ರೀ ಬಿ. ಶ್ರೀರಾಮುಲು
ಮಾನ್ಯ ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು
ಬೆ. 9:30 ಗದಗ

ಶ್ರೀ ಅರವಿಂದ ಲಿಂಬಾವಳಿ
ಮಾನ್ಯ ಶಾಸಕರು
ಬೆ. 10:30 ಅರಸೀಕೆರೆ-ರೋಡ್ ಶೋ

ಶ್ರೀ ಕೆ. ಅಣ್ಣಾಮಲೈ
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ, ತಮಿಳುನಾಡು ಹಾಗೂ ಕರ್ನಾಟಕ ಸಹ ಉಸ್ತುವಾರಿ
ಬೆ. 9:00 ಶಾಂತಿನಗರ-ರೋಡ್ ಶೋ
ಬೆ. 10:00 ಸಿ.ವಿ. ರಾಮನ್‌ನಗರ-ರೋಡ್ ಶೋ
ಸಂ. 5:00 ವಿಜಯನಗರ (ಚಿಂತಕರೊಂದಿಗೆ ಸಂವಾದ)
ಸಂ. 6:30 ಗಾಂಧಿನಗರ-ರೋಡ್ ಶೋ

ಶ್ರೀ ಸುದೀಪ್
ಖ್ಯಾತ ಚಲನಚಿತ್ರ ನಟರು
ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆ. 9:30 ಕೆಂಭಾವಿ (ಶಹಾಪುರ)-ರೋಡ್ ಶೋ
ಬೆ. 11:00 ಶೋರಾಪುರ-ರೋಡ್ ಶೋ
ಮ. 2:00 ಕುಷ್ಟಗಿ-ರೋಡ್ ಶೋ
ಮ. 3:30 ಯಲಬುರ್ಗ-ರೋಡ್ ಶೋ

ಶ್ರೀಮತಿ ಶೃತಿ
ಖ್ಯಾತ ಚಲನಚಿತ್ರ ನಟಿ
ಬೆ. 9:30 ದೊಡ್ಡಬಳ್ಳಾಪುರ ಟೌನ್
ಸಂ. 4:30 ಬ್ಯಾಟರಾಯನಪುರ-ರೋಡ್ ಶೋ

ಶ್ರೀಮತಿ ತಾರಾ ಅನುರಾಧ
ಖ್ಯಾತ ಚಲನಚಿತ್ರ ನಟಿ
ಮ. 2:00 ರಾಮೋಹಳ್ಳಿ (ಯಶವಂತಪುರ) -ರೋಡ್ ಶೋ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ
ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ
ಪ್ರಕಟಣೆ : ಬಿಜೆಪಿ ಕರ್ನಾಟಕ

ಪ್ರಜಾ ಮತ

ಜನತಂತ್ರದ ಹಬ್ಬ 2023

ವಿಜಯನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ವಿ.ಎಸ್. ಸುಬ್ರಹ್ಮಣ್ಯ** ಅವರು ನಡೆಸಿದ ಕಿರು ಸಂದರ್ಶನಗಳು ಇಲ್ಲಿವೆ.

ಎಂ. ಕೃಷ್ಣಪ್ಪ (ಕಾಂಗ್ರೆಸ್)

‘ಜನರು ನೆಮ್ಮದಿಗಾಗಿ ನನ್ನನ್ನು ಬೆಂಬಲಿಸುತ್ತಾರೆ’

● ಮುಂದೆ ಯಾವ ಕೆಲಸಗಳನ್ನು ಮಾಡುತ್ತೀರಿ ಎನ್ನುವುದಕ್ಕಾಗಿ ಜನರು ನಿಮಗೆ ಮತ ನೀಡಬೇಕು?

ವಿಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ ಹಲವು ಅಭಿವೃದ್ಧಿ ಕೆಲಸಗಳನ್ನು ಮಾಡಲಾಗಿದೆ. ಆಸ್ಪತ್ರೆ, ಗ್ರಂಥಾಲಯ, ವಾಣಿಜ್ಯ ಸಂಕೀರ್ಣ, ರಂಗಮಂದಿರ ಉದ್ಯಾನಗಳ ನಿರ್ಮಾಣ ಆಗಿದೆ. ಕ್ಷೇತ್ರದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ಆದ್ಯತೆ ನೀಡಿದ್ದೇನೆ. ಜನರ ನೆಮ್ಮದಿಯ ಜೀವನಕ್ಕೆ ಭಂಗ ಬರದಂತೆ ಶಾಸಕನಾಗಿ ಜವಾಬ್ದಾರಿ ವಹಿಸಿದ್ದೇನೆ. ಮುಂದೆಯೂ ಅದೇ ರೀತಿ ಕೆಲಸ ಮಾಡುತ್ತೇನೆ. ಸರ್ಕಾರ ರಚನೆಯಾದ ತಕ್ಷಣದಿಂದಲೇ ಅಭಿವೃದ್ಧಿ ಕೆಲಸಗಳಲ್ಲಿ ನಿರತನಾಗುವೆ. ಬಾಕಿ ಇರುವ ಎಲ್ಲ ಕೆಲಸಗಳನ್ನೂ ತ್ವರಿತವಾಗಿ ಪೂರ್ಣಗೊಳಿಸುವೆ. ಅಧಿಕಾರವನ್ನು ಮಾರಿಕೊಂಡಿಲ್ಲ, ಪ್ರಾಮಾಣಿಕನಾಗಿ, ಶುದ್ಧಹಸ್ತನಾಗಿ ಉಳಿದಿರುವೆ. ಈ ಕಾರಣಕ್ಕಾಗಿ ಜನರು ನನಗೆ ಮತ ನೀಡಬೇಕು.



● ಈ ಚುನಾವಣೆಯಲ್ಲಿ ಗೆಲುವಿನ ವಿಶ್ವಾಸ ಮೂಡಿಸುವಷ್ಟು ಜನಬೆಂಬಲ ಇದೆಯೆ? ಹೇಗೆ ಹೇಳುತ್ತೀರಿ?

ಶಾಸಕನಾಗಿ ಸರ್ಕಾರದ ವಿವಿಧ ಯೋಜನೆಗಳ ಸೌಲಭ್ಯವನ್ನು ಜನರಿಗೆ ಕೊಡಿಸುವುದರ ಜತೆಗೆ ವೈಯಕ್ತಿಕವಾಗಿಯೂ ಅವರ ಎಲ್ಲ ಕಷ್ಟ- ಸುಖಗಳಲ್ಲಿ ಜತೆಗೆ ನಿಂತಿದ್ದೇನೆ. ಕೋವಿಡ್ ಸಂಕಷ್ಟದ ಅವಧಿಯಲ್ಲಿ ಕ್ಷೇತ್ರದ ಜನರಿಗೆ ಆಹಾರ, ಔಷಧಿ, ಆಮ್ಲಜನಕ ಪೂರೈಕೆಯನ್ನು ಸ್ವಂತ ವೆಚ್ಚದಲ್ಲಿ ಮಾಡುವ ಮೂಲಕ ಅವರ ಕಷ್ಟಕ್ಕೆ ಸ್ಪಂದಿಸಿದ್ದೇನೆ. ಬಡವರಿಗೆ ಶಾಲೆ, ಕಾಲೇಜು ಶುಲ್ಕ ಪಾವತಿ, ಆಸ್ಪತ್ರೆ ವೆಚ್ಚ ಪಾವತಿಗೆ ನಿರಂತರ ನೆರವು ನೀಡಿದ್ದೇನೆ. ಜನರು ಕೂಡ ಅದನ್ನು ಮರೆತಿಲ್ಲ. ಕ್ಷೇತ್ರದ ಉದ್ದಗಲಕ್ಕೆ ಸ್ವಯಂಪ್ರೇರಿತರಾಗಿ ನನ್ನ ಜತೆ ನಿಂತಿದ್ದಾರೆ. ಗೆಲುವು ಖಚಿತ ಎಂಬ ವಿಶ್ವಾಸವನ್ನು ಜನರೇ ನೀಡಿದ್ದಾರೆ.

● ಈ ಚುನಾವಣೆಯಲ್ಲಿ ನಿಮ್ಮ ನಿಜವಾದ ಎದುರಾಳಿ ಯಾರು?

ನಾನು ಸದಾಕಾಲವೂ ಕ್ಷೇತ್ರದ ಜನರ ಜತೆ ಇರುವವನು. ಹೀಗಾಗಿ ಯಾವತ್ತೂ ಚುನಾವಣೆಯಲ್ಲಿ ಎದುರಾಳಿ ಯಾರು ಎಂಬುದನ್ನು ಯೋಚಿಸಿದವನಲ್ಲ. ಕ್ಷೇತ್ರದಲ್ಲಿ ಸಹಜವಾಗಿ ಕಾಂಗ್ರೆಸ್‌ಗೆ ಬಿಜೆಪಿಯೇ ಎದುರಾಳಿ. ಈ ಬಾರಿಯೂ ಹಾಗೆಯೇ ಇದೆ.

ರವೀಂದ್ರ ಎಚ್. (ಬಿಜೆಪಿ)

‘ಜನರು ಬದಲಾವಣೆಗೆ ಕಾದಿದ್ದಾರೆ’

● ನೀವು ಯಾವ ಕೆಲಸಗಳನ್ನು ಮಾಡುತ್ತೀರಿ ಎನ್ನುವುದಕ್ಕಾಗಿ ಜನರು ನಿಮಗೆ ಮತ ನೀಡಬೇಕು?

15 ವರ್ಷಗಳಿಂದ ಹಾಲಿ ಶಾಸಕರೇ ಇದ್ದಾರೆ. ಕ್ಷೇತ್ರದಲ್ಲಿ ಅಭಿವೃದ್ಧಿ ಕುಂಠಿತವಾಗಿದೆ. ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದೆ. ಆಸ್ಪತ್ರೆಗಳ ನಿರ್ಮಾಣ, ಕೆರೆ ಅಭಿವೃದ್ಧಿ ಆಗಬೇಕಿದೆ. ಬಡವರಿಗೆ ವಸತಿ ಸೌಲಭ್ಯ ಕಲ್ಪಿಸುವ ಅಗತ್ಯವಿದೆ. ಜನರು ಸಮಸ್ಯೆಗಳಿಂದ ಮುಕ್ತಿ ಪಡೆಯಲು ಬಯಸುತ್ತಿದ್ದಾರೆ. ಕ್ಷೇತ್ರದಲ್ಲಿ ಸಮಗ್ರವಾಗಿ ಮೂಲಸೌಕರ್ಯ ಅಭಿವೃದ್ಧಿಪಡಿಸುವ ಕೆಲಸ ಮಾಡುತ್ತೇನೆ. ಈ ಕಾರಣಕ್ಕಾಗಿ ಜನರು ನನಗೆ ಮತ ಹಾಕಬೇಕು.

● ಈ ಚುನಾವಣೆಯಲ್ಲಿ ಗೆಲುವಿನ ವಿಶ್ವಾಸ ಇದೆಯೆ? ಹೇಗೆ ಹೇಳುತ್ತೀರಿ?

ಇದು ನನಗೆ ಮೂರನೇ ವಿಧಾನಸಭಾ ಚುನಾವಣೆ. ಒಂದು ಬಾರಿ ಗೋವಿಂದರಾಜನಗರದಲ್ಲಿ ಸ್ಪರ್ಧಿಸಿದ್ದೆ. 2018ರ ಚುನಾವಣೆಯಲ್ಲಿ ವಿಜಯನಗರ ಕ್ಷೇತ್ರದಲ್ಲಿ ಅತ್ಯಂತ ಕಡಿಮೆ ಮತಗಳ ಅಂತರದಿಂದ ಸೋತಿದ್ದೆ. ಈ ಬಾರಿ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿಯನ್ನು ಬೆಂಬಲಿಸುತ್ತಿದ್ದಾರೆ. ಹಿಂದಿನ ಚುನಾವಣೆಗಿಂತಲೂ ಹೆಚ್ಚಿನ ಜನರು ನನ್ನ ಜತೆ ಇದ್ದಾರೆ. ಕ್ಷೇತ್ರದ ಎಲ್ಲ ಭಾಗಗಳಲ್ಲೂ ಅಭೂತಪೂರ್ವ ಬೆಂಬಲ ಸಿಗುತ್ತಿದೆ. ಜನಬೆಂಬಲವೇ ಗೆಲುವಿನ ಮುನ್ಸೂಚನೆ ನೀಡುತ್ತಿದೆ.

● ಈ ಚುನಾವಣೆಯಲ್ಲಿ ನಿಮ್ಮ ನೇರ ಎದುರಾಳಿ ಯಾರು?

ಹಿಂದಿನ ಚುನಾವಣೆಯಲ್ಲೂ ಹಾಲಿ ಶಾಸಕರ ವಿರುದ್ಧ ಪೈಪೋಟಿ ನಡೆಸಿದ್ದೆ. ಈ ಚುನಾವಣೆಯಲ್ಲೂ ಶಾಸಕರೇ ನನ್ನ ಎದುರಾಳಿ. ಬಿಜೆಪಿ ಮತ್ತು ಕಾಂಗ್ರೆಸ್ ಮಧ್ಯದಲ್ಲೇ ಗೆಲುವಿಗಾಗಿ ಹಣಾಹಣಿ ನಡೆಯಲಿದೆ.

ಬಿಇಎಲ್ ಬಡಾವಣೆಯ ಗಾಂಧಿ ಉದ್ಯಾನದಲ್ಲಿ ಜೆಡಿಎಸ್ ಅಭ್ಯರ್ಥಿ ಟಿ.ಎನ್‌.ಜವರಾಯಿಗೌಡ ಮತಯಾಚನೆ ಮಾಡಿದರು.

ಜೆಡಿಎಸ್ ಅಭ್ಯರ್ಥಿ ಪ್ರಚಾರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಎಲ್ಲ ಬಡಾವಣೆಗಳಿಗೆ ಕಾವೇರಿ ನೀರು, ಒಳ ಚರಂಡಿ, ರಸ್ತೆಗಳಿಗೆ ಡಾಂಬರೀಕರಣ, ಸರ್ಕಾರದಿಂದ ಸಿಗುವ ಸವಲತ್ತುಗಳನ್ನು ನೇರವಾಗಿ ಮನೆ ಬಾಗಿಲಿಗೆ ತಲುಪಿಸುವ ಕೆಲಸ ಮಾಡಲು ಈ ಬಾರಿ ಅವಕಾಶ ಮಾಡಿಕೊಡಿ ಎಂದು ಯಶವಂತಪುರದ ಜೆಡಿಎಸ್ ಅಭ್ಯರ್ಥಿ ಟಿ.ಎನ್. ಜವರಾಯಿಗೌಡ ಮನವಿ ಮಾಡಿದರು.

ಮಾಗಡಿ ರಸ್ತೆಯ ಬಿಇಎಲ್ ಬಡಾವಣೆಯ ಗಾಂಧಿ ಉದ್ಯಾನ, ಹೇರೋಹಳ್ಳಿ, ಬ್ಯಾಡರಹಳ್ಳಿಯಲ್ಲಿ ಮತಯಾಚನೆ ಮಾಡಿ ಮಾತನಾಡಿ, ಜಾತಿ, ಧರ್ಮ, ಬಡವ, ಬಲ್ಲಿದ ಎನ್ನದೆ ಸೇವೆ ಮಾಡುತ್ತೇನೆ ಎಂದು ಹೇಳಿದರು.

ಮುಖಂಡರಾದ ಗಂಗಣ್ಣ, ಅರುಣ್‌ಗೌಡ, ತಿಮ್ಮನಂಜೇಗೌಡ, ಖಾದಿ ಗಂಗಣ್ಣ, ಕಂಡಕ್ಟರ್ ನಾಗಣ್ಣ ಇದ್ದರು.

ಬೆಂಗಳೂರಿನ ಸಿ.ವಿ ರಾಮನ್ ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಸ್ ಆನಂದ್ ಕುಮಾರ್ ಪರವಾಗಿ ತಿಪ್ಪಸಂದ್ರ ಮುಖ್ಯರಸ್ತೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ರೋಡ್ ಶೋ ನಡೆಸಿದರು(ಎಡಚಿತ್ರ). ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಮಂಗಳವಾರ ಬಿಟಿಎಂ ಲೇಔಟ್ ಕ್ಷೇತ್ರದಲ್ಲಿ ರೋಡ್ ಶೋ ನಡೆಸಿದರು. ಅಭ್ಯರ್ಥಿ ಕೆ.ಆರ್ ಶ್ರೀಧರ್ ರೆಡ್ಡಿ, ಸಂಸದ ತೇಜಸ್ವಿ ಸೂರ್ಯ ಇದ್ದರು. –ಪ್ರಜಾವಾಣಿ ಚಿತ್ರಗಳು

ರಂಗೇರಿದ ಚುನಾವಣೆ ಕಣ, ಅಭ್ಯರ್ಥಿಗಳ ಪರ ಪ್ರಮುಖ ನಾಯಕರ ಬಿರುಸಿನ ಪ್ರಚಾರ

ಪ್ರಿಯಾಂಕಾ, ಅಮಿತ್ ಶಾ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಧಾನಿಯಲ್ಲಿ ವಿಧಾನಸಭೆ ಚುನಾವಣೆ ಕಣವು ರಂಗೇರಿದ್ದು, ತಮ್ಮ ಪಕ್ಷದ ಅಭ್ಯರ್ಥಿಗಳ ಪರವಾಗಿ ನಾಯಕರು ಬಿರುಸಿನ ಪ್ರಚಾರ ನಡೆಸುತ್ತಿದ್ದಾರೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಸಿ.ವಿ. ರಾಮನ್ ನಗರದ ಕಾಂಗ್ರೆಸ್ ಅಭ್ಯರ್ಥಿ ಆನಂದ್‌ಕುಮಾರ್ ಪರವಾಗಿ ರೋಡ್ ಶೋ ನಡೆಸಿದರು. ಚಿಕ್ಕಸಂದ್ರ ವಾರ್ಡ್‌ನಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿದರು.

ರಸ್ತೆಯ ಎರಡು ಬದಿಯಲ್ಲೂ ಬೆಂಬಲಿಗರು ಹಾಗೂ ಕಾರ್ಯಕರ್ತರು ಜಮಾಯಿಸಿದ್ದರು. ರಸ್ತೆ ಉದ್ದಕ್ಕೂ ಪಕ್ಷದ ಕಾರ್ಯಕರ್ತರು ಹಾಗೂ ಮಹಿಳೆಯರು ನಿಂತೂ ಕೈಬೀಸಿದರು. ತೆರೆದ ವಾಹನವನ್ನೇರಿ ರೋಡ್ ಶೋ ನಡೆಸಿದರು. ಪ್ರಿಯಾಂಕಾ ಅವರತ್ತ ಪುಷ್ಪವೃಷ್ಟಿಗರೆದು ಅಭಿಮಾನ ತೋರಿದರು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಿಟಿಎಂ ಲೇಔಟ್ ರೋಡ್ ಶೋ ನಡೆಸಿದರು. ಅವರೂ ತೆರೆದ ವಾಹನದಲ್ಲಿ ಕ್ಷೇತ್ರದ ಮುಖ್ಯರಸ್ತೆಯಲ್ಲಿ ಸಂಚಾರ ನಡೆಸಿ ಪಕ್ಷದ ಅಭ್ಯರ್ಥಿ ಶ್ರೀಧರ್ ರೆಡ್ಡಿ ಪರ ಮತಯಾಚಿಸಿದರು.

ಹಲ್ಲೆ ಆರೋಪ: ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಗುಂಡೂರಾವ್ ಹಾಗೂ ಬೆಂಬಲಿಗರು ನಮ್ಮ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿ ವಾಮಮಾರ್ಗದಲ್ಲಿ ಗೆಲ್ಲಲು ಹೊರಟಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ಸಪ್ತಗಿರಿಗೌಡ ಆಪಾದಿಸಿದ್ದಾರೆ.

ಬಿಜೆಪಿಯ ಯುವಮೋರ್ಚಾದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿರುವ ಸಂಬಂಧ ಠಾಣೆಗೆ ದೂರು ನೀಡಿರುವ ಸಪ್ತಗಿರಿಗೌಡ ಅವರು ದಿನೇಶ್ ಗುಂಡೂರಾವ್ ಹಾಗೂ ಅವರ ಬೆಂಬಲಿಗರ ಮೇಲೆ ಕೂಡಲೇ ಎಫ್‌ಐಆರ್ ದಾಖಲಿಸಿ ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದ್ದಾರೆ.

ಹಲ್ಲೆಗೆ ಸಂಬಂಧಿಸಿದ ಸಿಸಿ ಟಿವಿ ಕ್ಯಾಮೆರಾದ ದೃಶ್ಯಾವಳಿಗಳಿವೆ. ಪೊಲೀಸ್ ಠಾಣೆಗೆ ಕೊಟ್ಟಿದ್ದೇವೆ. ಅವರು ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಗುಂಡೂರಾವ್ ಅವರು ಶ್ರೀರಾಂಪುರ ವೃತ್ತದಲ್ಲಿ ಬೆಂಬಲಿಗರೊಂದಿಗೆ ಮತಯಾಚನೆ ಮಾಡಿದರು (ಎಡಚಿತ್ರ). ಚಿಕ್ಕಪೇಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆರ್‌.ವಿ. ದೇವರಾಜ್ ಅವರು ಕೆಂಪಣ್ಣ ಗಾರ್ಡನ್ ಹಾಗೂ ಬಿಎಚ್‌ಇಎಲ್ ಲೇಔಟ್‌ನಲ್ಲಿ ಬೈಕ್ ರ‍್ಯಾಲಿ ನಡೆಸಿ ಮತಯಾಚಿಸಿದರು.

ನಾಯ್ಡು ಅಲ್ಲ ನಾನು ಅಭ್ಯರ್ಥಿ: ಡಿ.ಕೆ. ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪದ್ಮನಾಭನಗರ ವಿಧಾನಸಭೆ ಕ್ಷೇತ್ರದಲ್ಲಿ ಗುರಪ್ಪ ನಾಯ್ಡು ಅಲ್ಲ, ಈ ನಾಯ್ಡು ಅಲ್ಲ, ನಾನು ಅಭ್ಯರ್ಥಿ. ಡಿ.ಕೆ. ಶಿವಕುಮಾರ್ ಇಲ್ಲಿನ ಅಭ್ಯರ್ಥಿ. ನೀವೆಲ್ಲ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಪದ್ಮನಾಭನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿ. ರಘುನಾಥ ನಾಯ್ಡು ಪರವಾಗಿ ರೋಡ್ ಶೋ ನಡೆಸಿ ಅವರು ಮಾತನಾಡಿದರು.

‘ಪದ್ಮನಾಭನಗರದಲ್ಲಿ ಡಿ.ಕೆ. ಶಿವಕುಮಾರ್, ಸಿದ್ದರಾಮಯ್ಯ ಅಭ್ಯರ್ಥಿಯಾಗಿದ್ದಾರೆ. ಈ ಕ್ಷೇತ್ರದಲ್ಲಿ ಏನು ಬೇಕಾದರೂ ಆಗಬಹುದು. ನೀವೆಲ್ಲ ಕಾಂಗ್ರೆಸ್‌ಗೆ ಬೆಂಬಲ ನೀಡಿ. ನಮ್ಮ ಸರ್ಕಾರ ಬಂದಾಗ ಈ ಕ್ಷೇತ್ರ ಅಭಿವೃದ್ಧಿ ಕಾಣುತ್ತದೆ’ ಎಂದರು. ‘ರಾಜಕಾರಣದಲ್ಲಿ ಎಲ್ಲವೂ ಸಾಧ್ಯ. ದೇವೇಗೌಡರೇ ಸೋಲಿಲ್ಲವಾ? ಮಂಡ್ಯದಲ್ಲಿ ನಾವೆಲ್ಲ ಬೆಂಬಲ ನೀಡಿದರೂ ಕುಮಾರಸ್ವಾಮಿ ಅವರ ಮಗ ಸೋಲಿಲ್ಲವಾ? ಹೀಗಾಗಿ, ರಘುನಾಥ ನಾಯ್ಡು ಈ ಬಾರಿ ಗೆದ್ದೇ ಗೆಲ್ಲುತ್ತಾರೆ. ಮೇ 10ರ ನಂತರ ಅಶೋಕಣ್ಣಾ... ಮಾಜಿಯಾಗುತ್ತಾರೆ...’ ಎಂದು ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪದ್ಮನಾಭನಗರ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿ. ರಘುನಾಥ ನಾಯ್ಡು ಪರವಾಗಿ ರೋಡ್ ಶೋ ನಡೆಸಿ ಮತ ಯಾಚಿಸಿದರು

‘ಲೂಟಿಯ ಹಣ ಹಂಚಲು ಬರುವವರಿಗೆ ತಕ್ಕ ಪಾಠ ಕಲಿಸಿ’

ಲಗ್ಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್‌.ಕುಸುಮಾ ಮತಯಾಚನೆ ಮಾಡಿದರು.

ರಾಜರಾಜೇಶ್ವರಿನಗರ: ಏಷ್ಯಾದಲ್ಲಿಯೇ ದೊಡ್ಡ ಕೈಗಾರಿಕಾ ಕ್ಷೇತ್ರದ ಎನ್ನಿಸಿರುವ ಪೀಣ್ಯ ಕೈಗಾರಿಕಾ ಕ್ಷೇತ್ರದಲ್ಲಿರುವ ನೂರಾರು ಮಾಲೀಕರ ಮನವೊಲಿಸಿ ಉದ್ಯೋಗ ದೊರಕಿಸಿ ಕೊಡುತ್ತೇನೆ ಎಂದು ಕಾಂಗ್ರೆಸ್ ಅಭ್ಯರ್ಥಿ ಎಚ್. ಕುಸುಮಾ ಹೇಳಿದರು.

ಲಗ್ಗೆರೆ, ಕೊಟ್ಟಿಗೆಪಾಳ್ಯದಲ್ಲಿ ಮತಯಾಚನೆ ಮಾಡಿ ಮಾತನಾಡಿ, ಆರ್.ಆರ್. ನಗರ ಕ್ಷೇತ್ರದ ವ್ಯಾಪ್ತಿಗೆ ಪೀಣ್ಯ ಕೈಗಾರಿಕಾ ಪ್ರದೇಶವಿದ್ದರೂ, ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಿಕೊಟ್ಟಿಲ್ಲ. ಧರ್ಮಗಳ ಮಧ್ಯೆ ಕೋಮುಭಾವನೆ ಕೆರಳಿಸುವ, ಅಭಿವೃದ್ಧಿ ಹೆಸರಿನಲ್ಲಿ ಕಳಪೆ ಕಾಮಗಾರಿ ನಡೆಸಿ ಹಣಲೂಟಿ ಮಾಡಲಾಗಿದೆ. ಲೂಟಿಯ ಹಣವನ್ನು ಬಿಜೆಪಿ ಶಾಸಕ ಹಂಚಲು ಬರುತ್ತಾರೆ ಎಂದರು.

ನಗರಸಭೆ ಮಾಜಿ ಅಧ್ಯಕ್ಷ ಹನುಮಂತರಾಯಪ್ಪ, ಮುಖಂಡ ನಾರಾಯಣಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಅಮರ್ನಾಥ್, ವಿವಿಧ ವಾರ್ಡ್ ಕಾಂಗ್ರೆಸ್ ಅಧ್ಯಕ್ಷರಾದ ಹನುಮೇಗೌಡ, ಪಾರ್ಥಗೌಡ, ಪಾಲಿಕೆ ಮಾಜಿ ಸದಸ್ಯೆ ಮಂಜುಳಾ ನಾರಾಯಣ, ಬ್ಲಾಕ್ ಕಾಂಗ್ರೆಸ್ ಹಿಂದುಳಿದ ವಿಭಾಗದ ಅಧ್ಯಕ್ಷ ರವಿಕುಮಾರ್, ಗಿರೀಶ್‌ಗೌಡ, ರಮೇಶ್‌ಗೌಡ, ಜಿಲ್ಲಾ ಕಾಂಗ್ರೆಸ್ ಪ್ರಧಾನಕಾರ್ಯದರ್ಶಿ ಜ್ಯೋತಿ ಇದ್ದರು.

ಶಿವಾಜಿನಗರ ವಿಧಾನಸಭೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ 23 ಅಂಶಗಳ ಪ್ರಣಾಳಿಕೆಯನ್ನು ಎಎಪಿ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಮಂಗಳವಾರ ಬಿಡುಗಡೆಗೊಳಿಸಿದರು. ಅಶ್ವಿನ್ ಮಹೇಶ್, ಪ್ರಕಾಶ್ ನೆಡುಂಗಡಿ, ವಿವೇಕ್ ಮೆನನ್, ಫರೀದುದ್ದೀನ್ ಷರೀಫ್ ಇದ್ದಾರೆ.

‘ಶಿವಾಜಿನಗರಕ್ಕೆ ವಿಶ್ವದರ್ಜೆಯ ಸೌಲಭ್ಯ’

ಬೆಂಗಳೂರು: ‘ಶಿವಾಜಿನಗರಕ್ಕೆ ವಿಶ್ವದರ್ಜೆಯ ಸೌಲಭ್ಯ ಕಲ್ಪಿಸಿ, ನಾಗರಿಕಸ್ನೇಹಿ ನಗರ ಕೇಂದ್ರವನ್ನಾಗಿ ಮಾಡುತ್ತೇವೆ’ ಎಂದು ಶಿವಾಜಿನಗರ ಆಮ್ ಆದ್ಮಿ ಪಕ್ಷದ ಅಭ್ಯರ್ಥಿ ಪ್ರಕಾಶ್ ನೆಡುಂಗಡಿ ಹೇಳಿದರು.

ನಗರದಲ್ಲಿ ಮಂಗಳವಾರ ನಡೆದ ಶಿವಾಜಿನಗರ ವಿಧಾನಸಭೆ ಕ್ಷೇತ್ರದ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ‘ಶಿವಾಜಿನಗರವು ಬೆಂಗಳೂರಿನ ಭೌಗೋಳಿಕ ಮತ್ತು ಐತಿಹಾಸಿಕ ಕೇಂದ್ರವಾಗಿದೆ. ವಿಧಾನಸೌಧ, ಹೈಕೋರ್ಟ್, ಸಚಿವಾಲಯಗಳು ಮತ್ತು ಇತರೆ ಸರ್ಕಾರಿ ಕಟ್ಟಡಗಳು ಶಿವಾಜಿ ನಗರದಲ್ಲಿವೆ. ಇದು ನಗರದ ವ್ಯಾಪಾರ ವಲಯದ ಕೇಂದ್ರ ಬಿಂದುವಾಗಿದೆ. ಇಲ್ಲಿನ ಸರ್ವತೋಮುಖ ಅಭಿವೃದ್ಧಿಗೆ ಕ್ಷೇತ್ರದಾದ್ಯಂತ ಜನರ ಅಭಿಪ್ರಾಯಗಳನ್ನು ಪಡೆದು, ಉತ್ತಮ ನಗರ ಯೋಜನಾ ತಜ್ಞರ ಸಲಹೆಯಂತೆ 23 ಅಂಶಗಳ ಪ್ರಣಾಳಿಕೆಯನ್ನು ಸಿದ್ಧಪಡಿಸಲಾಗಿದೆ’ ಎಂದರು. ಎಎಪಿಯ ಬೆಂಗಳೂರು ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಫರೀದುದ್ದೀನ್ ಷರೀಫ್ ಮಾತನಾಡಿ, ‘ಶಿವಾಜಿನಗರದ ಜನಸಾಮಾನ್ಯರಿಗೆ ಉತ್ತಮ ಗುಣಮಟ್ಟದ ಸೌಲಭ್ಯಗಳನ್ನು ಕಲ್ಪಿಸಲು ಬಳಕೆಯಾಗಬೇಕಿದ್ದ ಹಣವು ವ್ಯವಸ್ಥಿತವಾಗಿ ಲೂಟಿಯಾಗಿದೆ. ಇಲ್ಲಿನ ಅತಿ ಗಣ್ಯರ ಪ್ರದೇಶಗಳ ಅಭಿವೃದ್ಧಿಗೆ ಮಾತ್ರ ಆದ್ಯತೆ ನೀಡಲಾಗುತ್ತಿದೆ. ಹಾಗಾಗಿ ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿಲ್ಲ’ ಎಂದರು.

ಎಎಪಿ ಪ್ರಣಾಳಿಕೆ ಸಮಿತಿ ಅಧ್ಯಕ್ಷ ಅಶ್ವಿನ್ ಮಹೇಶ್ ಮಾತನಾಡಿ, ‘ಶಿವಾಜಿನಗರದಲ್ಲಿ ಪರಿವರ್ತನೆ ತರಲು ಪ್ರಕಾಶ್ ನೆಡುಂಗಡಿಯವರ ಪ್ರಣಾಳಿಕೆಯು ಜಾರಿಗೆ ಬರಬೇಕಿದೆ. ಇದು ಎಎಪಿ ಮತ್ತು ಅರವಿಂದ ಕೇಜ್ರಿವಾಲ್ ಅವರ ರಾಜಕೀಯ ವಿಧಾನವನ್ನು ಪ್ರತಿಬಿಂಬಿಸುತ್ತಿದೆ’ ಎಂದು ಹೇಳಿದರು.

ನಗರ ಯೋಜನೆಗಳ ತಜ್ಞ ವಿವೇಕ್ ಮೆನನ್ ಇದ್ದರು.

ಚಿತ್ರಾವಳಿ

ಹೆಬ್ಬಾಳ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಬೈರತಿ ಸುರೇಶ್ ಅವರು ಸಂಜಯನಗರ, ಗಂಗಾನಗರ ಎಂಎಲ್‌ಎ ಲೇಔಟ್, ಚೌಡಯ್ಯ ಬ್ಲಾಕ್ ಪ್ರದೇಶಗಳಲ್ಲಿ ಪಕ್ಷದ ನೂರಾರು ಕಾರ್ಯಕರ್ತರ ಜೊತೆ ಮಂಗಳವಾರ ಮನೆಮನೆ ಪ್ರಚಾರ ನಡೆಸಿದರು. ಹೆಬ್ಬಾಳ ಕ್ಷೇತ್ರದ ಸವಿತಾ ಸಮುದಾಯದ ಮುಖಂಡರು ಇದ್ದರು.

ರಾಜಾಜಿನಗರ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್‌ ಸುರೇಶ್ ಕುಮಾರ್ ಅವರ ಪರವಾಗಿ ಬಿಜೆಪಿ ಸಹ ಉಸ್ತುವಾರಿ ಅಣ್ಣಾಮಲೈ ಮತ್ತು ಸಂಸದ ಪಿ .ಸಿ.ಮೋಹನ್ ಅವರು ಶ್ರೀರಾಂಪುರದ 7ನೇ ಮುಖ್ಯರಸ್ತೆಯಲ್ಲಿ ಪ್ರಚಾರ ನಡೆಸಿದರು

ಕೆ.ಆರ್‌.ಪುರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಡಿ.ಕೆ.ಮೋಹನ್ ಪರ ತಮಿಳುನಾಡಿನ ತಿರುವಳ್ಳೂರ್ ಸಂಸದ ಡಾ.ಕೆ.ಜಯಕುಮಾರ್ ಅವರು ಪ್ರಚಾರ ನಡೆಸಿದರು –ಪ್ರಜಾವಾಣಿ ಚಿತ್ರಗಳು

ಮುಖಂಡ ಭವಾನಿಶಂಕರ್ ಬೈರೇಗೌಡ ಅವರ ನಿವಾಸಕ್ಕೆ ಭೇಟಿ ನೀಡಲು ಬಂದಾಗ ಎಚ್‌.ಡಿ.ರೇವಣ್ಣ ಅವರನ್ನು ನೂರಾರು ಬೆಂಬಲಿಗರು ಸ್ವಾಗತಿಸಿದರು.

‘ಕಾಂಗ್ರೆಸ್ ಡಕೋಟ ಎಕ್ಸ್‌ಪ್ರೆಸ್’

ಪ್ರಜಾವಾಣಿ ವಾರ್ತೆ

ನೆಲಮಂಗಲ: ಬಿಜೆಪಿ ಮುಖಂಡ ಭವಾನಿಶಂಕರ್ ಬೈರೇಗೌಡ ಹಾಗೂ ಅವರ ಪುತ್ರ, ಉದ್ಯಮಿ ಎಂ.ಬಿ. ಮಂಜುನಾಥ್ ಅವರನ್ನು ಜೆಡಿಎಸ್ ಮುಖಂಡ ಎಚ್‌.ಡಿ.ರೇವಣ್ಣ ಅವರು ಪಕ್ಷಕ್ಕೆ ಬರಮಾಡಿಕೊಂಡರು.

ತಾಲ್ಲೂಕಿನ ಹಂಚಿಪುರದ ಅವರ ನಿವಾಸಕ್ಕೆ ಬೇಟಿ ನೀಡಿದ ರೇವಣ್ಣ ಅವರು ಬೈರೇಗೌಡ ಅವರ ನೂರಾರು ಬೆಂಬಲಿಗರನ್ನು ಸಹ ಪಕ್ಷಕ್ಕೆ ಬರಮಾಡಿಕೊಂಡರು.

ಎಚ್‌.ಡಿ.ರೇವಣ್ಣ ಮಾತನಾಡಿ, ‘ಎರಡೂ ರಾಷ್ಟ್ರೀಯ ಪಕ್ಷಗಳು ರಾಜ್ಯವನ್ನು ಲೂಟಿ ಮಾಡಿದ್ದನ್ನು ರಾಜ್ಯದ ಜನರು ನೋಡಿದ್ದಾರೆ. ಪಂಚರತ್ನ ಯೋಜನೆಯಿಂದ ಸಮಗ್ರ ಅಭಿವೃದ್ಧಿಯಾಗಲಿದೆ. ಪಕ್ಷದಿಂದ ಎಲ್ಲ ಅಧಿಕಾರ ಅನುಭವಿಸಿದ ಕೆಲವರು ಕಾಂಗ್ರೆಸ್ ಸೇರಿದ್ದಾರೆ. ಅಂತಹ ವಿಶ್ವಾಸದ್ರೋಹಿಗಳನ್ನು ದೂರವಿರಿಸಿ, ಕಾಂಗ್ರೆಸ್ ಡಕೋಟ ಎಕ್ಸ್‌ಪ್ರೆಸ್ ಇದ್ದಂತೆ’ ಎಂದರು.

ಮುಖಂಡ ಭವಾನಿಶಂಕರ್ ಬೈರೇಗೌಡ ಮಾತನಾಡಿ, ‘ಬಿಜೆಪಿ ಸಂಘಟನಾ ಕಾರ್ಯದರ್ಶಿ ಕಾಂತರಾಜು ಹಾಗೂ ಇತರೆ ಮುಖಂಡರ ಕುತಂತ್ರದಿಂದ ಸಿಗಬೇಕಾದ ಸ್ಥಾನಮಾನಗಳು ಸಿಗಲಿಲ್ಲ, ಜೆಡಿಎಸ್‌ನ ನಿಷ್ಠಾವಂತ ಕಾರ್ಯಕರ್ತನಾಗಿದ್ದ ನಾನು ಮತ್ತೆ ಮರಳಿದ್ದೇನೆ’ ಮನವಿ ಮಾಡಿದರು.

ಸಿ.ವಿ. ರಾಮನ್ ನಗರ, ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ-ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಸಂತೋಷ್ ಜಿಗಳಿಕೊಪ್ಪ, ಸಚ್ಚಿದಾನಂದ ಕುರಗುಂದ** ಅವರು ನಡೆಸಿದ ಕಿರು ಸಂದರ್ಶನಗಳು ಇಲ್ಲಿವೆ.

ಎಸ್. ರಘು (ಬಿಜೆಪಿ)

'ಜನರ ಶ್ರೀರಕ್ಷೆ ನನ್ನ ಮೇಲಿದೆ'

● ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು?

ಕಾರ್ಪೊರೇಟರ್ ಹಾಗೂ ಶಾಸಕನಾಗಿ ಜನರ ಕೆಲಸ ಮಾಡಿದ್ದೇನೆ. ಶಾಂತಿಪ್ರಿಯರು ಇರುವ ನನ್ನ ಕ್ಷೇತ್ರವನ್ನು ಅಭಿವೃದ್ಧಿಪಡಿಸಲು ಶ್ರಮಿಸುತ್ತಿದ್ದೇನೆ. 250 ಬೆಡ್‌ಗಳ ಆಸ್ಪತ್ರೆ, 100 ಬೆಡ್ ಡಯಾಲಿಸಿಸ್ ಆಸ್ಪತ್ರೆ ನಿರ್ಮಿಸಲಾಗಿದೆ. 140 ಬೆಡ್‌ಗಳ ಐಸೋಲೇಷನ್ ಆಸ್ಪತ್ರೆ ಉನ್ನತೀಕರಿಸಲಾಗಿದೆ. ಬೈಯಪ್ಪನಹಳ್ಳಿ ರೈಲು ನಿಲ್ದಾಣವನ್ನು ದೇಶದಲ್ಲೇ ಮಾದರಿ ನಿಲ್ದಾಣ ಮಾಡಲಾಗಿದೆ. ಕೆರೆಗಳು ಹಾಗೂ ಉದ್ಯಾನಗಳ ಅಭಿವೃದ್ಧಿ, ಸರ್ಕಾರಿ ಶಾಲೆ-ಕಾಲೇಜು ಕಟ್ಟಡ ನಿರ್ಮಾಣ ಹಾಗೂ ಸುಸಜ್ಜಿತ ರಸ್ತೆ ನಿರ್ಮಾಣಕ್ಕೆ ಒತ್ತು ನೀಡಿದ್ದೇನೆ. ಧರ್ಮ ಹಾಗೂ ಜಾತಿ ಭೇದವಿಲ್ಲದೇ, ನಾನು ಮಾಡಿರುವ ಎಲ್ಲ ಅಭಿವೃದ್ಧಿ ಕೆಲಸಗಳು ಜನರ ಕಣ್ಣಿಗೆ ಕಾಣುತ್ತಿವೆ.

● ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ?

ಅದ್ಭುತ ಬೆಂಬಲವಿದೆ. ಕಾರ್ಪೊರೇಟರ್ ಹಾಗೂ ಶಾಸಕನಾಗಿ ನಿತ್ಯವೂ ಜನರ ಕೈಗೆ ಸಿಗುತ್ತೇನೆ. ಅವರ ಕಷ್ಟ-ಸುಖಗಳಲ್ಲಿ ಭಾಗಿಯಾಗುತ್ತಿದ್ದೇನೆ. ಪ್ರತಿಯೊಬ್ಬ ಮತದಾರರು, ಮನೆ ಮಗನೆಂದು ತಿಳಿದು ನನಗೆ ಬೆಂಬಲ ನೀಡುತ್ತಿದ್ದಾರೆ.



● ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?

ಕ್ಷೇತ್ರದಲ್ಲೇ ನನಗೆ ಅಭೂತಪೂರ್ವ ಬೆಂಬಲವಿದ್ದು, ಈ ಬಾರಿಯೂ ಶಾಸಕನಾಗಿ ಆಯ್ಕೆಯಾಗುವ ವಿಶ್ವಾಸವಿದೆ. ಪ್ರತಿಸ್ಪರ್ಧಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧ ಗೆಲುವು ಖಚಿತ.

ಎಸ್. ಆನಂದ್‌ಕುಮಾರ್ (ಕಾಂಗ್ರೆಸ್)

'ಸರ್ಕಾರದ ಯೋಜನೆ ತಲುಪಿಸಲು ಶ್ರಮಿಸುವೆ'

● ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು?

ಕಾರ್ಪೊರೇಟರ್ ಆಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಿದ್ದೇನೆ. ಕಷ್ಟ-ಸುಖಗಳಲ್ಲಿ ಭಾಗಿಯಾಗಿದ್ದೇನೆ. ರಸ್ತೆಗಳ ಹಾಗೂ ಉದ್ಯಾನಗಳ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ ಸುಧಾರಣೆ ಮಾಡಿದ್ದೇನೆ. ವಸತಿ ವಂಚಿತರಿಗೆ ಒಂಟಿ ಮನೆ ಯೋಜನೆಯಡಿ ಮನೆಗಳನ್ನು ನಿರ್ಮಿಸಿ ಕೊಟ್ಟಿದ್ದೇನೆ. ಸದ್ಯದ ಶಾಸಕ, ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಕ್ಷೇತ್ರಕ್ಕೆ ಬಂದಿದ್ದ ಅನುದಾನದ ಲೆಕ್ಕವೂ ಇಲ್ಲ. ಜನರಿಗೂ ಸಿಗುವುದಿಲ್ಲ. ಇದರಿಂದ ಜನರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಧರ್ಮ-ಜಾತಿ ಭೇದವಿಲ್ಲದೇ ಎಲ್ಲ ಜನರಿಗೂ ಸರ್ಕಾರದ ಯೋಜನೆಗಳನ್ನು ತಲುಪಿಸಲು ನಾನು ಶ್ರಮಿಸುವೆ. ಕ್ಷೇತ್ರ ಹಾಗೂ ಇಲ್ಲಿಯ ಜನರ ಅಭಿವೃದ್ಧಿಯೇ ನನ್ನ ಗುರಿ.

● ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ?

ಚೆನ್ನಾಗಿದೆ. ಈ ಬಾರಿ ಜನರು ಬದಲಾವಣೆ ಬಯಸುತ್ತಿದ್ದಾರೆ. ಸ್ವಯಂಪ್ರೇರಿತವಾಗಿ ಜನರು ನನ್ನೊಂದಿಗೆ ಪ್ರಚಾರಕ್ಕೆ ಬರುತ್ತಿದ್ದಾರೆ. ಪ್ರತಿ ವಾರ್ಡ್‌ನಲ್ಲೂ ಮನೆ ಮನೆಗೆ ಹೋಗಿ ಮಾತನಾಡಿಸುತ್ತಿದ್ದೇನೆ. ಹೋದ ಕಡೆಯಲ್ಲೆಲ್ಲ ಜನರು, ಆತ್ಮೀಯತೆಯಿಂದ ಮನೆ ಮಗನ ರೀತಿಯಲ್ಲಿ ಸ್ವಾಗತಿಸುತ್ತಿದ್ದಾರೆ. ಎಲ್ಲರೂ ಕಾಂಗ್ರೆಸ್‌ಗೆ ಮತವೆಂದು ಹೇಳುತ್ತಿದ್ದಾರೆ. ಹೀಗಾಗಿ, ಗೆಲುವು ನನ್ನದಾಗುವ ವಿಶ್ವಾಸವಿದೆ.



● ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು?

ಬಿಜೆಪಿ ಅಭ್ಯರ್ಥಿ. ಶಾಸಕರಾಗಿ ಯಾವುದೇ ಕೆಲಸ ಮಾಡದ ಬಿಜೆಪಿ ಅಭ್ಯರ್ಥಿ ವಿರುದ್ಧ ಜನರ ಆಕ್ರೋಶವಿದೆ.

ಕೃಷ್ಣ ಬೈರೇಗೌಡ (ಕಾಂಗ್ರೆಸ್)

'ಅಭಿವೃದ್ಧಿ ಕಾರ್ಯಗಳು, ಸಚ್ಚಾರಿತ್ರ್ಯ ವ್ಯಕ್ತಿತ್ವವೇ ಶ್ರೀರಕ್ಷೆ'

● ನೀವು ಏನು ಕೆಲಸ ಮಾಡುತ್ತೀರಿ ಎಂಬ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ಬ್ಯಾಟರಾಯನಪುರ ಕ್ಷೇತ್ರವು ಬೆಂಗಳೂರು ವ್ಯಾಪ್ತಿಯಲ್ಲಿದ್ದರೂ ಮೂಲಸೌಕರ್ಯಗಳು ಇಲ್ಲದೆಯೇ ಬಹಳ ಹಿಂದುಳಿದಿತ್ತು. ನಾನು ಶಾಸಕನಾದ ನಂತರ ಈ ಕ್ಷೇತ್ರಕ್ಕೆ ಹೊಸ ಸ್ಪರ್ಶ ನೀಡಿದ್ದೇನೆ. ಈಗ ಬೆಂಗಳೂರು ಮಹಾನಗರಕ್ಕೆ ಸರಿಸಮಾನವಾದ ಮತ್ತು ಅಗತ್ಯವಿರುವಷ್ಟು ಮೂಲಸೌಕರ್ಯಗಳನ್ನು ಕಲ್ಪಿಸಲಾಗಿದೆ. ರಸ್ತೆ, ಕೆರೆಗಳು, ಉದ್ಯಾನಗಳಿಗೆ ಕಾಯಕಲ್ಪ ನೀಡುವುದು ಸೇರಿದಂತೆ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಕ್ಷೇತ್ರದ ಜನತೆಯ ಜತೆ ನಿರಂತರ ಸಂಪರ್ಕದಲ್ಲಿದ್ದೇನೆ. ಜತೆಗೆ, ನನ್ನ ಸಚ್ಚಾರಿತ್ರ್ಯ ಮತ್ತು ಸಾರ್ವಜನಿಕ ಜೀವನದಲ್ಲಿ ಶಾಸಕ, ಮಂತ್ರಿಯಾಗಿ ಸೈ ಎನಿಸಿಕೊಂಡಿದ್ದೇನೆ. ಶುದ್ಧ ಹಸ್ತದಿಂದ ಬದುಕಿ, ನನ್ನದೇ ಆದ ಗೌರವ ಉಳಿಸಿಕೊಂಡಿದ್ದೇನೆ. ಅಭಿವೃದ್ಧಿ ಕಾರ್ಯಗಳು ಮತ್ತು ವ್ಯಕ್ತಿತ್ವದ ಮೂಲಕ ಶಾಸಕ ಸ್ಥಾನಕ್ಕೆ ಘನತೆ, ಗೌರವ ತಂದಿದ್ದೇನೆ.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೆ?

ಖಂಡಿತ. ಅಪಾರ ಜನ ಬೆಂಬಲ ದೊರೆತಿದೆ. ಸೇವೆ ಮಾಡಲು ಮತ್ತೊಮ್ಮೆ ಅವಕಾಶ ಕಲ್ಪಿಸಲು ಜನ ಬಯಸಿದ್ದಾರೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ, ಲೂಟಿ ನಡೆದಿದೆ. ಬೆಲೆ ಏರಿಕೆಯಿಂದ ಜನ ತತ್ತರಿಸಿದ್ದಾರೆ. ಆಡಳಿತ ಸಂಪೂರ್ಣ ಹಳಿ ತಪ್ಪಿರುವುದರಿಂದ ಬಿಜೆಪಿ ಬಗ್ಗೆ ಜನ ಬೇಸತ್ತಿದ್ದಾರೆ. ಹೀಗಾಗಿ, ಈ ಬಾರಿ ಬಿಜೆಪಿ ಬೇಡ ಎನ್ನುವುದೇ ಕಾಂಗ್ರೆಸ್‌ಗೆ ಪ್ಲಸ್ ಪಾಯಿಂಟ್. ಸುಭದ್ರ ಸರ್ಕಾರ ಜನರಿಗೆ ಬೇಕಾಗಿರುವುದರಿಂದ ಕಾಂಗ್ರೆಸ್‌ಗೆ ಬೆಂಬಲ ನೀಡುವುದು ನಿಶ್ಚಿತ. ನನಗೆ ಪೂರಕವಾದ ಎಲ್ಲ ರೀತಿಯ ವಾತಾವರಣ ಸೃಷ್ಟಿಯಾಗಿದೆ.



● ನಿಮ್ಮ ಎದುರಾಳಿ ಯಾರು?

ಬಿಜೆಪಿಯೇ ಎದುರಾಳಿ.

ಎಚ್.ಸಿ. ತಮ್ಮೇಶಗೌಡ (ಬಿಜೆಪಿ)

'ಮಾದರಿ ಕ್ಷೇತ್ರವನ್ನಾಗಿ ಮಾಡುತ್ತೇನೆ'

● ನೀವು ಏನು ಕೆಲಸ ಮಾಡುತ್ತೀರಿ ಎಂಬ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ಕಳೆದ 15 ವರ್ಷಗಳಿಂದ ಅಭಿವೃದ್ಧಿ ಕಾರ್ಯಗಳು ಕ್ಷೇತ್ರದಲ್ಲಿ ಕುಂಠಿತಗೊಂಡಿವೆ. ಕ್ಷೇತ್ರವು ಅತಿ ಹಿಂದುಳಿದಿದ್ದು, ಬಡವರಿಗೆ ಹಕ್ಕುಪತ್ರಗಳನ್ನು ಸಹ ನೀಡಿಲ್ಲ. ಕ್ಷೇತ್ರದಲ್ಲಿ ಒಂಬತ್ತು ಲಕ್ಷ ಜನಸಂಖ್ಯೆ ಇದ್ದರೂ ಸೌಲಭ್ಯಗಳು ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಶಾಲೆಗಳ ಸ್ಥಿತಿ ಶೋಚನೀಯವಾಗಿದೆ. ಪದವಿ ಕಾಲೇಜು ಸಹ ಇಲ್ಲ. ಉತ್ತಮ ಕ್ರೀಡಾಂಗಣ ಮತ್ತು ರಸ್ತೆಗಳು ಇಲ್ಲ. ಚರಂಡಿ, ಬೀದಿದೀಪಗಳು ಮುಂತಾದ ಯಾವುದೇ ರೀತಿಯ ಮೂಲಸೌಕರ್ಯಗಳು ಇಲ್ಲ. ಇದುವರೆಗೆ ಸರ್ಕಾರಿ ಆಸ್ಪತ್ರೆ ಅಥವಾ ಕಾಲೇಜು ಏಕೆ ನಿರ್ಮಿಸಿಲ್ಲ? ಹಾಲಿ ಶಾಸಕರ ವರ್ತನೆಯಿಂದ ಜನ ಬದಲಾವಣೆ ಬಯಸಿದ್ದಾರೆ. ಕ್ಷೇತ್ರದಲ್ಲಿ ಶಾಸಕರ ಕಚೇರಿಯೂ ಇಲ್ಲ. ಹಾಲಿ ಶಾಸಕರು ವಿಶೇಷ ಅಲೋಚನೆಗಳಿಂದ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡಿಲ್ಲ. ಹೊಸ ಮೇಲ್ಸುತುವೆಗಳನ್ನು ನಿರ್ಮಿಸಲು ಕ್ರಮ ಕೈಗೊಂಡಿಲ್ಲ. ಕ್ಷೇತ್ರವನ್ನು ಮಾದರಿ ವಿಧಾನಸಭಾ ಕ್ಷೇತ್ರವನ್ನು ಮಾಡುವ ಆಶಯವನ್ನು ನಾನು ಹೊಂದಿದ್ದೇನೆ. ಯಾವುದೇ ವ್ಯವಹಾರ ಮಾಡುವ ರಾಜಕಾರಣಿ ನಾನಲ್ಲ. ನಾನೊಬ್ಬ ಸಾಮಾನ್ಯ ವ್ಯಕ್ತಿ.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೆ?

ನಿರೀಕ್ಷೆಗೂ ಮೀರಿ ಜನ ಬೆಂಬಲ ನೀಡುತ್ತಿದ್ದಾರೆ. ಜನ ಬದಲಾವಣೆ ಬಯಸಿದ್ದಾರೆ. ಅಭಿವೃದ್ಧಿ ಕಾರ್ಯಸೂಚಿ ಆಧಾರದ ಮೇಲೆ ಮತ ಕೇಳುತ್ತಿದ್ದೇವೆ.



● ಟಿಕೆಟ್ ನೀಡುವ ಗೊಂದಲ ಚುನಾವಣೆಯಲ್ಲಿ ಪರಿಣಾಮ ಬೀರಲಿದೆಯೇ?

ನಮ್ಮಲ್ಲಿ ಯಾವುದೇ ಗೊಂದಲ, ಭಿನ್ನಾಭಿಪ್ರಾಯಗಳು ಇಲ್ಲ. ಕ್ಷೇತ್ರದ ಅಭಿವೃದ್ಧಿಯಾಗಬೇಕು ಎನ್ನುವ ಉದ್ದೇಶದಿಂದ ಎಲ್ಲರೂ ಚುನಾವಣೆಯಲ್ಲಿ ಸ್ಪರ್ಧಿಸಲು ಬಯಸಿದ್ದರು. ಈಗ ಎಲ್ಲ ಆಕಾಂಕ್ಷಿಗಳು ಒಗ್ಗಟ್ಟಿನಿಂದ ಕೆಲಸ ಮಾಡುತ್ತಿದ್ದೇವೆ. ಎಲ್ಲರೂ ಬೆಂಬಲ ನೀಡಿದ್ದಾರೆ.

● ನಿಮ್ಮ ಎದುರಾಳಿ?

ನಮಗೆ ಎದುರಾಳಿ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಬಿಜೆಪಿ ಗೆಲ್ಲುವ ವಿಶ್ವಾಸ ಹೊಂದಿದೆ.

ಮೋಹನ್ ದಾಸರಿ (ಆಮ್ ಆದ್ಮಿ ಪಾರ್ಟಿ)

'ಮಕ್ಕಳ ಭವಿಷ್ಯ ಉಜ್ವಲಗೊಳಿಸುವ ಗುರಿ'

● ಕ್ಷೇತ್ರದ ಜನರು ನಿಮಗೆ ಏಕೆ ಮತ ಹಾಕಬೇಕು

ದಿಢೀರ್ ಕ್ಷೇತ್ರಕ್ಕೆ ಬಂದು ಚುನಾವಣೆಗೆ ನಿಂತಿಲ್ಲ. 2018ರಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದೆ. ಅದಾದ ನಂತರ, ಜನರ ಜೊತೆಗೆ ಬೆರೆತಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಕ್ಷೇತ್ರದ ಜನರ ಕಷ್ಟಗಳಿಗೆ ಸ್ಪಂದಿಸಿದ್ದೇನೆ. ಧರ್ಮ-ಜಾತಿ ಎಂಬ ಭೇದವಿಲ್ಲದೇ ಆರ್ಥಿಕವಾಗಿ ಹಿಂದುಳಿದ ಎಲ್ಲರಿಗೂ ಪಡಿತರ ಕಿಟ್ ವಿತರಿಸಿದ್ದೇನೆ. ಆಮ್ಲಜನಕ ಪೂರೈಸಿದ್ದೇನೆ. ಪ್ರತಿ ಪ್ರದೇಶದಲ್ಲೂ ಖಾಸಗಿ ಶಾಲೆ ಮೀರಿಸುವ ರೀತಿಯಲ್ಲಿ ಸರ್ಕಾರಿ ಶಾಲೆ ತೆರೆಯುವೆ. ಉಚಿತ ಆರೋಗ್ಯ ಸೇವೆ ಒದಗಿಸಲು ಕ್ಲಿನಿಕ್ ಆರಂಭಿಸುವೆ. 50 ವರ್ಷ ಕ್ಷೇತ್ರದಲ್ಲಿರುವವರಿಗೆ ಇದುವರೆಗೂ ಸ್ವಂತ ಮನೆಯಿಲ್ಲ. ಅವರಿಗೆ ಸರ್ಕಾರದ ಯೋಜನೆಗಳಡಿ ಮನೆ ಕೊಡಿಸುವೆ. ಮಕ್ಕಳ ಮುಂದಿನ ಭವಿಷ್ಯ ಉಜ್ವಲಗೊಳಿಸುವುದೇ ನನ್ನ ಗುರಿ.

● ಕ್ಷೇತ್ರದಲ್ಲಿ ನಿಮಗೆ ಜನರ ಬೆಂಬಲ ಹೇಗಿದೆ ?

ತುಂಬಾ ಚೆನ್ನಾಗಿದೆ. ಕೋವಿಡ್ ಸಂದರ್ಭದಲ್ಲಿ ಜನಪ್ರತಿನಿಧಿಗಳು ಜನರ ಬಳಿ ಸುಳಿಯಲಿಲ್ಲ. ಹಾಲಿ ಶಾಸಕರ ಬಗ್ಗೆ ಜನರಿಗೆ ಕೋಪವಿದೆ. ಹೀಗಾಗಿ, ಹೋದ ಕಡೆಯಲ್ಲೆಲ್ಲ ಜನರಿಂದ ಉತ್ತಮ ಸ್ಪಂದನೆ ಸಿಗುತ್ತಿದೆ. ಬಿಜೆಪಿ-ಕಾಂಗ್ರೆಸ್ ಒಳ ಒಪ್ಪಂದದಿಂದ ಬೇಸತ್ತಿರುವ ಜನ, ಈ ಬಾರಿ ಬದಲಾವಣೆ ಬಯಸಿ ನನ್ನನ್ನು ಗೆಲ್ಲಿಸುವ ವಿಶ್ವಾಸವಿದೆ.

● ನಿಮ್ಮ ನಿಜವಾದ ಪ್ರತಿಸ್ಪರ್ಧಿ ಯಾರು ?

ಬಿಜೆಪಿ ಅಭ್ಯರ್ಥಿಯೇ ಪ್ರತಿಸ್ಪರ್ಧಿ. ಕ್ಷೇತ್ರದಲ್ಲಿ ಬಿಜೆಪಿಗೆ ಇದುವರೆಗೂ ಪ್ರತಿಸ್ಪರ್ಧಿ ಇರಲಿಲ್ಲ. ಈಗ ಆಮ್ ಆದ್ಮಿ ಪಾರ್ಟಿ ಬಂದಿದೆ.

ಪಿ. ನಾಗರಾಜ (ಜೆಡಿಎಸ್)

'ಜನ ಬದಲಾವಣೆ ಬಯಸಿದ್ದಾರೆ'

● ನೀವು ಏನು ಕೆಲಸ ಮಾಡುತ್ತೀರಿ ಎಂಬ ಕಾರಣಕ್ಕೆ ಜನರು ನಿಮಗೆ ಮತ ನೀಡಬೇಕು?

ಕ್ಷೇತ್ರದ ಅಭಿವೃದ್ಧಿಯಾಗಿಲ್ಲ. ಹಲವಾರು ಸಮಸ್ಯೆಗಳಿವೆ. ಮೂಲ ಸೌಕರ್ಯಗಳನ್ನೇ ಕಲ್ಪಿಸಿಲ್ಲ. ನೀರಿನ ಸಮಸ್ಯೆಯಿಂದ ಜನರು ಪರದಾಡುತ್ತಿದ್ದಾರೆ. ಸ್ವಚ್ಛತೆ ಇಲ್ಲ. ಉತ್ತಮ ರಸ್ತೆಗಳು ಇಲ್ಲ. ಕಳೆದ 20 ವರ್ಷಗಳಿಂದ ಬಡವರಿಗೆ ಹಕ್ಕುಪತ್ರಗಳನ್ನು ಕೊಟ್ಟಿಲ್ಲ. ಕಳೆದ 15 ವರ್ಷಗಳಿಂದಲೂ ಕಾಂಗ್ರೆಸ್ ಶಾಸಕರಿದ್ದರೂ ಅಭಿವೃದ್ಧಿಗೆ ಗಮನಹರಿಸಿಲ್ಲ. ಹೀಗಾಗಿ, ಜನ ಈ ಬಾರಿ ಬದಲಾವಣೆ ಬಯಸಿದ್ದು, ಜೆಡಿಎಸ್ ಪರ ಬೆಂಬಲ ಸೂಚಿಸುತ್ತಿದ್ದಾರೆ. ಪಕ್ಷದ ವರಿಷ್ಠರಾದ ಎಚ್.ಡಿ. ದೇವೇಗೌಡರು, ಎಚ್.ಡಿ. ಕುಮಾರಸ್ವಾಮಿ ಅವರ ನಾಯಕತ್ವ ಹಾಗೂ ಪಕ್ಷದ ಪಂಚರತ್ನ ಯೋಜನೆಗಳು ನಮಗೆ ಶ್ರೀರಕ್ಷೆಯಾಗಿವೆ. ಬಡವರ ಪರ ಯೋಜನೆಗಳನ್ನು ಪಕ್ಷವು ರೂಪಿಸಿದೆ. ಪಕ್ಷವನ್ನು ಗೆಲ್ಲಿಸುವ ಮೂಲಕ ಕುಮಾರಸ್ವಾಮಿ ಅವರ ಕೈಬಲಪಡಿಸಲು ಬಯಸಿದ್ದಾರೆ. ಪ್ರಾದೇಶಿಕ ಪಕ್ಷ ಬಂದರೆ ಜನರಿಗೆ ಒಳಿತಾಗುತ್ತದೆ ಎನ್ನುವ ಭಾವನೆ ಜನರಲ್ಲಿ ಮೂಡಿದೆ. ಜತೆಗೆ ಬಿಜೆಪಿಯ ಭ್ರಷ್ಟ ಆಡಳಿತಕ್ಕೆ ಜನ ಬೇಸತ್ತಿದ್ದಾರೆ.

● ಕ್ಷೇತ್ರದಲ್ಲಿ ಗೆಲುವಿನ ವಿಶ್ವಾಸ ಮೂಡಿಸುವ ಜನಬೆಂಬಲ ನಿಮಗೆ ಇದೆಯೆ?

ಜನ ಬೆಂಬಲ ಇದೆ. ಸಾವಿರಾರು ಜನ ಪಕ್ಷಕ್ಕೆ ಸೇರ್ಪಡೆಯಾಗುತ್ತಿದ್ದಾರೆ. ಪಕ್ಷದ ನಾಯಕತ್ವದ ಮೇಲೆ ಜನ ಭರವಸೆ ಹೊಂದಿದ್ದಾರೆ.

● ಪ್ರಮುಖ ಎದುರಾಳಿ

ಕಾಂಗ್ರೆಸ್ ನಮಗೆ ಎದುರಾಳಿ. ಬಿಜೆಪಿ ನಮಗೆ ಎದುರಾಳಿಯೇ ಅಲ್ಲ.

ಬಸವನಗುಡಿ ಕ್ಷೇತ್ರ: ವಶಪಡಿಸಿಕೊಳ್ಳಲು ಕಾಂಗ್ರೆಸ್, ಜೆಡಿಎಸ್ ಪೈಪೋಟಿ

'ಬಿಜೆಪಿ ಭದ್ರಕೋಟೆ'ಗೆ ನುಗ್ಗಲು ತಂತ್ರ

● ಆದಿತ್ಯ ಕೆ.ಎ.

ಬೆಂಗಳೂರು: ಪ್ರಜ್ಞಾವಂತರು ನೆಲೆಸಿರುವ ಕ್ಷೇತ್ರವೆಂದೇ ಗುರುತಿಸಿಕೊಂಡಿರುವ ಬಸವನಗುಡಿಯಲ್ಲಿ ಈ ಬಾರಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ.

ಹಲವು ಚುನಾವಣೆಗಳಲ್ಲಿ ಕ್ಷೇತ್ರವು ಬಿಜೆಪಿ ಭದ್ರಕೋಟೆ ಎನ್ನುವಂತೆ ಫಲಿತಾಂಶ ಬಂದಿದ್ದು, ಈ ಕೋಟೆ ಛಿದ್ರಗೊಳಿಸಲು ಕಾಂಗ್ರೆಸ್ ಹಾಗೂ ಜೆಡಿಎಸ್ 'ರಣತಂತ್ರ' ರೂಪಿಸುತ್ತಿವೆ. ಕ್ಷೇತ್ರದಲ್ಲಿ ನಾಲ್ಕನೇ ಜಯದ ಕನಸು ಕಾಣುತ್ತಿರುವ ಬಿಜೆಪಿ ಅಭ್ಯರ್ಥಿ ರವಿ ಸುಬ್ರಹ್ಮಣ್ಯ ಅವರಿಗೆ ಉಳಿದವರು ಸವಾಲು ಹಾಕುತ್ತಿದ್ದಾರೆ.

ವಿಜ್ಞಾನಿಗಳು, ಸಾಹಿತಿಗಳು, ಕಲಾವಿದರು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿ ನೆಲೆಸಿದ್ದಾರೆ.
ರಾಜಧಾನಿಯ ಅತ್ಯಂತ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳೂ ಈ ಭಾಗದಲ್ಲಿವೆ. ಬ್ರಾಹ್ಮಣರು ಹಾಗೂ ಹೊರ ಜಿಲ್ಲೆಯಿಂದ ಬಂದ ಒಕ್ಕಲಿಗರೂ ಕ್ಷೇತ್ರದಲ್ಲಿ ನೆಲೆ ಕಂಡುಕೊಂಡಿದ್ದಾರೆ. ಇವರ ಮನ ಗೆಲ್ಲಲು ಕಣದಲ್ಲಿರುವ 12 ಮಂದಿ ಸಹ ಪ್ರಯತ್ನಿಸುತ್ತಿದ್ದಾರೆ.

ಬಿಜೆಪಿಯಿಂದ ರವಿ ಸುಬ್ರಮಣ್ಯ, ಕಾಂಗ್ರೆಸ್‌ನಿಂದ ಯು.ಬಿ.ವೆಂಕಟೇಶ್, ಜೆಡಿಎಸ್‌ನಿಂದ ಅರಮನೆ ಶಂಕರ್, ಆಮ್ ಆದ್ಮಿ ಪಕ್ಷ(ಎಎಪಿ)ದಿಂದ ಸತ್ಯಲಕ್ಷ್ಮಿರಾವ್, ಕೆಆರ್‌ಎಸ್‌ನಿಂದ ಎಲ್.ಜೀವನ್ ಸ್ಪರ್ಧಿಸಿದ್ದಾರೆ. ಮೇಲ್ನೋಟಕ್ಕೆ ಬಿಜೆಪಿ, ಕಾಂಗ್ರೆಸ್, ಜೆಡಿಎಸ್ ನಡುವೆ ನೇರ ಹಣಾಹಣಿ ಕಂಡುಬರುತ್ತಿದೆ.


ರವಿ ಸುಬ್ರಮಣ್ಯ

ಯು.ಬಿ. ವೆಂಕಟೇಶ್

ಅರಮನೆ ಶಂಕರ್

ರವಿ ಸುಬ್ರಹ್ಮಣ್ಯ ಅವರು ಸತತ ಮೂರು ಬಾರಿ ಜಯಿಸಿ ಕ್ಷೇತ್ರದ ಆಳ-ಅಗಲವನ್ನು ಅರಿತಿದ್ದಾರೆ. ಟಿಕೆಟ್ ನಿರೀಕ್ಷೆಯಲ್ಲಿದ್ದ ಕಟ್ಟೆ ಸತ್ಯನಾರಾಯಣ ಅವರೂ ರವಿ ಜತೆಗೇ ಓಡಾಟ ನಡೆಸುತ್ತಿದ್ದಾರೆ. ಇದು 'ಪ್ಲಸ್ ಪಾಯಿಂಟ್' ಆಗಿದೆ. ಕೇಂದ್ರದ ಮಾಜಿ ಸಚಿವ ದಿವಂಗತ ಅನಂತಕುಮಾರ ಅವರ ಪತ್ನಿ ತೇಜಸ್ವಿನಿ ಅವರು ಇದೇ ಕ್ಷೇತ್ರದಿಂದ ಟಿಕೆಟ್ ನಿರೀಕ್ಷೆಯಲ್ಲಿದ್ದರು. ಅವರಿಗೆ ಟಿಕೆಟ್ ಸಿಗದಿರುವ ಕಾರಣ ಸಕ್ರಿಯವಾಗಿಲ್ಲ. ಇದು ಯಾರಿಗೆ ಲಾಭ ತರಲಿದೆ ಎಂಬುದನ್ನು ನೋಡಬೇಕಿದೆ.

ಅನಂತಕುಮಾರ್ ಅವರಿಂದ ರಾಜಕೀಯವಾಗಿ ಬೆಳೆದವರೇ ಅವರನ್ನು ಮರೆತಿದ್ದಾರೆ ಎಂಬ ಭಾವನಾತ್ಮಕ ವಿಷಯವು ಕ್ಷೇತ್ರದ ಬಿಜೆಪಿ ಮುಖಂಡರಲ್ಲಿಯೇ ಚರ್ಚೆಯಾಗುತ್ತಿದೆ.

'ಒಳಚರಂಡಿ ವ್ಯವಸ್ಥೆ, ರಸ್ತೆ, ಆರೋಗ್ಯ, ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ತಂದಿರುವೆ' ಎಂದು ರವಿ ಸುಬ್ರಹ್ಮಣ್ಯ ಅವರು ಅಬ್ಬರದ ಪ್ರಚಾರ ನಡೆಸುತ್ತಿದ್ದಾರೆ. ರವಿ ಪರವಾಗಿ ಅವರ ಸಂಬಂಧಿ ಸಂಸದ ತೇಜಸ್ವಿ ಸೂರ್ಯ ಅಬ್ಬರದ ಪ್ರಚಾರ ನಡೆಸುತ್ತಿದ್ದಾರೆ. ಇದು ಲಾಭ ತರುವ ನಿರೀಕ್ಷೆಯಲ್ಲಿ ಬಿಜೆಪಿಯಿದೆ.

2013 ಹಾಗೂ 2018ರ ಚುನಾವಣೆಯಲ್ಲಿ ಕಾಂಗ್ರೆಸ್ ಅನ್ನು ಹಿಂದಿಕ್ಕಿ ಎರಡನೇ ಸ್ಥಾನಕ್ಕೇರಿರುವ ಜೆಡಿಎಸ್ ಈ ಬಾರಿ ಅದಮ್ಯ ವಿಶ್ವಾಸದಲ್ಲಿದೆ. ಎರಡು ತಿಂಗಳ ಮೊದಲೇ ಕ್ಷೇತ್ರಕ್ಕೆ ಅಭ್ಯರ್ಥಿಯ ಹೆಸರು ಘೋಷಣೆ ಮಾಡಿದ್ದು ಜೆಡಿಎಸ್ ಅಭ್ಯರ್ಥಿಗೆ ವರದಾನವಾಗಿದೆ.

ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ, ಎಚ್.ಡಿ.ಕುಮಾರಸ್ವಾಮಿ ಅವರು ಕ್ಷೇತ್ರಕ್ಕೆ ಬಂದು ಪ್ರಚಾರ ನಡೆಸಿ ಹೋಗಿದ್ದಾರೆ. 'ನಿಮ್ಮ ಮನೆಯ ಮಗ ನಾನು. ಇದೇ ಶ್ರೀನಗರದಲ್ಲಿ ಜನಿಸಿದ್ದು, ಕ್ಷೇತ್ರದ ಸಮಸ್ಯೆಗಳ ಅರಿವಿದೆ' ಎಂದು ಶಂಕರ್ ಪ್ರಚಾರ ನಡೆಸುತ್ತಿದ್ದಾರೆ.

ಬಿಜೆಪಿಯಿಂದ ಮುನಿಸಿಕೊಂಡಿರುವ ಸ್ಥಳೀಯ ನಾಯಕರನ್ನು ಜೆಡಿಎಸ್‌ಗೆ ಕರೆತಂದಿದ್ದಾರೆ. ಈ ನಡೆ ಜೆಡಿಎಸ್ ವೇಗ ಹೆಚ್ಚಿಸುವಂತೆ ಮಾಡಿದೆ ಎಂಬುದು ಮತದಾರರ ಲೆಕ್ಕಾಚಾರ.

ಕಾಂಗ್ರೆಸ್‌ನ ಯು.ಬಿ. ವೆಂಕಟೇಶ್ ಅವರೂ ತಮ್ಮದೇ 'ಕಾರ್ಯತಂತ್ರ' ರೂಪಿಸಿಕೊಂಡು ಅಖಾಡ ಸಜ್ಜುಗೊಳಿಸಿದ್ದಾರೆ. ಬಿಜೆಪಿ ಓಟಕ್ಕೆ ಕಡಿವಾಣ ಹಾಕುವ ಪ್ರಯತ್ನದಲ್ಲಿದ್ದಾರೆ. ಕ್ಷೇತ್ರದಲ್ಲಿ ನಡೆದಿದ್ದ ಸಹಕಾರ ಬ್ಯಾಂಕ್‌ಗಳ ಬಹುಕೋಟಿ ಹಗರಣವನ್ನು ಪ್ರಸ್ತಾಪಿಸುತ್ತಲೇ ಪ್ರಚಾರ ನಡೆಸುತ್ತಿದ್ದಾರೆ. 'ಠೇವಣಿದಾರರಿಗೆ ನ್ಯಾಯ ಕೊಡಿಸುತ್ತೇನೆ. ಪ್ರಕರಣ ಸಿಬಿಐಗೆ ವಹಿಸಲು ಬದ್ಧ' ಎಂಬ ಭರವಸೆ ಮಾತನ್ನಾಡುತ್ತಿದ್ದಾರೆ.

2,33,587 ಬಸವನಗುಡಿ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

1,18,929 ಪುರುಷರು

2 ಇತರೆ

1,14,656 ಮಹಿಳೆಯರು

12 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಬಸವನಗುಡಿ	ಬಿಜೆಪಿ	ಬಿಜೆಪಿ	ಬಿಜೆಪಿ

ಸಾಕ್ಷಾತ್ ಸಮೀಕ್ಷೆ

'ಕೈ' ಕಟ್ಟಿ ಹಾಕಲು ಬಿಜೆಪಿ ಪಣ

ಚಾಮರಾಜಪೇಟೆ ಕ್ಷೇತ್ರ: ಗೆಲುವಿಗೆ ಜಮೀರ್ ತಯಾರಿ

ಬೆಂಗಳೂರು: ಕಾಂಗ್ರೆಸ್ ಅಭ್ಯರ್ಥಿ ಜಮೀರ್ ಅಹಮದ್ ಖಾನ್ ಅವರ ಕೋಟೆಯಾದ ಚಾಮರಾಜಪೇಟೆಗೆ ಲಗ್ಗೆ ಹಾಕಲು ಈ ಬಾರಿ ಬಿಜೆಪಿ ಹಾಗೂ ಜೆಡಿಎಸ್ ಕಸರತ್ತು ನಡೆಸುತ್ತಿವೆ.

ಇದೇ ಕ್ಷೇತ್ರದಿಂದ 'ಹ್ಯಾಟ್ರಿಕ್' ಜಯ ಸಾಧಿಸಿರುವ ಜಮೀರ್ ಅವರನ್ನು ಮಣಿಸಲು ಬಿಜೆಪಿಯು ಮಾಜಿ ಐಪಿಎಸ್ ಅಧಿಕಾರಿ ಭಾಸ್ಕರ್ ರಾವ್ ಅವರನ್ನು ಕಣಕ್ಕಿಳಿಸಿದೆ.

ಮೇಲ್ನೋಟಕ್ಕೆ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ನೇರ ಸ್ಪರ್ಧೆಯಂತೆ ಕಂಡುಬಂದರೂ ಜೆಡಿಎಸ್ ಸಹ 'ಕಾಂಗ್ರೆಸ್ ಕೋಟೆ' ಕೆಡವಿ ಮತ್ತೆ ವಶಕ್ಕೆ ಪಡೆಯುವ ತವಕದಲ್ಲಿದೆ.

ತಂತ್ರಗಾರಿಕೆಯಲ್ಲಿ ಒಂದು ಹೆಜ್ಜೆ ಮುಂದಿರುವ ಜೆಡಿಎಸ್, ಕಳೆದ ಚುನಾವಣೆಯಲ್ಲಿ ಜಮೀರ್ ಅವರನ್ನು ಗೆಲ್ಲಿಸಲು ಶ್ರಮಿಸಿದ್ದ ಗೋವಿಂದ್‌ರಾಜ್ ಅವರನ್ನೇ ಕರೆತಂದು ಟಿಕೆಟ್ ನೀಡಿದೆ. ಒಂದುಕಾಲದ ಆಪ್ತ ಜಮೀರ್ ಸೋಲಿಸಲು ಗೋವಿಂದರಾಜ್ ಪಣತೊಟ್ಟಂತೆ ಸಂಚರಿಸುತ್ತಿದ್ದಾರೆ. ಹಳೇ ಗೆಳೆಯ ಜಮೀರ್ ವಿರುದ್ಧ ಸೇಡು ತೀರಿಸಿಕೊಳ್ಳುವ ಉಮೇದಿನಲ್ಲಿ ಎಚ್.ಡಿ. ಕುಮಾರಸ್ವಾಮಿ ಇದ್ದಾರೆ. ಕ್ಷೇತ್ರದಲ್ಲಿ ಸವಾಲಿಗೆ ಪ್ರತಿಸವಾಲು ಕಂಡುಬರುತ್ತಿದೆ.

ರಾಜಧಾನಿಯ ಸೆರಗಿನಲ್ಲಿರುವ ಕ್ಷೇತ್ರದಲ್ಲಿ ಕೊಳೆಗೇರಿಗಳು ಸಾಕಷ್ಟಿವೆ. ಅಲ್ಪಸಂಖ್ಯಾತರು ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದು ಅವರು ನಿರ್ಣಾಯಕ ಪಾತ್ರ ವಹಿಸಲಿದ್ದಾರೆ.

ಎಎಪಿಯಲ್ಲಿದ್ದ ಭಾಸ್ಕರ್‌ರಾವ್ ಚುನಾವಣೆ ಹೊಸ್ತಿಲಿನಲ್ಲಿ ಬಿಜೆಪಿಗೆ ಬಂದು ಟಿಕೆಟ್ ಗಿಟ್ಟಿಸಿಕೊಂಡಿದ್ದರು. ಇದು ಬಿಜೆಪಿ ಟಿಕೆಟ್ ನಿರೀಕ್ಷೆಯಲ್ಲಿದ್ದವರ ಕೋಪ ತರಿಸಿತ್ತು. ಅದು ಇನ್ನೂ ಶಮನವಾಗಿಲ್ಲ. ಬಿಜೆಪಿಯ ಸ್ಥಳೀಯ ಕಚೇರಿಗೆ ನುಗ್ಗಿ ಗಲಾಟೆ ನಡೆಸಿದ್ದರು. ಭಾಸ್ಕರ್‌ರಾವ್ ಡಿಸಿಪಿಯಾಗಿದ್ದ ವೇಳೆ ಈ ಭಾಗದಲ್ಲಿ ಕೆಲಸ ಮಾಡಿದ್ದರು. ಅವರಿಗೆ ಕ್ಷೇತ್ರದ ಒಳನೋಟದ ಅರಿವಿದೆ.

'ಕ್ಷೇತ್ರಕ್ಕೆ ಅನುದಾನ ಹರಿದು ಬಂದಿದೆ. ಆದರೆ, ಅಭಿವೃದ್ಧಿ ಕೆಲಸಗಳು ನಡೆದಿಲ್ಲ. ಕ್ಷೇತ್ರದಲ್ಲಿ ಬದಲಾವಣೆ ತರುತ್ತೇನೆ' ಎನ್ನುತ್ತಲೇ ಭಾಸ್ಕರ್ ರಾವ್ ಸಂಚಲನ ಸೃಷ್ಟಿಸಿದ್ದಾರೆ.

'ಐದು ವರ್ಷವೂ ನಿಮ್ಮ ಜೊತೆಗಿದ್ದೇನೆ. ಚುನಾವಣೆ ಬಂದಾಗ ಬರುವ ವ್ಯಕ್ತಿ ನಾನಲ್ಲ' ಎಂದು ಹೇಳುವ ಮೂಲಕ ಜಮೀರ್ ಭಾವನಾತ್ಮಕವಾಗಿ ಮತ ಸೆಳೆಯುವ ಪ್ರಯತ್ನ ಮಾಡಿದ್ದಾರೆ.

ಜಮೀರ್ ಅಹಮದ್

ಭಾಸ್ಕರ್‌ರಾವ್


ಗೋವಿಂದರಾಜ್

2,29,898 ಚಾಮರಾಜಪೇಟೆ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

1,17,899 ಪುರುಷರು

39 ಇತರೆ

1,11,960 ಮಹಿಳೆಯರು

12 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಚಾಮರಾಜಪೇಟೆ	ಜೆಡಿಎಸ್	ಜೆಡಿಎಸ್	ಕಾಂಗ್ರೆಸ್

2008, 2013ರ ಚುನಾವಣೆಯಲ್ಲಿ ಜಮೀರ್ ಅಹಮದ್ ಜೆಡಿಎಸ್‌ನಿಂದ ಸ್ಪರ್ಧಿಸಿ ಜಯಿಸಿದ್ದರು. 2018ರಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ ಗೆದ್ದಿದ್ದರು.

ಕೋವಿಡ್-19 ವೇಳೆ ಕ್ಷೇತ್ರದ ಜನರು ಸಂಕಷ್ಟ ಎದುರಿಸಿದ್ದರು. ಜನರ ನೆರವಿಗೆ ಬಂದವರಿಗೆ ಹೆಚ್ಚು ವರವಾಗುವ ಸಾಧ್ಯತೆಯಿದೆ ಎಂಬುದು ಕ್ಷೇತ್ರದ ಮತದಾರರ ಅಭಿಪ್ರಾಯವಾಗಿದೆ.

ಇಲ್ಲೂ ಕಣದಲ್ಲಿ 12 ಮಂದಿ ಇದ್ದಾರೆ. ಆಮ್ ಆದ್ಮಿ ಪಕ್ಷದಿಂದ ಜಗದೀಶ್ ಚಂದ್ರ, ಬಹುಜನ ಸಮಾಜ ಪಕ್ಷದಿಂದ ನರಸಿಂಹಮೂರ್ತಿ ಸ್ಪರ್ಧಿಸಿದ್ದಾರೆ. ಪಕ್ಷೇತರರು ಮತ ವಿಭಜನೆ ಮಾಡುವ ಸಾಧ್ಯತೆಯಿದೆ.

ಸಂಕ್ಷಿಪ್ತ ಸುದ್ದಿ

ಮಾವಿನ ಹಣ್ಣಿನ ಬಾಕ್ಸ್‌ನಲ್ಲಿ ₹ 1 ಕೋಟಿ!

ಮೈಸೂರು: ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ನಗರದ ಕೆ.ಸುಬ್ರಹ್ಮಣ್ಯ ರೈ ಎಂಬುವರ ಮನೆ ಮೇಲೆ ದಾಳಿ ನಡೆಸಿ, ಅಂಗಳದ ಮರದಲ್ಲಿ ಬಚ್ಚಿಟ್ಟಿದ್ದ ಮಾವಿನ ಹಣ್ಣಿನ ಬಾಕ್ಸ್‌ನಲ್ಲಿದ್ದ ₹ 1 ಕೋಟಿ ನಗದು ವಶಕ್ಕೆ ಪಡೆದಿದ್ದಾರೆ.

ಸೋಮವಾರ ಸಂಜೆ ಹಣವನ್ನು ವಶಕ್ಕೆ ಪಡೆಯಲಾಗಿದ್ದು, ಸುಬ್ರಹ್ಮಣ್ಯ ರೈ ಅವರು ಪುತ್ತೂರು ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಶೋಕ್ ಕುಮಾರ್ ರೈ ಸೋದರ ಎನ್ನಲಾಗಿದೆ.

ಮನೆಯಲ್ಲಿ ಬಾಕ್ಸ್ ಅನ್ನು ತೆಗೆದ ಅಧಿಕಾರಿಗಳು ಹಣ ಎಣಿಸುತ್ತಿರುವ ವಿಡಿಯೊ ಹರಿದಾಡಿದೆ.

ಪ್ರಣಾಳಿಕೆ: ಕಾನೂನು ಕ್ರಮಕ್ಕೆ ಓವೈಸಿ ಸಲಹೆ

ಹುಬ್ಬಳ್ಳಿ: 'ರಾಜಕೀಯ ಪಕ್ಷಗಳ ಪ್ರಣಾಳಿಕೆಗಳು ಕಾನೂನು ವ್ಯಾಪ್ತಿಯಲ್ಲಿರಬೇಕು. ನೀಡಿರುವ ಭರವಸೆಗಳನ್ನು ಈಡೇರಿಸದ ಪಕ್ಷಗಳ ಮುಖಂಡರ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತಾಗಬೇಕು' ಎಂದು ಅಖಿಲ ಭಾರತ ಮಜ್ಲಿಸ್-ಇ-ಇತ್ತೇಹಾದುಲ್ ಮುಸ್ಲಿಮಿನ್ (ಎಐಎಂಐಎಂ)ದ ರಾಷ್ಟ್ರೀಯ ಅಧ್ಯಕ್ಷ ಅಸಾದುದ್ದೀನ್ ಓವೈಸಿ ಆಗ್ರಹಿಸಿದರು.

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಚುನಾವಣೆ ಪ್ರಣಾಳಿಕೆಗಳು ಸಂಪೂರ್ಣ ಸುಳ್ಳಿನಿಂದ ಕೂಡಿರುತ್ತವೆ. ಕಾನೂನು ವ್ಯಾಪ್ತಿಗೆ ಒಳಪಟ್ಟರೆ ಮಾತ್ರ ಸುಳ್ಳು ಭರವಸೆ ನೀಡುವುದನ್ನು ತಪ್ಪಿಸಬಹುದು' ಎಂದರು.

'ಪರಿಶಿಷ್ಟರಿಗೆ ಸಾಮಾಜಿಕ ನ್ಯಾಯ ಒದಗಿಸಿದ ಬಿಜೆಪಿ'

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಡಬಲ್ ಎಂಜಿನ್ ಸರ್ಕಾರ ಪರಿಶಿಷ್ಟ ಜಾತಿಗೆ ಮೀಸಲಾತಿ ಹೆಚ್ಚಿಸಿದೆ. ಒಳಮೀಸಲಾತಿ ವರ್ಗೀಕರಣಗೊಳಿಸಿ ಸಾಮಾಜಿಕ ನ್ಯಾಯ ನೀಡಿದೆ' ಎಂದು ನಿವೃತ್ತ ಮುಖ್ಯ ಕಾರ್ಯದರ್ಶಿ, ಬಿಜೆಪಿ ನಾಯಕಿ ಕೆ. ರತ್ನಪ್ರಭಾ ಹೇಳಿದರು.

ಮಂಗಳವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಪರಿಶಿಷ್ಟ ಜಾತಿಗೆ ಶೇ 15ರಷ್ಟಿದ್ದ ಮೀಸಲಾತಿಯನ್ನು ಶೇ 17ಕ್ಕೆ ಹೆಚ್ಚಿಸಲಾಗಿದೆ. 32.6 ಲಕ್ಷ ಜನಸಂಖ್ಯೆ ಇರುವ ಮಾದಿಗ ಸಮುದಾಯಕ್ಕೆ ಶೇ 6, 32.5 ಲಕ್ಷ ಜನಸಂಖ್ಯೆ ಹೊಂದಿರುವ ಹೊಲೆಯ ಸಮುದಾಯಕ್ಕೆ ಶೇ 5.5, 26.5 ಲಕ್ಷ ಜನ ಹೊಂದಿರುವ ಭೋವಿ, ಬಂಜಾರ, ಕೊರಮ ಮತ್ತು ಕೊರಚ ಸಮುದಾಯಗಳಿಗೆ ಶೇ 4.5 ಮತ್ತು ಇತರೆ ಸಮುದಾಯದ ಜನರಿಗೆ ಶೇ 1ರಷ್ಟು ಒಳಮೀಸಲಾತಿ ಹಂಚಿಕೆ ಮಾಡಲಾಗಿದೆ. ಇದು ಶಿಕ್ಷಣ, ಸರ್ಕಾರಿ ಉದ್ಯೋಗದಲ್ಲಿ ಈ ಸಮುದಾಯದ ಯುವಕರಿಗೆ ಹೆಚ್ಚಿನ ಅವಕಾಶ ಕಲ್ಪಿಸುವ ಮೂಲಕ ಸಮುದಾಯದ ಅಭಿವೃದ್ಧಿಗೆ ಸಹಕಾರಿಯಾಗಲಿದೆ' ಎಂದರು.

ಬಿಜೆಪಿ ಕಾರ್ಯಕರ್ತರೊಂದಿಗೆ ಬಿ. ಎಲ್. ಸಂತೋಷ್ ಸಭೆ

ಡಿಕೆಶಿ ಏಕಚಕ್ರಾಧಿಪತ್ಯ ಅಂತ್ಯಕ್ಕೆ ಸಕಾಲ

ಪ್ರಜಾವಾಣಿ ವಾರ್ತೆ

ರಾಮನಗರ: ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಕನಕಪುರ ರಾಜಕಾರಣದ ಅಖಾಡಕ್ಕೆ ಇಳಿದಿದ್ದು, ಮಂಗಳವಾರ ಪಕ್ಷದ ಕಾರ್ಯಕರ್ತರೊಂದಿಗೆ ಸಭೆ ನಡೆಸಿದರು.

ಕನಕಪುರ ಹೊರವಲಯದ ಕಾಳೇಗೌಡನದೊಡ್ಡಿ ಬಳಿಯ ತೋಟದ ಮನೆಯೊಂದರಲ್ಲಿ ಮಂಗಳವಾರ ನಡೆದ ಬಿಜೆಪಿ ಬೂತ್ ಮಟ್ಟದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದರು.

'ಡಿಕೆಶಿ ಸಹೋದರರು ಮಾಡಿರುವ ಅನ್ಯಾಯ ಒಂದೆರೆಡಲ್ಲ. ಇಲ್ಲಿನ ಕಲ್ಲುಬಂಡೆಗಳೇ ಅದಕ್ಕೆ ಸಾಕ್ಷಿ. ದೆಹಲಿಯಲ್ಲಿ ಗಾಂಧಿ ಕುಟುಂಬ, ಕನಕಪುರದಲ್ಲಿ ಡಿಕೆಶಿ ಕುಟುಂಬಕ್ಕೆ ಅಧಿಕಾರವಾದರೆ ಇನ್ನೆಲ್ಲಿಯ ಪ್ರಜಾಪ್ರಭುತ್ವ? ಈ ಏಕಚಕ್ರಾಧಿಪತ್ಯ ಕೊನೆಗಾಣಿಸಲು ಈಗ ಕಾಲ ಸನ್ನಿಹಿತವಾಗಿದೆ' ಎಂದರು.

'ಮೀಸಲಾತಿಯನ್ನು ಭಿಕ್ಷೆ ಎನ್ನುತ್ತಿರುವ ಕಾಂಗ್ರೆಸ್‌ಗೆ ಜನ ಕಾಣುವುದಿಲ್ಲ. ಬರೀ ಸರ್ವೆ ನಂಬರ್ ಮತ್ತು ಬಂಡೆಗಳೇ ಕಾಣುತ್ತವೆ. ನಾನು ಕೊಟ್ಟೆ, ನಾನು ಕೊಟ್ಟೆ, ಎನ್ನುತ್ತಿರುವ ಸಿದ್ದರಾಮಯ್ಯ, ಬಡವರ ಅಕ್ಕಿಗೆ ಮೋದಿ ₹29 ಕೊಟ್ಟಿದ್ದಾರೆ. ನೀವು ಕೊಟ್ಟಿರುವುದು ಕೇವಲ ₹3. ಇದು ಅಕ್ಕಿಯ ಚೀಲಕ್ಕೆ ಸಾಲುವುದಿಲ್ಲ. ಅಕ್ಕಿಯ ಚೀಲಕ್ಕೆ ಹಣ ಕೊಟ್ಟು ನಾನು ಕೊಟ್ಟೆ ಎಂದರೆ ಯಾರ ಯೋಜನೆ ಎಲ್ಲಿಂದ ಕೊಟ್ಟಿರಿ ಎಂದು ದೇಶದ ಜನತೆ ಮುಂದೆ ಅಂಕಿ ಅಂಶಗಳನ್ನಿಟ್ಟು ಮಾತನಾಡಿ' ಎಂದು ಸಿದ್ದರಾಮಯ್ಯ ಅವರಿಗೆ ತಿರುಗೇಟು ಕೊಟ್ಟರು.

ಕನಕಪುರ ಬಳಿ ಮಂಗಳವಾರ ನಡೆದ ಸಭೆಯಲ್ಲಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಮಾತನಾಡಿದರು

'ತಾಯಿಯನ್ನೇ ಪಣವಾಗಿಟ್ಟು ರಾಜಕಾರಣ ಮಾಡಿದವರ ನೆಲದಲ್ಲಿ ಜೆಡಿಎಸ್ ಕೂಡ ಹೊರತಾಗಿಲ್ಲ. ನೀನು ಚಿವುಟಿದ ಹಾಗೆ ಮಾಡು ನಾನು ಕರೆದ ಹಾಗೆ ಮಾಡುತ್ತೀನಿ ಎಂದು ಮಾಡಿ, ಕೊನೆಗೆ ಜೋಡೆತ್ತುಗಳಾಗುತ್ತಾರೆ. ಈ ಜೋಡೆತ್ತುಗಳು ಕೆಲಸ ಮಾಡಲು ಅಲ್ಲ, ಇವು ಮೇಯುವ ಜೋಡೆತ್ತುಗಳು. ರಾಜ್ಯವೆಲ್ಲಾ ಸುತ್ತಾಡಿದ ಪಂಚರತ್ನ ಯಾತ್ರೆ ಕನಕಪುರದಲ್ಲೇ ಯಾಕೆ ಪಂಚರ್ ಆಗುತ್ತದೆ ಎಂದು ರಾಜ್ಯ ಮತ್ತು ತಾಲ್ಲೂಕಿನ ಜನತೆ ಅರಿತಿದ್ದಾರೆ' ಎಂದು ಸಂತೋಷ್ ಟೀಕಿಸಿದರು.

ದೆಹಲಿಯಲ್ಲಿ ಗಾಂಧಿ, ಕನಕಪುರದಲ್ಲಿ ಡಿಕೆಶಿ ಕುಟುಂಬಕ್ಕೆ ಅಧಿಕಾರ ಸೀಮಿತವೇ?' (ಕನಕಪುರ): ದೆಹಲಿಯಲ್ಲಿ ಗಾಂಧಿ ಕುಂಟುಂಬಕ್ಕೆ, ಕನಕಪುರದಲ್ಲಿ ಡಿಕೆಶಿ ಕುಟುಂಬಕ್ಕೆ ಮಾತ್ರ ರಾಜಕೀಯ ಅಧಿಕಾರ ದೊರೆತರೆ ಸಾಲದು, ಸಾಮಾನ್ಯ ವ್ಯಕ್ತಿಗೂ ರಾಜಕೀಯ ಶಕ್ತಿ ದೊರೆಕಬೇಕು ಎಂದು ಸಂತೋಷ್ ಹೇಳಿದರು.

'ಇಂದಿರಾಗಾಂಧಿ ದರ್ಪದಿಂದ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿ ಪ್ರಜಾಪ್ರಭುತ್ವವನ್ನು ಕಗ್ಗೊಲೆ ಮಾಡಿದಾಗ ದೇಶದ ಜನತೆ ಸೋಲಿನ ರುಚಿ ತೋರಿಸಿದ್ದರು. ಇಲ್ಲಿನವರು ಅವರಿಗಿಂತ ದೊಡ್ಡವರೇನಲ್ಲ. ಈ ಬಾರಿ ಚುನಾವಣೆಯಲ್ಲಿ ಅದುಮಿಟ್ಟಿರುವ ಆಕ್ರೋಶದ ಕಟ್ಟೆ ಇವಿಎಂ ಯಂತ್ರದ ಮುಂದೆ ಒಡೆಯಲಿದೆ' ಎಂದು ಅಭಿಪ್ರಾಯಪಟ್ಟರು.

ಎನ್‌ಆರ್‌ಐ ಮತದಾರರಿಗೆ ತೆರಿಗೆ ಆಮಿಷವೊಡ್ಡಿದರೆ ಗತಿಯೇನು: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಿವಾಸಿ ಭಾರತೀಯರಿಗೆ (ಎನ್‌ಆರ್‌ಐ) ಒಂದೊಮ್ಮೆ ಅವರು ಇರುವ ಜಾಗದಿಂದಲೇ ಮತದಾನ ಮಾಡಲು ಅವಕಾಶ ಕಲ್ಪಿಸಿದ್ದೇ ಆದರೆ ತೆರಿಗೆ ವಿನಾಯ್ತಿ ಆಮಿಷಗಳನ್ನೊಡ್ಡುವ ಪಕ್ಷದ ಪರವಾಗಿ ಅವರೆಲ್ಲಾ ಮತ ಚಲಾಯಿಸಿದರೆ ಗತಿಯೇನು?

'ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಅನಿವಾಸಿ ಭಾರತೀಯರಿಗೆ ಅವರು ನೆಲೆಸಿರುವ ದೇಶಗಳಿಂದಲೇ ಮತದಾನಕ್ಕೆ ಅವಕಾಶ ಕಲ್ಪಿಸಲು ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂದು ಕೋರಲಾಗಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರಿಗೆ ನ್ಯಾಯಪೀಠ ಇಂತಹುದೊಂದು ಮೌಖಿಕ ಪ್ರಶ್ನೆಯನ್ನು ಎಸೆದಿದೆ. ಮಾತ್ರವಲ್ಲ ಅರ್ಜಿದಾರರ ಮನವಿಯನ್ನು ಸಾರಾಸಗಟಾಗಿ ತಿರಸ್ಕರಿಸಿದೆ.

ಸಾಗರೋತ್ತರ ಕನ್ನಡಿಗರ ಸಂಘದ ಜಂಟಿ ಕಾರ್ಯದರ್ಶಿ ಹಾಗೂ ಕಳೆದ 15 ವರ್ಷಗಳಿಂದ ಸೌದಿ ಅರೇಬಿಯಾದಲ್ಲಿ ಶುಶ್ರೂಶಕರಾಗಿ ಕೆಲಸ ಮಾಡುತ್ತಿರುವ ಎಂ.ರವಿ ಎಂಬುವವರು ಸಲ್ಲಿಸಿದ್ದ ಪಿಐಎಲ್ ಅನ್ನು ನ್ಯಾಯಮೂರ್ತಿಗಳಾದ ಕೃಷ್ಣ ಎಸ್. ದೀಕ್ಷಿತ್ ಹಾಗೂ ವಿಜಯ್‌ಕುಮಾರ್ ಎ. ಪಾಟೀಲ್ ಅವರಿದ್ದ ರಜಾಕಾಲದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಚುನಾವಣಾ ನಿಯಮಗಳ ನಮೂನೆ 6-ಎ ಅಡಿಯಲ್ಲಿ ಅನಿವಾಸಿ ಭಾರತೀಯರಿಗೆ ಮತದಾನದ ಹಕ್ಕನ್ನು ಈಗಾಗಲೇ ಕೊಡಮಾಡಲಾಗಿದೆ. ಈ ನಿಟ್ಟಿನಲ್ಲಿ ಪ್ರಜಾಪ್ರತಿನಿಧಿ ಕಾಯ್ದೆ-1951ಕ್ಕೆ ತಿದ್ದುಪಡಿ ತರಲಾಗಿದೆ. ಯಾರಿಗೆ ಮತದಾನದ ಹಕ್ಕನ್ನು ಕೊಡಬೇಕು ಮತ್ತು ಅದನ್ನು ತಿದ್ದುಪಡಿ ಮಾಡಲು ಇರುವ ಕಟ್ಟಳೆಗಳು ಏನಿರಬೇಕು ಎಂಬುದು ಸಂಸತ್ತಿನ ವಿವೇಚನೆಗೆ ಬಿಟ್ಟ ವಿಷಯಲ್ಲ' ಎಂದು ಪೀಠ ಹೇಳಿತು.

ಏನಿದು ಅರ್ಜಿ?

'ಪ್ರಪಂಚದಾದ್ಯಂತ ವಿವಿಧ ದೇಶಗಳಲ್ಲಿ 60 ಲಕ್ಷಕ್ಕೂ ಹೆಚ್ಚು ಭಾರತೀಯರು ನೆಲೆಸಿದ್ದಾರೆ. ಇವರಲ್ಲಿ ಅಂದಾಜು 5 ಲಕ್ಷ ಮಂದಿ ಕನ್ನಡಿಗರಿದ್ದಾರೆ. ಈ ಕನ್ನಡಿಗರಿಗೆ ಅಂಚೆ ಮತದಾನ ಅಥವಾ ಆ ದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳಲ್ಲಿ ಮತಗಟ್ಟೆಗಳನ್ನು ತೆರೆದು ಆ ಮೂಲಕ ಅವರ ಮತ ಚಲಾವಣೆಗೆ ಅವಕಾಶ ಕಲ್ಪಿಸಲು ಸರ್ಕಾರ ಹಾಗೂ ಚುನಾವಣಾ ಆಯೋಗಕ್ಕೆ ನಿರ್ದೇಶಿಸಬೇಕು' ಎಂದು ಅರ್ಜಿದಾರರು ಕೋರಿದ್ದರು.



ವಿಕಿರಣದ ಗಳಿಗೆಯ ಅಳೆಯುವ ಗುಳಿಗೆ

ಕೈಗೆಟುಕದ ಅಂಗಗಳಿಗೆ ತಗುಲಿದ ವಿಕಿರಣವನ್ನು ಅಳತೆ ಮಾಡಲು ಒಂದು ವಿನೂತನ ಗುಳಿಗೆಯನ್ನು ತಯಾರಿಸಲಾಗಿದೆ. ನುಂಗುವ ಡೋಸಿಮೀಟರು ಇದು.

ಕೊಳ್ಳೇಗಾಲ ಶರ್ಮ

ಕ್ಯಾನ್ಸರ್ ಎಂದರೇ ಭಯಂಕರ ರೋಗ. ಅದು ತರುವ ನೋವೇ ತಾಳಲಾಗದೆನ್ನಿಸುವಾಗ, ಮೂಗಿಗಿಂತ ಮೂಗುತಿಯೇ ಭಾರ ಎನ್ನುವಂತೆ ಕ್ಯಾನ್ಸರ್ ಗುಣಪಡಿಸಲು ಬಳಸುವ ಎಲ್ಲ ಚಿಕಿತ್ಸೆಗಳೂ ಒಂದಲ್ಲ ಒಂದು ಬಗೆಯ ನೋವನ್ನುಂಟುಮಾಡುವವೇ. ಅದರಲ್ಲಿಯೂ 'ರೇಡಿಯೇಶನ್ ಥೆರಪಿ' ಎಂದು ಕರೆಯುವ ವಿಕಿರಣಗಳನ್ನು ಬಳಸಿ ನೀಡುವ ಚಿಕಿತ್ಸೆ ಇನ್ನೂ ಭೀಕರ.

ವಿಕಿರಣಗಳು ಕ್ಯಾನ್ಸರ್ ಕೋಶಗಳನ್ನು ಕೊಲ್ಲುತ್ತವೇನೋ ಸರಿ. ಆದರೆ ಜೊತೆಗೆ ಬೇರೆ ಅಂಗಗಳಿಗೂ ಊನವನ್ನು ಉಂಟುಮಾಡುತ್ತವೆ. ಗುಳಿಗೆಯಾದರೆ ಇಷ್ಟು ಗುಳಿಗೆ ಕೊಟ್ಟೆವು ಎನ್ನಬಹುದು. ಆದರೆ ವಿಕಿರಣದ ವಿಷಯದಲ್ಲಿ ವೈದ್ಯರು ಇಂಥದ್ದೇ 'ಡೋಸು' ಅರ್ಥಾತ್ ಚಿಕಿತ್ಸಕ ಪ್ರಮಾಣ ನೀಡಬೇಕು ಎಂದು ನಿರ್ಧರಿಸಿದರೂ, ಅದನ್ನು ನೀಡಿದ್ದೇವೆಯೋ ಇಲ್ಲವೋ ಎನ್ನುವುದನ್ನು ಖಚಿತವಾಗಿ ಹೇಳಲಾಗದು. ಇದೀಗ ರೋಗಿಗೆ ಎಷ್ಟು ವಿಕಿರಣ ನೀಡಿದೆ ಎನ್ನುವುದನ್ನು ನಿಖರವಾಗಿ ತಿಳಿಸುವಂತಹ ಎಲೆಕ್ಟ್ರಾನಿಕ್ ಗುಳಿಗೆಗಳು ಬರಲಿವೆಯಂತೆ. ಇವನ್ನು ಬಳಸಿದರೆ, ರೋಗಿಗೆ ನೀಡಿದ ರೇಡಿಯೋಥೆರಪಿಯ ನಿಜವಾದ ಪರಿಣಾಮವೇನು ಎಂಬುದು ಸ್ಪಷ್ಟವಾಗಬಹುದು. ಅಂತಹ ಪುಟ್ಟ ಗುಳಿಗೆಯಾಕಾರದ ಡೋಸಿಮೀಟರನ್ನು ಸಿಂಗಪೂರಿನ ನ್ಯಾಶನಲ್ ಯೂನಿವರ್ಸಿಟಿ ಆಫ್ ಸಿಂಗಪೂರಿನ ವೈದ್ಯವಿಜ್ಞಾನಿಗಳು ಸಿದ್ಧಪಡಿಸಿದ್ದಾರೆ ಎಂದು 'ನೇಚರ್ ಮೆಡಿಸಿನ್' ಪತ್ರಿಕೆ ವರದಿ ಮಾಡಿದೆ.

ಡೋಸಿಮೀಟರು ಎಂದರೆ ಇನ್ನೇನಲ್ಲ. ವಿಕಿರಣವನ್ನು ಅಳೆಯುವ ಸಾಧನ ಅಷ್ಟೆ. ಎಕ್ಸ್‌ರೇಗೋ, ಸಿಟಿ ಸ್ಕ್ಯಾನಿಗೆಂದೋ ಅಥವಾ ಕ್ಯಾನ್ಸರ್ ರೋಗಿಗಳ ಜೊತೆಗೆ ರೇಡಿಯೋಥೆರಪಿಗೆಂದೋ ಹೋದಾಗ ನೀವು ಅಲ್ಲಿನ ಸಿಬ್ಬಂದಿಗಳು ಕೋಟಿನಲ್ಲಿ ಪುಟ್ಟ ಸಾಧನವೊಂದನ್ನು ಜೋಡಿಸಿಕೊಂಡಿರುವುದನ್ನು ಗಮನಿಸಿರಬಹುದು. ಪ್ರತಿದಿನವೂ ವಿಕಿರಣಗಳ ಜೊತೆಗೆ ಕೆಲಸ ಮಾಡುವ ಅವರ ಸುರಕ್ಷತೆಗೆಂದು ಈ ಡೋಸಿಮೀಟರನ್ನು ಬಳಸುತ್ತಾರೆ. ಹಿಂದೆ ಇವುಗಳಲ್ಲಿ ಪುಟ್ಟ ಎಕ್ಸ್‌ರೇ ಫಿಲ್ಮುಗಳಿರುತ್ತಿದ್ದುವು. ಕಾಲಕಾಲಕ್ಕೆ ಅವನ್ನು ತೆಗೆದು, ಅವು ಎಷ್ಟು ಕಪ್ಪಾಗಿವೆ ಎಂಬುದನ್ನು ಅಳೆದು, ವಿಕಿರಣಗಳೆಷ್ಟು ತಗುಲಿರಬಹುದು ಎಂದು ಗುರುತಿಸಲಾಗುತ್ತಿತ್ತು. ಇದೀಗ ಎಲೆಕ್ಟ್ರಾನಿಕ್ ಸಾಧನಗಳು ಬಂದಿವೆ. ಕ್ಷಣಮಾತ್ರದಲ್ಲಿ ಎಷ್ಟು ವಿಕಿರಣಗಳು ದೇಹವನ್ನು ತಾಕಿವೆ ಎಂದು ಗುರುತಿಸಿ, ಲೆಕ್ಕ ಹಾಕುತ್ತವೆ. ಮಿತಿ ಮೀರಿದರೆ ಎಚ್ಚರಿಸುತ್ತವೆ.

ಆದರೆ ಚಿಕಿತ್ಸೆಗೆಂದು ರೇಡಿಯೋಥೆರಪಿ ಗೊಳಗಾಗುವ ರೋಗಿಗಳಿಗೆ ಈ ಅನುಕೂಲವಿಲ್ಲ. ಜೊತೆಗೆ ಅವರಿಗೆ ನೀಡುವ ವಿಕಿರಣವೂ ಬಲು ಭಾರಿ. ತೀವ್ರ ಪ್ರಮಾಣದಲ್ಲಿ ವಿಕಿರಣವನ್ನು ನೀಡದಿದ್ದರೆ ಕ್ಯಾನ್ಸರ್ ಕೋಶಗಳನ್ನು ಕೊಲ್ಲಲು ಆಗದು. ಸಾಮಾನ್ಯವಾಗಿ ವಿಷ ಔಷಧಗಳು ತಲುಪಲಾರದಂತಹ ಸ್ಥಳಗಳಲ್ಲಿ ಇರುವ ಗೆಡ್ಡೆ ಕ್ಯಾನ್ಸರುಗಳನ್ನು ಗುಣಪಡಿಸಲು ರೇಡಿಯೋಥೆರಪಿ ಬಳಸುತ್ತಾರೆ. ನೇರವಾಗಿ ಕ್ಯಾನ್ಸರ್ ಗೆಡ್ಡೆಗೇ ಈ ಶಕ್ತಿಶಾಲಿ ಬೆಳಕನ್ನು – ಗ್ರಾಮಸ್ಥರು ಕರೆಂಟು ಎಂದು ಹೆಸರಿಸಿರುವ - ಅರ್ಥಾತ್ ವಿಕಿರಣವನ್ನು ತಾಕಿಸುತ್ತಾರೆ. ದೇಹದ ಹೊರಗೆ ಇರುವ ಗೆಡ್ಡೆಗಳ ಸಂದರ್ಭದಲ್ಲಿ ಇದು ಓಕೆ. ಎಷ್ಟು ವಿಕಿರಣವನ್ನು ಕೊಟ್ಟಿದ್ದೇವೆ ಎಂದು ತಾಕಿದ ಬೆಳಕಿನ ಪ್ರಖರತೆಯನ್ನು ಅಳೆದು ಗುರುತಿಸಬಹುದು.

ಆದರೆ ದೇಹದೊಳಗಿನ ಅಂಗಾಂಗಗಳಲ್ಲಿ ಇರುವ ಗೆಡ್ಡೆಗೆ ಎಷ್ಟು ಪ್ರಮಾಣದ ವಿಕಿರಣ ತಗುಲಿದೆ ಎಂಬುದನ್ನು ಕೇವಲ ಅಂದಾಜಿಸಬಹುದಷ್ಟೆ. ಏಕೆಂದರೆ ದೇಹದ ಹೊರಗೆ ನೀಡಿದ ವಿಕಿರಣದಲ್ಲಿ ಎಷ್ಟು ಪ್ರಮಾಣ ಒಳ ಹೊಕ್ಕಿದೆ, ಅದರಲ್ಲಿ ಎಷ್ಟನ್ನು ಕ್ಯಾನ್ಸರು ಹೀರಿಕೊಂಡಿದೆ ಎಂಬುದನ್ನು ನಿಖರವಾಗಿ ಅಳೆಯುವ ಡೋಸಿಮೀಟರುಗಳು ಇಲ್ಲ. ಇದೀಗ ಸಿಂಗಪೂರಿನ ವೈದ್ಯ ವಿಜ್ಞಾನಿ ಬೋ ಹೌ ಮತ್ತು ಸಂಗಡಿಗರು ಹೀಗೊಂದು ವೈಫೈ ಸಾಧನವನ್ನು ರೂಪಿಸಿದ್ದಾರೆ.

ವಿಕಿರಣವನ್ನು ಅಳೆಯಲು ಕೆಲವು ರಾಸಾಯನಿಕಗಳನ್ನು ಉಪಯೋಗಿಸುತ್ತಾರೆ. ಈ ರಾಸಾಯನಿಕಗಳ ಮೇಲೆ ವಿಕಿರಣ ಬಿದ್ದಾಗ, ತಾನು ಹೀರಿಕೊಂಡ ಶಕ್ತಿಗೆ ಅನುಗುಣವಾಗಿ ಅದು ಬೆಳಕನ್ನು ಹೊಮ್ಮಿಸುತ್ತದೆ. ಇಂತಹ ಮಿನುಗುವ ಅರ್ಥಾತ್ ಸಿಂಟಿಲೇಟರುಗಳನ್ನು ಬಳಸಿ ವಿಕಿರಣಗಳ ಪ್ರಮಾಣವನ್ನು ಅಳೆಯಬಹುದು. ಆದರೆ ದೇಹದೊಳಗೆ ಹೀಗೆ ಚಿಮ್ಮುವ ಬೆಳಕನ್ನು ಅಳೆಯುವುದು ಹೇಗೆ?

ಇದುವೇ ಬೋ ಹೌ ಅವರ ಸಾಧನೆ. ಒಂದೂವರೆ ಸೆಂಟಿಮೀಟರು ಉದ್ದ ಹಾಗೂ ಅರ್ಧ ಸೆಂಟಿಮೀಟರಿಗಿಂತಲೂ ತೆಳ್ಳಗಿರುವ ಗುಳಿಗೆಯಂತಹ ಸಾಧನವೊಂದನ್ನು ಇವರು ತಯಾರಿಸಿದ್ದಾರೆ. ಇದರಲ್ಲಿ ಇರುವ ಸಿಂಟಿಲೇಟರಿನ ಜೊತೆಗೆ ಬೆಳಕನ್ನು ಸಾಗಿಸುವ, ಆಪ್ಟಿಕ್ ಫೈಬರನ್ನು ಜೋಡಿಸಿದ್ದಾರೆ. ಬ್ರಾಡ್ ಬ್ಯಾಂಡ್ ಇಂಟರ್ನೆಟ್ ಸೇವೆಗಳು ಬಳಸುವ ಆಪ್ಟಿಕ್ ಫೈಬರಿನಂತೆಯೇ ಇವು ಬೆಳಕನ್ನು ಒಂದಿಷ್ಟೂ ನಷ್ಟವಾಗದೆ ಇನ್ನೊಂದು ತುದಿಗೆ ಕೊಂಡೊಯ್ಯುತ್ತವೆ. ಅಲ್ಲಿ ಈ ಬೆಳಕಿನ ಮಿನುಗುವಿಕೆ ಎಷ್ಟೆಂದು ಗಣಿಸುವ ಎಲೆಕ್ಟ್ರಾನಿಕ್ ಸಾಧನಗಳನ್ನು ಜೋಡಿಸಿದ್ದಾರೆ. ಈ ಸಂವೇದಕಗಳು ತಮ್ಮನ್ನು ತಾಕಿದ ಬೆಳಕಿಗೆ ಅನುಗುಣವಾಗಿ ವಿದ್ಯುತ್ ಸಂಕೇತ ಸೃಷ್ಟಿಸುತ್ತವೆ. ಎಲೆಕ್ಟ್ರಾನಿಕ್ ಸಂವೇದಕಗಳ ಜೊತೆಗೆ ಫೋನಿನಲ್ಲಿ ಅಥವಾ ಇಯರ್‌ಫೋನಿನಲ್ಲಿ ಬಳಸುವ ಬ್ಲೂಟೂಥಿನಂತಹ ಎಲೆಕ್ಟ್ರಾನಿಕ್ ಕೂಡ ಇದೆ. ಹೀಗೆ ಸಂವೇದಕಗಳು ಗಣಿಸಿದ ವಿಕಿರಣಗಳ ಪ್ರಮಾಣವನ್ನು ನೇರವಾಗಿ ದೇಹದ ಹೊರಗೆ ಇರುವ ಸಾಧನಗಳಿಗೆ ತಲುಪಿಸಬಹುದು. ಅಲ್ಲಿ ಅವನ್ನು ಲೆಕ್ಕ ಹಾಕಬಹುದು.

ಸಾಮಾನ್ಯವಾಗಿ ರೇಡಿಯೋಥೆರಪಿ ನೀಡಿದ ಅಂಗಗಳಲ್ಲಿರುವ ಕೋಶಗಳಲ್ಲಿ ಆಮ್ಲೀಯತೆ ಹೆಚ್ಚುತ್ತದೆ. ಇದು ವಿಕಿರಣಗಳ ಪ್ರಭಾವವನ್ನು ಏರುಪೇರು ಮಾಡಬಹುದು. ಹೀಗಾಗಿ ಚಿಕಿತ್ಸೆಯನ್ನೂ ಬಾಧಿಸಬಹುದು. ಆದ್ದರಿಂದ ಆ ಕೋಶಗಳಿಗೆ ಎಷ್ಟು ವಿಕಿರಣ ತಗುಲಿದೆ ಎಂದು ತಿಳಿಯುವುದು ಮುಖ್ಯವಾಗುತ್ತದೆ. ಅದರಲ್ಲಿಯೂ ಗಂಟಲು, ಅನ್ನನಾಳ, ಕರುಳಿನಂತಹ ಒಳ ಅಂಗಗಳಲ್ಲಿರುವ ಗೆಡ್ಡೆಗಳಿಗೆ ವಿಕಿರಣ ನೀಡುವಾಗ ಅಲ್ಲಿಗೆ ಎಷ್ಟು ವಿಕಿರಣ ತಗುಲಿದೆ ಎಂದು ಕೇವಲ ಅಂದಾಜಷ್ಟೆ ಸಾಧ್ಯ. ಆದರೆ ಈ ವಿಕಿರಣ ಅಳೆಯುವ ಗುಳಿಗೆ ಆ ಅಂಗಗಳಲ್ಲಿನ ಆಮ್ಲೀಯತೆಯನ್ನೂ ಉಷ್ಣತೆಯನ್ನೂ ಅಳೆಯಬಲ್ಲುದು. ಹೀಗೆ ಒಟ್ಟಾರೆ ಅಂಗಾಂಶ ಅಥವಾ ಗೆಡ್ಡೆಯಲ್ಲಿ ಆಗುತ್ತಿರುವ ಬದಲಾವಣೆಗಳನ್ನು ವೈದ್ಯರಿಗೆ ತಿಳಿಸಬಲ್ಲುದು.

ಅನ್ನನಾಳದ ಕ್ಯಾನ್ಸರ್ ರೋಗಿಗಳಿಗೆ ಇದು ಬಹಳ ಅನುಕೂಲವೆನ್ನುವುದು ಬೋ ಹೌ ಅವರ ಮಾತು. ಏಕೆಂದರೆ ಅಂತಹವರಿಗೆ ಶಸ್ತ್ರಕ್ರಿಯೆ ಅಸಾಧ್ಯ. ಅನ್ನನಾಳದಲ್ಲಿ ಗೆಡ್ಡೆ ಇರುವುದರಿಂದ ಔಷಧವನ್ನು ನುಂಗುವುದೂ ಕಷ್ಟವೇ. ಹೀಗಾಗಿ ಇವರಿಗೆ ಬಹುತೇಕ ವಿಕಿರಣ ಚಿಕಿತ್ಸೆಯನ್ನೇ ನೀಡಬೇಕಾಗುತ್ತದೆ. ಹಾಗೆ ಮಾಡುವಾಗ ಒಳಾಂಗಗಳು ಹೆಚ್ಚು ಬಿಸಿಯಾದರೂ, ಅವು ಸುಟ್ಟು, ಗಟ್ಟಿಯಾಗಿ ಇಡೀ ಅನ್ನನಾಳವೇ ಮುಚ್ಚಿಕೊಂಡು ಬಿಡಬಹುದು. ಕಾಯಿಲೆಯ ಬದಲಿಗೆ ಚಿಕಿತ್ಸೆಯೇ ಮರಣವನ್ನು ತಂದೊಡ್ಡಬಹುದು. ಅಂತಹವರಲ್ಲಿ ವಿಕಿರಣ ಚಿಕಿತ್ಸೆ ನಡೆಯುವಾಗ ಅತಿಯಾಗದಂತೆ ಕಾಯ್ದುಕೊಳ್ಳಲು ಈ ಡೋಸಿಮೀಟರು ನೆರವಾಗಬಹುದು. ಹಾಗೆ ಮಾಡಲು ಸಾಧ್ಯವೇ ಎಂದು ಮೊಲಗಳಿಗೆ ಇವನ್ನು ನುಂಗಿಸಿ, ವಿಕಿರಣಗಳನ್ನು ನೀಡಿ, ದೇಹದೊಳಗಿನ ಅಂಗಾಂಶಗಳ ಆಮ್ಲೀಯತೆಯನ್ನು ಪರೀಕ್ಷಿಸಿ ನೋಡಿದ್ದಾರೆ. ಸಾಧನ ಯಶಸ್ವಿಯಾಗಿ ಫಲ ನೀಡಿತು ಎಂದು 'ನೇಚರ್ ಮೆಡಿಸಿನ್' ವರದಿ ಮಾಡಿದೆ.



ಇದು ಇವಿಎಂ ಕಾಲ

ಶರತ್ ಭಟ್ ಸೇರಾಜೆ

ಮತದಾನದ ವಿಷಯ ಬಂದಾಗ ಮತ್ತೆ ಮತ್ತೆ ಕೇಳಿಬರುವುದು 'ಇವಿಎಂ' ಎಂಬ ವಿದ್ಯುನ್ಮಾನ ಮತಯಂತ್ರದ ವಿಚಾರ. ಈ ಯಂತ್ರ ಹೇಗೆ ತಯಾರಾಯಿತು, ಯಾಕೆ ತಯಾರಾಯಿತು ಎನ್ನುವುದನ್ನು ಒಂದಿಷ್ಟು ತಿಳಿಯೋಣ.

ಒಂದು ಅಂದಾಜಿನ ಪ್ರಕಾರ, 2014ರಲ್ಲಿ ಲೋಕಸಭಾ ಚುನಾವಣೆಗೆ ಮೊದಲಿದ್ದ ಓಟಿನ ಚೀಟಿಯ ಪದ್ಧತಿಯನ್ನು ಬಳಸಿದ್ದರೆ, ಆಗ ಇದ್ದ 930,000 ಮತಗಟ್ಟೆಗಳಿಗೆ ಸುಮಾರು 800 ಟನ್ ಕಾಗದ, 400,000 ಶೀಶೆಗಳಷ್ಟು ಶಾಯಿ ಬೇಕಾಗುತ್ತಿತ್ತಂತೆ. ಇಷ್ಟಲ್ಲದೆ ಓಟಿನ ಚೀಟಿಗಳನ್ನು ಸಂರಕ್ಷಿಸಿ ಇಡಲಿಕ್ಕೆ ಸುಮಾರು ಇಪ್ಪತ್ತೈದು ಲಕ್ಷ ಭದ್ರಪೆಟ್ಟಿಗೆಗಳು ಬೇಕಾಗುತ್ತಿದ್ದವಂತೆ. ಯಂತ್ರವನ್ನು ಬಳಸಿದರೆ ಮುದ್ರಣ, ಸಾರಿಗೆ, ಸಂಗ್ರಹಣೆ ಮತ್ತು ವಿತರಣೆಯ ವೆಚ್ಚ – ಎಲ್ಲವೂ ಕಡಿಮೆಯಾಗುವುದರಿಂದ, ಹಿಂದಿನ ವಿಧಾನಕ್ಕಿಂತ ವಿದ್ಯುನ್ಮಾನ ಮತಯಂತ್ರವು ಲಾಭದಾಯಕ ಎಂಬುದು ಒಂದು ಮುಖ್ಯವಾದ ಲೆಕ್ಕಾಚಾರ. ಮತದಾನದ ವೇಗವು ಇವಿಎಂಗಳ ಬಳಕೆಯಿಂದ ಹೆಚ್ಚಾಗುತ್ತದೆ ಎಂಬುದೂ ಕೂಡ ಒಂದು ಲೆಕ್ಕಾಚಾರ.

ಆದರೆ ಇಂಥ ಯಂತ್ರಗಳ ಯೋಜನೆ ಹೊಸದೇನೂ ಅಲ್ಲ. 1977ರಲ್ಲೇ ಚುನಾವಣಾ ಆಯೋಗವು ಈ ಯೋಜನೆಯನ್ನು ಹಾಕಿ, ಹೈದರಾಬಾದ್‌ನ 'ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್' (ECIL) ಎಂಬ ಸಂಸ್ಥೆಯ ಹತ್ತಿರ ಇಂಥ ಯಂತ್ರದ ಪ್ರಯೋಗ ಮಾದರಿಯನ್ನು ತಯಾರಿಸಲಿಕ್ಕೆ ಹೇಳಿತು. ಇಲ್ಲಿನ ಒಟ್ಟು ಜನಸಂಖ್ಯೆ, ಅನಕ್ಷರತೆ, ತಂತ್ರಜ್ಞಾನದ ಪರಿಚಯದ ಕೊರತೆ, ಇಲ್ಲಿನ ಪ್ರಾಕೃತಿಕ ವೈಚಿತ್ರ್ಯಗಳು – ಇವನ್ನೆಲ್ಲವನ್ನೂ ತಲೆಯಲ್ಲಿಟ್ಟುಕೊಂಡು ನೋಡಿದಾಗ, ವಿದೇಶಗಳಲ್ಲಿ ಇರುವಂಥ ದುಬಾರಿಯಾದ ಯಂತ್ರಗಳು ಇಲ್ಲಿಗೆ ಸೂಕ್ತವಲ್ಲ ಎಂಬ ನಿರ್ಧಾರಕ್ಕೆ ಬರಲಾಯಿತು.

ವಿದ್ಯುತ್ ಸಂಪರ್ಕವಿಲ್ಲದ ಪ್ರದೇಶಗಳಲ್ಲೂ ಇವಿಎಂಗಳನ್ನು ಬಳಸಬೇಕು ಎಂದಾದರೆ ಅದು ಬ್ಯಾಟರಿಯನ್ನು ಬಳಸಬೇಕು, ಹೀಗಾಗಿ 6 ವೋಲ್ಟ್ ಬ್ಯಾಟರಿಯಲ್ಲಿ ಕಾರ್ಯನಿರ್ವಹಿಸುವಂತೆ ಅದನ್ನು ರೂಪಿಸಲಾಯಿತು. ಇವಿಎಂಗಳನ್ನು ಸಂಗ್ರಹಿಸುವ ಕೊಠಡಿಯನ್ನು ಹವಾನಿಯಂತ್ರಣ ಮಾಡುವ ಅಗತ್ಯವಿಲ್ಲದಂತೆಯೂ ಅದನ್ನು ವಿನ್ಯಾಸ ಮಾಡಲಾಗಿದೆ. ನಮ್ಮ ದೇಶದಲ್ಲಿ ಉತ್ತರದಲ್ಲಿ ಹಿಮಾಲಯದ ಚಳಿಯೂ ಇದೆ, ರಾಜಸ್ಥಾನದ ಮರುಭೂಮಿಗಳ ಬಿಸಿಯೂ ಇದೆ, ದಟ್ಟವಾದ ಕಾಡುಗಳೂ ಇವೆ, ಎತ್ತರದ ಗುಡ್ಡಗಳೂ ಇವೆ. ಇಂಥಲ್ಲೆಲ್ಲ ನಮ್ಮ ಯಂತ್ರ ಕೆಟ್ಟು ಹೋಗದಂತೆ ಅದನ್ನು ರೂಪಿಸಬೇಕು. ಕ್ರಿಮಿಕೀಟಗಳು, ಇಲಿಗಳು , ಫಂಗಸ್ ಇವುಗಳ ಕಾಟವನ್ನು ತಾಳಿಕೊಳ್ಳುವ ಶಕ್ತಿಯೂ ಯಂತ್ರಕ್ಕಿರಬೇಕು. ಇನ್ನು ಇದನ್ನು ತಯಾರಿಸಿದ ಕಾಲದಲ್ಲಿ ನಮ್ಮ ಜನರಿಗೆ ತಂತ್ರಜ್ಞಾನದ ಪರಿಚಯ ಅಷ್ಟಾಗಿ ಇರಲಿಲ್ಲ. ತಂತ್ರಜ್ಞಾನದ ಪರಿಚಯ ಇಲ್ಲದವರೂ ಬಳಸಬೇಕಾದರೆ ಅದರ ನಿರ್ವಹಣೆ, ಓಟು ಹಾಕುವ ವಿಧಾನ ಎಲ್ಲ ಸರಳವಾಗಿರಬೇಕು, ಇಂಥ ಸರಳ ವಿನ್ಯಾಸಕ್ಕೂ ಆದ್ಯತೆ ಕೊಡಲಾಯಿತು.

> ಇವಿಎಂಗಳು ಹ್ಯಾಕ್ ಆಗುತ್ತವೆಯೇ ಎಂಬ ಪ್ರಶ್ನೆ ಹಲವರದು. ಈ ಯಂತ್ರವು ಅಂತರ್ಜಾಲದ ಜೊತೆಗಾಗಲೀ, ಗಣಕ ಯಂತ್ರಗಳ ಬೇರೆ ಜಾಲದ ಜೊತೆಗಾಗಲೀ ಸಂಪರ್ಕವನ್ನೇ ಮಾಡುವುದಿಲ್ಲ; ಅದು ಪ್ರತ್ಯೇಕವಾಗಿಯೇ ಇರುತ್ತದೆ. ಆದ್ದರಿಂದ ಹ್ಯಾಕ್ ಆಗುವ ಸಾಧ್ಯತೆ ಇಲ್ಲ ಎನ್ನುವುದು ಚುನಾವಣಾ ಆಯೋಗದ ಖಚಿತ ಮಾತು.

ಕಾಡುಗಳಲ್ಲಿ ಕಿಲೋಮೀಟರುಗಳ ದೂರವನ್ನು ಕ್ರಮಿಸಿ ಮತಗಟ್ಟೆಯನ್ನು ತಲುಪಬೇಕಾದ ಸಂದರ್ಭಗಳೂ ಉಂಟು. ಅಧಿಕಾರಿಗಳು ಆರು ದಿನಗಳ ಕಾಲ ನಡೆದು ಮತಗಟ್ಟೆಗೆ ಮುಟ್ಟಬೇಕಾದ ಪ್ರದೇಶಗಳೂ ನಮ್ಮ ದೇಶದಲ್ಲಿವೆ. ಇಂಥಲ್ಲೆಲ್ಲಿಯೂ ತೊಂದರೆಯಾಗದಂತೆ ಮತಯಂತ್ರ ರೂಪುಗೊಳ್ಳಬೇಕು. ಹೀಗಾಗಿ ಅದರ ಭಾರವೂ ಹೆಚ್ಚಿರಬಾರದು, ಗಾತ್ರವೂ ದೊಡ್ಡದಿರಬಾರದು. ಈ ನಿರ್ಬಂಧಗಳನ್ನು ಮರೆತು ತಂತ್ರಜ್ಞಾನ ಸಿದ್ಧವಾಗುವಂತಿಲ್ಲ. ಬೆಂಗಳೂರಿನ ಹೈಟೆಕ್ ಮತಗಟ್ಟೆಯಲ್ಲಿ ನಡೆದದ್ದು ಯಾವುದೋ ಉತ್ತರಪ್ರದೇಶದ ಕಾಡಿನಲ್ಲಿಯೂ ಕೆಲಸ ಮಾಡಬೇಕು. ತಂತ್ರಜ್ಞಾನದ ವಿನ್ಯಾಸ ಮಾಡುವವರಿಗೆ ಎದುರಾದ ಇಂಥ ಸವಾಲುಗಳು ಒಂದೇ ಎರಡೇ?

1979ರಲ್ಲೇ ಇಂಥ ಮೊದಲ ಪ್ರಯೋಗ ಮಾದರಿಯನ್ನು ಸಿದ್ಧಗೊಳಿಸಲಾಯಿತು ಕೂಡ. ಅನಂತರ ಬೆಂಗಳೂರಿನ 'ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್' (BEL) ಕೂಡ ಈ ಯಂತ್ರದ ತಯಾರಿಯಲ್ಲಿ ಭಾಗಿಯಾಯಿತು. 1982ರಲ್ಲಿ ಕೇರಳದಲ್ಲಿ ಮತ್ತು 1998ರಲ್ಲಿ ಮಧ್ಯಪ್ರದೇಶ, ರಾಜಸ್ಥಾನ ಮತ್ತು ದೆಹಲಿಯ ವಿಧಾನಸಭಾ ಕ್ಷೇತ್ರಗಳಲ್ಲಿ ಇಂಥ ಯಂತ್ರಗಳನ್ನು ಪ್ರಾಯೋಗಿಕವಾಗಿ ಬಳಸಿ ನೋಡಲಾಯಿತು. ಅದಾದ ಮೇಲೆ ಗೋವಾದಲ್ಲಿ, ಸಾಕ್ಷರತೆ ಹೆಚ್ಚು ಇದ್ದದ್ದರಿಂದ ಮತ್ತು ಅಂಥ ಗಲಾಟೆಯೇನೂ ಇಲ್ಲದ್ದರಿಂದ ಅಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಯೋಗ ಮಾಡಿ ನೋಡಲಾಯಿತು. ಒಟ್ಟಿನಲ್ಲಿ ಸರಳವಾಗಿ, ದೊಡ್ಡ ಖರ್ಚು ವೆಚ್ಚಗಳು ಇಲ್ಲದೆ ತಯಾರಿಸಲಾಯಿತು. ಈಗ ಭೂತಾನ್ ಕೂಡ ನಮ್ಮ ಇವಿಎಂ ಅನ್ನು ಬಳಸುತ್ತಿದೆ.

ಈ ಮತಯಂತ್ರವು ಎರಡು ಘಟಕಗಳನ್ನು ಒಳಗೊಂಡಿರುತ್ತದೆ; ಒಂದು ನಿಯಂತ್ರಣ ಘಟಕ (ಕಂಟ್ರೋಲಿಂಗ್ ಯೂನಿಟ್) ಮತ್ತು ಒಂದು 'ಬ್ಯಾಲೆಟಿಂಗ್ ಘಟಕ'. ಕಂಟ್ರೋಲಿಂಗ್ ಯೂನಿಟ್ ಉಸ್ತುವಾರಿ ಮತಗಟ್ಟೆ ಅಧಿಕಾರಿಯ ಹತ್ತಿರ ಇರುತ್ತದೆ. ಇದು ಗಣಕಯಂತ್ರಗಳ ಸಿಪಿಯು ಇದ್ದಂತೆ ಎನ್ನಬಹುದು. ಮತದಾರ ಬಳಸುವುದು ಬ್ಯಾಲೆಟಿಂಗ್ ಘಟಕವನ್ನು. ನಮ್ಮ ಮತಯಂತ್ರದಲ್ಲಿ ಇರುವುದು ಕೆಲವು ಸಾವಿರ ಸಾಲುಗಳ ಸಾಫ್ಟ್‌ವೇರ್ ಪ್ರೋಗ್ರಾಮ್ ಮಾತ್ರ. ವಿದೇಶಗಳ ಯಂತ್ರಗಳಿಗೆ ಹೋಲಿಸಿದರೆ ಇದರ ಸಂಕೀರ್ಣತೆ ಬಹಳ ಕಡಿಮೆ ಎನ್ನಬೇಕು. ಎಲೆಕ್ಟ್ರಾನಿಕ್ಸಿನ ಭಾಷೆಯಲ್ಲಿ ಹೇಳುವುದಾದರೆ, ಮತಯಂತ್ರವು ಒಂದು ತರಹದ embedded system ಎನ್ನಬಹುದು. ಇದಕ್ಕೆ ಬೇಕಾಗುವ ಚಿಪ್‌ಗಳು ಅಮೆರಿಕ ಮತ್ತು ಜಪಾನಿನ ಕಂಪೆನಿಗಳಲ್ಲಿ ತಯಾರಾಗುತ್ತವೆ. ಮತಗಟ್ಟೆ ವಶಪಡಿಸಿಕೊಳ್ಳುವುದನ್ನು ಇದು ತಡೆಯುತ್ತದೆಯೆ? ಇಲ್ಲ. ಪೂರ್ತಿಯಾಗಿ ತಡೆಯಲಾರದು. ನಿಮಿಷಕ್ಕೆ 5 ಓಟಿಗಿಂತ ಹೆಚ್ಚು ಇದರಲ್ಲಿ ಹಾಕಲಾಗದು, ಅದು ಗಂಟೆಗೆ 300ಕ್ಕಿಂತ ಹೆಚ್ಚು ಮತಗಳನ್ನು ಸ್ವೀಕರಿಸಲಾಗದು, ಹೀಗೆ ಕೃತ್ಯದ ಪರಿಣಾಮವನ್ನು ಸ್ವಲ್ಪ ತಗ್ಗಿಸುವಂತೆ ತಂತ್ರಜ್ಞಾನವನ್ನು ಕಲ್ಪಿಸಲಾಗಿದೆ. ಒಟ್ಟಿನಲ್ಲಿ ಈ ಸಣ್ಣ ಗಾತ್ರದ ಯಂತ್ರದ ವಿನ್ಯಾಸದ ಹಿಂದೆ ಎಷ್ಟೆಲ್ಲಾ ವಿಚಾರಗಳಿವೆ ಎಂದು ಯೋಚಿಸಿದರೆ ಅಚ್ಚರಿಯೇ ಆಗುತ್ತದೆ.

ಪಿಯುಸಿ– ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

BIOLOGY

MULTIPLE CHOICE QUESTIONS:-

80. Match the microbial products listed under column I with the related microbes given under column II choose the appropriate option from the given choices.

Column I	Column II
A. Citric acid	1. Methanobacterium
B. Cyclosporine A	2. Monascus purpureus
C. Statin	3. Aspergillus niger
D. Gobar gas	4. Trichoderma polysporum

	A	B	C	D
(a)	3	4	2	1
(b)	5	2	4	3
(c)	2	4	5	3
(d)	3	4	2	5

Ans:(a) Citric acid, a weak organic acid used as a preservative and to add an sour or an acidic taste in food and drinks is produced by a fungi Aspergillus Niger,

cyclosporine-A is a bioactive molecule which acts as a powerful immunosuppresive agent is produced by a fungi. Trichoderma polysporum,

strain is also a bioactive molecule which acts as a blood cholesterol lowering agent is produced by the yeast Monascus purpureus.

Gobar gas produced by Methanobacterium is used as a fuel for cooking and lighting.

81. Marachantia is considered as a heterothallic plant because it is

(a) Heterogametic (b) Bisexual
(c) Monoecious (d) Dioecious

Ans:(d) Marchantia thallus is a genus in the family-Marchantiaceae of the order-Marchantiales, a group of liverworts. It is considered as a heterothallic plant because it is dioecious in nature whose male plant bearing Anteriodiophore and female plant bearing Archegoniophore are present on different plant.

82. Identify the set of characteristics related to plants belonging to family-Fabaceae from the following

(a) actinomorphic flower, syncarpous ovary and marginal placentation

(b) Persistent calyx, epipetalous stamens and leguminous fruit

(c) papilionaceous corolla, axile placentation and leguminous fruit

(d) vexullary aestivation of corolla, diadelphous stamens and monocarpellary, unilocular ovary

Ans:(d) Family-Fabaceae belongs to the division Embryophyta, class-Dicotyledinae, sub-class-Polypetalae and order-Rosales.

The members of this family are distributed all over the world. They are mostly herbs (however shrubs, trees and climbers are also common)

Flowers of the plants belonging to this family shows descending imbricate aestivation of corolla, stamens 10 (9+1 condition) are usually diadelphous. Gynoecium is monocarpellary, ovary is superior unilocular with marginal placentation.

83. One of the following statements is incorrect with reference to biodiversity. Identify it

(a) Biodiversity increases with higher altitudes to lower altitudes

(b) Depletion in genetic diversity of crop plants is mainly due to the introduction of better varieties with high yield, disease resistance, etc.

(c) The richest reservoirs of animal and plant life (species richness) with few or no threatened species are called 'biodiversity hotspots'

(d) Biodiversity decreases from the equator to Polar Regions

Ans:(c) Biodiversity refers to the variety and variability of living organisms on earth. Out of all the options given in the question the only inappropriate answer about 'biodiversity hotspots' is that these are the biogeographic region which are both biologically rich reservoirs and deeply threatened by habitat loss and other human activities

84. In castor and maize plants,

(a) Autogamy is prevented but not geitonogamy

(b) Both autogamy and geitonogamy are prevented

(c) Male and female flowers are borne by different plants

(d) The anthers and stigma are placed at different positions to encourage cross pollination

Ans:(a) Castor and maize are both monoecious plants which produce unisexual flowers, in which the pollen from the anthers of a flower is transferred to the stigma of the same flower. Thus, in these plants only autogamy can be prevented, but not geitonogamy (in which pollens are transferred from anither of one flower to stigma of another flower borne on same plant but different branches). Both autogamy and geitonogamy are prevented in *Carica papaya.*

CHEMISTRY

112) Sucrose is NOT a reducing sugar since

a) it is chemically stable

b) it contains no free aldehydes or keto group adjacent to a CH-OH group

c) it is built up of a fructose unit

d) it is optically active

Ans:- b

113) Which of the following is the strongest base?

a) OH^- b) CH_3O^-

c) CH_3COO^- d) Cl^-

Ans : (a)

Expln:- To check the basicity of an ion, the conjugate acid must be weak. The conjugate acids are given below: H_2O, CH_3OH, CH_3COOH and HCl.

We know that methanol is a stronger acid than water. Weaker the acid, stronger is the conjugate base, by that logic, OH^- is the strongest base among the given options.

114) Which one of the following is NOT true regarding electromeric effect?

a) It results in the appearance of partial charges on the carbon atoms

b) It is a temporary effect

c) It operates on multiple bonds

d) It requires an attacking reagent

Ans:- a

115) An organic compound 'A' burns with a sooty flame. It is negative towards Tollen's reagent test and positive for Borsche's reagent test. The compound 'A' is -

a) Benzaldehyde b) Acetophenone

c) Acetone d) Salicylic acid

Ans:- b

116) Out of the below two compounds the vapour pressure of (B) at a particular temperature is ……



(A) (B)

a) lower than that of (A)

b) higher than that of (A)

c) same as that of (A)

d) higher or lower than (A), depending on the size of the vessel

Ans:- b

117) Adenosine is an example of………

a) Purine base b) Nucleoside

c) Nucleotide d) Pyrimidine base

Ans: b

Expl:- When adenine (purine base) combines with ribose sugar, adenosine is formed. It is a nucleoside.

118) Graphite is a soft solid lubricant extremely difficult to melt. The reason for this anomalous behavior is that graphite -

a) has molecules of variable molecular masses like polymers

b) has carbon atoms arranged in large plates of rings of strongly bound carbon atoms with weak interpolate bonds

c) is a non-crystalline substance

d) is an allotropic form of carbon

Ans:- b

119) In electrophilic aromatic substitution reaction, the nitro group is meta directing because it

a) increases electron density at meta position

b) increases electron density at ortho and para positions

c) decreases electron density at ortho and para positions

d) decreases electron density at meta position

Ans:- c

120) The correct arrangement for the ions in the increasing order of their radii is……..

a) Na^+, Cl^-, Ca^{2+} b) Ca^{2+}, K^+, S^{2-}

c) Na^+, AL^{3+}, Be^{2+} d) Cl^-, F^-, S^{2-}

Ans:- b

Expln:-

Species	At No.	No. of e^-
Ca^{2+}	20	18
K^+	19	18
S^{2-}	16	18

The species Ca^{2+}, K^+ and S^{2-} are isoelectronic. For isoelectronic ions, the radius decreases as the nuclear charge increases. Hence, the increasing order of their radii is $Ca^{2+} < K^+ < S^{2-}$

121) 0.06% (w/v) aqueous solution of urea is isotonic with

a) 0.6% glucose solution

b) 0.1 M glucose solution

c) 0.06% glucose solution

d) 0.01 M glucose solution

Ans: **(d)**

$$\text{Expln:-Molarity of urea solution} = \frac{0.06 \times 10}{60} = 0.01\ M.$$

‘ನಾಲಾಯಕ್’ ಹೇಳಿಕೆ ಬಿಜೆಪಿಯಿಂದ ದೂರು

ನವದೆಹಲಿ: ‘ಪ್ರಧಾನಿ ನರೇಂದ್ರ ಮೋದಿ ಅವರನ್ನು ನಾಲಾಯಕ್ ಎಂದು ಕರೆದಿರುವ ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ಬಿಜೆಪಿಯ ನಿಯೋಗವು ಕೇಂದ್ರ ಚುನಾವಣಾ ಆಯೋಗಕ್ಕೆ ಮಂಗಳವಾರ ದೂರು ನೀಡಿದೆ. ಬಜರಂಗ ದಳವನ್ನು ನಿಷೇಧಿಸುವ ಪ್ರಸ್ತಾಪವಿರುವ ಕಾಂಗ್ರೆಸ್‌ನ ಚುನಾವಣಾ ಪ್ರಣಾಳಿಕೆಗೂ ಬಿಜೆಪಿ ಆಕ್ಷೇಪ ವ್ಯಕ್ತಪಡಿಸಿದೆ.

ಕೇಂದ್ರ ಸಚಿವ ಪೀಯೂಷ್ ಗೋಯಲ್ ಅವರನ್ನು ಒಳಗೊಂಡ ಬಿಜೆಪಿ ನಿಯೋಗವು ಆಯೋಗಕ್ಕೆ ದೂರು ಸಲ್ಲಿಸಿತು. ‘ಬಜರಂಗ ದಳವು ಭಗವಾನ್ ಹನುಮಾನ್ ಹಾಗೂ ಜನರ ಸೇವೆ ಮಾಡುವ ಸಂಘಟನೆ. ಇಂತಹ ಸಂಘಟನೆ ಮೇಲೆ ಕಾಂಗ್ರೆಸ್ ದಾಳಿ ಮಾಡಲು ಹೊರಟಿರುವುದು ನಾಚಿಕೆಗೇಡು. ಕಾಂಗ್ರೆಸ್ ಓಲೈಕೆ ರಾಜಕಾರಣದಲ್ಲಿ ತೊಡಗಿದೆ’ ಎಂದು ಪೀಯೂಷ್ ಗೋಯಲ್ ಟೀಕಿಸಿದರು. ಬಜರಂಗ ದಳದ ವಿಷಯವನ್ನು ಚುನಾವಣಾ ಆಯೋಗದ ಮುಂದೆ ಮೌಖಿಕವಾಗಿ ಪ್ರಸ್ತಾಪಿಸಲಾಗಿದೆ ಎಂದು ಪಕ್ಷದ ಮೂಲಗಳು ತಿಳಿಸಿವೆ.

‘ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಮೋದಿ ಅವರನ್ನು ವಿಷದ ಹಾವು ಎಂದು ಕರೆದಿದ್ದಾರೆ. ಅವರ ಮಗ ಪ್ರಿಯಾಂಕ್ ಖರ್ಗೆ ‘ನಾಲಾಯಕ್’ ಎಂಬ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಾರೆ. ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳುವಂತೆ ಆಯೋಗಕ್ಕೆ ಮನವಿ ಮಾಡಿದ್ದೇವೆ’ ಎಂದು ಸಚಿವರು ತಿಳಿಸಿದರು.

ಎಲ್ಲೆ ಮೀರಿದ ಮಾತು ಆಯೋಗದ ಕಿವಿಮಾತು

ನವದೆಹಲಿ: ಕರ್ನಾಟಕ ವಿಧಾನಸಭೆ ಚುನಾವಣೆಯ ಪ್ರಚಾರದ ಗುಣಮಟ್ಟ ಕುಸಿಯುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಿರುವ ಕೇಂದ್ರ ಚುನಾವಣಾ ಆಯೋಗ, ಎಲ್ಲ ಪಕ್ಷಗಳ ನಾಯಕರು ಮತ್ತು ಅಭ್ಯರ್ಥಿಗಳು ಪ್ರಚಾರದ ವೇಳೆ ಎಚ್ಚರಿಕೆ ಹಾಗೂ ಸಂಯಮದಿಂದ ಹೇಳಿಕೆಗಳನ್ನು ನೀಡಬೇಕು ಎಂದು ಸಲಹೆ ನೀಡಿದೆ. ಚುನಾವಣಾ ವಾತಾವರಣ ಹಾಳು ಮಾಡದಂತೆಯೂ ಕಿವಿಮಾತು ಹೇಳಿದೆ.

ಪ್ರಧಾನಿ ನರೇಂದ್ರ ಮೋದಿ ವಿಷದ ಹಾವಿದ್ದಂತೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಟೀಕಿಸಿದ್ದರು. ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ವಿಷಕನ್ಯೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಟೀಕಿಸಿದ್ದರು. ಕೆಲಸ ಮಾಡದವರು ನಾಲಾಯಕ್ ಎಂದು ಕಾಂಗ್ರೆಸ್ ಶಾಸಕ ಪ್ರಿಯಾಂಕ್ ಖರ್ಗೆ ಹೇಳಿದ್ದರು. ಪ್ರಚಾರದ ವೇಳೆ ಇಂತಹ ಹೇಳಿಕೆಗಳು ಹೆಚ್ಚುತ್ತಿರುವುದನ್ನು ಗಮನಿಸಿದ ಆಯೋಗವು, ರಾಜಕೀಯ ಪಕ್ಷಗಳಿಗೆ ಮಂಗಳವಾರ ಕೆಲವೊಂದು ಸಲಹೆಗಳನ್ನು ನೀಡಿದೆ.

‘ಪಕ್ಷಗಳ ಸ್ಟಾರ್ ಪ್ರಚಾರಕರೇ ಇಂತಹ ಹೇಳಿಕೆಗಳನ್ನು ನೀಡುತ್ತಿರುವುದು ಗಮನಕ್ಕೆ ಬಂದಿದೆ. ಈ ಕುರಿತು ದೂರುಗಳು ಬಂದಿವೆ. ಮಾಧ್ಯಮಗಳಲ್ಲಿ ವರದಿಗಳು ಪ್ರಕಟವಾಗಿವೆ’ ಎಂದು ಹೇಳಿರುವ ಆಯೋಗ, ‘ಪಕ್ಷಗಳ ಸ್ಟಾರ್ ಪ್ರಚಾರಕರು ಹಾಗೂ ಅಭ್ಯರ್ಥಿಗಳು ವಿಷಯ ಆಧಾರಿತ ಚರ್ಚೆಗಳನ್ನು ಮಾಡಬೇಕು’ ಎಂದೂ ಸಲಹೆ ನೀಡಿದೆ.

ಅಂಗನವಾಡಿ ನೌಕರರ ವೇತನ ಹೆಚ್ಚಳ • ಪೌರ ಕಾರ್ಮಿಕರ ಸೇವೆ ಕಾಯಂ • ಕಾಂಗ್ರೆಸ್‌ನಿಂದ ‘ಭರವಸೆ’ಗಳ ಮಳೆ

ಸರ್ವ ಜನಾಂಗದ ಶಾಂತಿಯ ತೋಟದ ಜಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕವನ್ನು ‘ಸರ್ವ ಜನಾಂಗದ ಶಾಂತಿ ತೋಟವಾಗಿ’ ಉಳಿಸುವ ಸಂಕಲ್ಪವನ್ನು ಪ್ರಣಾಳಿಕೆಯ ಆರಂಭದಲ್ಲೇ ಮಾಡಿರುವ ಕಾಂಗ್ರೆಸ್, ಭರವಸೆಗಳ ಮಳೆಯನ್ನೇ ಸುರಿಸಿ, ಮತಬುಟ್ಟಿಗೆ ಕೈ ಹಾಕುವ ಕೆಲಸ ಮಾಡಿದೆ.

ರಾಜ್ಯದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದರೆ, ಅಂಗನವಾಡಿ ಕಾರ್ಯಕರ್ತೆಯರು, ಆಶಾ ಕಾರ್ಯಕರ್ತೆಯರು, ಬಿಸಿಯೂಟದ ಅಡುಗೆಯವರ ವೇತನ ಹೆಚ್ಚಿಸಲಾಗುವುದು. ಪೌರ ಕಾರ್ಮಿಕರನ್ನು ಕಾಯಂಗೊಳಿಸಲಾಗುವುದು ಎಂದು ಚುನಾವಣಾ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಭರವಸೆ ನೀಡಿದೆ. ಆ ಮೂಲಕ, ದೊಡ್ಡ ಸಂಖ್ಯೆಯಲ್ಲಿರುವ ಈ ಸಮೂಹದ ಮತಬುಟ್ಟಿಗೆ ಕೈ ಹಾಕಿದೆ.

ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನು ಈಗಿರುವ ₹ 11,500ದಿಂದ 15 ಸಾವಿರಕ್ಕೆ, ಮಿನಿ ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನು ₹ 7,500ರಿಂದ ₹ 10 ಸಾವಿರಕ್ಕೆ ಹೆಚ್ಚಿಸುವ ಜೊತೆಗೆ ವಿಶ್ರಾಂತಿ ವೇತನ ₹ 2 ಲಕ್ಷ, ಆಶಾ ಕಾರ್ಯಕರ್ತೆಯರ ಮಾಸಿಕ ನಿಶ್ಚಿತ ಗೌರವ ಧನ ₹ 5 ಸಾವಿರದಿಂದ ₹ 8 ಸಾವಿರಕ್ಕೆ, ಬಿಸಿಯೂಟದ ಅಡುಗೆಯವರ ಮಾಸಿಕ ಗೌರವಧನ ₹ 3,600 ರಿಂದ ₹ 6 ಸಾವಿರಕ್ಕೆ ಹೆಚ್ಚಿಸುವುದಾಗಿ ಕಾಂಗ್ರೆಸ್ ಹೇಳಿದೆ.

ಮೀಸಲಾತಿ ಮಿತಿ ಶೇ 75ಕ್ಕೆ ಹೆಚ್ಚಿಸಲು ಕ್ರಮ: ಎಸ್‌ಸಿ ಶೇ 17, ಎಸ್‌ಟಿ ಶೇ 7 ಮೀಸಲಾತಿ, ಮುಸ್ಲಿಮರಿಗೆ ಶೇ 4 ಮೀಸಲಾತಿ ಮರುಸ್ಥಾಪನೆ, ಲಿಂಗಾಯತರ ಮತ್ತು ಒಕ್ಕಲಿಗರ ಮೀಸಲಾತಿ ಹೆಚ್ಚಳ ಬೇಡಿಕೆ ಈಡೇರಿಸಲು ಮೀಸಲಾತಿ ಮಿತಿಯನ್ನು ಶೇ 50ರಿಂದ 75ರವರೆಗೆ ಹೆಚ್ಚಿಸಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದೂ ಕಾಂಗ್ರೆಸ್ ತಿಳಿಸಿದೆ.

‘ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ವರ್ಗೀಕರಣಕ್ಕೆ ಸಂಬಂಧಿಸಿದ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿಯನ್ನು ವಿಧಾನಮಂಡಲದ ಮೊದಲ ಅಧಿವೇಶನದಲ್ಲಿಯೇ ಮಂಡಿಸಲಾಗುವುದು. ಹಿಂದುಳಿದ ವರ್ಗಗಳ ಆಯೋಗ ಸಿದ್ಧಪಡಿಸಿರುವ ಜಾತಿಗಣತಿ ವರದಿಯನ್ನೂ ಅನುಷ್ಠಾನಕ್ಕೆ ತರಲಾಗುವುದು. ಎಲ್ಲ ಎಸ್‌ಸಿ, ಎಸ್‌ಟಿ ಕುಟುಂಬಗಳಿಗೆ ಸರ್ಕಾರದಿಂದಲೇ ಮನೆಗಳ ನಿರ್ಮಿಸಲಾಗುವುದು. ಅಂಬೇಡ್ಕರ್ ಉದ್ಯಮಶೀಲತಾ ನಿಧಿ ಸ್ಥಾಪಿಸಿ ₹ 1 ಸಾವಿರ ಕೋಟಿ ಮೀಸಲಿಡಲಾಗುವುದು. ಎಸ್‌ಸಿ, ಎಸ್‌ಟಿ ಕಾಯ್ದೆಗೆ ತಿದ್ದುಪಡಿ ತಂದು ದರ್ಖಾಸ್ತು ಮೂಲಕ ನೀಡಿದ ಜಮೀನು ಶಾಶ್ವತವಾಗಿ ಅವರ ಬಳಿಯೇ ಇರುವಂತೆ ನೋಡಿಕೊಳ್ಳಲಾಗುವುದು’ ಎಂದೂ ಕಾಂಗ್ರೆಸ್ ಭರವಸೆ ನೀಡಿದೆ.

‘ಸರ್ವ ಜನಾಂಗದ ಶಾಂತಿಯ ತೋಟ– ಇದುವೇ ಕಾಂಗ್ರೆಸ್‌ನ ಬದ್ಧತೆ’ ಎಂಬ ಆಶಯವನ್ನೂ ಪ್ರಣಾಳಿಕೆಯಲ್ಲಿ ವ್ಯಕ್ತಪಡಿಸಿರುವ ಕಾಂಗ್ರೆಸ್, ಸರ್ಕಾರದ ಬಜೆಟ್ ಘೋಷಣೆಗಳಂತೆ ಕೃಷಿ, ಕೈಗಾರಿಕೆ, ಸಾರ್ವಜನಿಕ ಸೇವೆ, ಕಾನೂನು ಮತ್ತು ನ್ಯಾಯ, ನಗರಾಭಿವೃದ್ಧಿ, ಶಿಕ್ಷಣ, ಆರೋಗ್ಯ ಹೀಗೆ ಪ್ರತಿ ವಲಯವನ್ನೂ ಪ್ರತ್ಯೇಕವಾಗಿ ಉಲ್ಲೇಖಿಸಿ ಭರವಸೆಗಳನ್ನು ನೀಡಿದೆ.

ಪ್ರಣಾಳಿಕೆ ಬಿಡುಗಡೆ ಮಾಡಿ ಮಾತನಾಡಿದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ‘ನಾವು ನುಡಿದಂತೆ ನಡೆಯುವ ಜನ. ಭರವಸೆ ನೀಡಿ ಹೋಗುವವರಲ್ಲ. ಇದನ್ನು ನಾವು ಖಂಡಿತವಾಗಿ ಜಾರಿ ಮಾಡುತ್ತೇವೆ ಎಂದು ನಾನು ಗ್ಯಾರಂಟಿ ನೀಡುತ್ತೇನೆ. ಮೊದಲ ಸಚಿವ ಸಂಪುಟ ಸಭೆಯಲ್ಲೇ ಗ್ಯಾರಂಟಿ ಕೊಡುಗೆಗಳ ಅನುಷ್ಠಾನವನ್ನು ಘೋಷಿಸುತ್ತೇವೆ’ ಎಂದರು.

‘ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ನಮ್ಮ ಪ್ರಣಾಳಿಕೆ ಪೂರಕವಾಗಿದೆ. ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಕರಾವಳಿ ಕರ್ನಾಟಕ, ಮೈಸೂರು ಕರ್ನಾಟಕ ಹಾಗೂ ಗ್ಲೋಬಲ್ ಬೆಂಗಳೂರು ನಿರ್ಮಾಣಕ್ಕೆ ಈ ಪ್ರಣಾಳಿಕೆ ಅಡಿಪಾಯ ಹಾಕಿದೆ. ಬೆಂಗಳೂರಿನ ಹಳೆಯ ಭವ್ಯ ವೈಭವ ಮರು ಸ್ಥಾಪನೆಗೆ, ಸಂಚಾರ ದಟ್ಟಣೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲಾಗುವುದು’ ಎಂದೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಅರಶಿನ ಕುಂಕುಮ ಹಾಕಿ, ವೀಳ್ಯದೆಲೆ, ಅಡಿಕೆ ಇಟ್ಟು ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಬಿಡುಗಡೆಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಚಾಲನೆ ನೀಡಿದರು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಪ್ರಣಾಳಿಕೆ ಸಮಿತಿ ಉಪಾಧ್ಯಕ್ಷ ಕೆ.ಈ. ರಾಧಾಕೃಷ್ಣ ಇದ್ದರು

–ಪ್ರಜಾವಾಣಿ ಚಿತ್ರ

ನಿಮ್ಮ ಗ್ಯಾರಂಟಿ ಕಾರ್ಡ್ ಹೆಚ್ಚು ಪರಿಣಾಮಕಾರಿಯಾಗಿದ್ದು, ಅದರ ಬಗ್ಗೆ ಹೆಚ್ಚು ಪ್ರಚಾರ ಮಾಡುವಂತೆ ಹಲವರು ನನಗೆ ಸಲಹೆ ನೀಡುತ್ತಿದ್ದಾರೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬರುವುದು ನಿಶ್ಚಿತ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ನಮ್ಮದು ಕೇವಲ ಚುನಾವಣಾ ಪ್ರಣಾಳಿಕೆ ಅಲ್ಲ, ಜನರ ಧ್ವನಿ– ಪ್ರಜಾಧ್ವನಿ. ಅನುಷ್ಠಾನಕ್ಕೆ ತರಲು ಸಾಧ್ಯವಾಗುವ ಘೋಷಣೆಗಳನ್ನು ಮಾತ್ರ ನಾವು ಪ್ರಕಟಿಸಿದ್ದೇವೆ

ಡಿ.ಕೆ. ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ಮಠ, ಮಂದಿರಕ್ಕೆ ₹ 1 ಸಾವಿರ ಕೋಟಿ

₹ 1 ಸಾವಿರ ಕೋಟಿಯಲ್ಲಿ ‘ಧಾರ್ಮಿಕ ನಿಧಿ’ ಸ್ಥಾಪಿಸಿ ಸಣ್ಣ ದೇವಸ್ಥಾನ, ಮಠಗಳ ನವೀಕರಣ ಮಾಡಲಾಗುವುದು. 60 ವರ್ಷ ಮೀರಿದ ಅರ್ಚಕರಿಗೆ ಮಾಸಿಕ ₹ 5 ಸಾವಿರ ಗೌರವಧನ ನೀಡಲಾಗುವುದು. ಗ್ರಾಮಮಟ್ಟದಲ್ಲಿ ನಡೆಯುವ ಎಲ್ಲ ಗ್ರಾಮ ದೇವತೆ ಮತ್ತು ತೇರು ಹಬ್ಬಗಳಿಗೆ ತಲಾ ₹ 20 ಸಾವಿರ ದೇಣಿಗೆ ನೀಡಲಾಗುವುದು ಎಂದೂ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಘೋಷಿಸಿದೆ.

ಪ್ರಣಾಳಿಕೆಯಲ್ಲಿರುವ ಇತರ ಅಂಶಗಳು

- ಪಿಯುಸಿಯಿಂದ ಉನ್ನತ ಶಿಕ್ಷಣದವರೆಗೆ ಎಲ್ಲ ವಿದ್ಯಾರ್ಥಿನಿಯರಿಗೆ ಉಚಿತ ಲ್ಯಾಪ್‌ಟಾಪ್, ಡಿಜಿಟಲ್ ನೋಟ್‌ಪ್ಯಾಡ್
- ಪ್ರವಾಸೋದ್ಯಮ ಅಭಿವೃದ್ಧಿಗೆ ₹ 5 ಸಾವಿರ ಕೋಟಿ ನಿಧಿ. ಹೋಮ್ ಸ್ಟೇ ಮಾಲೀಕರಿಗೆ ಶೇ 5ರ ಬಡ್ಡಿದರದಲ್ಲಿ ₹ 10 ಲಕ್ಷವರೆಗೆ ಸಾಲ. ಸಣ್ಣ ಹೋಟೆಲ್, ಬೇಕರಿ, ಸಿಹಿ ಅಂಗಡಿಗಳಿಗೆ ಶೇ 6ರ ಬಡ್ಡಿದರದಲ್ಲಿ ₹ 10 ಲಕ್ಷವರೆಗೆ ಸಾಲ.
- ಬಿಎಂಟಿಸಿ ಬಸ್‌ಗಳ ಸಂಖ್ಯೆ 10 ಸಾವಿರಕ್ಕೆ ಹೆಚ್ಚಳ. ಕೆಎಸ್‌ಆರ್‌ಟಿಸಿ ಬಸ್ ಸಂಖ್ಯೆ 15 ಸಾವಿರಕ್ಕೆ ಏರಿಕೆ. ಗ್ರಾಮೀಣ ಮಿನಿ ಬಸ್ ಕಾರ್ಯಕ್ರಮ. ಎರಡು ವರ್ಷಗಳಲ್ಲಿ ಶೇ 50ರಷ್ಟು ವಿದ್ಯುತ್ ಚಾಲಿತ ಬಸ್ ಇರುವಂತೆ ವ್ಯವಸ್ಥೆ
- ಎಲ್ಲ ಪೊಲೀಸರಿಗೆ ಒಂದು ತಿಂಗಳ ಹೆಚ್ಚುವರಿ ವೇತನ. ರಾತ್ರಿ ಪಾಳಿಯ ಸಿಬ್ಬಂದಿಗೆ 5 ಸಾವಿರ ರೂ. ವಿಶೇಷ ವೇತನ ಮಾಸಿಕ ಭತ್ಯೆ
- ದ್ರಾಕ್ಷಿ ಬೆಳೆಗಾರರಿಗೆ ಸಬ್ಸಿಡಿ ಒದಗಿಸಲು ₹ 500 ಕೋಟಿ
- ಕಾಫಿ ಕರ್ನಾಟಕ ಬ್ರ್ಯಾಂಡ್ ಸೃಷ್ಟಿ
- ಹಾಲಿನ ಸಹಾಯಧನ ₹5ರಿಂದ ₹ 7ಕ್ಕೆಹೆಚ್ಚಳ
- ಮಹಿಳೆಯರಿಗೆ ಯಾವುದೇ ಭದ್ರತೆ ಇಲ್ಲದೇ ಗರಿಷ್ಠ ಎರಡು ಹಸು ಅಥವಾ ಎಮ್ಮೆಗಳನ್ನು ಖರೀದಿಸಲು ಅವಕಾಶ
- ಮೇಕೆದಾಟು ಯೋಜನೆಗೆ ₹ 9 ಸಾವಿರ ಕೋಟಿ. ಐದು ವರ್ಷದಲ್ಲಿ ಪೂರ್ಣ
- ಮಹದಾಯಿ ಯೋಜನೆಗೆ ₹ 3 ಸಾವಿರ ಕೋಟಿ
- ಆನ್‌ಲೈನ್ ಸಾಲ ನೀಡುವ ಎಲ್ಲ ಆ್ಯಪ್‌ಗಳನ್ನು ನಿಯಂತ್ರಿಸುವ ನೀತಿ 100 ದಿನಗಳ ಒಳಗೆ ಜಾರಿ
- ಬೆಂಗಳೂರು ನಗರದ ವಿವಿಧ ಪ್ರದೇಶಗಳಿಗೆ ರಾತ್ರಿ 1 ಗಂಟೆ ತನಕ ಬಸ್ ವ್ಯವಸ್ಥೆ
- ಬಿಬಿಎಂಪಿ ನಿರ್ವಹಣೆಗಾಗಿಯೇ ಸಮಗ್ರ ಕಾನೂನು
- ಒಂದೇ ವೇದಿಕೆ ಅಡಿ ಸಾರಿಗೆ, ವಿದ್ಯುತ್, ವಸತಿ, ಒಳಚರಂಡಿ, ನೀರು ಸರಬರಾಜು ಸೌಕರ್ಯ
- ಎಲ್ಲ ಎಸ್‌ಸಿ ಎಸ್‌ಟಿ ಕುಟುಂಬಗಳಿಗೆ ಸರ್ಕಾರದಿಂದಲೇ ಮನೆಗಳ ನಿರ್ಮಾಣ
- ಆಟೊ ಚಾಲಕರ ಮಂಡಳಿ ಹಾಗೂ ಟ್ಯಾಕ್ಸಿ ಚಾಲಕರ ಮಂಡಳಿ ಸ್ಥಾಪನೆ
- ಮಂಗಳಮುಖಿ ಮಂಡಳಿ ಸ್ಥಾಪಿಸಿ ₹ 100 ಕೋಟಿ ಅನುದಾನ
- ಪತ್ರಕರ್ತರ ಕಲ್ಯಾಣ ನಿಧಿಗೆ ₹ 500 ಕೋಟಿ, ಪತ್ರಕರ್ತರಿಗೆ ಸಾಮಾಜಿಕ ಭದ್ರತಾ ಯೋಜನೆ ಜಾರಿ
- ಸ್ಥಳೀಯ ಸಂಸ್ಥೆಗಳಿಗೆ ಕಟ್ಟುನಿಟ್ಟಾಗಿ ಅವಧಿಗೆ ಸರಿಯಾಗಿ ಚುನಾವಣೆ ನಡೆಸಲು ಕ್ರಮ
- ಎಪಿಎಂಸಿ ತಿದ್ದುಪಡಿ ಕಾಯ್ದೆಗಳ ರದ್ದು. ರೈತರ ಮೇಲಿನ ಕೇಸ್ ವಾಪಸ್
- ಸಾವಯವ ಕೃಷಿ ಉತ್ತೇಜನಕ್ಕೆ ₹ 2,500 ಕೋಟಿ ಹೂಡಿಕೆ
- ಪ್ರಕೃತಿ ವಿಕೋಪ ನಿಧಿ ಪರಿಹಾರಕ್ಕಾಗಿ ₹ 5 ಸಾವಿರ ಕೋಟಿ ಮೂಲ ನಿಧಿಯೊಂದಿಗೆ ಶಾಶ್ವತ ನಿಧಿ ಸ್ಥಾಪನೆ
- ವಸತಿ ಸಮಸ್ಯೆಗೆ ತೊಡಕಾಗಿರುವ ಅರಣ್ಯ ಕಾಯ್ದೆಯ ಸೆಕ್ಷನ್‌ಗಳ ತಿದ್ದುಪಡಿ
- ನಂದಿನಿ ಬ್ರ್ಯಾಂಡ್ ಬಗ್ಗೆ ವಿಶೇಷ ಗಮನ
- ಕುರಿ ಸಾಕಾಣಿಕೆಗಾಗಿ ₹ 1 ಸಾವಿರ ಕೋಟಿಯ ನಿಧಿ ಸ್ಥಾಪನೆ
- ರಾಜ್ಯದಲ್ಲಿರುವ ಎಲ್ಲ ನ್ಯಾಯಾಲಯಗಳ ಆಧುನೀಕರಣಕ್ಕಾಗಿ ₹ 3 ಸಾವಿರ ಕೋಟಿಯ ಪ್ರತ್ಯೇಕ ನಿಧಿ
- ಎತ್ತಿನಹೊಳೆ ಯೋಜನೆ ಎರಡು ವರ್ಷದೊಳಗೆ ಪೂರ್ಣ
- ರಾಜ್ಯದ ಪ್ರಮುಖ ನದಿಗಳ ಸ್ವಚ್ಛತೆಗಾಗಿ ವರ್ಷಕ್ಕೆ ₹ 1 ಸಾವಿರ ಕೋಟಿ
- ಕಾಳಿ, ಬೇಡ್ತಿ, ತುಂಗಭದ್ರಾ, ಮಲಪ್ರಭಾ, ಭೀಮಾ, ಕಾವೇರಿ, ಕಬಿನಿ, ಶಿಂಶಾ, ಅರ್ಕಾವತಿ, ಲಕ್ಷ್ಮಣತೀರ್ಥ, ಯಗಚಿ, ಕುಮಾರಧಾರ, ನೇತ್ರಾವತಿ ನದಿಗಳು 5 ವರ್ಷದೊಳಗೆ ಸ್ವಚ್ಛ

‘ಆಂಜನೇಯನಿಗೇ ಬೀಗ ಹಾಕುತ್ತೀರಾ?’

ಹೊಸಪೇಟೆಯಲ್ಲಿ ಕಾಂಗ್ರೆಸ್ ವಿರುದ್ಧ ಪ್ರಧಾನಿ, ನವಲಗುಂದದಲ್ಲಿ ಸಿ.ಎಂ ಬೊಮ್ಮಾಯಿ ಗುಡುಗು

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ‘ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಆಂಜನೇಯನಿಗೆ ಬೀಗ ಹಾಕಿ ಬಂದ್ ಮಾಡಲು ನಿರ್ಣಯಿಸಿರುವುದು ದೌರ್ಭಾಗ್ಯ. ನಾನು ಹನುಮನ ಪವಿತ್ರ ಸ್ಥಳಕ್ಕೆ ಬಂದಿರುವ ದಿನವೇ ಈ ತೀರ್ಮಾನ ಕೈಗೊಂಡಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಟೀಕಿಸಿದರು.

ನಗರದ ಡಾ. ಪುನೀತ್ ರಾಜಕುಮಾರ್ ಜಿಲ್ಲಾ ಕ್ರೀಡಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ನವ ಕರ್ನಾಟಕ ಸಂಕಲ್ಪ ಸಮಾವೇಶ ಉದ್ದೇಶಿಸಿ ಮಾತನಾಡಿದ ಅವರು, ‘ಹಂಪಿ ವಿರೂಪಾಕ್ಷ ಸ್ವಾಮಿ, ಉಗ್ರ ನರಸಿಂಹ ಸ್ವಾಮಿ, ಹುಲಿಗೆಮ್ಮ ದೇವಿಗೆ ನನ್ನ ಸಾಷ್ಟಾಂಗ ಪ್ರಣಾಮಗಳು. ಆಂಜನೇಯನ ಪವಿತ್ರ ಸ್ಥಳಕ್ಕೆ ಬಂದಿರುವೆ. ಈ ಭೂಮಿಗೆ ನನ್ನ ಪ್ರಣಾಮಗಳು. ಇದು ನನ್ನ ಸೌಭಾಗ್ಯ. ಆದರೆ, ದೌರ್ಭಾಗ್ಯ ನೋಡಿ, ನಾನು ಇಲ್ಲಿಗೆ ಬಂದ ದಿನವೇ ಕಾಂಗ್ರೆಸ್ ಪಕ್ಷ ತನ್ನ ಪ್ರಣಾಳಿಕೆಯಲ್ಲಿ ಆಂಜನೇಯನಿಗೆ ಬೀಗ ಹಾಕಿ ಬಂದ್ ಮಾಡಲು ನಿರ್ಣಯಿಸಿದೆ’ ಎಂದು ವ್ಯಂಗ್ಯವಾಡಿದರು.

‘ಈ ಹಿಂದೆ ಶ್ರೀರಾಮನಿಗೆ ಬೀಗ ಹಾಕಿ ಬಂದ್ ಮಾಡಿದವರು ಈಗ ಬಜರಂಗ ಬಲಿ ಎಂದು ಹೇಳುವವರಿಗೆ ಬೀಗ ಹಾಕಿ ಬಂದ್ ಮಾಡಲು ಸಂಕಲ್ಪ ಮಾಡಿದ್ದಾರೆ. ಇದು ಈ ದೇಶದ ದೌರ್ಭಾಗ್ಯ. ಕಾಂಗ್ರೆಸ್ ಪಕ್ಷಕ್ಕೆ ಈ ಹಿಂದೆ ಶ್ರೀರಾಮಚಂದ್ರನ ಬಗ್ಗೆ ತೊಂದರೆ ಇತ್ತು. ಈಗ ‘ಜೈ ಬಜರಂಗ ಬಲಿ’ ಎಂಬುವವರ ಬಗ್ಗೆಯೂ ತೊಂದರೆ ಆಗುತ್ತಿದೆ. ಆದರೆ, ಬಿಜೆಪಿ ಕರ್ನಾಟಕವನ್ನು ದೇಶದ ನಂಬರ್ ಒನ್ ರಾಜ್ಯ ಮಾಡಲು ಸಂಕಲ್ಪ ಮಾಡಿದೆ’ ಎಂದು ಮೋದಿ ಹೇಳಿದರು.

ನವಲಗುಂದ ವರದಿ: ‘ಹನುಮನ ಭಕ್ತರೇ ಬಜರಂಗಿಗಳು. ಬಜರಂಗಿಗಳು ಸೆಟೆದು ನಿಂತರೆ ನಿಮ್ಮ ಪಕ್ಷವನ್ನೇ (ಕಾಂಗ್ರೆಸ್) ಬೇರು ಸಮೇತ ಕಿತ್ತು ಹಾಕುತ್ತಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಇಲ್ಲಿನ ಪಕ್ಷದ ಅಭ್ಯರ್ಥಿ ಶಂಕರ ಪಾಟೀಲ ಮುನೇನಕೊಪ್ಪ ಪರ ಮಂಗಳವಾರ ನಡೆದ ರ‍್ಯಾಲಿಯಲ್ಲಿ ಅವರು ಕಾಂಗ್ರೆಸ್ ಮೇಲೆ ವಾಗ್ದಾಳಿ ನಡೆಸಿದರು.

‘ಬಜರಂಗ ದಳವನ್ನು ಪಿಎಫ್‌ಐ ಜೊತೆ ಹೋಲಿಕೆ ಮಾಡಿ ಮಾತನಾಡಿದ್ದಾರೆ. ಬಜರಂಗದಳವು ದೇಶಪ್ರೇಮ ಹಾಗೂ ಸಂಸ್ಕೃತಿ, ಸಂಪ್ರದಾಯ ಉಳಿಸುವ ಕೆಲಸ ಮಾಡುತ್ತಿದೆ’ ಎಂದರು.

ಕಲಬುರಗಿಯಲ್ಲಿ ಮಂಗಳವಾರ ಚುನಾವಣಾ ಪ್ರಚಾರಕ್ಕೆ ತೆರಳುವ ಮುನ್ನ ಪ್ರಧಾನಿ ನರೇಂದ್ರ ಮೋದಿ ಅವರು ಮಕ್ಕಳೊಂದಿಗೆ ಮಾತನಾಡಿದರು

–ಪಿಟಿಐ ಚಿತ್ರ

ಕಾಂಗ್ರೆಸ್ ಪಕ್ಷದವರು ತಮ್ಮ ಪ್ರಣಾಳಿಕೆಯಲ್ಲಿ ಬಜರಂಗ ದಳ ನಿಷೇಧ ಮಾಡುವುದಾಗಿ ಹೇಳಿದ್ದಾರೆ. ಇವರಪ್ಪನಿಗೆ ಹುಟ್ಟಿದ್ದರೆ ಬಜರಂಗ ದಳ ನಿಷೇಧ ಮಾಡಲಿ ನೋಡೋಣ

ಬಸನಗೌಡ ಪಾಟೀಲ ಯತ್ನಾಳ, ವಿಜಯಪುರ ನಗರ ಶಾಸಕ

ಕಾಂಗ್ರೆಸ್‌ನವರು ಆಡಳಿತಕ್ಕೆ ಬಂದರೆ ಬಜರಂಗ ದಳವನ್ನು ನಿಷೇಧಿಸುತ್ತೇವೆ ಎಂದಿದ್ದಾರೆ. ಆದರೆ ನಾವು ಇಡೀ ದೇಶದಿಂದಲೇ ಕಾಂಗ್ರೆಸ್ ತೊಲಗಿಸುತ್ತೇವೆ

ಸಿ.ಟಿ. ರವಿ, ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ, (ಜನ್ನಾಪುರದ ಪ್ರಚಾರಸಭೆ)

‘ಹಿಂದೂಗಳಿಗೆ ಮಾಡಿದ ಅವಮಾನ’

ಮಂಗಳೂರು: ಬಜರಂಗದಳವನ್ನು ನಿಷೇಧಿಸುವ ಪ್ರಸ್ತಾವವನ್ನು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿದ್ದಕ್ಕೆ ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಖಂಡಿಸಿದೆ.

‘ಬಜರಂಗದಳ ರಾಷ್ಟ್ರಭಕ್ತ ಸಂಘಟನೆ. ಇಂತಹ ಸಂಘಟನೆಯನ್ನು ದೇಶದ್ರೋಹಿ ಸಂಘಟನೆಯಾದ ಪಿಎಫ್‌ಐ ಜೊತೆ ಹೋಲಿಸಿ ನಿಷೇಧ ಮಾಡಲು ಹೊರಟಿರುವುದು ಹಿಂದೂಗಳಿಗೆ ಮಾಡಿದ ಅವಮಾನ’ ಎಂದು ವಿಎಚ್‌ಪಿ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಬರದಂತೆ ತಡೆಯಲು ಸಂಪೂರ್ಣ ಪ್ರಯತ್ನವನ್ನು ಮಾಡುತ್ತೇವೆ. ಬಜರಂಗದಳದ ಕಾರ್ಯಕರ್ತರು ಗ್ರಾಮ, ಹಳ್ಳಿ, ನಗರಗಳ ಮನೆಮನೆಗೆ ಹೋಗಿ ಹಿಂದೂಗಳಿಗೆ ಕಾಂಗ್ರೆಸ್ ಪಕ್ಷದ ನಿಲುವಿನ ಬಗ್ಗೆ ಅರಿವು ಮೂಡಿಸಲಿದ್ದಾರೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಷೇಧಿಸಲಿ: ಶೋಭಾ ಸವಾಲು

ಬೆಂಗಳೂರು: ‘ಬಜರಂಗದಳವನ್ನು ನಿಷೇಧಿಸುವ ಶಕ್ತಿಯನ್ನು ಕಾಂಗ್ರೆಸ್ ತೋರಿಸಲಿ ಅದಕ್ಕೆ ತಕ್ಕ ಉತ್ತರ ನೀಡುತ್ತೇವೆ’ ಎಂದು ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಹೇಳಿದ್ದಾರೆ.

ಬಿಜೆಪಿ ಮಾಧ್ಯಮ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಈ ಹಿಂದೆ ಆರ್‌ಎಸ್‌ಎಸ್ ಅನ್ನು ನಿಷೇಧಿಸಿತ್ತು. ನಿಷೇಧದ ಕ್ರಮವನ್ನು ಸುಪ್ರೀಂಕೋರ್ಟ್ ತಿರಸ್ಕರಿಸಿತ್ತು ಎಂದು ತಿಳಿಸಿದರು.

ಮುಸ್ಲಿಮರನ್ನು ಓಲೈಸಲು ಕಾಂಗ್ರೆಸ್ ಪ್ರಣಾಳಿಕೆ ಸಿದ್ಧಪಡಿಸಿದೆ. ಬಿಜೆಪಿ, ಬಜರಂಗದಳದೊಂದಿಗೆ ಇದೆ. ಕಾಂಗ್ರೆಸ್ ದೇಶ ದ್ರೋಹಿಗಳ ಜತೆ ಇದೆ. ಗೋಹತ್ಯೆ, ಮತಾಂತರ ನಿಷೇಧ ಕಾಯ್ದೆ ಜನವಿರೋಧಿಯಾಗಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು. ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರು ಪಿಎಫ್‌ಐ ಒತ್ತಡದಿಂದ ಬಜರಂಗದಳ ನಿಷೇಧಿಸುವ ಭರವಸೆ ನೀಡಿದ್ದಾರೆ. ಕೇರಳದ ಮಲಪ್ಪುರಂನಂತೆ ಕರ್ನಾಟಕವನ್ನು ದೇಶ ವಿರೋಧಿ ಚಟುವಟಿಕೆಗಳು ನಡೆಯಲು ಬಿಜೆಪಿ ಬಿಡುವುದಿಲ್ಲ ಎಂದರು.

ಬಿಜೆಪಿ ಖಂಡನೆ

ಬೆಂಗಳೂರು: ಪಿಎಫ್‌ಐ ಜತೆಗೆ ಬಜರಂಗದಳವನ್ನೂ ನಿಷೇಧ ಮಾಡುವುದಾಗಿ ಕಾಂಗ್ರೆಸ್ ತನ್ನ ಪ್ರಣಾಳಿಕೆಯಲ್ಲಿ ಘೋಷಿಸಿರುವುದನ್ನು ಬಿಜೆಪಿ ಕಟುವಾಗಿ ಟೀಕಿಸಿದೆ.

ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನಕಾರ್ಯದರ್ಶಿ ಬಿ.ಎಲ್.ಸಂತೋಷ್ ಟ್ವೀಟ್ ಮಾಡಿ, ಕಾಂಗ್ರೆಸ್‌ನ ಹಿಂದೂ ದ್ವೇಷಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಇಲ್ಲ ಎಂದಿದ್ದಾರೆ.

ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಚಿವರಾದ ಡಾ.ಅಶ್ವತ್ಥನಾರಾಯಣ, ವಿ.ಸುನಿಲ್‌ಕುಮಾರ್, ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ, ಸಂಸದ ತೇಜಸ್ವಿಸೂರ್ಯ ಮುಂತಾದವರು ಬಜರಂಗ ದಳ ನಿಷೇಧ ಪ್ರಸ್ತಾವವನ್ನು ಖಂಡಿಸಿದ್ದಾರೆ.

‘ಹೋಲಿಕೆ ಹನುಮಂತನಿಗೆ ಅವಮಾನ’

ಬೆಂಗಳೂರು: ‘ರಾಜಧರ್ಮ ಪಾಲನೆ, ಗೌರವ, ಕರ್ತವ್ಯ, ಸೇವೆ ಮತ್ತು ತ್ಯಾಗದ ಪ್ರತೀಕವಾದ ಹನುಮಂತನನ್ನು ಒಬ್ಬ ವ್ಯಕ್ತಿ ಮತ್ತು ಅಥವಾ ಸಂಘಟನೆಗೆ ಹೋಲಿಸುವುದು ಹನುಮಂತನಿಗೆ ಮಾಡುವ ಅವಮಾನ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರು ಹನುಮ ಭಕ್ತರ ಕ್ಷಮೆ ಯಾಚಿಸಬೇಕು’ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಆಗ್ರಹಿಸಿದ್ದಾರೆ.

ಬಜರಂಗದಳ ನಿಷೇಧ ಕುರಿತಂತೆ ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆಯಲ್ಲಿರುವ ಉಲ್ಲೇಖದ ವಿರುದ್ಧ ಬಿಜೆಪಿ ನಾಯಕರು ತೀವ್ರ ವಾಗ್ದಾಳಿ ನಡೆಸಿದ ಬಳಿಕ ಟ್ವಿಟರ್‌ನಲ್ಲಿ ಪ್ರತಿಕ್ರಿಯಿಸಿರುವ ಅವರು, ‘ಮಹಾನ್ ವ್ಯಕ್ತಿಯಾದ ಹನುಮಂತನನ್ನು ಒಬ್ಬ ವ್ಯಕ್ತಿ ಅಥವಾ ಸಂಘಟನೆಗೆ ಹೋಲಿಸುವುದು ಹನುಮಂತನಿಗೆ ಮಾಡಬಹುದಾದ ದೊಡ್ಡ ಅವಮಾನ. ಮೋದಿಯವರು ಹನುಮಂತನ ಲಕ್ಷಾಂತರ ಭಕ್ತರ ಭಾವನೆಗಳಿಗೆ ಧಕ್ಕೆ ತಂದಿದ್ದಾರೆ’ ಎಂದು ದೂರಿದ್ದಾರೆ.

‘ಸ್ವಯಂ ಘೋಷಿತ ಚಾಣಕ್ಯ ಬಿ.ಎಲ್. ಸಂತೋಷ್ ಅವರ ಕಾರ್ಖಾನೆಯಲ್ಲಿ ಇಂತಹ ಸುಳ್ಳನ್ನು ಸೃಷ್ಟಿಸಲಾಗಿದೆ. ಇದರ ವಿರುದ್ಧ ಹನುಮಂತನ ಲಕ್ಷಾಂತರ ಭಕ್ತರು ಹೋರಾಟಕ್ಕೆ ಸಿದ್ಧರಾಗಿದ್ದಾರೆ’ ಎಂದು ಹೇಳಿದ್ದಾರೆ.

ಪ್ರಜಾಸತ್ತಾತ್ಮಕವಾಗಿಯೇ ಕಾಂಗ್ರೆಸ್‌ಗೆ ಉತ್ತರ: ವಿಎಚ್‌ಪಿ

ನವದೆಹಲಿ (ಪಿಟಿಐ): ಬಜರಂಗದಳವನ್ನು ನಿಷೇಧಿಸಲಾಗುವುದು ಎಂದು ಕರ್ನಾಟಕ ವಿಧಾನಸಭೆ ಚುನಾವಣೆಯ ತನ್ನ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷ ಘೋಷಣೆ ಮಾಡಿರುವುದನ್ನು ವಿಶ್ವ ಹಿಂದೂ ಪರಿಷತ್ (ವಿಎಚ್‌ಪಿ) ಖಂಡಿಸಿದೆ. ಈ ಮೂಲಕ, ಹಿಂದುತ್ವವಾದಿ ಸಂಘಟನೆಗೆ ಕಾಂಗ್ರೆಸ್ ಅಪಮಾನ ಮಾಡಿದೆ ಎಂದಿದೆ.

ಮಂಗಳವಾರ ಬಿಡುಗಡೆ ಮಾಡಿದ್ದ ಪ್ರಣಾಳಿಕೆಯಲ್ಲಿ ಕಾಂಗ್ರೆಸ್ ಪಕ್ಷವು ಸಮಾಜದಲ್ಲಿ ಶಾಂತಿ ಕದಡುತ್ತಿರುವ ಬಜರಂಗದಳ ಮತ್ತು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಅಂತಹ ಸಂಘಟನೆಗಳನ್ನು ನಿಷೇಧಿಸಲಾಗುವುದು ಎಂದು ಭರವಸೆ ನೀಡಿದೆ.

ಈ ಕುರಿತು ವಿಡಿಯೊ ಸಂದೇಶ ನೀಡಿರುವ ವಿಎಚ್‌ಪಿ ಜಂಟಿ ಪ್ರಧಾನ ಕಾರ್ಯದರ್ಶಿ ಸುರೇಂದ್ರ ಜೈನ್ ಅವರು, ‘ಕಾಂಗ್ರೆಸ್‌ನ ಈ ಭರವಸೆಯನ್ನು ಬಜರಂಗದಳವು ಸವಾಲಾಗಿ ಸ್ವೀಕರಿಸಲಿದೆ. ಪ್ರಜಾಸತ್ತಾತ್ಮಕ ಮಾರ್ಗದಲ್ಲಿಯೇ ಉತ್ತರ ನೀಡಲಿದೆ’ ಎಂದಿದ್ದಾರೆ.

‘ಬಜರಂಗದಳದ ಪ್ರತಿ ಕಾರ್ಯಕರ್ತ ದೇಶಸೇವೆಗೆ ಸಜ್ಜಾಗಿದ್ದಾನೆ. ಪಿಎಫ್‌ಐ ಚಟುವಟಿಕೆ ವಿಶ್ವಕ್ಕೆ ಗೊತ್ತಿದೆ’ ಎಂದಿದ್ದಾರೆ. ಬಜರಂಗದಳವು ವಿಎಚ್‌ಪಿಯ ಯುವ ಘಟಕವಾಗಿದೆ. ಕಾಂಗ್ರೆಸ್ ಘೋಷಣೆ ಖಂಡಿಸಿ ಮಂಗಳವಾರ ದೆಹಲಿಯಲ್ಲಿ ಕಾಂಗ್ರೆಸ್ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ಟೀಕೆಗೆ ಗುರಿಯಾದ ಜಿಲ್ಲಾಧಿಕಾರಿ ಫೇಸ್‌ಬುಕ್ ಪೋಸ್ಟ್

ಶಿಥಿಲ ಮನೆಯಲ್ಲಿ ಶತಾಯುಷಿ ಮತದಾನ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಸಿಯುವ ಸ್ಥಿತಿಯಲ್ಲಿರುವ ಮನೆಯಲ್ಲಿ 104 ವರ್ಷದ ಮಹಿಳೆಯೊಬ್ಬರು ಮಂಗಳವಾರ ಮತದಾನ ಮಾಡಿದ್ದ ಚಿತ್ರವನ್ನು ಕೊಡಗು ಜಿಲ್ಲಾಧಿಕಾರಿ ತಮ್ಮ ಫೇಸ್‌ಬುಕ್ ಖಾತೆಯಲ್ಲಿ ಹಂಚಿಕೊಂಡಿದ್ದು ಚರ್ಚೆಗೆ ಗ್ರಾಸವಾಗಿದೆ.

ಕುಸಿಯುವ ಸ್ಥಿತಿಯಲ್ಲಿರುವ ತಮ್ಮ ಮನೆಯ ಹೊರಗೆ ಕಾಳಮ್ಮ ಮತದಾನ ಮಾಡಿದ್ದರು. ಈ ಕುರಿತು ಜಿಲ್ಲಾಧಿಕಾರಿ ಅವರ ಫೇಸ್‌ಬುಕ್ ಖಾತೆಯಲ್ಲಿ ಪೋಸ್ಟ್ ಹಾಕಿದ ಕೇವಲ 5 ಗಂಟೆಯ ಅವಧಿಯಲ್ಲಿ 92ಕ್ಕೂ ಅಧಿಕ ಮಂದಿ ಕಾಮೆಂಟ್ ಮಾಡಿ ಆಡಳಿತ ವ್ಯವಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

‘ಇವರ ಮನೆಯ ಪರಿಸ್ಥಿತಿ ನೋಡಿ ಮತದಾನ ಮಾಡಿಸಲು ನಿಮಗೆ ಯಾವ ರೀತಿಯಲ್ಲಿ ಮನಸ್ಸು ಬರುತ್ತಿದೆ’ ಎಂದು ಮಹಮ್ಮದ್ ರಫಿ ಎಂಬುವರು ಹೇಳಿದರೆ, ‘ಆಕೆಯ ಮನೆ ನೋಡಿದ ಕಳ್ಳ ರಾಜಕಾರಣಿಗಳಿಗೆ ವೋಟ್ ಹಾಕುವ ಅವಶ್ಯಕತೆ ಇದೆಯಾ ಅನ್ನಿಸಿಬಿಡ್ತು’ ಶ್ವೇತಾ ಎಂಬುವರು ಕಾಮೆಂಟ್ ಮಾಡಿದ್ದಾರೆ.

‘104 ವರ್ಷ ಎಂದು ಮಹಿಳೆಯ ವಯಸ್ಸನ್ನು ಗುರುತಿಸಿರುವ ಜಿಲ್ಲಾಡಳಿತವು ಆಕೆಯ ಶಿಥಿಲಾವಸ್ಥೆಯ ಮನೆಯನ್ನು ಗುರುತಿಸಿಲ್ಲ. ಮೂಲಸೌಕರ್ಯದಿಂದ ಅವರನ್ನು ವಂಚಿಸಲಾಗಿದೆ’ ಎಂದು ಜಿಲ್ಲಾಡಳಿತವನ್ನು ಕೆಲವರು ತರಾಟೆಗೆ ತೆಗೆದುಕೊಂಡಿದ್ದಾರೆ. ಮತ್ತೆ ಕೆಲವರು ‘ಅಜ್ಜಿಗೆ ದಯವಿಟ್ಟು ಸಹಾಯ ಮಾಡಿ’ ಎಂದು ಜಿಲ್ಲಾಧಿಕಾರಿ ಅವರಲ್ಲಿ ಕೋರಿದ್ದಾರೆ.

ಜಿಲ್ಲಾಧಿಕಾರಿ ಸ್ಪಷ್ಟನೆ: ಈ ಕುರಿತು ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ, ‘ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ಮಹಿಳೆಯ ಮನೆಗೆ ತೆರಳಿದ್ದ ಅಧಿಕಾರಿಗಳ ಹೇಳಿಕೆ ಪ್ರಕಾರ ಮನೆಯ ಹಿಂಭಾಗ ಹೊಸ ಮನೆಯನ್ನು ನಿರ್ಮಿಸಲಾಗುತ್ತಿದೆ. ತಾತ್ಕಾಲಿಕವಾಗಿ ಮಹಿಳೆ ಈ ಮನೆಯಲ್ಲಿ ವಾಸವಿದ್ದಾರೆ ಎಂದು ತಿಳಿದು ಬಂದಿದೆ. ಚುನಾವಣೆ ಮುಗಿದ ತಕ್ಷಣವೇ ಈ ಕುರಿತು ಕೂಲಂಕಷವಾಗಿ ಪರಿಶೀಲಿಸಲಾಗುವುದು’ ಎಂದರು.

ಕೊಡಗು ಜಿಲ್ಲೆಯ ಕೂಡಿಗೆ ಗ್ರಾ.ಪಂ ವ್ಯಾಪ್ತಿಯಲ್ಲಿರುವ 104 ವರ್ಷದ ಕಾಳಮ್ಮ ಅವರು ಮಂಗಳವಾರ ತಮ್ಮ ಶಿಥಿಲಾವಸ್ಥೆಯ ಮನೆಯ ಮುಂದೆ ಮತದಾನ ಮಾಡಿದರು

‘ಮತಯಾಚನೆಗೆ ಬಂದರೆ ನಾಯಿ ಬಿಡ್ತೀವಿ’

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: ಬಜರಂಗದಳ ಕುರಿತ ಕಾಂಗ್ರೆಸ್ ಪ್ರಣಾಳಿಕೆ ವಿರೋಧಿಸಿ, ಮೂಡಿಗೆರೆ ತಾಲ್ಲೂಕಿನ ಬಣಕಲ್ ಹೋಬಳಿಯ ಗುಡ್ಡಹಟ್ಟಿ ಗ್ರಾಮದ ಅರುಣ್ ಪೂಜಾರಿ ಎಂಬುವರು ತಮ್ಮ ಮನೆ ಗೇಟಿನಲ್ಲಿ ‘ಇದು ಬಜರಂಗದಳದವರ ಮನೆ. ಕಾಂಗ್ರೆಸ್‌ನವರು ಮತಯಾಚಿಸಲು ಅವಕಾಶ ಇಲ್ಲ. ಒಳಗೆ ಬಂದರೆ ನಾಯಿ ಬಿಡಲಾಗುತ್ತದೆ ಎಚ್ಚರ’ ಫಲಕ ಅಳವಡಿಸಿದ್ದಾರೆ.



ಅರುಣ್ ಪೂಜಾರಿ ಅವರ ಮನೆ ಗೇಟಿನಲ್ಲಿ ಅಳವಡಿಸಿರುವ ಫಲಕ

ಬಣಕಲ್ ಹೋಬಳಿಯ ವಿಶ್ವ ಹಿಂದೂ ಪರಿಷತ್‌ನ ಕಾರ್ಯದರ್ಶಿಯೂ ಆಗಿರುವ ಅರುಣ್ ಪೂಜಾರಿ ‘ಪ್ರಜಾವಾಣಿ’ಯೊಂದಿಗೆ ಮಾತನಾಡಿ, ‘ಕಾಂಗ್ರೆಸ್‌ನವರು ಬಜರಂಗ ದಳವನ್ನು ಏಕೆ ನಿಷೇಧಿಸುತ್ತಾರೆ? ಕಾಂಗ್ರೆಸ್‌ನಲ್ಲಿ ಬಜರಂಗದಳದವರು ಇಲ್ಲವೇ? ಕಾಂಗ್ರೆಸ್ ಉದ್ದೇಶ ಏನು’ ಎಂದು ಪ್ರಶ್ನಿಸಿದರು.

‘ಕಾಂಗ್ರೆಸ್ ಪಕ್ಷಕ್ಕೆ ನಮ್ಮ ಮನೆಗೆ ಮತಯಾಚನೆಗೆ ಬರಬೇಡಿ ಎಂದು ಫಲಕ ಅಳವಡಿಸಿದ್ದೇವೆ. ಇವತ್ತು ನಾನು ಫಲಕ ಅಳವಡಿಸಿದ್ದೇನೆ, ನಾಳೆ ಇನ್ನು ಹಲವರು ಅಳವಡಿಸುತ್ತಾರೆ’ ಎಂದು ಪ್ರತಿಕ್ರಿಯಿಸಿದರು.

ಹಿಂದೂ ವಿದ್ಯಾರ್ಥಿನಿ ಜೊತೆಗಿದ್ದ ಕಾರಣಕ್ಕೆ ದಾಳಿ

ಮುಸ್ಲಿಂ ಯುವಕನ ಮೇಲೆ ಹಲ್ಲೆ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಹಿಂದೂ ಧರ್ಮದ ಯುವತಿಯೊಂದಿಗೆ ಇದ್ದ ಮುಸ್ಲಿಂ ಯುವಕನೊಬ್ಬನ ಮೇಲೆ ಇಲ್ಲಿನ ಗುಂಪೊಂದು ಮಂಗಳವಾರ ಹಲ್ಲೆ ನಡೆಸಿದೆ. ಕೃತ್ಯಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಇಲ್ಲಿನ ಮರೀಲ್ ಕಾಡುಮನೆ ನಿವಾಸಿ ಕೆ. ಇಬ್ರಾಹಿಂ ಅವರ ಪುತ್ರ ಮಹಮ್ಮದ್ ಫಾರಿಶ್ (18) ಹಲ್ಲೆಗೊಳಗಾದ ವಿದ್ಯಾರ್ಥಿ. ಹಲ್ಲೆಯಿಂದಾಗಿ ಯುವಕನ ಮೈಮೇಲೆ ಬಾಸುಂಡೆಗಳು ಎದ್ದಿವೆ.

‘ಹಲ್ಲೆಗೊಳಗಾದ ಯುವಕ ಹಾಗೂ ಆತನ ಜೊತೆಗಿದ್ದ ಯುವತಿ ಇಬ್ಬರೂ ವಿದ್ಯಾರ್ಥಿಗಳು. ಇಬ್ಬರೂ ನಗರದ ಮಾಲ್‌ವೊಂದರ ಚಿತ್ರಮಂದಿರದಲ್ಲಿ ಒಟ್ಟಿಗೆ ಸಿನಿಮಾ ವೀಕ್ಷಿಸಿದ್ದರು. ಬಳಿಕ ಜ್ಯೂಸ್ ಕುಡಿಯಲು ಜೊತೆಯಲ್ಲೇ ಹೋಗಿದ್ದರು. ಆಗ, ಅಲ್ಲಿಗೆ ಬಂದ ಯುವಕರ ಗುಂಪೊಂದು ಮಹಮ್ಮದ್ ಫಾರಿಶ್ ಮೇಲೆ ಏಕಾಏಕಿ ಹಲ್ಲೆ ನಡೆಸಿದೆ’ ಎಂದು ಮೂಲಗಳು ತಿಳಿಸಿವೆ.

‘ಹಲ್ಲೆಗೊಳದಾಗ ಯುವಕ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಹಲ್ಲೆ ನಡೆಸಿದ ಮೂವರ ಸುಳಿವು ಸಿಕ್ಕಿದೆ. ಅವರಲ್ಲಿ ಪ್ರದೀಪ್ ಎಂಬಾತನನ್ನು ಹಾಗೂ ಇನ್ನೊಬ್ಬನನ್ನು ಬಂಧಿಸಿದ್ದು, ಆತ ಬಾಲಕನೇ ಅಥವಾ ವಯಸ್ಕನೇ ಎಂಬ ಬಗ್ಗೆ ವಯಸ್ಸನ್ನು ಇನ್ನಷ್ಟೇ ಖಾತರಿಪಡಿಸಿಕೊಳ್ಳಬೇಕಿದೆ. ಮೂರನೇ ಆರೋಪಿಯ ಸುಳಿವು ಸಿಕ್ಕಿದ್ದು, ಶೀಘ್ರವೇ ಬಂಧಿಸಲಿದ್ದೇವೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಕ್ರಮ್ ಅಮಟೆ ‘ಪ್ರಜಾವಾಣಿ’ಗೆ ತಿಳಿಸಿದರು.

‘ಹಲ್ಲೆ ಬಗ್ಗೆ ಮಹಮ್ಮದ್ ಫಾರಿಶ್ ದೂರು ನೀಡಿದ್ದು ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಯುವಕ– ಯುವತಿ ಜೊತೆಯಲ್ಲಿ ಸಿನಿಮಾ ವೀಕ್ಷಿಸಲು ತೆರಳಿದ ಬಗ್ಗೆ ದೂರಿನಲ್ಲಿ ಉಲ್ಲೇಖವಿಲ್ಲ. ಐದಾರು ಮಂದಿಯ ಗುಂಪೊಂದು ಬಸ್ ನಿಲ್ದಾಣದ ಬಳಿ ಹಲ್ಲೆ ನಡೆಸಿದೆ ಎಂದು ಮಾತ್ರ ಉಲ್ಲೇಖಿಸಿದ್ದಾರೆ. ಆರೋಪಿಗಳ ಪತ್ತೆಗೆ ಕ್ರಮ ವಹಿಸಿದ್ದೇವೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ. ಪೊಲೀಸ್ ಇನ್‌ಸ್ಪೆಕ್ಟರ್ ಸುನಿಲ್ ಕುಮಾರ್ ಹಾಗೂ ಪಿಎಸ್‌ಐ ಶ್ರೀಕಾಂತ್ ರಾಥೋಡ್ ನೇತೃತ್ವದಲ್ಲಿ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಖಂಡನೆ: ‘ಈ ಘಟನೆಯು ಮತೀಯ ಗೂಂಡಾಗಿರಿ’ ಎಂದು ಎಸ್‌ಡಿಪಿಐ ಹಾಗೂ ಮುಸ್ಲಿಂ ಯುವಜನ ಪರಿಷತ್ ಖಂಡಿಸಿವೆ.

ಹಲ್ಲೆಗೊಳಗಾದ ಯುವಕನ ಮೈಯಲ್ಲಿ ಬಾಸುಂಡೆಗಳು ಎದ್ದಿರುವುದು

ಬಿಜೆಪಿ–ಹಿಂದುತ್ವವಾದಿಗಳ ಸಮರ; ಕೈ ಕಸರತ್ತು

● ಗಣೇಶ ಚಂದನಶಿವ

ಪುತ್ತೂರು ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

ಪುತ್ತೂರು (ದಕ್ಷಿಣ ಕನ್ನಡ): ಬಿಜೆಪಿ ಟಿಕೆಟ್ ಸಿಗದ ಕಾರಣಕ್ಕೆ ಅರುಣಕುಮಾರ್ ಪುತ್ತಿಲ ಬಂಡಾಯ ಸಾರಿದ್ದರಿಂದ ಪುತ್ತೂರು ಕ್ಷೇತ್ರದ ಕಣ ರಂಗೇರಿದೆ. ಹಿಂದುತ್ವವಾದಿ ಯುವಜನರು ಹಾಗೂ ಸಂಘ ಪರಿವಾರದ ಹಿರಿಯರ ನಡುವಿನ ಸಂಘರ್ಷವಾಗಿಯೂ ಮಾರ್ಪಟ್ಟಿದೆ.

ಶಾಸಕ ಸಂಜೀವ ಮಠಂದೂರು ಬದಲು, ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಗೌಡ (ಒಕ್ಕಲಿಗ ಗೌಡ) ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಪ್ರಖರ ಹಿಂದುತ್ವವಾದಿ ಅರುಣಕುಮಾರ್ ಪುತ್ತಿಲ (ಶಿವಳ್ಳಿ ಬ್ರಾಹ್ಮಣ) ಪಕ್ಷೇತರ ಅಭ್ಯರ್ಥಿ. ಕೆಲ ತಿಂಗಳ ಹಿಂದಷ್ಟೇ ಬಿಜೆಪಿಯಿಂದ ಕಾಂಗ್ರೆಸ್ ಪಕ್ಷವನ್ನು ಸೇರಿರುವ ಅಶೋಕ ಕುಮಾರ್ ರೈ (ಬಂಟ) ಕಾಂಗ್ರೆಸ್ ಹುರಿಯಾಳು.

ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಸಂದರ್ಭದಲ್ಲಿ ಬಿಜೆಪಿಯ ಜನಪ್ರತಿನಿಧಿಗಳು ಸರಿಯಾಗಿ ಸ್ಪಂದಿಸಲಿಲ್ಲ ಎಂದು ಹಿಂದುತ್ವವಾದಿ ಕಾರ್ಯಕರ್ತರು ಆಕ್ರೋಶಗೊಂಡಿದ್ದರು. ಇದು ಇನ್ನೂ ತಣಿದಿಲ್ಲ.

ಪ್ರವೀಣ್ ಮನೆ ಇರುವುದು ಪಕ್ಕದ ಸುಳ್ಯ ಕ್ಷೇತ್ರದ ನೆಟ್ಟಾರುನಲ್ಲಿ. ಅವರ ಕುಟುಂಬದವರಿಗೆ ನೆಟ್ಟಾರುನಲ್ಲಿ ಸುಸಜ್ಜಿತ ಮನೆ ನಿರ್ಮಿಸಿಕೊಟ್ಟಿರುವ ಬಿಜೆಪಿ, 'ನಾವು ಕಾರ್ಯಕರ್ತರ ಜೊತೆಗಿದ್ದೇವೆ' ಎಂದು ಒತ್ತಿ ಹೇಳುತ್ತಿದೆ. ಜೆ.ಪಿ. ನಡ್ಡಾ ಸಹ 'ಪ್ರವೀಣ್' ಹೊಸ ಮನೆಗೆ ಭೇಟಿ ನೀಡಿದ್ದಾರೆ.

ಪ್ರವೀಣ್ ಹತ್ಯೆಯ ಪ್ರಮುಖ ಆರೋಪಿ, ಸದ್ಯ ಜೈಲಿನಲ್ಲಿರುವ ಇಸ್ಮಾಯಿಲ್ ಶಾಫಿ ಕೆ. ಇಲ್ಲಿ ಎಸ್‌ಡಿಪಿಐ ಅಭ್ಯರ್ಥಿ. ಹೀಗಾಗಿ ನೆಟ್ಟಾರು ಹತ್ಯೆ ಇಲ್ಲಿ ಚುನಾವಣೆಯ ವಿಷಯವೂ ಆಗಿದೆ. ಪ್ರವೀಣ್ ನೆಟ್ಟಾರು ಸ್ಮರಣಾರ್ಥ ಯುವಕರಿಗೆ ಸ್ವ ಉದ್ಯೋಗ ತರಬೇತಿ ಕೇಂದ್ರ ಸ್ಥಾಪಿಸುವುದಾಗಿ ಪುತ್ತಿಲ ತಮ್ಮ ಪ್ರಣಾಳಿಕೆಯಲ್ಲಿ ಉಲ್ಲೇಖಿಸಿ ಹಿಂದುತ್ವವಾದಿ ಕಾರ್ಯಕರ್ತರಿಗೆ ಇನ್ನಷ್ಟು ಹತ್ತಿರವಾಗಲು ಯತ್ನಿಸಿದ್ದಾರೆ. ಈ ಹಿಂದುತ್ವವಾದಿ ಕಾರ್ಯಕರ್ತರು ಹಾಗೂ ಸಂಸದ ನಳಿನ್ ಕುಮಾರ್ ಕಟೀಲ್ ಅವರನ್ನು ವಿರೋಧಿಸುವ ಬಣ ಪುತ್ತಿಲ ಬೆನ್ನಿಗೆ ನಿಂತಿದೆ. ಅವರು ಹೋದಲ್ಲೆಲ್ಲ ದೊಡ್ಡ ಕಾರ್ಯಕರ್ತರ ಪಡೆಯೇ ಸೇರುತ್ತಿದೆ. ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ನಳಿನ್ ಅವರ ತವರು ಜಿಲ್ಲೆ, ಅದರಲ್ಲೂ ಅವರ ಊರಿನ (ಕುಂಜಾಡಿ) ಪಕ್ಕದ ಕ್ಷೇತ್ರದಲ್ಲಿಯ ಈ ಬಂಡಾಯ ಬಿಜೆಪಿ ಪಾಲಿಗೆ ಸೆರಗಿನ ಕೆಂಡದಂತಾಗಿದೆ.

ಸರ್ಕಾರಿ ವೈದ್ಯಕೀಯ ಕಾಲೇಜು ಸ್ಥಾಪನೆ, ಪ್ರತ್ಯೇಕ ತಾಲ್ಲೂಕು ಕೇಂದ್ರವಾಗಿ ವಿಟ್ಲ ರಚನೆ ಸೇರಿದಂತೆ ಕ್ಷೇತ್ರದ ಬೇಡಿಕೆಗಳು ಹಾಗೂ ಸಮಸ್ಯೆಗಳು ನೇಪಥ್ಯಕ್ಕೆ ಸರಿದು, ಮತೀಯವಾದವೇ ಪ್ರಧಾನ ಚರ್ಚಾ ವಿಷಯವಾಗಿದೆ.

ಪುತ್ತೂರಿನಲ್ಲಿ ಮಾತಿಗೆ ಸಿಕ್ಕ ಕೆಲ ಬಿಜೆಪಿ ಕಾರ್ಯಕರ್ತರು, 'ಬಿಜೆಪಿ ಬಗ್ಗೆ ಬೇಸರವಿಲ್ಲ. ಅಭ್ಯರ್ಥಿ ಆಯ್ಕೆ ಬಗ್ಗೆ ಅಸಮಾಧಾನ ಇದೆ. ಆಶಾ ಅವರಿಗೆ ವಯಸ್ಸಾಗಿದೆ. ಪಕ್ಕದ ಸುಳ್ಯ ಕ್ಷೇತ್ರದವರು. ನಮಗೆ ಸುಲಭವಾಗಿ ಸಂಪರ್ಕಕ್ಕೆ ಸಿಗುವ, ಕಷ್ಟ–ಸುಖದಲ್ಲಿ ನಮ್ಮೊಟ್ಟಿಗಿರುವ ಯುವಕರೊಬ್ಬರಿಗೆ ಟಿಕೆಟ್ ನೀಡಬೇಕಿತ್ತು' ಎನ್ನುತ್ತಾರೆ. 'ನಿಮ್ಮ ಮತ ಯಾರಿಗೆ' ಎಂದು ಪ್ರಶ್ನಿಸಿದರೆ, 'ಪುತ್ತಿಲ ಬಗ್ಗೆ ಅಭಿಮಾನ ಇದೆ. ನಮ್ಮ ಮತ ಬಿಜೆಪಿಗೇ' ಎನ್ನುತ್ತಾರೆ. 'ಬಿಜೆಪಿಗಿಂತ ಮಿಗಿಲಾದ ಹಿಂದುತ್ವ ಇಲ್ಲ' ಎನ್ನುತ್ತ ಕಲ್ಲಡ್ಕ ಪ್ರಭಾಕರ ಭಟ್ ಸೇರಿದಂತೆ ಸಂಘ ಪರಿವಾರದ ಮುಖಂಡರೂ ಕ್ಷೇತ್ರ ಸುತ್ತುತ್ತಾ ಕಾರ್ಯಕರ್ತರ ಮನವೊಲಿಕೆಯಲ್ಲಿ ತೊಡಗಿದ್ದಾರೆ.

ಆರ್ಲಪದವು ಗ್ರಾಮದಲ್ಲಿ ಮಾತಿಗೆ ಸಿಕ್ಕ ಪಿ.ಕೆ.ಇಸ್ಮಾಯಿಲ್, 'ಬರೀ ಜಾತಿ–ಧರ್ಮ ಎನ್ನುತ್ತ ಕೂತರೆ ಬದುಕು ಕಟ್ಟಿಕೊಳ್ಳಲು ಆಗುತ್ತದೆಯೇ? ನಮಗೆ ಸಂಘರ್ಷದ ಬದಲು ಸೌಹಾರ್ದ ಬೇಕು. ನಮ್ಮ ಮತ ಕಾಂಗ್ರೆಸ್‌ಗೆ' ಎನ್ನುತ್ತಾರೆ. ಎಸ್‌ಡಿಪಿಐ ವಿರುದ್ಧವೂ ಹರಿಹಾಯುತ್ತಾರೆ.

ಡಿ.ವಿ.ಸದಾನಂದಗೌಡ ನಂತರ ಬಿಜೆಪಿ ಹಾಲಿ ಶಾಸಕರಿಗೆ ಮತ್ತೆ ಟಿಕೆಟ್ ನೀಡಿಲ್ಲ. ಶಕುಂತಳಾ ಶೆಟ್ಟಿ, ಮಲ್ಲಿಕಾ ಪ್ರಸಾದ್, ಸಂಜೀವ ಮಠಂದೂರು ಈ ಪಟ್ಟಿಯಲ್ಲಿದ್ದಾರೆ. ಶಾಸಕಿಯಾಗಿದ್ದ ಶಕುಂತಳಾ ಶೆಟ್ಟಿ ಅವರಿಗೆ 2008ರಲ್ಲಿ ಬಿಜೆಪಿ ಟಿಕೆಟ್ ನಿರಾಕರಿಸಿತ್ತು. ಆಗ ಅವರು ಸ್ವಾಭಿಮಾನಿ ವೇದಿಕೆ ರಚಿಸಿಕೊಂಡು ಪಕ್ಷೇತರರಾಗಿ ಸ್ಪರ್ಧಿಸಿ, 25,171 (ಶೇ 20.4ರಷ್ಟು) ಮತ ಪಡೆದಿದ್ದರು. ಆದರೂ, ಬಿಜೆಪಿಯ ಮಲ್ಲಿಕಾ ಪ್ರಸಾದ್ (46,605 ಮತ: ಶೇ 37.77ರಷ್ಟು) ಗೆದ್ದಿದ್ದರು.

ಗೌಡ (ಒಕ್ಕಲಿಗ), ಬಂಟ, ಅಲ್ಪಸಂಖ್ಯಾತರ ಮತಗಳ ಪ್ರಾಬಲ್ಯದ ಈ ಕ್ಷೇತ್ರದಲ್ಲಿಯ ಬಿಜೆಪಿ ಬಂಡಾಯ ಮೇಲ್ನೋಟಕ್ಕೆ ಕಾಂಗ್ರೆಸ್‌ಗೆ ಬಲ ತಂದಂತೆ ತೋರುತ್ತಿದೆ. ಉಪ್ಪಿನಂಗಡಿ ಭಾಗದಲ್ಲಿ ಹೆಚ್ಚು ಪ್ರಭಾವ ಹೊಂದಿರುವ ಅಶೋಕ ಕುಮಾರ್ ರೈ ಸಾಕಷ್ಟು 'ಶ್ರಮ' ಹಾಕುತ್ತಿದ್ದಾರೆ.

ಶಕುಂತಳಾ ಶೆಟ್ಟಿ ಅವರು ಅಲ್ಪಸಂಖ್ಯಾತ ಮತಗಳನ್ನೂ ಸೆಳೆದಿದ್ದರು. ಆದರೆ, ಈಗ ಪುತ್ತಿಲ ಅವರಿಗೆ ಅಲ್ಪಸಂಖ್ಯಾತ ಮತಗಳು ಸಿಗದು, ಅಲ್ಪಸಂಖ್ಯಾತ ಮತಗಳ ಒಟ್ಟುಗೂಡುವಿಕೆ, ಅಭ್ಯರ್ಥಿಯ ಸ್ವಜಾತಿಯ ಮತ ಹಾಗೂ ಮತ ಸೆಳೆಯುವ 'ಸಾಮರ್ಥ್ಯ'. ಈ ಎಲ್ಲ ಅಂಶಗಳು ತನಗೆ ಲಾಭ ತಂದುಕೊಡಲಿದೆ ಎಂಬುದು ಕಾಂಗ್ರೆಸ್‌ನ ಲೆಕ್ಕಾಚಾರ.

ಬಿಜೆಪಿ ಪ್ರಾಬಲ್ಯದ ಈ ಕ್ಷೇತ್ರದಲ್ಲಿ 1994ರಿಂದ 2018ರ ನಡುವಿನ ಆರು ಚುನಾವಣೆಗಳಲ್ಲಿ ಕಾಂಗ್ರೆಸ್ ಗೆದ್ದಿದ್ದು ಒಮ್ಮೆ (2013) ಮಾತ್ರ. ಪಕ್ಷದ ಬೇರು ಗಟ್ಟಿಯಾಗಿರುವುದರಿಂದ ಬಿಜೆಪಿ ಗೆಲುವು ಖಚಿತ ಎಂದು ಕ್ಷೇತ್ರದ ರಾಜಕೀಯ ವಿದ್ಯಮಾನ ಬಲ್ಲ ಹಿರಿಯರೊಬ್ಬರು ಹೇಳುತ್ತಾರೆ.

ಮಹಿಳೆಯರಿಗೂ ಆದ್ಯತೆ: ಶಕುಂತಳಾ ಶೆಟ್ಟಿ 2004ರಲ್ಲಿ ಬಿಜೆಪಿಯಿಂದ, 2013ರಲ್ಲಿ ಕಾಂಗ್ರೆಸ್‌ನಿಂದ ಹಾಗೂ ಮಲ್ಲಿಕಾ ಪ್ರಸಾದ್ 2008ರಲ್ಲಿ ಬಿಜೆಪಿಯಿಂದ ಗೆದ್ದಿದ್ದರು. ಜಿಲ್ಲೆಯಲ್ಲಿ ನಿರಂತರವಾಗಿ ಮೂರು ಬಾರಿ ಮಹಿಳೆಯರನ್ನು ಗೆಲ್ಲಿಸಿದ ಕ್ಷೇತ್ರ ಇದು.

ಇಲ್ಲಿ ಇಲ್ಲದ ಅದೃಷ್ಟ ಬೇರೆಡೆ ಖುಲಾಯಿಸಿತು!: ಈ ಕ್ಷೇತ್ರದ ಶಾಸಕರು ಈವರೆಗೂ ಸಚಿವರಾಗಿಲ್ಲ. ಆದರೆ, ವಲಸೆ ರಾಜಕಾರಣಿಗಳಿಗೆ ಅದೃಷ್ಟ ಖುಲಾಯಿಸಿದೆ. ಈ ಕ್ಷೇತ್ರವನ್ನು ಎರಡು ಬಾರಿ (1985,1989) ಪ್ರತಿನಿಧಿಸಿದ್ದ ಕಾಂಗ್ರೆಸ್‌ನ ವಿನಯಕುಮಾರ್ ಸೊರಕೆ, ಉಡುಪಿ ಜಿಲ್ಲೆಗೆ ವಲಸೆ ಹೋಗಿ ಅಲ್ಲಿಂದ ಒಮ್ಮೆ ಸಂಸತ್ತಿಗೆ ಆಯ್ಕೆಯಾಗಿದ್ದರು. ಉಡುಪಿ ಜಿಲ್ಲೆಯ ಕಾಪು ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿ, ಸಚಿವರೂ ಆಗಿದ್ದರು. ಈ ಬಾರಿಯೂ ಅವರು ಕಾಪು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ. ಬಿಜೆಪಿಯಿಂದ ಎರಡು ಬಾರಿ ಗೆದ್ದಿದ್ದ ಡಿ.ವಿ. ಸದಾನಂದಗೌಡ, ಮಂಗಳೂರು, ಉಡುಪಿ–ಚಿಕ್ಕಮಗಳೂರು ಕ್ಷೇತ್ರದಿಂದ ತಲಾ ಒಂದು ಅವಧಿಗೆ ಸಂಸದರಾಗಿದ್ದರು. ಬೆಂಗಳೂರು ಉತ್ತರ ಕ್ಷೇತ್ರದಿಂದಲೂ ಸಂಸತ್ತಿಗೆ ಆಯ್ಕೆಯಾಗಿದ್ದಾರೆ. ಮುಖ್ಯಮಂತ್ರಿ, ಕೇಂದ್ರ ಸಚಿವರೂ ಆಗಿದ್ದರು.

ಆಶಾ ತಿಮ್ಮಪ್ಪ ಗೌಡ

ಅರುಣಕುಮಾರ್ ಪುತ್ತಿಲ

ಅಶೋಕ್ ಕುಮಾರ್ ರೈ

2,11,425 ಒಟ್ಟು ಮತದಾರರು

1,04,363 ಪುರುಷರು

1,07,059 ಮಹಿಳೆಯರು

3 ಲೈಂಗಿಕ ಅಲ್ಪಸಂಖ್ಯಾತರು

2013ರ ಚುನಾವಣೆ

ಅಭ್ಯರ್ಥಿ	ಪಕ್ಷ	ಪಡೆದ ಮತ
ಶಕುಂತಳಾ ಶೆಟ್ಟಿ	ಕಾಂಗ್ರೆಸ್	66,345
ಸಂಜೀವ ಮಠಂದೂರು	ಬಿಜೆಪಿ	62,056
ದಿನೇಶ್ ಬಿಎನ್	ಜೆಡಿಎಸ್	6,593
	ಗೆಲುವಿನ ಅಂತರ	4,289

2018ರ ಚುನಾವಣೆ

ಸಂಜೀವ ಮಠಂದೂರು	ಬಿಜೆಪಿ	90,073
ಶಕುಂತಳಾ ಶೆಟ್ಟಿ	ಕಾಂಗ್ರೆಸ್	70,596
ಐ.ಕೆ. ಕೈಲಾಸ ಗೌಡ	ಜೆಡಿಎಸ್	1,424
	ಗೆಲುವಿನ ಅಂತರ	19,477

ತೀರ್ಥಹಳ್ಳಿಯಲ್ಲಿ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ರಾಹುಲ್ ಗಾಂಧಿ ಅವರು ನಟ ಶಿವರಾಜ್ ಕುಮಾರ್ ಅವರ ಕುಶಲೋಪರಿ ವಿಚಾರಿಸಿದರು. ಕೆ.ಸಿ.ವೇಣುಗೋಪಾಲ್, ಎಂ.ಆರ್ ಮಂಜುನಾಥ್‌ಗೌಡ, ಗೀತಾ ಶಿವರಾಜ್‌ಕುಮಾರ್, ಮಧು ಬಂಗಾರಪ್ಪ ಇದ್ದರು

ರಾಹುಲ್ ಗಾಂಧಿ ಜೊತೆ ವೇದಿಕೆ ಹಂಚಿಕೊಂಡ ಶಿವರಾಜ್‌ಕುಮಾರ್

ಪ್ರಜಾವಾಣಿ ವಾರ್ತೆ

ತೀರ್ಥಹಳ್ಳಿ (ಶಿವಮೊಗ್ಗ ಜಿಲ್ಲೆ): ಪಟ್ಟಣದ ಬಾಳೇಬೈಲಿನಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಸಮಾವೇಶದಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಸಿನಿಮಾ ನಟ ಶಿವರಾಜ್‌ಕುಮಾರ್ ವೇದಿಕೆ ಹಂಚಿಕೊಂಡರು.

ಈ ವೇಳೆ ಮಾತನಾಡಿದ ಶಿವರಾಜ್‌ಕುಮಾರ್, 'ನಾನು ಸಹ ರಾಹುಲ್ ಗಾಂಧಿ ಅವರ ಅಭಿಮಾನಿ. ಅವರನ್ನು ನೋಡಬೇಕು ಎಂಬ ಆಸೆ, ಪ್ರೀತಿಯಿಂದ ಇಲ್ಲಿಗೆ ಬಂದಿದ್ದೇನೆ. ರಾಹುಲ್ ಗಾಂಧಿ ಒಳ್ಳೆಯ ಉದ್ದೇಶಕ್ಕಾಗಿ ಭಾರತ್ ಜೋಡೊ ಯಾತ್ರೆ ಮಾಡಿದ್ದು, ನನಗೆ ಅತ್ಯಂತ ಸ್ಫೂರ್ತಿದಾಯಕವಾಗಿತ್ತು' ಎಂದು ಹೇಳಿದರು.

'ಕಾಂಗ್ರೆಸ್ ನಾಯಕ ಎಸ್. ಬಂಗಾರಪ್ಪ ಬಡವರು, ಹಿಂದುಳಿದ ವರ್ಗಗಳ ನಿಜವಾದ ನಾಯಕ ಆಗಿದ್ದರು. ಅವರನ್ನು ನಾನು ಸದಾ ಕಾಲ ನೆನಪಿಟ್ಟುಕೊಂಡಿದ್ದೇನೆ. ಅವರ ಕುಟುಂಬ ಕೂಡ ಇಲ್ಲಿಗೆ ಬಂದಿದ್ದು ನನಗೆ ಖುಷಿಯಾಗಿದೆ. ನಿಮ್ಮೆಲ್ಲರಿಗೂ ಅನಂತ ಧನ್ಯವಾದ' ಎಂದು ರಾಹುಲ್ ಗಾಂಧಿ ಹೇಳಿದರು.

ವೇದಿಕೆಯಲ್ಲಿ ಗೀತಾ ಶಿವರಾಜ್‌ಕುಮಾರ್, ಎಐಸಿಸಿ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ವೀಕ್ಷಕರಾದ ಮಯೂರ್ ಜೈಕುಮಾರ್, ಕೆಪಿಸಿಸಿ ರಾಜ್ಯ ಹಿಂದುಳಿದ ವರ್ಗಗಳ ಅಧ್ಯಕ್ಷ ಮಧು ಬಂಗಾರಪ್ಪ, ಕೆಪಿಸಿಸಿ ಸಹಕಾರ ವಿಭಾಗದ ಸಂಚಾಲಕ ಆರ್.ಎಂ. ಮಂಜುನಾಥ ಗೌಡ ಇದ್ದರು.

ಚಿತ್ರದುರ್ಗ: ಕಾಂಗ್ರೆಸ್–ಜೆಡಿಎಸ್ ವಿರುದ್ಧ ಪ್ರಧಾನಿ ವಾಗ್ದಾಳಿ

ಉಗ್ರರನ್ನು ಬೆಂಬಲಿಸುವ ಪ್ರತಿಪಕ್ಷಗಳು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಉಗ್ರರ ನಿಗ್ರಹಕ್ಕೆ ಬಿಜೆಪಿ ಪ್ರಯತ್ನಿಸುತ್ತಿದ್ದರೆ, ಕಾಂಗ್ರೆಸ್ ಮತ್ತು ಜೆಡಿಎಸ್ ಆತಂಕವಾದದ ತುಷ್ಟೀಕರಣ ಮಾಡುತ್ತಿವೆ. ಅಭಿವೃದ್ಧಿಯಲ್ಲಿ ರಾಜ್ಯ ಮೊದಲ ಸ್ಥಾನಕ್ಕೆ ಏರಲು ಉಗ್ರವಾದ ಮಟ್ಟಹಾಕಬೇಕಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಮಂಗಳವಾರ ಇಲ್ಲಿ ವಾಗ್ದಾಳಿ ನಡೆಸಿದರು.

ಇಲ್ಲಿ ದಾವಣಗೆರೆ ಹಾಗೂ ಚಿತ್ರದುರ್ಗ ಜಿಲ್ಲೆಗಳ ಹತ್ತು ವಿಧಾನಸಭಾ ಕ್ಷೇತ್ರಗಳ ಚುನಾವಣಾ ಪ್ರಚಾರ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳ ವಿರುದ್ಧ ಹರಿಹಾಯ್ದರು.

'ದೆಹಲಿಯಲ್ಲಿ ಎನ್‌ಕೌಂಟರ್‌ನಲ್ಲಿ ಉಗ್ರರು ಮೃತಪಟ್ಟಾಗ ಕಾಂಗ್ರೆಸ್ ನಾಯಕರು ಕಣ್ಣೀರು ಹಾಕಿದ್ದರು. ಸರ್ಜಿಕಲ್ ಸ್ಟ್ರೈಕ್ ನಡೆಸಿದಾಗ ಸೈನಿಕರು, ದೇಶಕ್ಕೆ ಅಪಮಾನ ಆಗುವಂತೆ ಕಾಂಗ್ರೆಸ್ ನಡೆದುಕೊಂಡಿತು. ಆತಂಕವಾದದ ತುಷ್ಟೀಕರಣ ಮಾಡುವ ಕಾಂಗ್ರೆಸ್–ಜೆಡಿಎಸ್ ದೇಶಕ್ಕೆ ಮಾರಕ. ಈ ಪಕ್ಷಗಳ ಬಗ್ಗೆ ಜನರು ಜಾಗರೂಕರಾಗಿ ಇರಬೇಕು' ಎಂದರು.

'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ನಡೆಯುತ್ತಿರುವ ಮೊದಲ ಚುನಾವಣೆ ಇದಾಗಿದೆ. ಅಭಿವೃದ್ಧಿಯಲ್ಲಿ ಕರ್ನಾಟಕವನ್ನು ದೇಶದ ಮೊದಲ ರಾಜ್ಯವಾಗಿ ರೂಪಿಸುವ ಸಂಕಲ್ಪ ಮಾಡಬೇಕಿದೆ. ಭ್ರಷ್ಟಾಚಾರ, ಕುಟುಂಬ ರಾಜಕಾರಣ ಪೋಷಿಸುವ ಪಕ್ಷಗಳಿಂದ ಅಭಿವೃದ್ಧಿ ಅಸಾಧ್ಯ' ಎಂದು ಅವರು ಪ್ರತಿಪಾದಿಸಿದರು.

'ಇಡೀ ದೇಶದಲ್ಲಿ ಕಾಂಗ್ರೆಸ್ ಸಮಯ (ವ್ಯಾರಂಟಿ) ಮುಗಿದಿದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವ ಗ್ಯಾರಂಟಿ ಇಲ್ಲವಾಗಿದೆ. ಸುಳ್ಳು ಗ್ಯಾರಂಟಿಗಳನ್ನು ನೀಡಿ ಮತದಾರರನ್ನು ಸೆಳೆಯುವ ಪ್ರಯತ್ನ ಮಾಡಲಾಗುತ್ತಿದೆ' ಎಂದು ಟೀಕಿಸಿದರು.

'ಖರ್ಗೆ ಬೈಗುಳಕ್ಕೆ ದೇಶ ಹೈರಾಣ' (ಸಿಂಧನೂರು ವರದಿ, ರಾಯಚೂರು): 'ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ವರಿಷ್ಠರ ಮೆಚ್ಚಿಸಲು ನನಗೆ ವಿಷಸರ್ಪ ಎಂದರು. ಲಾಯಕ್ ತಂದೆಯ ಲಾಯಕ್ ಪುತ್ರ ಅದನ್ನೇ ಮುಂದುವರಿಸಿ ಹೇಳಿಕೆ ನೀಡಿದರು' ಎಂದು ಪ್ರಧಾನಿ ಮೋದಿ ವಾಗ್ದಾಳಿ ನಡೆಸಿದರು.

ಇಲ್ಲಿ ಪಕ್ಷದ ಪ್ರಚಾರ ಸಭೆಯಲ್ಲಿ ಅವರು, 'ಕಾಂಗ್ರೆಸ್ ನಾಯಕರ ಅಹಂಕಾರದ ಮಾತು ಕೇಳಿ, ನಾನಷ್ಟೇ ಅಲ್ಲ, ದೇಶದ ಜನರು ಹೈರಾಣಾಗಿದ್ದಾರೆ. ಕರ್ನಾಟಕದ ಮಾನ ಮರ್ಯಾದೆಗೆ ಕಾಂಗ್ರೆಸ್ ನಾಯಕರು ಧಕ್ಕೆ ತಂದಿದ್ದಾರೆ' ಎಂದರು.

ರೋಡ್ ಶೋ (ಕಲಬುರಗಿ ವರದಿ): ಪ್ರಧಾನಿ ಮೋದಿ ಮಂಗಳವಾರ ಇಲ್ಲಿ ಪಕ್ಷದ ಅಭ್ಯರ್ಥಿ ಪರ ಭರ್ಜರಿ ರೋಡ್ ಶೋ ನಡೆಸಿದರು. ಸುಮಾರು 5.5 ಕಿ.ಮೀ. ಸಾಗಿದ್ದು, ರಸ್ತೆಯ ಇಕ್ಕೆಲಗಳಲ್ಲಿ ನಿಂತು ಜನ ಸ್ವಾಗತಿಸಿದರು.

ಮೋದಿ ಅವರನ್ನು ನೋಡಲು ಗಂಟೆಗೂ ಹೆಚ್ಚು ಸಮಯದಿಂದ ಕಾಯುತ್ತಿದ್ದ ಜನರು, ತೆರೆದ ವಾಹನದಲ್ಲಿ ಪ್ರಧಾನಿ ಬರುತ್ತಿದ್ದಂತೆ 'ಮೋದಿ ಮೋದಿ' ಎಂದು ಜಯಘೋಷ ಹಾಕಿದರು. ಹೂಮಳೆ ಸುರಿದರು. ವಾಹನಕ್ಕೆ ಪರ್ಯಾಯವಾಗಿ ರಸ್ತೆಯ ಮತ್ತೊಂದು ಬದಿಯಲ್ಲಿ ಸಂಭ್ರಮದಿಂದ ಓಡಿದರು. ರೋಡ್ ಶೋದಲ್ಲಿ ಮೋದಿ ಅವರ ಜೊತೆ ಕೇಂದ್ರ ಸಚಿವ ಭಗವಂತ ಖೂಬಾ ಮತ್ತು ಸಂಸದ ಡಾ. ಉಮೇಶ ಜಾಧವ ಇದ್ದರು.

ಚಿತ್ರದುರ್ಗದಲ್ಲಿ ನಡೆದ ಚುನಾವಣಾ ಪ್ರಚಾರ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ತಮಟೆ ಬಾರಿಸುವ ಮೂಲಕ ಎರಡನೇ ಸುತ್ತಿನ ಮತಯಾಚನೆಗೆ ಮಂಗಳವಾರ ಚಾಲನೆ ನೀಡಿದರು. ಸಂಸದ ಜಿ.ಎಂ.ಸಿದ್ದೇಶ್ವರ, ಕೇಂದ್ರ ಸಚಿವ ಎ.ನಾರಾಯಣಸ್ವಾಮಿ, ಮೊಳಕಾಲ್ಮುರು ಕ್ಷೇತ್ರದ ಅಭ್ಯರ್ಥಿ ಎಸ್‌.ತಿಪ್ಪೇಸ್ವಾಮಿ ಇದ್ದರು.

ವರುಣದಲ್ಲಿ ಅಮಿತ್ ಶಾ ಶಕ್ತಿ ಪ್ರದರ್ಶನ

ಮೈಸೂರು: ವರುಣ ಕ್ಷೇತ್ರದಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಂಗಳವಾರ ಅಬ್ಬರದ ಪ್ರಚಾರ ನಡೆಸಿ ಕಾಂಗ್ರೆಸ್ ವಿರುದ್ಧ ಶಕ್ತಿ ಪ್ರದರ್ಶಿಸಿದರು. 'ವಿ.ಸೋಮಣ್ಣ ಅವರನ್ನು ಗೆಲ್ಲಿಸಿದರೆ ದೊಡ್ಡ ವ್ಯಕ್ತಿಯಾಗಿ ಮಾಡಲಿದ್ದೇವೆ' ಎಂದು ಭರವಸೆ ನೀಡಿ ಸಂಚಲನ ಮೂಡಿಸಿದರು.

ನಂಜನಗೂಡು ತಾಲ್ಲೂಕು ಹೊಸಕೋಟೆಯಲ್ಲಿ ನಡೆದ ಸಭೆಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ಜೊತೆ ಆಗಮಿಸಿದ ಅವರು, ಭಾಷಣದುದ್ದಕ್ಕೂ ಕಾಂಗ್ರೆಸ್ ಹಾಗೂ ಸಿದ್ದರಾಮಯ್ಯ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದರು.

'ರಾಜ್ಯದ ಮಟ್ಟಿಗೆ ವಿಧಾನಸಭೆ ಚುನಾವಣೆ ಮಹತ್ವದ್ದೇ. ಆದರೆ, ವರುಣ ಕ್ಷೇತ್ರದ ಚುನಾವಣೆ ಅದಕ್ಕಿಂತಲೂ ಮಹತ್ವದ್ದು. ನಮ್ಮ ಅಭ್ಯರ್ಥಿ ವಿ.ಸೋಮಣ್ಣ ಅವರನ್ನು ಚುನಾಯಿಸಿದರೆ, ಪಕ್ಷವು ಅವರನ್ನು ಬಹುದೊಡ್ಡ ವ್ಯಕ್ತಿಯಾಗಿ ಮಾಡಿ ನಿಮ್ಮ ಮುಂದೆ ನಿಲ್ಲಿಸಲಿದೆ' ಎಂದು ವಾಗ್ದಾನ ನೀಡಿದರು.

'ಪ್ರಧಾನಿ ನರೇಂದ್ರ ಮೋದಿ ಕೈಯಲ್ಲಿ ಮಾತ್ರ ರಾಜ್ಯ ಸುರಕ್ಷಿತವಾಗಿರುತ್ತದೆ. ಕಾಂಗ್ರೆಸ್‌ನ ಸಿದ್ದರಾಮಯ್ಯ ಅವರನ್ನು ಅಧಿಕಾರಕ್ಕೆ ತಂದರೆ ಪಿಎಫ್‌ಐ ಸಂಘಟನೆ ಮೇಲಿನ ನಿರ್ಬಂಧವನ್ನು ತೆಗೆದು ಹಾಕಲಿದ್ದಾರೆ. ಅಂಥವರು ನಿಮಗೆ ಬೇಕಾ' ಎಂದು ಪ್ರಶ್ನಿಸಿದರು.

ಚಿತ್ತಾಪುರ: ಮೇ 6ರ ಮೋದಿ ಸಭೆ ರದ್ದು

ಕಲಬುರಗಿ: ಜಿಲ್ಲೆಯ ಚಿತ್ತಾಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮಣಿಕಂಠ ರಾಠೋಡ ಪರ ಮೇ 6ರಂದು ನಡೆಸಲು ಉದ್ದೇಶಿಸಿದ್ದ ಪ್ರಧಾನಿ ಮೋದಿ ಅವರ ಸಾರ್ವಜನಿಕ ಸಭೆಯನ್ನು ರದ್ದುಗೊಳಿಸಲಾಗಿದೆ' ಎಂದು ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದ್ದಾರೆ.

'ರೌಡಿಶೀಟರ್ ಆಗಿರುವ ಜೊತೆಗೆ ಅಂಗನವಾಡಿ ಮಕ್ಕಳ ಹಾಲಿನ ಪುಡಿ ಕಳವು ಮಾಡಿದ ಅಪರಾಧ ಸಾಬೀತಾಗಿದ್ದರೂ ಮಣಿಕಂಠಗೆ ಬಿಜೆಪಿ ಟಿಕೆಟ್ ನೀಡಿರುವುದಕ್ಕೆ ಆಕ್ರೋಶ ವ್ಯಕ್ತವಾಗಿತ್ತು. ಅವರ ಪರ ಪ್ರಧಾನಿ ಪ್ರಚಾರ ನಡೆಸಿದರೆ ಪಕ್ಷಕ್ಕೆ ಮುಜುಗರವಾಗಬಹುದು ಎಂಬ ಆತಂಕದಿಂದ ಸಭೆ ರದ್ದುಗೊಳಿಸಲಾಗಿದೆ' ಎಂದು ಪಕ್ಷದ ಮೂಲಗಳು ತಿಳಿಸಿವೆ.

ನಾಲ್ಕನೇ ದಿನ 10,385 ಮಂದಿ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕನೇ ದಿನವಾದ ಮಂಗಳವಾರ 10,385 ಮಂದಿ ಹಿರಿಯ ನಾಗರಿಕರು ಮತ್ತು ಅಂಗವಿಕಲರು ಮತದಾನ ಮಾಡಿದ್ದಾರೆ ಎಂದು ರಾಜ್ಯ ಮುಖ್ಯ ಚುನಾಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲರಿಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ನೀಡಲಾಗಿದೆ. ಏಪ್ರಿಲ್ 29ರಿಂದ ಈ ಪ್ರಕ್ರಿಯೆ ಆರಂಭವಾಗಿದ್ದು, ಶನಿವಾರದವರೆಗೂ ನಡೆಯಲಿದೆ.

ಒಟ್ಟು 99,529 ಮತದಾರರು ಮನೆಯಿಂದ ಮತದಾನಕ್ಕೆ ಅವಕಾಶ ಕೋರಿ ನೋಂದಣಿ ಮಾಡಿಸಿಕೊಂಡಿದ್ದರು. ಅವರಲ್ಲಿ ಮೊದಲ ಮೂರು ದಿನ 66,824 ಮಂದಿ ಮತ ಚಲಾಯಿಸಿದ್ದರು. ಮಂಗಳವಾರ 582 ಮಾರ್ಗಗಳಲ್ಲಿ ಅಷ್ಟೇ ಸಂಖ್ಯೆಯ ಮತಗಟ್ಟೆ ಅಧಿಕಾರಿಗಳ ತಂಡಗಳು ಪ್ರಕ್ರಿಯೆಯಲ್ಲಿ ಭಾಗಿಯಾದವು. 10,385 ಮತದಾರರು ಮತದಾನ ಮಾಡಿದ್ದು, ನಾಲ್ಕು ದಿನಗಳಲ್ಲಿ ಒಟ್ಟು 77,209 ಮಂದಿ ಮತ ಚಲಾಯಿಸಿದದಾರೆ ಎಂದು ತಿಳಿಸಿದ್ದಾರೆ.

ನೋಂದಾಯಿಸಿಕೊಂಡವರಲ್ಲಿ 22,380 ಮಂದಿ ಮತದಾನ ಮಾಡಬೇಕಿದೆ.

'ಮಹಿಳಾ ಮೀಸಲಾತಿ ಹೋರಾಟ ನಿಲ್ಲದು'

ಚಿಕ್ಕನಾಯಕನಹಳ್ಳಿ (ತುಮಕೂರು): 'ಶಾಸನಸಭೆಗಳಲ್ಲಿ ಮಹಿಳೆಯರಿಗೆ ಶೇ 33ರಷ್ಟು ಮೀಸಲಾತಿ ಕಲ್ಪಿಸಲು ನಮ್ಮ ಹೋರಾಟ 2024ರ ಲೋಕಸಭೆ ಚುನಾವಣೆ ನಂತರವೂ ಮುಂದುವರಿಯಲಿದೆ. ಮುಂದಿನ ಸಂಸತ್ ಚುನಾವಣೆ ಬಳಿಕ ಮಸೂದೆ ಅಂಗೀಕಾರಕ್ಕೆ ಮುಂದಿನ ಹೆಜ್ಜೆ ಇಡಲಾಗುವುದು' ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಹೇಳಿದರು.

ತಾಲ್ಲೂಕಿನ ತಿಮ್ಮನಹಳ್ಳಿಯಲ್ಲಿ ಮಂಗಳವಾರ ಚುನಾವಣಾ ಪ್ರಚಾರ ಸಭೆಯಲ್ಲಿ ಪಕ್ಷದ ಅಭ್ಯರ್ಥಿ ಸಿ.ಬಿ. ಸುರೇಶ್‌ಬಾಬು ಪರ ಮತಯಾಚಿಸಿದರು. ಸಂವಿಧಾನಕ್ಕೆ ತಿದ್ದುಪಡಿ ತಂದು ಮಹಿಳೆಯರಿಗೆ ಶೇ 33 ಮೀಸಲಾತಿ ಕಲ್ಪಿಸಬೇಕು ಎಂದು ಮಂಡಿಸಿದ್ದ ಮಸೂದೆ ರಾಜ್ಯ ಸಭೆಯಲ್ಲಿ ಅಂಗೀಕಾರ ಆಗಿದೆ. ಲೋಕಸಭೆಯಲ್ಲಿ ಬಿಜೆಪಿ ಸರ್ಕಾರ ಅಂಗೀಕರಿಸದೆ ನನೆಗುದಿಗೆ ಬಿದ್ದಿದೆ. ಈ ಬಗ್ಗೆ ಪ್ರಧಾನಿ ಮೋದಿ ಅವರೊಂದಿಗೆ ಅನೇಕ ಬಾರಿ ಪತ್ರ ವ್ಯವಹಾರ ಮಾಡಿದ್ದರೂ ಪ್ರಯೋಜನವಾಗಿಲ್ಲ ಎಂದರು.

ಕಾಂಗ್ರೆಸ್ ಸೇರಿದ ದೊಡ್ಡಮೇಟಿ ಕುಟುಂಬ

ನರೇಗಲ್: ಕರ್ನಾಟಕ ಏಕೀಕರಣದ ರೂವಾರಿಯಾಗಿದ್ದ ದಿ. ಅಂದಾನಪ್ಪ ದೊಡ್ಡಮೇಟಿಯವರ ಕಲ್ಪನೆಯಂತೆ ರಚಿಸಿದ್ದ ಭುವನೇಶ್ವರಿಯ ಮೊದಲ ತೈಲಚಿತ್ರವನ್ನು ರಾಜ್ಯ ಲಾಂಛನವಾಗಿ ಅಧಿಕೃತವಾಗಿ ಘೋಷಿಸಲು ಬಿಜೆಪಿ ಸರ್ಕಾರದ ನಿರ್ಲಕ್ಷ್ಯ ಧೋರಣೆ ತೋರಿದೆ ಎಂದು ಆರೋಪಿಸಿ, ದೊಡ್ಡಮೇಟಿ ಕುಟುಂಬದ ಸದಸ್ಯರು ಕಾಂಗ್ರೆಸ್ ಪಕ್ಷ ಸೇರಿದರು.

ಜೊತೆಗೆ ಜಕ್ಕಲಿ ಗ್ರಾಮದ ಹಲವು ಮುಖಂಡರು ಕಾಂಗ್ರೆಸ್ ಸೇರ್ಪಡೆಯಾದರು. ಕಾಂಗ್ರೆಸ್ ಧುರೀಣ ಐ.ಎಸ್.ಪಾಟೀಲ ಅವರೆಲ್ಲರನ್ನೂ ಪಕ್ಷಕ್ಕೆ ಬರಮಾಡಿಕೊಂಡರು. ಈ ಸಂದರ್ಭದಲ್ಲಿ ಚನ್ನಬಸವ ದೊಡ್ಡಮೇಟಿ ಅವರು, 'ಬಹಳ ನಿರೀಕ್ಷೆ ಇಟ್ಟುಕೊಂಡು ಬಿಜೆಪಿಗೆ ದುಡಿದಿದ್ದೆವು. ಭುವನೇಶ್ವರಿ ಚಿತ್ರದ ಕುರಿತು ಕ್ಷೇತ್ರದ ಜನಪ್ರತಿನಿಧಿಗಳು ಧ್ವನಿ ಎತ್ತಲಿಲ್ಲ. ಈಚೆಗೆ ಬೆಂಗಳೂರಿನಲ್ಲಿ ರಚಿಸಿದ ಚಿತ್ರಕ್ಕೆ ಮನ್ನಣೆ ನೀಡಿದರು' ಎಂದರು.

ರಾಜ್ಯಕ್ಕೆ ನೀಡಿದ ಕೊಡುಗೆ ತಿಳಿಸಲಿ: ರಾಹುಲ್

ಪ್ರಜಾವಾಣಿ ವಾರ್ತೆ

ಚಿಕ್ಕಮಗಳೂರು: 'ಪ್ರಧಾನಿ ಮೋದಿ ಅವರಿಗೆ ಭಾಷಣದಲ್ಲಿ ತಮ್ಮ ಬಗ್ಗೆಯೇ ಹೇಳಿಕೊಳ್ಳಲು ಬಹಳ ಖುಷಿ. ಆದರೆ, ಅವರು ಶೇ 30ರಷ್ಟು ಭಾಗವಾದರೂ ಕರ್ನಾಟಕದ ಬಗ್ಗೆ ಮಾತನಾಡಬೇಕು' ಎಂದು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಹೇಳಿದ್ದಾರೆ.

'ಕಾಂಗ್ರೆಸ್ ನಾಯಕರು ತಮ್ಮನ್ನು ಬೈಯುತ್ತಾರೆ ಎಂದು ಅವರು ಭಾಷಣದಲ್ಲಿ ಶೇ 70 ಭಾಗ ಹೇಳಿದರೂ ನಮ್ಮ ತಕರಾರಿಲ್ಲ. ಕರ್ನಾಟಕದ ರೈತರು, ಯುವಜನರು, ಮಹಿಳೆಯರಿಗಾಗಿ ಏನು ಮಾಡಿದ್ದೇವೆ ಎಂದು ಹೇಳಬೇಕು' ಎಂದು ಒತ್ತಾಯಿಸಿದರು.

ಅಜ್ಜಿ ಇಂದಿರಾಗಾಂಧಿ ಸ್ಪರ್ಧಿಸಿದ್ದ ನೆಲದಲ್ಲಿ ಮಂಗಳವಾರ ಸುಡು ಬಿಸಿಲಿನಲ್ಲಿ ರೋಡ್ ಶೋ ಮೂಲಕ ಪಕ್ಷದ ಅಭ್ಯರ್ಥಿಗಳ ಪರ ಪ್ರಚಾರ ನಡೆಸಿದ ಅವರು, ಆಜಾದ್ ಪಾರ್ಕ್ ವೃತ್ತದಲ್ಲಿ ಜನರನ್ನು ಉದ್ದೇಶಿಸಿ ಮಾತನಾಡಿದರು.

'ಅಜ್ಜಿ ಇಂದಿರಾಗಾಂಧಿ 1978ರಲ್ಲಿ ಇಲ್ಲಿ ಸ್ಪರ್ಧಿಸಿದ್ದರು, ಆಗ ನಾನು ಬಹಳ ಚಿಕ್ಕವನು. ಆಗ ಚಿಕ್ಕಮಗಳೂರಿನ ಹೆಸರು ಕೇಳಿದ್ದೆ. 'ಚಿಕ್ಕಮಗಳೂರು ಸುಂದರವಾದ ಜಿಲ್ಲೆ ಎಂದು ಅಜ್ಜಿ ಹೇಳಿದ್ದರು. ನನ್ನ ಅನುಭವದಲ್ಲಿ ಜಿಲ್ಲೆಗಿಂತ ಇಲ್ಲಿನ ಜನರು ಬಹಳ ಸುಂದರರು, ಒಳ್ಳೆಯವರು' ಎಂದು ರಾಹುಲ್ ಗಾಂಧಿ ಮೆಚ್ಚುಗೆ ವ್ಯಕ್ತಪಡಿಸಿದರು.

'ಲೋಕಸಭಾ ಚುನಾವಣೆಗೆ ದಿಕ್ಸೂಚಿ' (ಬೆಳಗಾವಿ ವರದಿ): 'ದೇಶದಲ್ಲಿ 2024ರ ಲೋಕಸಭಾ ಚುನಾವಣೆಯಲ್ಲಿ ಪ್ರಜಾಪ್ರಭುತ್ವ ಉಳಿಯುವುದೋ ಅಥವಾ ಸರ್ವಾಧಿಕಾರ ಮುಂದುವರಿಯುವುದೋ ಎಂದು ಈ ಚುನಾವಣೆಯ ಫಲಿತಾಂಶ ನಿರ್ಧರಿಸಲಿದೆ' ಎಂದು ಕಾಂಗ್ರೆಸ್‌ನ ಸ್ಟಾರ್ ಪ್ರಚಾರಕರೂ ಆದ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್ ಚವ್ಹಾಣ ಅಭಿಪ್ರಾಯಪಟ್ಟರು.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಲೋಕಸಭೆ ಚುನಾವಣೆಗೆ ಒಂದು ವರ್ಷ ಬಾಕಿ ಇದೆ. ಕೆಲವೇ ತಿಂಗಳಲ್ಲಿ ಛತ್ತೀಸ್‌ಗಢ, ರಾಜಸ್ಥಾನ ಮತ್ತು ಮಧ್ಯಪ್ರದೇಶ ರಾಜ್ಯಗಳ ವಿಧಾನಸಭೆ ಚುನಾವಣೆ ನಡೆಯಲಿವೆ. ಇವೆಲ್ಲ ಚುನಾವಣೆಗಳ ಫಲಿತಾಂಶದ ಮೇಲೂ ಕರ್ನಾಟಕದ ಚುನಾವಣೆ ಫಲಿತಾಂಶ ಪ್ರಭಾವ ಬೀರಲಿದೆ' ಎಂದರು.

'ಗಡಿ ಸಮಸ್ಯೆಗೂ ಚುನಾವಣೆಗೂ ಸಂಬಂಧವಿಲ್ಲ': 'ಕರ್ನಾಟಕ– ಮಹಾರಾಷ್ಟ್ರ ರಾಜ್ಯಗಳ ಗಡಿ ವಿವಾದ ಪ್ರಕರಣಕ್ಕೂ ಈ ಚುನಾವಣೆಗೂ ಸಂಬಂಧವಿಲ್ಲ. ಇದು ಕಾಂಗ್ರೆಸ್– ಬಿಜೆಪಿ ನಡುವಣ ಸ್ಪರ್ಧೆ. ಮರಾಠಿ ಭಾಷಿಕ ಮತದಾರರು ಕಾಂಗ್ರೆಸ್‌ಗೆ ಮತ ಹಾಕಬೇಕು' ಎಂದು ಕೋರಿದರು.

'ತಾಕತ್ತಿದ್ದರೆ ಅಭಿವೃದ್ಧಿ ಆಧರಿಸಿ ಚುನಾವಣೆ ನಡೆಸಿ'

ಮಂಡ್ಯ: 'ಬಿಜೆಪಿಗೆ ತಾಕತ್ತಿದ್ದರೆ ಭಾವನಾತ್ಮಕ ವಿಷಯಗಳನ್ನು ಬಿಟ್ಟು ರಾಜ್ಯವನ್ನು ಕಾಡುತ್ತಿರುವ ಸಮಸ್ಯೆ ಹಾಗೂ ಅಭಿವೃದ್ಧಿಯ ವಿಚಾರವನ್ನಿಟ್ಟುಕೊಂಡು ಚುನಾವಣೆ ಎದುರಿಸಲಿ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಮಂಗಳವಾರ ಸವಾಲು ಹಾಕಿದರು.

ನಗರದ ಸರ್ಕಾರಿ ಪದವಿಪೂರ್ವ ಬಾಲಕಿಯರ ಕಾಲೇಜು ಆವರಣದಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಅವರು ಮಾತನಾಡಿದರು.

'ಜಾತಿ, ಧರ್ಮ, ಭಯೋತ್ಪಾದನೆ ವಿಚಾರ ಬಿಟ್ಟು ನಿರುದ್ಯೋಗ, ಬೆಲೆ ಏರಿಕೆ, ರೈತರ ಸಮಸ್ಯೆಗಳ ವಿಚಾರ ಆಧರಿಸಿ ಚುನಾವಣೆ ಎದುರಿಸಲು ಪ್ರಧಾನಿ, ಕರ್ನಾಟಕದ ಮುಖ್ಯಮಂತ್ರಿ, ಬಿಜೆಪಿ ಸಚಿವರುಗೆ ಸಾಧ್ಯವೇ' ಎಂದು ಪ್ರಶ್ನಿಸಿದರು.

'ಬಿಜೆಪಿ ಸರ್ಕಾರ ಮೂರೂವರೆ ವರ್ಷಗಳಿಂದ ರಾಜ್ಯವನ್ನು ಲೂಟಿ ಮಾಡಿದೆ. ಭ್ರಷ್ಟಾಚಾರ ಎಷ್ಟಿದೆಯೆಂದರೆ, ಜನರಿಗೆ ಮುಖ ತೋರಿಸಬಾರದು. ಇದು ಡಬಲ್ ಇಂಜಿನ್ ಅಲ್ಲ, ಡಬಲ್ ಲೂಟಿ ಸರ್ಕಾರ' ಎಂದು ವಾಗ್ದಾಳಿ ನಡೆಸಿದರು.

'ಮಾಹಿತಿ ತಂತ್ರಜ್ಞಾನ, ಉದ್ಯೋಗ ಸೃಜನೆ, ವಿದೇಶಿ ಬಂಡವಾಳ ಹೂಡಿಕೆ, ನವೋದ್ಯಮ ಸ್ಥಾಪನೆಯಲ್ಲಿ ರಾಜ್ಯ ದೇಶಕ್ಕೆ ಮಾದರಿಯಾಗಿತ್ತು. ಬಿಜೆಪಿ ಸರ್ಕಾರದ ದುರಾಡಳಿತದಿಂದ ಆ್ಯಪಲ್, ಪೆಗಟ್ರಾನ್, ನೋಕಿಯಾ, ಮೊಟೊರೋಲಾ ಕಂಪನಿಗಳು ರಾಜ್ಯ ತೊರೆದಿವೆ. ಬಿಜೆಪಿ ಸರ್ಕಾರ ಬಂದ ಮೇಲೆ ಎಲ್ಲವೂ ಕುಸಿದಿವೆ' ಎಂದು ಆರೋಪಿಸಿದರು.

ದೇಶ ಎತ್ತ ಸಾಗುತ್ತಿದೆಯೋ ಗೊತ್ತಾಗುತ್ತಿಲ್ಲ: ಅಶೋಕ್ ಗೆಹಲೋತ್

ಮಂಗಳೂರು: 'ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಶಿಥಿಲವಾಗುತ್ತಿದೆ. ಪತ್ರಕರ್ತರು, ಸಾಹಿತಿಗಳು, ಸರ್ಕಾರವನ್ನು ಟೀಕಿಸುವುದು ಪ್ರಜಾಪ್ರಭುತ್ವದ ಸಹಜ ಲಕ್ಷಣ. ಈಗ ಟೀಕಾಕಾರರನ್ನೇ ಜೈಲಿಗಟ್ಟ ಲಾಗುತ್ತಿದೆ' ಎಂದು ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಕಳವಳ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ದೇಶದ ಒಕ್ಕೂಟ ವ್ಯವಸ್ಥೆ ಅಪಾಯಕ್ಕೆ ಸಿಲುಕಿದೆಯೇ' ಎಂಬ ಪ್ರಶ್ನೆಗೆ 'ಖಂಡಿತಾ ಹೌದು. ದೇಶವನ್ನು ಆಳುವವರು ಜನರನ್ನು ಭ್ರಮೆಯಲ್ಲಿರುವಂತೆ ಮಾಡಿದ್ದಾರೆ. ಇದು ಎಷ್ಟು ದಿನ ನಡೆದೀತು ನೋಡಬೇಕು' ಎಂದರು.

'ಬಿಜೆಪಿಯವರಿಗೆ ಸಮಾನ ನಾಗರಿಕ ಸಂಹಿತೆ, ಸಿಎಎ, ಎನ್‌ಆರ್‌ಸಿಗಳೆಲ್ಲ ಚುನಾವಣೆಗಾಗಿ ಮಾತ್ರ ಬೇಕು. ರಾಜ್ಯದ ಅಭಿವೃದ್ಧಿ ಹಾಗೂ ಆರ್ಥಿಕ ಸ್ಥಿರತೆಗಳೆಲ್ಲ ಅವರಿಗೆ ಮುಖ್ಯವೇ ಅಲ್ಲ' ಎಂದರು.

'ದೆಹಲಿ –ಪಂಜಾಬ್‌ನಲ್ಲಿ ನಡೆದ ಮ್ಯಾಜಿಕ್ ರಾಜ್ಯದಲ್ಲೂ ಸಾಧ್ಯವಾಗಲಿದೆ'

● ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ಸಂದರ್ಶನ

ಪೃಥ್ವಿರೆಡ್ಡಿ



ಬೆಂಗಳೂರು: ಬೆಂಗಳೂರಿನಲ್ಲಿ ಎಂಜಿನಿಯರಿಂಗ್ ಪದವಿ ಮುಗಿಸಿ, ಯೂರೋಪ್‌ನಲ್ಲಿ ಕೈತುಂಬ ಸಂಬಳ ಪಡೆಯುತ್ತಿದ್ದ ಪೃಥ್ವಿರೆಡ್ಡಿ ಅವರು ಆಮ್ ಆದ್ಮಿ ಪಕ್ಷದ ಸಂಪರ್ಕಕ್ಕೆ ಬಂದಿದ್ದು ಅನಿರೀಕ್ಷಿತ. ಲೋಕಾಯುಕ್ತ ನ್ಯಾಯಮೂರ್ತಿಯಾಗಿದ್ದ ಸಂತೋಷ್ ಹೆಗ್ಡೆ ಅವರ ಸೂಚನೆಯಂತೆ ರಾಜ್ಯದ ಪಡಿತರ ಸಮಸ್ಯೆಗಳ ಮಾಹಿತಿ ಕಲೆಹಾಕಲು ರಾಜ್ಯದಾದ್ಯಂತ ಪ್ರವಾಸ ಮಾಡಿದ್ದರು. ಭ್ರಷ್ಟಾಚಾರ ವಿರೋಧಿ ಆಂದೋಲನದಲ್ಲಿ ಗುರುತಿಸಿಕೊಂಡಾಗ ಈಗಿನ ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಪರಿಚಿತರಾಗಿದ್ದರು. ಅಲ್ಲಿಂದ ಮುಂದೆ ಅವರ ಪಯಣ ಆಮ್ ಆದ್ಮಿ ಜತೆ ಸಾಗಿ ಬಂದಿದೆ. ಪ್ರಸ್ತುತ ಎಎಪಿಯ ರಾಜ್ಯ ಘಟಕದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಅವರು 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಸಂಕ್ಷಿಪ್ತ ಸಾರ ಇಲ್ಲಿದೆ.

● **ರಾಜ್ಯದಲ್ಲಿ ಎಎಪಿ ಭವಿಷ್ಯವೇನು?**

ಬಡ, ಮಧ್ಯಮ ವರ್ಗಗಳಲ್ಲಿ ಮನೆಯ ಯಜಮಾನರು ಇಡೀ ಜೀವನ ದುಡಿದ ಹಣವನ್ನು ತಮ್ಮ ಮಕ್ಕಳ ಶಿಕ್ಷಣ ಹಾಗೂ ವೃದ್ಧ ಪೋಷಕರ ಆರೋಗ್ಯಕ್ಕೆ ಖರ್ಚು ಮಾಡುತ್ತಾರೆ. ತಮ್ಮ ಮಕ್ಕಳಿಗೆ ಯಾವ ಖಾಸಗಿ ಶಾಲೆಗೂ ಕಡಿಮೆ ಇಲ್ಲದ ಗುಣಮಟ್ಟದ ಉಚಿತ ಶಿಕ್ಷಣ ದೊರೆತರೆ, ಆರೋಗ್ಯದ ಎಲ್ಲ ಸಮಸ್ಯೆಗಳಿಗೂ ಉಚಿತ ಚಿಕಿತ್ಸೆ ಪಡೆಯಲು ಸಾಧ್ಯವಾದರೆ ಬಡ, ಮಧ್ಯಮ ಕುಟುಂಬಗಳು ನೆಮ್ಮದಿಯ ಜೀವನ ಸಾಗಿಸಲು ಸಾಧ್ಯವಾಗುತ್ತದೆ. ಜತೆಗೆ, ಉಚಿತ ವಿದ್ಯುತ್, ಉಚಿತ ಸಾರಿಗೆ ಜನರ ಆರ್ಥಿಕ ಹೊರೆ ತಗ್ಗಿಸುತ್ತವೆ. ಇವೆಲ್ಲವನ್ನೂ ತನ್ನ ಆಡಳಿತವಿರುವ ರಾಜ್ಯಗಳಲ್ಲಿ ಮಾಡಿ ತೋರಿಸಿದ ಪಕ್ಷ ಎಎಪಿ. ಅಂತಹ ಅವಕಾಶಕ್ಕಾಗಿ ರಾಜ್ಯದ ಜನರೇ ಎಎಪಿ ಭವಿಷ್ಯ ರೂಪಿಸುವರು.

● **ದೆಹಲಿ, ಪಂಜಾಬ್ ಮ್ಯಾಜಿಕ್ ಕರ್ನಾಟಕದಲ್ಲಿ ಸಾಧ್ಯವೇ?**

ಖಂಡಿತ ಸಾಧ್ಯವಿದೆ. ರಾಜ್ಯದಲ್ಲಿ ಜನರು ಬೆಲೆ ಏರಿಕೆಯಿಂದ ಜೀವನ ನಡೆಸುವುದೇ ಕಷ್ಟವಾಗಿದೆ. ದಶಕಗಳು ಆಡಳಿತ ನಡೆಸಿದ ಕಾಂಗ್ರೆಸ್ ಇಂದು 'ಗ್ಯಾರಂಟಿ' ಕೊಡುತ್ತಿದೆ. ಹಾಗಾದರೆ ಇಷ್ಟು ವರ್ಷಗಳು ಮಾಡಿದ್ದು ಏನು? ಕೇಂದ್ರ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿ ಭರವಸೆಗಳ ಮಾಹಾಪೂರವನ್ನೇ ನೀಡಿದೆ. ಗುಜರಾತ್‌ನಲ್ಲಿ ಮಾದರಿ ಸರ್ಕಾರಿ ಶಾಲೆ ಇಲ್ಲದೇ ಪ್ರಧಾನಿ ಮೋದಿ ಅವರು ಫೋಟೋ ತೆಗೆಸಿಕೊಳ್ಳುವುದಕ್ಕೆ ಸ್ಟುಡಿಯೊ ಮೊರೆ ಹೋಗಿದ್ದರು. ರಾಜ್ಯದಲ್ಲಿ ರಾಜಕಾರಣಿಗಳ ಒಡೆತನದಲ್ಲಿ ಇರುವ ಖಾಸಗಿ ಸಂಸ್ಥೆಗಳಿಗೆ ಲಾಭ ಮಾಡಿಕೊಡಲು ಸರ್ಕಾರಿ ಶಾಲೆ, ಆಸ್ಪತ್ರೆಗಳನ್ನು ಕಡೆಗಣಿಸಲಾಗಿದೆ. ಗೆದ್ದ ಪಕ್ಷಗಳು ಗುತ್ತಿಗೆದಾರರ, ಕಾರ್ಪೊರೇಟ್ ವಲಯದ ಕೆಲಸ ಮಾಡುತ್ತಿವೆ. ಎಎಪಿ ಪ್ರಣಾಳಿಕೆಗೂ, ನಡೆಗೂ ಯಾವ ವ್ಯತ್ಯಾಸವೂ ಇಲ್ಲ. ಜಿಲ್ಲಾವಾರು, ಕ್ಷೇತ್ರವಾರು ಪ್ರಣಾಳಿಕೆ ನೀಡಿದೆ. ಪಕ್ಷದ ಪ್ರಣಾಳಿಕೆ ರಾಜಕೀಯ ಚರ್ಚೆಯನ್ನೇ ಬದಲಾಯಿಸಿದೆ.

● **ಗುಜರಾತ್ ಫಲಿತಾಂಶ ಉಲ್ಲೇಖಿಸಿರುವ ಕಾಂಗ್ರೆಸ್ ಮುಖಂಡರು ಎಎಪಿಯನ್ನು ಬಿಜೆಪಿಯ ಬಿ ಟೀಂ ಎನ್ನುತ್ತಿದ್ದಾರಲ್ಲ?**

ಜನರಿಗೆ ಅಗತ್ಯವಿರುವ ಕೆಲಸ ಮಾಡದ, ಜನರನ್ನು ತಲುಪುವಲ್ಲಿ ವಿಫಲವಾದ ಪಕ್ಷಗಳ ನಾಯಕರು ತಮ್ಮ ವೈಫಲ್ಯವನ್ನು ಇತರರ ಮೇಲೆ ಹಾಕುತ್ತಾರೆ. ಗುಜರಾತ್‌ನಲ್ಲೂ ಅದೇ ಆಗಿದೆ. ಬಿಜೆಪಿ ವಿರೋಧಿಸುವವರು ಅನಿವಾರ್ಯವಾಗಿ ಕಾಂಗ್ರೆಸ್ ಬೆಂಬಲಿಸುತ್ತಿದ್ದರು. ಈಗ ಎಎಪಿ ಅವರಿಗೆ ಪರ್ಯಾಯ ಶಕ್ತಿಯಾಗಿದೆ. ನಾವು ಯಾರ ಬಿ ಟೀಂ ಅಲ್ಲ, ನಾವು ಜನರ ಎ ಟೀಂ.

● **ಕೆಲವರು ಹೊರಗೆ ಹೋಗುತ್ತಿದ್ದಾರಲ್ಲ?**

ಯಾರೋ ಒಬ್ಬಿಬ್ಬರು ವಾಪಸ್ ಹೋದರೆ ಏನು ಮಾಡುವುದು. ಒಬ್ಬರು ಹೊರ ಹೋದರೆ ಸಾವಿರಾರು ಜನರು ಪಕ್ಷಕ್ಕೆ ಬರುತ್ತಿದ್ದಾರೆ. ಸಾಮಾನ್ಯ ಜನರು ಗೆಲ್ಲಲು ಸಾಧ್ಯವಿರುವುದು ಎಎಪಿಯಲ್ಲಿ ಮಾತ್ರ. ಪಂಜಾಬ್‌ನಲ್ಲಿ 82 ಹೊಸಬರು ಶಾಸಕರಾದುದು ಇತಿಹಾಸ. ರಾಜ್ಯದಲ್ಲೂ ಯುವಕರು, ಮಹಿಳೆಯರು, ಕಾರ್ಮಿಕರು, ಕೆಎಸ್‌ಆರ್‌ಟಿಸಿ ಸಿಬ್ಬಂದಿ, ಅಲ್ಪಸಂಖ್ಯಾತರು, ಬಡವರು ಅಭ್ಯರ್ಥಿಗಳಾಗಿರುವುದು ಇದಕ್ಕೆ ಸಾಕ್ಷಿ.

● **ಜಾತಿ, ಧರ್ಮ, ಹಣ ಬಲಗಳ ಚುನಾವಣೆಗೆ ಮುಕ್ತಿ ಸಿಗುವುದೇ?**

ಪ್ರತಿಯೊಂದು ಸಮಸ್ಯೆಗೆ ಹತ್ತು ಪರಿಹಾರ ಇರುತ್ತವೆ. ನಿಯತ್ತು ಇದ್ದಾಗ ಆ ಪರಿಹಾರ ಸಾಧ್ಯ. ತಾಳ್ಮೆಯಿಂದ ಕಾಯಬೇಕಷ್ಟೆ. ಎಎಪಿ ದೆಹಲಿ ಚುನಾವಣೆಗೆ ನಿಂತಾಗ ಎಲ್ಲರ ಮಾತು ಇದೇ ಆಗಿತ್ತು. ಈಗ ಉತ್ತರ ಸ್ಪಷ್ಟವಾಗಿದೆ. ಬಿಜೆಪಿ ಅಧಿಕಾರ ದುರ್ಬಳಕೆ ಮಾಡಿಕೊಂಡು ವಿರೋಧ ಪಕ್ಷಗಳನ್ನು ಹತ್ತಿಕ್ಕುವ ಕೆಲಸ ಮಾಡುತ್ತಿದೆ. ನ್ಯಾಯದ ಧ್ವನಿಗಳನ್ನು ಹತ್ತಿಕ್ಕುತ್ತಿದೆ. ಯಾರು ಏನೇ ಮಾಡಿದರೂ ನ್ಯಾಯ, ಪ್ರಾಮಾಣಿಕತೆಗಳೇ ಗೆಲ್ಲಲಿವೆ.

ವಿಜಯಪುರ ಜಾತಿ, ಹೊಂದಾಣಿಕೆ, ಒಳ ಒಪ್ಪಂದ ರಾಜಕೀಯ • ಕಾಂಗ್ರೆಸ್ – ಬಿಜೆಪಿ ಪ್ರಾಬಲ್ಯದ ನಡುವೆ ತೆನೆಗಟ್ಟಲು ಜೆಡಿಎಸ್ ಕೃಷಿ

ಪಕ್ಷ ರಾಜಕೀಯ ಗೌಣ; ಗೌಡ, ಪಾಟೀಲರ ಪಾರಮ್ಯ

• ಬಸವರಾಜ್ ಸಂಪಳ್ಳಿ

ವಿಜಯಪುರ: ಜಾತಿ, ಹೊಂದಾಣಿಕೆ ಮತ್ತು ಒಳಒಪ್ಪಂದ ರಾಜಕಾರಣವೇ ಪ್ರಬಲವಾಗಿರುವ ವಿಜಯಪುರ ಜಿಲ್ಲೆಯಲ್ಲಿ ಪಕ್ಷ ರಾಜಕಾರಣ ನಪ ಮತ್ತಕ್ಕೆ ಎಂಬಂತಾಗಿದೆ.

ತಮ್ಮ ಪಕ್ಷದವರನ್ನೇ ಕಡೆಗಣಿಸಿ ಅನ್ಯ ಪಕ್ಷಗಳೊಂದಿಗೆ ಮಾಡಿಕೊಳ್ಳುವ ಈ ಒಳಒಪ್ಪಂದ ಪಕ್ಷವನ್ನು ಮೀರಿದ ವ್ಯಕ್ತಿಕೇಂದ್ರಿತ ಸ್ನೇಹ, ಸಂಬಂಧ, ವ್ಯವಹಾರವನ್ನು ಆಧರಿಸಿರುವುದು ಬಹಿರಂಗ ಗುಟ್ಟು.

ಮೋದಿ, ರಾಹುಲ್ ಗಾಂಧಿ, ಅಮಿತ್ ಶಾ, ಸಿದ್ದರಾಮಯ್ಯ ಸೇರಿದಂತೆ ಯಾರೇ ಬಂದು ಅಬ್ಬರಿಸಿದರೂ ಕೊನೆಯಲ್ಲಿ ಪಾಟೀಲ, ಗೌಡರಾಥ 'ವಿಜಯಪುರ ಮಂದಿ'ಯ ಲೆಕ್ಕಾಚಾರವೇ ಪಕ್ಕಾ ಆಗೋದು, ಇದಕ್ಕೆ ಜಿಲ್ಲೆಯ ರಾಜಕೀಯ ಚಿತ್ರಣವೇ ಸಾಕ್ಷಿ.

ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲರ ಸ್ಪರ್ಧೆಯಿಂದ ಬಬಲೇಶ್ವರ ಕ್ಷೇತ್ರ ಗಮನ ಸೆಳೆದಿದೆ. ಕ್ಷೇತ್ರವನ್ನು ನೀರಾವರಿಗೆ ಒಳಪಡಿಸಿರುವ, ಅಭಿವೃದ್ಧಿ ವಿಷಯವನ್ನೇ ಎಂ.ಬಿ.ಪಾಟೀಲರು ಪ್ರಚಾರದ ಸರಕಾಗಿಸಿಕೊಂಡಿದ್ದಾರೆ. ಎಂ.ಬಿ.ಪಾಟೀಲರ ಈ ಬಾರಿ 'ಲಿಂಗಾಯತ ಮುಖ್ಯಮಂತ್ರಿ' ಅಭ್ಯರ್ಥಿ ಎಂಬುದು ಕ್ಷೇತ್ರದ ಮತದಾರರ ಗಮನ ಸೆಳೆದಿದೆ. ಇವರ ವಿರುದ್ಧ ಮೂರು ಬಾರಿ ಸೋತಿರುವ ಬಿಜೆಪಿಯ ವಿಜುಗೌಡ ಪಾಟೀಲ ಕೊನೆಯ ಪ್ರಯತ್ನವಾಗಿ ಮತದಾರರ ಕೈಕಾಲು ಹಿಡಿದು, ಕಣ್ಣೀರು ಸುರಿಸಿ ಅನುಕಂಪದ ಬಲೆ ಬೀಸಿದ್ದಾರೆ.

ಮುದ್ದೇಬಿಹಾಳ ಕ್ಷೇತ್ರದಲ್ಲಿ ಬಿಜೆಪಿ ಶಾಸಕ ಎ.ಎಸ್.ಪಾಟೀಲ ನಡಹಳ್ಳಿ ಮತ್ತು ಕಾಂಗ್ರೆಸ್‌ನ ಮಾಜಿ ಸಚಿವ ಸಿ.ಎಸ್.ನಾಡಗೌಡ (ಅಪ್ಪಾಜಿ) ನಡುವೆ ನೇರ ಹಣಾಹಣಿ ನಡೆದಿದೆ. ಚುನಾವಣಾ ಆಖಾಡದಲ್ಲಿ ಗೆಲುವಿಗಾಗಿ ನಡಹಳ್ಳಿ ಅವರು ಎಲ್ಲ ಪಟ್ಟುಗಳನ್ನು ಪ್ರಯೋಗಿಸಿದ್ದಾರೆ. ಆದರೆ, ನಾಡಗೌಡರು ಇದು ನನ್ನ ಕೊನೆಯ ಚುನಾವಣೆ ಎಂಬ ಅನುಕಂಪದ ಮೊರೆ ಹೋಗಿದ್ದಾರೆ.



ನಡಹಳ್ಳಿಯ ಐದು ವರ್ಷ, ನಾಡಗೌಡರ 25 ವರ್ಷಗಳ ಕೊಡುಗೆಯೇ ಚರ್ಚೆಯ ವಿಷಯವಾಗಿದೆ. ಜೆಡಿಎಸ್, ಕಾಂಗ್ರೆಸ್‌ನ ಪ್ರಮುಖರು ಪಕ್ಷ ತೊರೆದು ನಡಹಳ್ಳಿ ಜೊತೆ ಗುರುತಿಸಿಕೊಂಡಿರುವುದು ಬಿಜೆಪಿ ಬಲ ಹೆಚ್ಚಿಸಿದೆ. ಬಿಜೆಪಿಯ ಅಭ್ಯರ್ಥಿ ನಡಹಳ್ಳಿ ಅವರ ಸಹೋದರ ಶಾಂತಗೌಡ ಅವರು ಕಾಂಗ್ರೆಸ್ ಅಭ್ಯರ್ಥಿ ನಾಡಗೌಡರ ಜೊತೆ ಹಾಗೂ ನಾಡಗೌಡರ ಸಹೋದರ ಮುನ್ನಾಧಣಿ ಅವರು ನಡಹಳ್ಳಿ ಜೊತೆ ಕೈಜೋಡಿಸಿರುವುದು ವಿಶೇಷ!

'ಇಂಡಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಯಶವಂತರಾಯಗೌಡ ಮತ್ತು ಜೆಡಿಎಸ್‌ನ ಬಿ.ಡಿ.ಪಾಟೀಲ ಹಾಗೂ ಬಿಜೆಪಿಯ ಕಾಸುಗೌಡ ಬಿರಾದಾರ ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. 'ಭೀಮಾತೀರ'ದಲ್ಲಿ ಶಾಂತಿ, ಸುವ್ಯವಸ್ಥೆ ಕಲ್ಪಿಸಿರುವುದು, ಸಕ್ಕರೆ ಕಾರ್ಖಾನೆ ಆರಂಭ ಹಾಗೂ 'ಇಂಡಿಯನ್ನು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡುವ ಭರವಸೆ, ಪಕ್ಷದಲ್ಲಿ ಯಾವುದೇ ಭಿನ್ನಮತ ಇಲ್ಲದಿರುವುದು ಕಾಂಗ್ರೆಸ್ ಅಭ್ಯರ್ಥಿಗೆ 'ಪ್ಲಸ್ ಪಾಯಿಂಟ್' ಆಗಿದೆ. ಹೆಚ್ಚಿನ ಸಂಖ್ಯೆಯ ಕುರುಬ ಸಮಾಜದ ಮತದಾರರನ್ನು ನಂಬಿಕೊಂಡಿರುವ ಜೆಡಿಎಸ್ ಅಭ್ಯರ್ಥಿ ಹಾಗೂ ಪಂಚಮಸಾಲಿ ಸಮಾಜದ ವೋಟುಗಳನ್ನು ಆಧರಿಸಿರುವ ಬಿಜೆಪಿ ಪ್ರಬಲ ಪೈಪೋಟಿ ನೀಡಿದೆ.

ಬಸವನ ಬಾಗೇವಾಡಿ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಶಿವಾನಂದ ಪಾಟೀಲ, ಬಿಜೆಪಿಯ ಎಸ್.ಕೆ.ಬೆಳ್ಳುಬ್ಬಿ ಹಾಗೂ ಜೆಡಿಎಸ್‌ನ ಸೋಮನಗೌಡ ಪಾಟೀಲ ಮನಗೂಳಿ(ಅಪ್ಪು) ನಡುವೆ ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. 2018ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿ ಅಲ್ಪ ಮತಗಳ ಅಂತರದಿಂದ ಪರಾಭವಗೊಂಡಿದ್ದ ಅಪ್ಪು ಮನಗೂಳಿ ಬಳಿಕ ಪಕ್ಷಾಂತರವಾಗಿ, ಬಿಜೆಪಿ ಟಿಕೆಟ್‌ಗೆ ಪ್ರಯತ್ನ ನಡೆಸಿದ್ದರು. ಆದರೆ, ಟಿಕೆಟ್ ಸಿಗದ ಕಾರಣಕ್ಕೆ ಕೊನೆ ಗಳಿಗೆಯಲ್ಲಿ ಮರಳಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದಾರೆ. ಒಂದೇ ಸಮಾಜದವರಾದ ಮನಗೂಳಿ ಮತ್ತು ಶಿವಾನಂದ ಪಾಟೀಲ ಲಿಂಗಾಯತ ಪಂಚಮಸಾಲಿ ಸಮಾಜದ ವೋಟುಗಳನ್ನು ಹಂಚಿಕೊಳ್ಳುವ ಸಾಧ್ಯತೆ ಇದೆ. ಮನಗೂಳಿ ಪಡೆಯುವ ಮತಗಳನ್ನು ಆಧರಿಸಿ ಕಾಂಗ್ರೆಸ್, ಬಿಜೆಪಿ ಹಣಬರಹ ನಿರ್ಧಾರವಾಗಲಿದೆ.

ಜಿಲ್ಲೆಯಲ್ಲಿ ಇರುವ ಏಕೈಕ ಮೀಸಲು (ಎಸ್‌ಸಿ) ಕ್ಷೇತ್ರವಾದ ನಾಗಠಾಣದಲ್ಲಿ ಶಾಸಕ ಜೆಡಿಎಸ್‌ನ ಡಾ.ದೇವಾನಂದ ಚವ್ಹಾಣ ಮತ್ತು ಕಾಂಗ್ರೆಸ್ ಅಭ್ಯರ್ಥಿ ವಿಠಲ ಕಟಕದೊಂಡ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. ಸಚಿವ ಗೋವಿಂದ ಕಾರಜೋಳ ಪುತ್ರ ಗೋಪಾಲ, ಸಂಸದ ರಮೇಶ ಜಿಗಜಿಣಗಿ, ಚುನಾವಣೆಗಾಗಿಯೇ ಪೊಲೀಸ್ ಹುದ್ದೆಗೆ ರಾಜೀನಾಮೆ ನೀಡಿ ಬಂದಿದ್ದ ಮಹೇಂದ್ರ ನಾಯಕ ಬಿಜೆಪಿ ಟಿಕೆಟ್‌ಗೆ ಪ್ರಬಲ ಆಕಾಂಕ್ಷಿಯಾಗಿದ್ದರು. ಆದರೆ, ಇವರೆಲ್ಲರ ಹೊರತಾಗಿ ಕೊನೆ ಗಳಿಗೆಯಲ್ಲಿ ಸಾಮಾನ್ಯ ಕಾರ್ಯಕರ್ತ ಸಂಜೀವ ಐಹೊಳೆ ಅವರನ್ನು ಬಿಜೆಪಿ ಕಣಕ್ಕಿಳಿಸಿದ್ದು, ನಿರೀಕ್ಷಿತ ಪೈಪೋಟಿ ಕಾಣಿಸುತ್ತಿಲ್ಲ.

ಹಿಂದಿನ ಚುನಾವಣೆಯ ಬಲಾಬಲ

ಕ್ಷೇತ್ರ	2013	2018
ವಿಜಯಪುರ	ಕಾಂಗ್ರೆಸ್	ಬಿಜೆಪಿ
ಬಬಲೇಶ್ವರ	ಕಾಂಗ್ರೆಸ್	ಕಾಂಗ್ರೆಸ್
ನಾಗಠಾಣ	ಕಾಂಗ್ರೆಸ್	ಜೆಡಿಎಸ್
ಮುದ್ದೇಬಿಹಾಳ	ಕಾಂಗ್ರೆಸ್	ಬಿಜೆಪಿ
ಬಸವನ ಬಾಗೇವಾಡಿ	ಕಾಂಗ್ರೆಸ್	ಕಾಂಗ್ರೆಸ್
ಇಂಡಿ	ಕಾಂಗ್ರೆಸ್	ಕಾಂಗ್ರೆಸ್
ದೇವರ ಹಿಪ್ಪರಗಿ	ಕಾಂಗ್ರೆಸ್	ಬಿಜೆಪಿ
ಸಿಂದಗಿ	ಬಿಜೆಪಿ	ಜೆಡಿಎಸ್*

*(ಬಿಜೆಪಿ–ಉಪಚುನಾವಣೆ 2021)

ವಿಜಯಪುರ ನಗರ ಕ್ಷೇತ್ರದಲ್ಲಿ ಹಿಂದು–ಮುಸ್ಲಿಂ ವೋಟ್ ಬ್ಯಾಂಕ್ ಆಧಾರದ ಮೇಲೆಯೇ ಈ ಕ್ಷೇತ್ರದಲ್ಲಿ ಚುನಾವಣೆ ನಡೆಯುತ್ತಿದೆ. ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಅಬ್ದುಲ್ ಹಮೀದ್ ಮುಶ್ರೀಫ್ ನಡುವೆ ನೇರ ಸ್ಪರ್ಧೆ ಏರ್ಪಟ್ಟಿದೆ. 'ಮುಸ್ಲಿಮರ ವೋಟ್ ಬೇಡ' ಎನ್ನುತ್ತಿರುವ ಯತ್ನಾಳ ಪಕ್ಷಾತೀತವಾಗಿ ಹಿಂದು ಮತಗಳನ್ನು ಒಟ್ಟು ಮಾಡುತ್ತಿದ್ದಾರೆ. ಬಿಜೆಪಿಯ ಲಿಂಗಾಯತ ಮುಖಂಡರೇ ಯತ್ನಾಳ ವಿರುದ್ಧ ಇರುವ ಅಸಮಾಧಾನ, ಭಿನ್ನಾಭಿಪ್ರಾಯವು ಒಳ ಏಟು ನೀಡುವ ಸಾಧ್ಯತೆ ಇದೆ. ಕಾಂಗ್ರೆಸ್ ಅಭ್ಯರ್ಥಿಗೆ ಮುಸ್ಲಿಂ ಮತ ಬ್ಯಾಂಕ್ ಇದ್ದರೂ ಹಿಂದುಗಳ ವೋಟುಗಳಿಲ್ಲದೇ ಗೆಲುವಿನ ದಡ ಸೇರುವುದು ಕಷ್ಟ.

ಸಿಂದಗಿ ಕ್ಷೇತ್ರದಲ್ಲಿ ಬಿಜೆಪಿಯ ರಮೇಶ ಭೂಸನೂರ ಮತ್ತು ಕಾಂಗ್ರೆಸ್‌ನ ಅಶೋಕ ಮನಗೂಳಿ ನಡುವೆ ಜಿದ್ದಾಜಿದ್ದಿನ ಪೈಪೋಟಿ ನಡೆದಿದೆ. 2021ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಲಕ್ಷ್ಮಣ ಸವದಿ ಬೆಂಬಲ, ಕಾಂಗ್ರೆಸ್ ಒಳಗಿನ ಭಿನ್ನಮತ ಹಾಗೂ ಮುಖ್ಯಮಂತ್ರಿ ಸೇರಿದಂತೆ ಇಡೀ ಸಚಿವ ಸಂಪುಟವೇ ಕ್ಷೇತ್ರದಲ್ಲಿ ಬೀಡುಬಿಟ್ಟು ಭೂಸನೂರ ಅವರ ಜಯ ಸುಲಭವಾಗಿಸಿದ್ದರು. ಆದರೆ, ಸದ್ಯದ ಚುನಾವಣೆಯಲ್ಲಿ ವ್ಯತಿರಿಕ್ತ ಪರಿಸ್ಥಿತಿ ನಿರ್ಮಾಣವಾಗಿದೆ. ಉಪ ಚುನಾವಣೆಯಲ್ಲಿ ಬಿಜೆಪಿ ನೀಡಿದ್ದ ಭರವಸೆಗಳು ಈಡೇರಿಲ್ಲ, ಕಾಂಗ್ರೆಸ್ ಒಗ್ಗಟ್ಟು ಪ್ರದರ್ಶಿಸಿದೆ. ಜೆಡಿಎಸ್ ಅಭ್ಯರ್ಥಿಯಾಗಿದ್ದ ಶಿವಾನಂದ ಪಾಟೀಲ ಸೋಮಜಾಳ ಅವರ ಹಠಾತ್ ನಿಧನದಿಂದ ಅವರ ಪತ್ನಿ ವಿಶಾಲಾಕ್ಷಿ ಕಣಕ್ಕಿಳಿದಿದ್ದಾರೆ. ಅನುಕಂಪದ ಆಧಾರದ ಮೇಲೆ ಮತಯಾಚಿಸುತ್ತಿದ್ದಾರೆ.

ಆರಂಭದಿಂದಲೂ ಲಿಂಗಾಯತ ರೆಡ್ಡಿ ಸಮುದಾಯದ ಪ್ರಾಬಲ್ಯ ಇರುವ ದೇವರ ಹಿಪ್ಪರಗಿ ಕ್ಷೇತ್ರದಲ್ಲಿ ಬಿಜೆಪಿಯ ಶಾಸಕ ಸೋಮನಗೌಡ ಪಾಟೀಲ ಸಾಸನೂರ ಅವರನ್ನು ಕಣಕ್ಕಿಳಿಸಿದೆ. ಪ್ರಬಲ ಪಂಚಮಸಾಲಿ ಸಮಾಜಕ್ಕೆ ಸೇರಿದ ಜೆಡಿಎಸ್ ಅಭ್ಯರ್ಥಿ ರಾಜುಗೌಡ ಪಾಟೀಲ ತೀವ್ರ ಸ್ಪರ್ಧೆ ಒಡ್ಡಿದ್ದಾರೆ. ಹಿಂದುಳಿದ ವರ್ಗಕ್ಕೆ ಸೇರಿದ ಸಿಂದಗಿಯ ಮಾಜಿ ಶಾಸಕ ಶರಣಪ್ಪ ಸುಣಗಾರ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ.

ಸಾಕ್ಷಾತ್ ಸಮೀಕ್ಷೆ

ಉತ್ತರ ಕನ್ನಡ ಬಿಜೆಪಿಗೆ 'ಮೋದಿ', ಕಾಂಗ್ರೆಸ್‌ಗೆ 'ಗ್ಯಾರಂಟಿ'ಯೇ ಆಸರೆ

ಕಣದಲ್ಲಿ 'ಹಳೆ ಹುಲಿ'ಗಳ ಕಾದಾಟ

• ಗಣಪತಿ ಹೆಗಡೆ

ಕಾರವಾರ: ಒಂದು ಕಾಲದಲ್ಲಿ ಜನತಾ ಪರಿವಾರ ಮತ್ತು ಕಾಂಗ್ರೆಸ್ ಪಾಲಿನ ಭದ್ರಕೋಟೆ ಎನಿಸಿದ್ದ ಉತ್ತರ ಕನ್ನಡ ಜಿಲ್ಲೆಯಲ್ಲೀಗ ಬಿಜೆಪಿ ಭದ್ರವಾಗಿ ನೆಲೆಯೂರಿದೆ. ಆದರೆ ಕಳೆದ ಬಾರಿ ಬಿಜೆಪಿಗೆ ಮತ ಸೆಳೆಯಲು ಕಾರಣವಾಗಿದ್ದ 'ಹಿಂದುತ್ವ' ಈ ಬಾರಿ ಕೈಹಿಡಿಯುವ ಲಕ್ಷಣ ಕಾಣಿಸುತ್ತಿಲ್ಲ. ಆಡಳಿತ ವಿರೋಧಿ ಅಲೆಯಿಂದಾಗಿ ಬಿಜೆಪಿಗೆ ಕಾಂಗ್ರೆಸ್‌ನ ಪೈಪೋಟಿ ಪ್ರಬಲವಾಗಿದೆ.

ಬಿಜೆಪಿ ಕಳೆದ ಬಾರಿಯ ಸ್ಪರ್ಧಿಗಳನ್ನೇ ಮತ್ತೆ ಕಣಕ್ಕಿಳಿಸಿದೆ. ಕುಮಟಾ, ಯಲ್ಲಾಪುರ ಹೊರತಾಗಿ ಉಳಿದೆಡೆ ಕಾಂಗ್ರೆಸ್‌ನಿಂದಲೂ ಹಳೆಯ ಕಲಿಗಳೇ ಕಣಕ್ಕಿಳಿದಿದ್ದಾರೆ. ಕುಮಟಾ ಮತ್ತು ಹಳಿಯಾಳ ಕ್ಷೇತ್ರದಲ್ಲಿ ಜೆಡಿಎಸ್ ಪ್ರಬಲ ಪ್ರತಿಸ್ಪರ್ಧಿಯಾಗಿದೆ.

2018ರ ಚುನಾವಣೆ ಸಂದರ್ಭದಲ್ಲಿ ಹೊನ್ನಾವರದಲ್ಲಿ ನಡೆದಿದ್ದ ಪರೇಶ್ ಮೇಸ್ತ ಸಾವಿನ ವಿಚಾರ ಬಿಜೆಪಿಗೆ ಭರಪೂರವಾಗಿ ಮತ ಫಸಲು ತಂದುಕೊಟ್ಟಿತ್ತು. ಪರೇಶ್ ಮೇಸ್ತನದ್ದು ಕೊಲೆ ಎಂದು ಪ್ರತಿಪಾದಿಸಿ ಬಿಜೆಪಿ ಹಿಂದುತ್ವದ ಅಲೆ ಎಬ್ಬಿಸಿ ಮತಗಳ ಧ್ರುವೀಕರಣಕ್ಕೆ ನಾಂದಿ ಹಾಡಿತ್ತು. ಪರಿಣಾಮವಾಗಿ ಕರಾವಳಿ ಭಾಗದ ಮೂರು ಕ್ಷೇತ್ರಗಳು ಸೇರಿದಂತೆ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿಗೆ ಅನಾಯಾಸವಾಗಿ ಗೆದ್ದಿತ್ತು.

ಪರೇಶ್ ಸಾವಿನ ಕುರಿತು ಕೋರ್ಟ್‌ಗೆ ಮಧ್ಯಂತರ ವರದಿ ಸಲ್ಲಿಸಿದ್ದ ಸಿಬಿಐ, 'ಅದು ಕೊಲೆಯಲ್ಲ, ಆಕಸ್ಮಿಕ ಸಾವು' ಎಂದು ಹೇಳಿತು. ಇದನ್ನು ಅಸ್ತ್ರವಾಗಿಸಿದ ಕಾಂಗ್ರೆಸ್ ಪಕ್ಷವು ಬಿಜೆಪಿಯ 'ಹಿಂದುತ್ವ'ದ ಬಣ್ಣ ಬಯಲು ಮಾಡಲು ಯತ್ನಿಸಿತು. ಆದರೆ ಈ ಚುನಾವಣೆಯಲ್ಲಿ ಈ ವಿಚಾರ ಮುನ್ನೆಲೆಗೆ ಬರದಿದ್ದರೂ ಬಿಜೆಪಿಯನ್ನು 'ಹಿಂದುತ್ವ'ದ ಜಪದಿಂದ ತುಸು ಅಂತರದಲ್ಲಿ ನಿಲ್ಲಿಸಿದೆ.

ಬಿಜೆಪಿ ಈ ಬಾರಿ 'ಮೋದಿ ಜಪ'ಕ್ಕೆ ಮೊರೆ ಹೋಗಿದೆ. ಪಕ್ಷದ ಪ್ರಚಾರಕ್ಕಾಗಿ ಮೋದಿ ಜಿಲ್ಲೆಗೆ ಮೊದಲ ಬಾರಿಗೆ (ಮೇ 3) ಭೇಟಿ ನೀಡುತ್ತಿದ್ದಾರೆ. ಮತ ಬೇಟೆಗೆ ಇದೇ ಅವರ ಪಾಲಿಗೆ ಪ್ರಬಲ ಅಸ್ತ್ರವಾಗಿದೆ.

ಜಿಲ್ಲೆಯಲ್ಲಿ ಸಾಲು ಸಾಲು ಸಮಸ್ಯೆಗಳಿದ್ದರೂ ಅವುಗಳ ಬದಲು 'ಗ್ಯಾರಂಟಿ ಕಾರ್ಡ್' ಭರವಸೆಯೊಂದಿಗೆ ಕಾಂಗ್ರೆಸ್ ಪ್ರಚಾರ ಕೈಗೊಂಡಿದೆ.

ವರ್ಷಗಳ ಹಿಂದೆಯೇ ಜಿಲ್ಲೆಗೆ 'ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ' ಬೇಕು ಎಂಬ ಚರ್ಚೆ ಸಾಮಾಜಿಕ ಜಾಲತಾಣದಲ್ಲಿ ಆರಂಭವಾಯಿತು. ನಂತರ ಅದು ಗಂಭೀರ ಬೇಡಿಕೆಯಾಗಿಯೂ ಮಾರ್ಪಟ್ಟಿತು. ಜನರಿಂದ ಒತ್ತಡ ಹೆಚ್ಚಿದಾಗ ಆಸ್ಪತ್ರೆ ಸ್ಥಾಪಿಸುವ ಭರವಸೆ ನೀಡಿ, ಆರೋಗ್ಯ ಸಚಿವರು ಬಂದು ಸ್ಥಳ ಸಮೀಕ್ಷೆ ಮಾಡಿ ತೆರಳಿದ್ದೇ ಬಂತು. ಬಳಿಕ ಸರ್ಕಾರ ಪ್ರಸಕ್ತ ಬಜೆಟ್‌ನಲ್ಲಿ 'ಘೋಷಣೆ'ಗೆ ಸೀಮಿತಗೊಳಿಸಿತು. ಕರಾವಳಿ ಭಾಗದಲ್ಲಿ ಇದು ಕೂಡಾ ಚುನಾವಣೆಯ ಅಸ್ತ್ರವಾಗಿದೆ. ಪ್ರತಿಭಾ ಪಲಾಯನ, ನಿರುದ್ಯೋಗ ಸಮಸ್ಯೆಗಳೂ ಈ ಚುನಾವಣೆಯಲ್ಲೂ ಚರ್ಚಿತವಾಗುತ್ತಿವೆ.

ಹಳಿಯಾಳ ಕ್ಷೇತ್ರದಲ್ಲಿ ಹತ್ತನೇ ಬಾರಿಗೆ ಸ್ಪರ್ಧಿಸುತ್ತಿರುವ ಕಾಂಗ್ರೆಸ್‌ನ ಹಿರಿಯ ಮುಖಂಡ ಆರ್.ವಿ.ದೇಶಪಾಂಡೆ ಅವರಿಗೆ ಇಬ್ಬರು ಪ್ರಬಲ ಎದುರಾಳಿಗಳಿದ್ದಾರೆ. ಎರಡು ಅವಧಿಗೆ ವಿಧಾನ ಪರಿಷತ್ ಸದಸ್ಯರಾಗಿದ್ದ ಎಸ್.ಎಲ್.ಘೋಟ್ನೇಕರ್ ಜೆಡಿಎಸ್‌ನಿಂದ ಸ್ಪರ್ಧೆಗೆ ಇಳಿದಿದ್ದಾರೆ. ಬಿಜೆಪಿ ಅಭ್ಯರ್ಥಿ ಸುನೀಲ ಹೆಗಡೆ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ನಿರ್ಣಾಯಕ ಮರಾಠಾ ಸಮುದಾಯದ ಮತಗಳ ಮೇಲೆ ಮೂವರ ಕಣ್ಣಿದೆ.



ಹಿಂದಿನ ಚುನಾವಣೆಯ ಬಲಾಬಲ

ಕ್ಷೇತ್ರ	2013	2018
ಹಳಿಯಾಳ	ಕಾಂಗ್ರೆಸ್	ಕಾಂಗ್ರೆಸ್
ಕಾರವಾರ	ಪಕ್ಷೇತರ	ಬಿಜೆಪಿ
ಕುಮಟಾ	ಕಾಂಗ್ರೆಸ್	ಬಿಜೆಪಿ
ಭಟ್ಕಳ	ಪಕ್ಷೇತರ	ಬಿಜೆಪಿ
ಶಿರಸಿ	ಬಿಜೆಪಿ	ಬಿಜೆಪಿ
ಯಲ್ಲಾಪುರ*	ಕಾಂಗ್ರೆಸ್	ಕಾಂಗ್ರೆಸ್

*2019ರ ಉಪಚುನಾವಣೆಯಲ್ಲಿ ಯಲ್ಲಾಪುರ–ಮುಂಡಗೋಡ ಕ್ಷೇತ್ರದಲ್ಲಿ ಶಿವರಾಮ ಹೆಬ್ಬಾರ್ ಅವರು ಕಾಂಗ್ರೆಸ್ ತೊರೆದು ಬಿಜೆಪಿ ಸೇರಿ ಶಾಸಕರಾಗಿ ಆಯ್ಕೆಯಾಗಿದ್ದರು.

ಕೈ ಪಾಳಯದಿಂದ ಜಿಗಿದು ಬಿಜೆಪಿ ಸರ್ಕಾರದಲ್ಲಿ ಕಾರ್ಮಿಕ ಸಚಿವರಾಗಿ ವರ್ಚಸ್ಸು ವೃದ್ಧಿಸಿಕೊಂಡಿರುವ ಶಿವರಾಮ ಹೆಬ್ಬಾರ್ ಅವರಿಗೆ ಯಲ್ಲಾಪುರ ಕ್ಷೇತ್ರದಲ್ಲಿ ಬಿಜೆಪಿ ತೊರೆದು 'ಕೈ' ಹಿಡಿದ ವಿ.ಎಸ್.ಪಾಟೀಲ್ ಪ್ರಬಲ ಸ್ಪರ್ಧಿಯಾಗಿದ್ದಾರೆ. ಬಿಜೆಪಿಯ ಮೂಲ ಮತ್ತು ವಲಸಿಗ ಕಾರ್ಯಕರ್ತರ ನಡುವೆ ಸಮನ್ವಯತೆ ಸಾಧಿಸಲು ಹೆಬ್ಬಾರ್ ಯತ್ನಿಸುತ್ತಿದ್ದಾರೆ. ಬಿಜೆಪಿಯ ಸಾಂಪ್ರದಾಯಿಕ ಲಿಂಗಾಯತ ಮತಗಳ ಜತೆಗೆ ಮೂಲ ಕಾರ್ಯಕರ್ತರನ್ನು ಸೆಳೆಯುವ ಯತ್ನದಲ್ಲಿ ಪಾಟೀಲ್ ಪ್ರಯತ್ನ ನಡೆದಿದೆ.

ವಿಧಾನಸಭಾ ಅಧ್ಯಕ್ಷರಾಗಿರುವ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಶಿರಸಿ–ಸಿದ್ದಾಪುರ ಕ್ಷೇತ್ರದಲ್ಲಿ ಸತತ ಏಳನೇ ಬಾರಿಗೆ ಗೆಲುವಿನ ಕನಸು ಕಾಣುತ್ತಿದ್ದಾರೆ. ಬಿಜೆಪಿ ಸಾಂಪ್ರದಾಯಿಕ ಮತಗಳನ್ನು ಗಟ್ಟಿಯಾಗಿಸಿಕೊಳ್ಳುತ್ತಿದ್ದಾರೆ. ಜತೆಗೆ 'ಮುಖ್ಯಮಂತ್ರಿ ಅಭ್ಯರ್ಥಿ' ಎಂಬ ಪ್ರಚಾರವೂ ನಡೆದಿದೆ. ಕಾಂಗ್ರೆಸ್‌ನ ಭೀಮಣ್ಣ ನಾಯ್ಕ ಈ ಬಾರಿ ಪ್ರಬಲ ಎದುರಾಳಿಯಾಗಿದ್ದಾರೆ. ಕಾಂಗ್ರೆಸ್ ಮುಖಂಡರೆಲ್ಲ ಒಗ್ಗೂಡಿ ಕೆಲಸ ಮಾಡುತ್ತಿರುವುದು, ಸತತ ಸೋಲಿನ ಅನುಕಂಪವಿರುವುದೂ ಅವರಿಗೆ ವರವಾಗಿದೆ.

ಭಟ್ಕಳ ಕ್ಷೇತ್ರದಲ್ಲಿ ಶಾಸಕ ಬಿಜೆಪಿಯ ಸುನೀಲ ನಾಯ್ಕ ಸ್ವಪಕ್ಷೀಯರ ವಿರೋಧ ಎದುರಿಸುತ್ತಿದ್ದಾರೆ. ಆದರೆ 'ಹಿಂದುತ್ವ ಅಸ್ತ್ರ' ಗೆಲ್ಲಿಸಬಹುದು ಎಂಬ ಲೆಕ್ಕಾಚಾರದಲ್ಲಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಮಂಕಾಳ ವೈದ್ಯ ಹಿಂದುತ್ವದತ್ತಲೂ ಮೃದು ಧೋರಣೆ ಅನುಸರಿಸುತ್ತಲೇ ಹೆಚ್ಚಿನ ಸಂಖ್ಯೆಯಲ್ಲಿರುವ ಮುಸ್ಲಿಂ ಮತಗಳ ಮೇಲೆ ಕಣ್ಣಿಟ್ಟಿದ್ದಾರೆ. ಜೆಡಿಎಸ್ ಸ್ವಲ್ಪಮಟ್ಟಿಗೆ ನಾಮಧಾರಿ ಮತ ಸೆಳೆಯುವ ಸಾಧ್ಯತೆ ಇದೆ.



'ಹೊರಗಿನ ಅಭ್ಯರ್ಥಿ': ಬಿಜೆಪಿಗೆ ಅಸ್ತ್ರ

ಕುಮಟಾ ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ಎದುರಿಸಿದ್ದ ಬಿಜೆಪಿಯ ದಿನಕರ ಶೆಟ್ಟಿಗೆ ಕಾಂಗ್ರೆಸ್ 'ಹೊರಗಿನ' ಅಭ್ಯರ್ಥಿ ನಿಲ್ಲಿಸಿದ್ದು ಅಸ್ತ್ರವಾಗಿದೆ. ಕಾಂಗ್ರೆಸ್‌ನಿಂದ ನಿವೇದಿತ್ ಆಳ್ವಾ ಅಭ್ಯರ್ಥಿಯಾದ ಬೆನ್ನಲ್ಲೆ, ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕಿ ಶಾರದಾ ಶೆಟ್ಟಿ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿಯುವುದರಲ್ಲಿದ್ದರು. ಪಕ್ಷದ ಅಧ್ಯಕ್ಷರು ಚರ್ಚಿಸಿದ ಬಳಿಕ ರಾಜಕೀಯ ನಿವೃತ್ತಿ ಘೋಷಿಸಿದ್ದಾರೆ. ಮತ್ತೊಬ್ಬ ಪ್ರಬಲ ಆಕಾಂಕ್ಷಿ ಶಿವಾನಂದ ಹೆಗಡೆ ಕಡತೋಕ ಬಿಜೆಪಿ ಸೇರಿದ್ದಾರೆ. ಜೆಡಿಎಸ್‌ನ ಸೂರಜ್ ನಾಯ್ಕ ಸೋನಿ ಬಹುಸಂಖ್ಯಾತ ನಾಮಧಾರಿ ಹಾಗೂ ಜೆಡಿಎಸ್‌ನ ಸಾಂಪ್ರದಾಯಿಕ ಮತ ಕಸಿಯುವ ಯತ್ನದಲ್ಲಿದ್ದಾರೆ.

ಕಾರವಾರ ಕ್ಷೇತ್ರದಲ್ಲಿ ಶಾಸಕಿ ಬಿಜೆಪಿಯ ರೂಪಾಲಿ ನಾಯ್ಕ ಮತ್ತು ಕಾಂಗ್ರೆಸ್ ಅಭ್ಯರ್ಥಿ ಸತೀಶ್ ಸೈಲ್ ನಡುವೆ ಪೈಪೋಟಿ ನಡೆದಿದೆ. ಆಡಳಿತ ವಿರೋಧಿ ಅಲೆ ಕಾಂಗ್ರೆಸ್ ಅಭ್ಯರ್ಥಿಗೆ ವರವಾಗಬಹುದಾದರೂ ಮೋದಿ ಕ್ಷೇತ್ರ ಭೇಟಿಯು ಬಿಜೆಪಿಯ ಆಸೆ ಚಿಗುರಿಸಿದೆ.

ಉಡುಪಿ ಕಾಂಗ್ರೆಸ್‌ಗೆ ಪ್ರಾಬಲ್ಯ ಮರುಸ್ಥಾಪಿಸುವ ಸವಾಲು

ಬಿಜೆಪಿಗೆ 'ಪ್ರಯೋಗ ಫಲ'ದ ನಿರೀಕ್ಷೆ

• ಗಣೇಶ ಚಂದನಶಿವ/ಬಾಲಚಂದ್ರ ಎಚ್.

ಉಡುಪಿ: ಕರಾವಳಿ ಬಿಜೆಪಿ ಪಾಲಿಗೆ ಸದಾ ಪ್ರಯೋಗ ಶಾಲೆಯಾಗಿ ಬಳಕೆಯಾಗುತ್ತಲಿದೆ. ಈ ಬಾರಿ ಐವರಲ್ಲಿ ನಾಲ್ವರು ಶಾಸಕರಿಗೆ ಟಿಕೆಟ್ ನಿರಾಕರಿಸಿ ಹೊಸ ಮುಖಗಳನ್ನು ಕಣಕ್ಕಿಳಿಸುವ ಮೂಲಕ ಬಿಜೆಪಿ ಹೊಸ ಪ್ರಯೋಗಕ್ಕೆ ಉಡುಪಿ ಜಿಲ್ಲೆಯನ್ನು ಮುಖ್ಯ ಭೂಮಿಕೆಯನ್ನಾಗಿಸಿದೆ.

ಐದು ಬಾರಿ ಗೆದ್ದಿದ್ದ ಶಾಸಕರನ್ನೂ ಮುಲಾಜಿಲ್ಲದೆ ಪಕ್ಕಕ್ಕೆ ಸರಿಸಿ ಒಮ್ಮೆಯೂ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸದ ಹೊಸ ಮುಖಗಳಿಗೆ ಮಣೆ ಹಾಕಿದೆ.

ರಾಷ್ಟ್ರೀಯ ಸ್ವಯಂ ಸೇವಕ ಸಂಘ, ಹಿಂದೂ ಸಂಘಟನೆಗಳ ಗಾಢ ಪ್ರಭಾವ ಹೊಂದಿರುವ ಜಿಲ್ಲೆಯಲ್ಲಿ ಈ ಬಾರಿ ನಡೆದಿರುವ ಪ್ರಯೋಗ ಯಶಸ್ವಿಯಾದರೆ ಹೊಸ ನಾಯಕತ್ವಕ್ಕೆ ಮಣೆ ಹಾಕುವ ನಿರ್ಧಾರಕ್ಕೆ ಫಲ ಸಿಕ್ಕಂತಾಗಲಿದೆ.

2013ರಲ್ಲಿ ಕಾಂಗ್ರೆಸ್ ಮೂರು, ಬಿಜೆಪಿ ಒಂದು ಕ್ಷೇತ್ರದಲ್ಲಿ ಗೆದ್ದಿತ್ತು. ಕುಂದಾಪುರದಲ್ಲಿ ಹಾಲಾಡಿ ಶ್ರೀನಿವಾಸ ಶೆಟ್ಟಿ ಪಕ್ಷೇತರರಾಗಿ ಗೆಲುವು ಸಾಧಿಸಿದ್ದರು. 2018ರಲ್ಲಿ ಎಲ್ಲ ಐದೂ ಕ್ಷೇತ್ರಗಳು ಬಿಜೆಪಿ ಪಾಲಾಗಿದ್ದವು. ಕಾಂಗ್ರೆಸ್ ಈ ಚುನಾವಣೆಯಲ್ಲಿ ಪ್ರಾಬಲ್ಯ ಮರುಸ್ಥಾಪಿಸುವ ಉಮೇದಿನಲ್ಲಿದೆ. ಆದರೆ, 'ಕೈ' ಮುಂದೆ ಸವಾಲುಗಳೂ ಸಾಕಷ್ಟಿವೆ. ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಬಿಜೆಪಿ ಸೇರಿದ ಬಳಿಕ ಪಕ್ಷದಲ್ಲಿ ಉಂಟಾಗಿರುವ ನಿರ್ವಾತ ತುಂಬಬಲ್ಲ ನಾಯಕತ್ವ ಕಾಣುತ್ತಿಲ್ಲ.

ಉದ್ಯಮ ಕ್ಷೇತ್ರದಲ್ಲಿ ಪಳಗಿರುವ ಪ್ರಸಾದ್ ರಾಜ್ ಕಾಂಚನ್ ಉಡುಪಿ ಕ್ಷೇತ್ರದಲ್ಲಿ ಕಾಂಗ್ರೆಸ್ ಹುರಿಯಾಳು. ಶಾಸಕ ರಘುಪತಿ ಭಟ್ ಬದಲು ಇಲ್ಲಿ ಹಿಂದುತ್ವದ ಪ್ರಬಲ ಪ್ರತಿಪಾದಕ, ಹಿಜಾಬ್ ವಿರೋಧಿ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಯಶ್‌ಪಾಲ್ ಸುವರ್ಣ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಈ ಇಬ್ಬರೂ ಮೊಗವೀರ ಸಮುದಾಯಕ್ಕೆ ಸೇರಿದವರು. ಹೀಗಾಗಿ, ಕ್ಷೇತ್ರ ಜಿದ್ದಾಜಿದ್ದಿನ ಕಣವಾಗಿ ಮಾರ್ಪಟ್ಟಿದೆ.

ಆರ್‌ಎಸ್‌ಎಸ್ ಪ್ರಚಾರಕರಾಗಿದ್ದ ಗುರುರಾಜ ಶೆಟ್ಟಿ ಗಂಟಿಹೊಳೆ ಅವರಿಗೆ ಬೈಂದೂರು ಕ್ಷೇತ್ರದಲ್ಲಿ ಬಿಜೆಪಿ ಮಣೆ ಹಾಕಿದೆ. ಕಾಂಗ್ರೆಸ್‌ನ ಕೆ.ಗೋಪಾಲ ಪೂಜಾರಿ ಏಳನೇ ಬಾರಿ ಸ್ಪರ್ಧಿಸಿದ್ದಾರೆ. ಅಯ್ಯಪ್ಪನ ಭಕ್ತ ಗುರುರಾಜ್, ಬರಿಗಾಲಿನಲ್ಲಿ ಓಡಾಡುತ್ತಿದ್ದಾರೆ. 'ಬರಿಗಾಲ ಫಕೀರ' ಎಂದು ಕರೆಯುವ ಮೂಲಕ ತಮ್ಮ ಅಭ್ಯರ್ಥಿ ಪರ ಒಲವು ಹೆಚ್ಚಿಸುವ ಕೆಲಸವನ್ನು ಬಿಜೆಪಿಗರು ಮಾಡುತ್ತಿದ್ದರೆ, 'ಬರಿಗಾಲ ಫಕೀರ ಏಳು ಕೋಟಿಯ ಒಡೆಯ (ಗುರುರಾಜ ಏಳು ಕೋಟಿ ಮೌಲ್ಯದ ಆಸ್ತಿ ಘೋಷಿಸಿಕೊಂಡಿದ್ದಾರೆ)' ಎಂದು ಕಾಂಗ್ರೆಸ್ಸಿಗರು ಗೇಲಿ ಮಾಡುತ್ತಿದ್ದಾರೆ. ಶಾಸಕ ಬಿ.ಎಂ.ಸುಕುಮಾರ ಶೆಟ್ಟಿ ಪ್ರಚಾರಕ್ಕೆ ಧುಮುಕದಿರುವುದು ಬಿಜೆಪಿಗೆ ತಲೆನೋವು ತಂದಿದೆ. ನಾಲ್ಕು ಬಾರಿ ಶಾಸಕರಾಗಿದ್ದ ಕೆ.ಗೋಪಾಲ ಪೂಜಾರಿ, ಕಳೆದ ಚುನಾವಣೆಯಲ್ಲಿ ಪರಾಭವಗೊಂಡಿದ್ದರೂ ಕ್ಷೇತ್ರದ ಜನರೊಂದಿಗೆ ನಿರಂತರ ಸಂಪರ್ಕದಲ್ಲಿರುವುದು ಅವರ ನೆರವಿಗೆ ಬರುತ್ತಿದೆ.

ಕುಂದಾಪುರ ಶಾಸಕ ಹಾಲಾಡಿ ಶ್ರೀನಿವಾಸ ಶೆಟ್ಟಿ ಟಿಕೆಟ್ ಘೋಷಣೆಗೂ ಮುನ್ನವೇ ಚುನಾವಣಾ ರಾಜಕೀಯದಿಂದ ನಿವೃತ್ತಿ ಘೋಷಿಸಿದ್ದರು. ಕ್ಷೇತ್ರದಲ್ಲಿ ಪ್ರಭಾವ ಹೊಂದಿರುವ ಅವರು ಬಿಜೆಪಿ ಅಭ್ಯರ್ಥಿ, ತಮ್ಮ ಶಿಷ್ಯ ಎ.ಕಿರಣ್ ಕುಮಾರ್ ಕೊಡ್ಗಿ ಅವರ ಬೆನ್ನಿಗೆ ನಿಂತಿದ್ದಾರೆ. ಇದು ಬಿಜೆಪಿಗರ ವಿಶ್ವಾಸ ವೃದ್ಧಿಸಿದೆ. ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಹೆಗ್ಡೆ ಮೊಳಹಳ್ಳಿ ಪರ ಮತದಾರರು ಒಳ್ಳೆಯ ಮಾತನ್ನಾಡುತ್ತಿದ್ದಾರೆ. ಕಿರಣ್ ಕೊಡ್ಗಿ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದರೆ, ದಿನೇಶ್ ಬಂಟ ಸಮುದಾಯದವರು. ಮತಬ್ಯಾಂಕ್ ಗಟ್ಟಿಯಾಗಿ ಉಳಿದರೆ ಬಿಜೆಪಿಗೆ, ಜಾತಿ ಸಮೀಕರಣ ಕೆಲಸ ಮಾಡಿದರೆ ಕಾಂಗ್ರೆಸ್‌ಗೆ ಅನುಕೂಲ ಎಂಬ ವ್ಯಾಖ್ಯಾನ ಕೇಳಿಬರುತ್ತಿದೆ.

ಕಾಪು ಕ್ಷೇತ್ರದಲ್ಲಿ ಬಿಜೆಪಿಯ ಗುರ್ಮೆ ಸುರೇಶ್ ಶೆಟ್ಟಿ ಮತ್ತು ಕಾಂಗ್ರೆಸ್‌ನ ವಿನಯ್ ಕುಮಾರ್ ಸೊರಕೆ ಮಧ್ಯೆ ನೇರ ಸ್ಪರ್ಧೆ ಇದೆ. ಶಾಸಕ ಲಾಲಾಜಿ ಮೆಂಡನ್ ಟಿಕೆಟ್ ಕೈತಪ್ಪಿದ್ದರೂ ಬಿಜೆಪಿ ಪರ ಕೆಲಸ ಮಾಡುತ್ತಿದ್ದಾರೆ. ಕಳೆದ ಬಾರಿ ಸೋತರೂ ಕ್ಷೇತ್ರದಲ್ಲಿ ಸಕ್ರಿಯರಾಗಿರುವುದು ಸೊರಕೆ ಅವರಿಗೆ ಅನುಕೂಲಕರ ಎಂಬಂತಿದೆ. 'ಇದು ನನ್ನ ಕೊನೆಯ ಚುನಾವಣೆ' ಎಂಬ ದಾಳವನ್ನೂ ಅವರು ಉರುಳಿಸಿದ್ದಾರೆ. ಬಿಜೆಪಿ ಅಭ್ಯರ್ಥಿ ಬಗ್ಗೆಯೂ ಮತದಾರರು ಒಳ್ಳೆಯ ಮಾತುಗಳನ್ನು ಆಡುತ್ತಿದ್ದಾರೆ. ಮುಸ್ಲಿಮರ ಪ್ರಾಬಲ್ಯ ಸ್ವಲ್ಪ ಹೆಚ್ಚಾಗಿರುವ ಕ್ಷೇತ್ರದಲ್ಲಿ ಎಸ್‌ಡಿಪಿಐನಿಂದ ಹನೀಫ್ ಮೂಳೂರು, ಜೆಡಿಎಸ್‌ನಿಂದ ಸಬಿನಾ ಸಮದ್ ಸ್ಪರ್ಧಿಸಿದ್ದಾರೆ. ಇವರು ಪಡೆಯುವ ಮತಗಳು ಫಲಿತಾಂಶದಲ್ಲಿ ನಿರ್ಣಾಯಕ ಪಾತ್ರ ವಹಿಸಲಿದೆ.

ಹಿಂದುತ್ವ v/s ಹಿಂದುತ್ವ

ಕಾರ್ಕಳದಲ್ಲಿ ಸಚಿವ ವಿ.ಸುನಿಲ್‌ಕುಮಾರ್ ಅವರ ವಿರುದ್ಧ ಕಣಕ್ಕಿಳಿದಿರುವ ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ ಮುತಾಲಿಕ್, ಹಿಂದುತ್ವದ ಕಾರ್ಯಸೂಚಿಯನ್ನೇ ಮುನ್ನೆಲೆಗೆ ತಂದು ಅವರ ವಿರುದ್ಧ ತೊಡೆ ತಟ್ಟಿದ್ದಾರೆ.

ಚುನಾವಣೆ ಘೋಷಣೆಗೂ ಮುನ್ನವೇ ಕಾರ್ಕಳ ಆಖಾಡ ಸಿದ್ಧ ಮಾಡಿಕೊಂಡಿರುವ ಮುತಾಲಿಕ್, ತೆಲಂಗಾಣದ ಬಿಜೆಪಿ ಉಚ್ಚಾಟಿತ ಶಾಸಕ ರಾಜಾ ಸಿಂಗ್ ಠಾಕೂರ್ ಮತ್ತು ಕೆಲ ಮಠಾಧೀಶರನ್ನು ಕರೆತಂದು 'ಪ್ರಜಾ ವಿಜಯ' ಸಮಾವೇಶವನ್ನೂ ನಡೆಸಿದ್ದರು. 'ಸುನಿಲ್ ಕುಮಾರ್ ಹಿಂದುತ್ವವಾದಿ ನಾಯಕರನ್ನು ಗುರಿಯಾಗಿಸಿ ಕಿರುಕುಳ ನೀಡುತ್ತಿದ್ದಾರೆ' ಎಂಬುದು ಸೇರಿ ಹಲವಾರು 'ಅಸ್ತ್ರ'ಗಳನ್ನು ಪ್ರಯೋಗಿಸುತ್ತ ಅವರನ್ನು ಸೋಲಿಸಿಯೇ ತೀರುವುದಾಗಿ ಹಟಕ್ಕೆ ಬಿದ್ದಿದ್ದಾರೆ. ಮುತಾಲಿಕ್ ಸ್ಪರ್ಧೆಗೆ ಶ್ರೀರಾಮ ಸೇನೆಯ ಒಂದು ಬಣ ವಿರೋಧ ವ್ಯಕ್ತಪಡಿಸಿತ್ತು. ಉತ್ತರ ಕರ್ನಾಟಕ ಭಾಗದ ಅವರ ಮಾಜಿ ಸಹವರ್ತಿಗಳು ಬಂದು 'ನಕಲಿ ಹಿಂದೂವಾದಿಯನ್ನು ನಂಬಬೇಡಿ' ಎಂದು ಪತ್ರಿಕಾಗೋಷ್ಠಿ ನಡೆಸಿದ್ದರು. 'ಮುಳ್ಳನ್ನು ಮುಳ್ಳಿನಿಂದ ತೆಗೆಯುವ' ತಂತ್ರಗಾರಿಕೆಯನ್ನು ಸುನಿಲ್ ಕುಮಾರ್ ಅನುಸರಿಸಿದ್ದರು. ಆದರೂ, 'ಮುತಾಲಿಕ್ ಬೆನ್ನುಬಿದ್ದಿದ್ದರಿಂದ ಸುನಿಲ್‌ಕುಮಾರ್ ಇಮೇಜ್‌ಗೆ ಸಾಕಷ್ಟು ಹಾನಿ' ಆಗಿದೆ ಎಂದು ಕ್ಷೇತ್ರದಲ್ಲಿ ಮಾತಿಗೆ ಸಿಕ್ಕ ಕೆಲ ಬಿಜೆಪಿ ಕಾರ್ಯಕರ್ತರೇ ಹೇಳಿದರು.

'ಸುನಿಲ್‌ಕುಮಾರ್ ಕೈಗೆ ಸಿಗುವುದಿಲ್ಲ, ಮರ್ಯಾದೆ ಕೊಡುವುದಿಲ್ಲ' ಎಂಬ ಬೇಸರ ವ್ಯಕ್ತಪಡಿಸುವ ಮತದಾರರೂ ಇದ್ದಾರೆ. ಆದರೆ, ಅಭಿವೃದ್ಧಿ ವಿಷಯ ಬಂದಾಗ ಅವರ ಬಗ್ಗೆ ಮೆಚ್ಚುಗೆಯ ಮಾತು ಆಡುತ್ತಾರೆ.

ಕಾಂಗ್ರೆಸ್ ಅಭ್ಯರ್ಥಿ ಉದಯಕುಮಾರ್ ಶೆಟ್ಟಿ ಮುನಿಯಾಲು ಪ್ರಬಲ ಪೈಪೋಟಿ ಒಡ್ಡಿದ್ದಾರೆ. ಇಲ್ಲಿ ಸ್ವಜಾತಿ (ಬಿಲ್ಲವ–ಬಂಟ) ಮತಗಳನ್ನು ಒಟ್ಟುಗೂಡಿಸುವುದರ ಜೊತೆಗೆ, ಸಣ್ಣ ಸಣ್ಣ ಸಮುದಾಯಗಳ ಮತ ಸೆಳೆಯುವ 'ಕೆಲಸ'ದಲ್ಲಿ ಉಭಯ ಅಭ್ಯರ್ಥಿಗಳು ತೊಡಗಿದ್ದಾರೆ. ಆಡಳಿತವಿರೋಧಿ ಅಲೆ ಮತ್ತು ಮುತಾಲಿಕ್ ಅವರ ಸ್ಪರ್ಧೆಯಿಂದಾಗಿ ಬಿಜೆಪಿ ಅಭ್ಯರ್ಥಿ 'ಬೆವರು ಹರಿಸಬೇಕಾಗಿ' ಬಂದಿದೆ. ತಮಗೆ 'ಬಲಾಢ್ಯ' ಅಭ್ಯರ್ಥಿ ಸಿಕ್ಕಿದ್ದಾರೆ ಎಂಬ ಹುಮ್ಮಸ್ಸಿನಲ್ಲಿರುವ ಕಾಂಗ್ರೆಸ್ ಕ್ಷೇತ್ರವನ್ನು ವಶಪಡಿಸಿಕೊಳ್ಳುವ ಹವಣಿಕೆಯಲ್ಲಿದೆ. ಮುತಾಲಿಕ್ ಎಷ್ಟು ಮತ ಸೆಳೆಯುತ್ತಾರೆ ಎಂಬುದರ ಮೇಲೆ ಫಲಿತಾಂಶ ನಿರ್ಧಾರವಾಗಲಿದೆ.



ಹಿಂದಿನ ಚುನಾವಣೆಯ ಬಲಾಬಲ

ಕ್ಷೇತ್ರ	2013	2018
ಉಡುಪಿ	ಕಾಂಗ್ರೆಸ್	ಬಿಜೆಪಿ
ಬೈಂದೂರು	ಕಾಂಗ್ರೆಸ್	ಬಿಜೆಪಿ
ಕುಂದಾಪುರ	ಪಕ್ಷೇತರ	ಬಿಜೆಪಿ
ಕಾಪು	ಕಾಂಗ್ರೆಸ್	ಬಿಜೆಪಿ
ಕಾರ್ಕಳ	ಬಿಜೆಪಿ	ಬಿಜೆಪಿ

ಡಿಕೆಶಿ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ಗೆ ಹದ್ದು ಡಿಕ್ಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಪ್ರಯಾಣಿಸುತ್ತಿದ್ದ ಹೆಲಿಕಾಪ್ಟರ್‌ಗೆ ಹದ್ದು ಡಿಕ್ಕಿಯಾಗಿದ್ದು, ಕೂಡಲೇ ಪೈಲಟ್ ಹೆಲಿಕಾಪ್ಟರ್ ಅನ್ನು ಸುರಕ್ಷಿತವಾಗಿ ಕೆಳಗೆ ಇಳಿಸಿ ಅನಾಹುತ ತಪ್ಪಿಸಿದ್ದಾರೆ.

ಚುನಾವಣೆ ಪ್ರಚಾರಕ್ಕೆಂದು ಶಿವಕುಮಾರ್ ಹಾಗೂ ಇತರರು, ಕೋಲಾರದ ಮುಳಬಾಗಿಲಿಗೆ ಹೊರಟಿದ್ದರು. ಜಕ್ಕೂರು ಏರೋಡ್ರಮ್‌ನಲ್ಲಿ ಹೆಲಿಕಾಪ್ಟರ್ ಏರಿದ್ದರು. ಮಂಗಳವಾರ ಮಧ್ಯಾಹ್ನ 12.10ಕ್ಕೆ ಹೆಲಿಕಾಪ್ಟರ್ ಟೇಕಾಫ್ ಆಗಿತ್ತು.

ಹೆಲಿಕಾಪ್ಟರ್‌ನಲ್ಲಿಯೇ ಶಿವ ಕುಮಾರ್ ಅವರು ಸುದ್ದಿವಾಹಿನಿಯೊಂದರ ಪ್ರತಿನಿಧಿಗೆ ಸಂದರ್ಶನ ನೀಡುತ್ತಿದ್ದರು. ಹೆಲಿಕಾಪ್ಟರ್ ಟೇಕಾಫ್ ಆಗಿ 8 ನಿಮಿಷವಾಗಿತ್ತು. ಹೊಸಕೋಟೆ ಸಮೀಪದಲ್ಲಿ ಹೆಲಿಕಾಪ್ಟರ್ ಇತ್ತು. ಅದೇ ಸಂದರ್ಭದಲ್ಲಿ ಹದ್ದು, ಹೆಲಿಕಾಪ್ಟರ್‌ನ ಮುಂಭಾಗಕ್ಕೆ ಬಡಿದಿತ್ತು. ಕಿಟಕಿಯ ಬಲಭಾಗದಲ್ಲಿದ್ದ ಫೈಬರ್ ಗಾಜು ಒಡೆದು ತುಂಡಾಗಿತ್ತು. ಗಾಳಿ ಒಳಗೆ ಬರಲಾರಂಭಿಸಿತ್ತು. ಫೈಬರ್ ಗಾಜಿನ ಚೂರುಗಳು ಪೈಲಟ್ ಹಾಗೂ ಇನ್ನೊಬ್ಬ ಪ್ರಯಾಣಿಕರಿಗೆ ತಾಗಿ ಗಾಯಗಳಾಗಿವೆ.

ಅವಘಡದಿಂದಾಗಿ ಹೆಲಿಕಾಪ್ಟರ್ ಅಲುಗಾಡಿತ್ತು. ಶಿವಕುಮಾರ್ ಹಾಗೂ ಇತರರು, ಏನಾಯಿತು?ಎಂದು ಆತಂಕಕ್ಕೆ ಒಳಗಾಗಿದ್ದರು. ಸಮಯಪ್ರಜ್ಞೆ ಮೆರೆದ ಪೈಲಟ್, ಹೆಲಿಕಾಪ್ಟರ್ ವೇಗ ಹಾಗೂ ಎತ್ತರವನ್ನು ಕಡಿಮೆ ಮಾಡಿ ಭೂಮಿಯತ್ತ ಸಾಗಿದರು. ಅಪಾಯದ ಮುನ್ಸೂಚನೆ ಅರಿತ ಪೈಲಟ್, ಎಚ್‌ಎಎಲ್ ವಿಮಾನ ನಿಲ್ದಾಣದಲ್ಲಿ ತುರ್ತು ಭೂ ಸ್ಪರ್ಶ ಮಾಡಿದರು. ನಂತರವೇ ಎಲ್ಲರೂ ನಿಟ್ಟುಸಿರು ಬಿಟ್ಟರು.

ಘಟನೆ ಬಗ್ಗೆ ಪ್ರತಿಕ್ರಿಯಿಸಿರುವ ಶಿವಕುಮಾರ್, ಕನ್ನಡಿಗರ ಆಶೀರ್ವಾದದಿಂದಾಗಿ ಪ್ರಾಣಾಪಾಯದಿಂದ ಪಾರಾಗಿದ್ದೇನೆ. ಸಹ ಪ್ರಯಾಣಿಕ ಹಾಗೂ ಪೈಲಟ್‌ಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಯಾವುದೇ ಆತಂಕಪಡುವ ಅಗತ್ಯವಿಲ್ಲ' ಎಂದಿದ್ದಾರೆ.

ಹದ್ದು ಡಿಕ್ಕಿಹೊಡೆದಿದ್ದರಿಂದಾಗಿ ಜಖಂಗೊಂಡ ಹೆಲಿಕಾಪ್ಟರ್ ಸ್ಥಿತಿ ಬಗ್ಗೆ ಡಿ.ಕೆ. ಶಿವಕುಮಾರ್ ಅವರು ಕಂಪನಿ ಅಧಿಕಾರಿ ಜೊತೆ ಮಾತನಾಡಿದರು

ಜಿಎಸ್‌ಟಿ ಸಂಗ್ರಹ ಬಳಕೆ ಜನರ ಮುಂದಿಡಿ

ರಾಯಚೂರು: 'ದೇಶದಲ್ಲಿ ಜಿಎಸ್‌ಟಿ ತೆರಿಗೆ ದಾಖಲೆ ಪ್ರಮಾಣದಲ್ಲಿ ಸಂಗ್ರಹ ಆಗುತ್ತಿದ್ದರೂ ಜನರು ತೆರಿಗೆ ಕಟ್ಟುತ್ತಿದ್ದಾರೆ. ಆ ಹಣದಿಂದ ಬಡವರ ಬದುಕು ಕಟ್ಟಲಾಗುತ್ತಿದೆಯೇ ಅಥವಾ ಒಂದೆರಡು ಕಂಪನಿಗಳ ಉದ್ಧಾರಕ್ಕೆ ಬಳಕೆಯಾಗುತ್ತಿದೆಯೇ ಎಂಬುದನ್ನು ಜನರ ಎದುರು ಇಡಬೇಕು' ಎಂದು ಜೆಡಿಎಸ್ ನಾಯಕ ಎಚ್‌.ಡಿ.ಕುಮಾರಸ್ವಾಮಿ ಒತ್ತಾಯಿಸಿದರು.

'ರಾಯಚೂರು ಜಿಲ್ಲೆಯ ಅಪೌಷ್ಟಿಕತೆ ಸಮಸ್ಯೆಗೆ ಬಿಜೆಪಿ ಸರ್ಕಾರ ಏನು ಪರಿಹಾರ ಕಲ್ಪಿಸಿದೆ ಎಂಬುದನ್ನು ಹೇಳಬೇಕು' ಎಂದರು.

₹ 6.39 ಕೋಟಿ ಮೌಲ್ಯದ ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು (ಚಿತ್ರದುರ್ಗ): ಅನುಮಾನಾಸ್ಪದವಾಗಿ ಸಾಗಿಸುತ್ತಿದ್ದ ₹ 6.39 ಕೋಟಿ ಮೌಲ್ಯದ ಚಿನ್ನ, ವಜ್ರಾಭರಣವನ್ನು ಆಂಧ್ರದ ಗಡಿಯಲ್ಲಿರುವ ಕಣಕುಪ್ಪೆ ಚೆಕ್‌ಪೋಸ್ಟ್‌ನಲ್ಲಿ ಚುನಾವಣಾ ಸಿಬ್ಬಂದಿ ವಶಕ್ಕೆ ಪಡೆದಿದ್ದಾರೆ.

'ಬಳ್ಳಾರಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ವಾಹನವನ್ನು ಪರಿಶೀಲಿಸಿದಾಗ ಆಭರಣ ಪತ್ತೆಯಾಗಿವೆ. ಇವು ಪ್ರತಿಷ್ಠಿತ ಚಿನ್ನಾಭರಣ ಮಳಿಗೆಗೆ ಸೇರಿದ್ದಾಗಿ ಸಾಗಣೆದಾರರು ಮಾಹಿತಿ ನೀಡಿದ್ದಾರೆ. ದಾಖಲೆ ಹಾಜರುಪಡಿಸದ ಕಾರಣಕ್ಕೆ ವಶಕ್ಕೆ ಪಡೆದು ಪರಿಶೀಲಿಸಲಾಗಿದೆ' ಎಂದು ಜಿಲ್ಲಾ ಚುನಾವಣಾಧಿಕಾರಿ ದಿವ್ಯಪ್ರಭು ಜಿ.ಆರ್.ಜೆ ತಿಳಿಸಿದ್ದಾರೆ.

₹ 4.4 ಲಕ್ಷ ವಶ: ಬೆಂಗಳೂರಿನಿಂದ ಹುಳಿಯಾರು ಪಟ್ಟಣಕ್ಕೆ ಸಾಗಿಸುತ್ತಿದ್ದ ದಾಖಲೆ ಇಲ್ಲದ ₹ 4.4 ಲಕ್ಷವನ್ನು ಹಿರಿಯೂರಿನಲ್ಲಿ ಮಂಗಳವಾರ ವಶಕ್ಕೆ ಪಡೆಯಲಾಗಿದೆ.

'ದಾಖಲೆ ಹಾಜರುಪಡಿಸದ ಕಾರಣಕ್ಕೆ ವಶಕ್ಕೆ ಪಡೆಯಲಾಗಿದೆ. ಯಾರೊಬ್ಬರನ್ನೂ ಬಂಧಿಸಿಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಪರಶುರಾಮ್ ತಿಳಿಸಿದ್ದಾರೆ.

₹ 2.59 ಕೋಟಿ ಮೌಲ್ಯದ ಸ್ವತ್ತುಗಳ ಜಪ್ತಿ (ಬೆಂಗಳೂರು ವರದಿ): ಚುನಾವಣಾ ಅಕ್ರಮ ತಡೆಗೆ ರಾಜ್ಯದ ವಿವಿಧೆಡೆ ಸೋಮವಾರ ನಡೆಸಿದ ಕಾರ್ಯಾಚರಣೆಗಳಲ್ಲಿ ₹ 2.59 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

₹ 1.98 ಕೋಟಿ ನಗದು, ₹ 2.83 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹ 54.38 ಲಕ್ಷ ಮೌಲ್ಯದ 11,616 ಲೀಟರ್ ಮದ್ಯ, ₹ 3.56 ಲಕ್ಷ ಮೌಲ್ಯದ 6.08 ಕೆ.ಜಿ. ಮಾದಕವಸ್ತುವನ್ನು ತನಿಖಾ ಠಾಣೆಗಳಲ್ಲಿನ ತಪಾಸಣೆ, ಜಾಗೃತ ದಳಗಳು ಮತ್ತು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ಕಾರ್ಯಾಚರಣೆಯಲ್ಲಿ ಸೋಮವಾರ ವಶಪಡಿಸಿಕೊಳ್ಳಲಾಗಿದೆ.

ಸುಭಾಷಿತ

ವಿವೇಕವೆಂದರೆ ಬಿಡಿಸಿ ನೋಡುವುದು, ವಿಶ್ಲೇಷಿಸುವುದು, ತೂಗುವುದು, ಅಳೆಯುವುದು.

–ಗೋಪಾಲಕೃಷ್ಣ ಅಡಿಗ

ಜಿಎಸ್‌ಟಿ ಸಂಗ್ರಹದಲ್ಲಿ ದಾಖಲೆ ಸಂಭ್ರಮದ ಜೊತೆ ಚಿಂತನೆಯೂ ಬೇಕು

ಪರೋಕ್ಷ ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸುವ, ಅದನ್ನು ಉದ್ಯಮ ಹಾಗೂ ವರ್ತಕ ಸಮುದಾಯಕ್ಕೆ ಹೆಚ್ಚು ಸ್ನೇಹಿ ಆಗಿಸುವ ಉದ್ದೇಶದಿಂದ 2017ರ ಜುಲೈ 1ರಿಂದ ದೇಶದಾದ್ಯಂತ ಜಾರಿಗೆ ಬಂದ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ವ್ಯವಸ್ಥೆಯು 2023ರ ಏಪ್ರಿಲ್ ತಿಂಗಳಲ್ಲಿ ದಾಖಲೆಯೊಂದನ್ನು ಬರೆದಿದೆ. ಹೊಸ ಆರ್ಥಿಕ ವರ್ಷದ (2023–24) ಮೊದಲ ತಿಂಗಳಾದ ಏಪ್ರಿಲ್‌ನಲ್ಲಿ ಜಿಎಸ್‌ಟಿ ವ್ಯವಸ್ಥೆಯ ಮೂಲಕ ಸಂಗ್ರಹವಾದ ವರಮಾನವು ₹ 1.87 ಲಕ್ಷ ಕೋಟಿ. ಇದು ಈ ವ್ಯವಸ್ಥೆ ಜಾರಿಗೆ ಬಂದ ನಂತರದಲ್ಲಿ ಸಂಗ್ರಹವಾಗಿರುವ ಅತಿಹೆಚ್ಚಿನ ಮೊತ್ತ. ವಿಶ್ವದ ಹಲವು ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಆರ್ಥಿಕ ಹಿಂಜರಿತ ಎದುರಾಗಬಹುದು ಎಂಬ ಆತಂಕ ಇನ್ನೂ ಮುಂದುವರಿದಿರುವ ಸಂದರ್ಭದಲ್ಲಿ, ಭಾರತದಲ್ಲಿ ಪರೋಕ್ಷ ತೆರಿಗೆ ಸಂಗ್ರಹವು ಹೊಸ ದಾಖಲೆ ನಿರ್ಮಿಸಿರುವುದು ಆಶಾದಾಯಕ ಬೆಳವಣಿಗೆ. ಅಂಕೆ ಮೀರಿರುವ ಹಣದುಬ್ಬರ ಪ್ರಮಾಣವನ್ನು ನಿಯಂತ್ರಣಕ್ಕೆ ತರಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ರೆಪೊ ದರವನ್ನು 2022ರ ಮೇ ತಿಂಗಳಿನಿಂದ ಹೆಚ್ಚಿಸುತ್ತ ಬಂತು. ಈ ವರ್ಷದ ಏಪ್ರಿಲ್ ಮೊದಲ ವಾರದಲ್ಲಿ ನಡೆದ ಆರ್‌ಬಿಐನ ಹಣಕಾಸು ನೀತಿ ಸಮಿತಿಯ ಸಭೆಯು, ರೆಪೊ ದರದ ಯಥಾಸ್ಥಿತಿಯನ್ನು ಕಾಯ್ದುಕೊಳ್ಳುವ ತೀರ್ಮಾನವನ್ನು ಪ್ರಕಟಿಸಿತು. ರೆಪೊ ದರದ ನಿರಂತರ ಏರಿಕೆಗೆ ವಿರಾಮ ಸಿಕ್ಕ ತಿಂಗಳ ಜಿಎಸ್‌ಟಿ ಸಂಗ್ರಹಕ್ಕೆ ಸಂಬಂಧಿಸಿದ ಅಂಕಿ-ಅಂಶ ಇದು. [illegible]

ಏಪ್ರಿಲ್‌ನಲ್ಲಿ ದೇಶದ ತಯಾರಿಕಾ ವಲಯದಲ್ಲಿನ ಚಟುವಟಿಕೆಗಳ ಪ್ರಮಾಣವು ನಾಲ್ಕು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ ಎಂಬುದನ್ನು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ (ಪಿಎಂಐ) ಹೇಳುತ್ತಿದೆ. ದೇಶದ ಪ್ರಮುಖ ಆಟೊಮೊಬೈಲ್ ಕಂಪನಿಗಳು ಏಪ್ರಿಲ್ ತಿಂಗಳ ವಾಹನ ಮಾರಾಟ ವಿವರಗಳನ್ನು ಪ್ರಕಟಿಸಿವೆ. ಬಹುತೇಕ ಕಂಪನಿಗಳ ವಾಹನ ಮಾರಾಟ ಸಂಖ್ಯೆಯು, ಹಿಂದಿನ ವರ್ಷದ ಏಪ್ರಿಲ್‌ನ ಮಾರಾಟಕ್ಕೆ ಹೋಲಿಸಿದರೆ ಹೆಚ್ಚಾಗಿದೆ. ಇದು ಕೂಡ ಉತ್ತೇಜನಕಾರಿ. ಜಾಗತಿಕ ಮಟ್ಟದಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಲ್ಲಿ ಈಚಿನ ದಿನಗಳಲ್ಲಿ ಕೆಲವು ಅನಪೇಕ್ಷಿತ ಬೆಳವಣಿಗೆಗಳು ನಡೆದಿವೆ. ಈ ರೀತಿ ಆಗಿದ್ದಕ್ಕೆ ಕಾರಣ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರವನ್ನು ತೀವ್ರಗತಿಯಲ್ಲಿ ಹೆಚ್ಚಿಸಿದ್ದು ಕೂಡ ಒಂದು ಎಂಬ ಅಭಿಪ್ರಾಯ ಇದೆ. ಆದರೆ, ಭಾರತದ ಬ್ಯಾಂಕಿಂಗ್ ವ್ಯವಸ್ಥೆಯು ಸುಭದ್ರವಾಗಿದೆ, ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಸಮಸ್ಯೆಗಳು ಭಾರತದಲ್ಲಿ ಆಗುವ ಸಾಧ್ಯತೆ ಇಲ್ಲ ಎಂಬ ಭರವಸೆಯನ್ನು ಆರ್‌ಬಿಐ ನೀಡಿದೆ. [illegible] ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜಿನ ಪ್ರಕಾರ, ಭಾರತದ ಆರ್ಥಿಕ ಬೆಳವಣಿಗೆ ದರವು 2023ರಲ್ಲಿ ಶೇಕಡ 6.1ರಷ್ಟು ಇರಲಿದೆ. [illegible]

ನೀತಿ ನಿರೂಪಕರು ಇದನ್ನು ಒಂದು ಅವಕಾಶವೆಂದು ಪರಿಗಣಿಸಿ, ತೆರಿಗೆ ವ್ಯವಸ್ಥೆಯನ್ನು ಇನ್ನಷ್ಟು ಸರಳಗೊಳಿಸುವ ಕಡೆ ಹೆಜ್ಜೆ ಇರಿಸಬೇಕು

ಜಾಗತಿಕ ಅನಿಶ್ಚಿತತೆಯ ಸಂದರ್ಭದಲ್ಲಿಯೂ ಭಾರತದ ಅರ್ಥ ವ್ಯವಸ್ಥೆಯಲ್ಲಿ ಹಲವು ಆಶಾದಾಯಕ ಚಿತ್ರಣಗಳು ಕಾಣುತ್ತಿವೆ. ಈ ಹೊತ್ತಿನಲ್ಲಿ ಜಿಎಸ್‌ಟಿ ವರಮಾನ ಸಂಗ್ರಹ ಜಾಸ್ತಿ ಆಗಿರುವುದನ್ನು ಸಂಭ್ರಮದಿಂದ ಕಾಣುವ ಕೆಲಸವಷ್ಟೇ ಆಗಬಾರದು. ನೀತಿ ನಿರೂಪಕರು ಇದನ್ನು ಒಂದು ಅವಕಾಶವೆಂದು ಪರಿಗಣಿಸಿ, ತೆರಿಗೆ ವ್ಯವಸ್ಥೆಯನ್ನು ಇನ್ನಷ್ಟು ಸರಳಗೊಳಿಸುವ ಕಡೆ ಹೆಜ್ಜೆ ಇರಿಸಬೇಕು. ಜಿಎಸ್‌ಟಿ ವ್ಯವಸ್ಥೆ ಜಾರಿಗೆ ಬಂದು ಆರು ವರ್ಷಗಳು ಪೂರ್ಣಗೊಳ್ಳುತ್ತಿದೆ. ಹೀಗಿದ್ದರೂ, ಈ ವ್ಯವಸ್ಥೆಯ ಅಡಿಯಲ್ಲಿ ತೆರಿಗೆ ಪಾವತಿ, ವಿನಾಯಿತಿಗಳನ್ನು ಪಡೆದುಕೊಳ್ಳುವುದು ಹಲವರ ಪಾಲಿಗೆ ಸಂಕೀರ್ಣವಾದ ಪ್ರಕ್ರಿಯೆಯಾಗಿಯೇ ಉಳಿದಿದೆ. ಇದನ್ನು ನಿವಾರಿಸಬೇಕು. ಪೆಟ್ರೋಲ್, ಡೀಸೆಲ್‌ನಂತಹ ಜೀವನಾವಶ್ಯಕ ಉತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರುವಲ್ಲಿನ ಅಡಚಣೆಗಳನ್ನು ನಿವಾರಿಸಲು ಮುಂದಡಿ ಇರಿಸಬೇಕು.

ದಿನದ ಟ್ವೀಟ್

ಮುಗಿಬೀಳುವುದಕ್ಕೇ ಆದ್ಯತೆ?!

ಕರ್ನಾಟಕದಲ್ಲಿ ಮತದಾನಕ್ಕೆ ಕೆಲ ದಿನಗಳಷ್ಟೇ ಬಾಕಿಯಿವೆ. ನಿರುದ್ಯೋಗ ಮತ್ತು ಬೆಲೆ ಏರಿಕೆಯು ಜನ ಎದುರಿಸುತ್ತಿರುವ ಪ್ರಮುಖ ಸವಾಲುಗಳು ಎಂಬುದನ್ನು ಲೋಕನೀತಿ- ಸಿಎಸ್‌ಡಿಎಸ್ ಸಮೀಕ್ಷೆಯು ಎತ್ತಿ ತೋರಿದೆ. ಆದರೆ ಚುನಾವಣಾ ಪ್ರಚಾರ ಕಾರ್ಯದಲ್ಲಿ, ತಮ್ಮ ಕಾರ್ಯಸೂಚಿಯನ್ನು ಪ್ರಸ್ತುತಪಡಿಸುವುದಕ್ಕಿಂತ ಹೆಚ್ಚಾಗಿ ಎದುರಾಳಿಯ ಮೇಲೆ ಮುಗಿಬೀಳುವುದಕ್ಕೆ ಆದ್ಯತೆ ನೀಡುವ ನಕಾರಾತ್ಮಕತೆಯೇ ಹೆಚ್ಚಿರುವಂತಿದೆ.

ಸಂದೀಪ್ ಶಾಸ್ತ್ರಿ, ರಾಜಕೀಯ ವಿಶ್ಲೇಷಕ

ಕಿಡಿನುಡಿ



ದ್ವೇಷ ಬಿತ್ತುವವರ ವಿರುದ್ಧ, ಸಂವಿಧಾನದ ವಿಧಿಗಳನ್ನು ಉಲ್ಲಂಘಿಸುವವರ ವಿರುದ್ಧ ಕಠಿಣ ಕ್ರಮ, ಸಂವಿಧಾನಕ್ಕೆ ಧಕ್ಕೆ ತರುವವರ ಮೇಲೆ ನಿಷೇಧ ಎನ್ನುವುದು ಯಾವುದೇ ಪಕ್ಷದ ಪ್ರಣಾಳಿಕೆಯಲ್ಲಿರಬೇಕಾದ ಆಶ್ವಾಸನೆಯೇ? ಇದು ಪೊಲೀಸ್ ಮತ್ತು ನ್ಯಾಯಪಾಲನೆಯ ನಿತ್ಯದ ಕೆಲಸವಾಗಿರಬೇಕಲ್ಲವೇ? ಯಾವುದೇ ರಾಜಕೀಯ ಪಕ್ಷವು ಇದನ್ನು ವಿರೋಧಿಸುವುದೆಂದರೆ ಏನರ್ಥ?

(ಕಾಂಗ್ರೆಸ್ ಪ್ರಣಾಳಿಕೆಗೆ ಪ್ರತಿಕ್ರಿಯೆ)

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

25 ವರ್ಷಗಳ ಹಿಂದೆ

ಭಾನುವಾರ, 3-5-1998

- **ಪಟೇಲ್ ರಾಜೀನಾಮೆಗೆ ಜಾಲಪ್ಪ ಆಗ್ರಹ**

ಬೆಂಗಳೂರು, ಮೇ 2– ಕೃಷ್ಣಾ ಮೇಲ್ದಂಡೆ ಯೋಜನೆಯ ಕಾಮಗಾರಿಗಳನ್ನು ತುಂಡು ಗುತ್ತಿಗೆ ನೀಡುವಲ್ಲಿ ಸುಮಾರು 300ರಿಂದ 400 ಕೋಟಿ ರೂಪಾಯಿಗಳಷ್ಟು ಅವ್ಯವಹಾರಗಳು ನಡೆದಿವೆ ಎಂದು ಇಲ್ಲಿ ನೇರವಾಗಿ ಆಪಾದಿಸಿದ ಕಾಂಗ್ರೆಸ್ ಮುಖಂಡ, ಕೇಂದ್ರದ ಮಾಜಿ ಸಚಿವ ಆರ್.ಎಲ್. ಜಾಲಪ್ಪ ಅವರು ಸಿಬಿಐ ತನಿಖೆಗೆ ಆಗ್ರಹಪಡಿಸಿದರಲ್ಲದೆ, ಇದರ ಬಗ್ಗೆ ನೈತಿಕ ಹೊಣೆ ಹೊತ್ತು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಆಗ್ರಹಪಡಿಸಿದರು.

ವಿಧಾನಮಂಡಲದ ಅಂದಾಜು ಸಮಿತಿಯು ಈ ಯೋಜನೆಯ ಕಾಮಗಾರಿಗಳಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸಿಬಿಐ ತನಿಖೆಗೆ ಸಲಹೆ ಮಾಡಿದೆ. ಆಡಳಿತ ಪಕ್ಷದ ಸದಸ್ಯರೂ ಇರುವ ಸಮಿತಿಯೇ ಇಂಥ ಶಿಫಾರಸು ಮಾಡಿರುವುದರಿಂದ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಗೌರವವಿದ್ದರೆ ಮುಖ್ಯಮಂತ್ರಿ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ಒತ್ತಾಯಪಡಿಸಿದರು.

- **ಅಲ್ಪಸಂಖ್ಯಾತರ ವಿಶ್ವಾಸ ಗಳಿಸಲು ಬಿಜೆಪಿ ಯೋಜನೆ**

ಗಾಂಧಿನಗರ, ಮೇ 2 (ಪಿಟಿಐ)– ದೇಶದಲ್ಲಿ ತನ್ನ ನೆಲೆಯನ್ನು ಬಲಪಡಿಸಿಕೊಳ್ಳುವ ಉದ್ದೇಶದಿಂದ ಅಲ್ಪಸಂಖ್ಯಾತರು ಮತ್ತು ದುರ್ಬಲ ವರ್ಗದವರಲ್ಲಿ ಪಕ್ಷದ ಬಗ್ಗೆ ವಿಶ್ವಾಸ ಮೂಡಿಸುವ ಹೊಸ ಯತ್ನವಾಗಿ ಕಾರ್ಯಯೋಜನೆಯೊಂದನ್ನು ರೂಪಿಸಲು ಭಾರತೀಯ ಜನತಾ ಪಕ್ಷ ನಿರ್ಧರಿಸಿದೆ.

50 ವರ್ಷಗಳ ಹಿಂದೆ

ಗುರುವಾರ, 3-5-1973

- **ರಾಜ್ಯದಲ್ಲಿ ಖಾದ್ಯ ತೈಲ, ನೂಲು ಉತ್ಪಾದಕರಿಗೆ ಹೆಚ್ಚು ವಿದ್ಯುತ್ ನೀಡಿಕೆ**

ಬೆಂಗಳೂರು, ಮೇ 2– ರಾಜ್ಯದಲ್ಲಿ ಖಾದ್ಯ ತೈಲ ಹಾಗೂ ಹತ್ತಿ ನೂಲಿನ ಹೆಚ್ಚು ಉತ್ಪತ್ತಿಗಾಗಿ ಹೆಚ್ಚು ವಿದ್ಯುತ್ ಸರಬರಾಜು, ಮನೆಯಲ್ಲಿ ದೀಪಕ್ಕಾಗಿ ತಿಂಗಳಿಗೆ 50 ಯುನಿಟ್‌ಗಿಂತ ಹೆಚ್ಚು ವಿದ್ಯುತ್ ಬಳಸದ ಗ್ರಾಹಕರಿಗೆ ಬಳಕೆ ಮಿತಿಯ ವಿನಾಯಿತಿ.

ಇಂದು ವಿಧಾನಸಭೆಯಲ್ಲಿ ವಿದ್ಯುತ್ ಸಚಿವ ಎಚ್.ಎಂ. ಚನ್ನಬಸಪ್ಪ ಅವರು ಸರ್ಕಾರದ ಈ ಪ್ರಮುಖ ತೀರ್ಮಾನಗಳನ್ನು ಪ್ರಕಟಿಸಿದರು. ಸಭೆಯು ಸಚಿವರ ಪ್ರಕಟಣೆಯನ್ನು ಸ್ವಾಗತಿಸಿತು.

- **ಇಂಗಳದಾಳದ ತಾಮ್ರ ಉತ್ಪನ್ನ ಪರೀಕ್ಷೆ ಯಶಸ್ವಿ**

ಬೆಂಗಳೂರು, ಮೇ 2– ಚಿತ್ರದುರ್ಗ ಜಿಲ್ಲೆಯ ಇಂಗಳದಾಳದಲ್ಲಿ ತಾಮ್ರದ ಉತ್ಪಾದನೆಯ ಪ್ರಯೋಗ ಯಶಸ್ವಿಯಾಗಿದೆ ಎಂದು ಕೈಗಾರಿಕಾ ಸಚಿವ ಎಸ್.ಎಂ. ಕೃಷ್ಣ ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

ಉತ್ಪಾದನೆಯನ್ನು ಆದಷ್ಟು ಬೇಗ ಕೈಗೊಳ್ಳಲಾಗುವುದೆಂದು ಅವರು ಹೇಳಿದರು.

ದೊಡ್ಡತಿಮ್ಮಯ್ಯ ಅವರ ಪ್ರಶ್ನೆಗೆ ಉತ್ತರ ನೀಡಿದ ಸಚಿವರು, ಪ್ರತಿ ದಿವಸ ಅಲ್ಲಿ 260 ಟನ್ ತಾಮ್ರದ ನಿಕ್ಷೇಪವನ್ನು ತೆಗೆಯಬಹುದು ಎಂದು ನುಡಿದರು.

ಹಾಸನ ಜಿಲ್ಲೆಯ ಕಲ್ಯಾಡಿ, ಕಲ್ಬುರ್ಗಿ ಜಿಲ್ಲೆಯ ಲೆತಣಿಯಲ್ಲಿ ತಾಮ್ರದ ನಿಕ್ಷೇಪವನ್ನು ಹೊರತೆಗೆಯಲು ಈ ವರ್ಷದ ಬಜೆಟ್‌ನಲ್ಲಿ 21 ಲಕ್ಷ ರೂ.ವನ್ನು ಒದಗಿಸಲಾಗಿದೆ ಎಂದರು.

ರಾಜ್ಯದ ಮೇಲೆ ಕೇಂದ್ರದ ದಬ್ಬಾಳಿಕೆಗೆ ಡಬಲ್ ಎಂಜಿನ್ ಸರ್ಕಾರ ಎಂದು ಹೆಸರು

ಅಲ್ಲಿನವರಿಲ್ಲಿ ಬೇಡವೆನ್ನುತ್ತಾ ಬಂದ ಕನ್ನಡಿಗರು

ಅನುರಣನ

ನಾರಾಯಣ ಎ.

ಚುನಾವಣಾ ಪ್ರಚಾರದಲ್ಲಿ ಭರವಸೆಗಳನ್ನು ಉಪಮೆಗಳ ಮೂಲಕ, ರೂಪಕಗಳ ಮೂಲಕ ನೀಡುವುದಿದೆ. ಆದರೆ 'ಡಬಲ್ ಎಂಜಿನ್' ಎನ್ನುವ ಈ ಇಂಗ್ಲಿಷ್ ಪದಪುಂಜ ಚುನಾವಣಾ ಸಂವಹನವನ್ನೇ ಯಾಂತ್ರೀಕರಿಸುತ್ತಿರುವಂತೆ ಕಾಣಿಸುತ್ತದೆ. 'ಡಬಲ್ ಎಂಜಿನ್ ಸರ್ಕಾರ'ವನ್ನು ಕಷ್ಟಪಟ್ಟು ಕನ್ನಡಕ್ಕೆ ಭಾಷಾಂತರಿಸಿಕೊಂಡರೆ 'ಎರಡು ಯಂತ್ರಗಳ ಸರ್ಕಾರ' ಅಂತ ಹೇಳಬಹುದೋ ಏನೋ?

ಸರ್ಕಾರವೇ ಒಂದು ಯಂತ್ರ. ಆ ಯಂತ್ರಕ್ಕೆ ಇನ್ನೆರಡು ಯಂತ್ರಗಳಂತೆ. ಎಲ್ಲಾ ಯಂತ್ರ. ಎಲ್ಲಾ ಯಾಂತ್ರಿಕ. ಚುನಾವಣೆಯ ಭಾಷೆ ನೆಲದ ಭಾಷೆಯಾಗಿರಬಾರದೇ? ಚುನಾವಣೆಯ ಭರವಸೆಗಳನ್ನು ಯಂತ್ರದ ವರಸೆಯ ಬದಲು ಮನುಷ್ಯ- ಮನುಷ್ಯತ್ವದ ನುಡಿಗಟ್ಟುಗಳಲ್ಲಿ ಹೆಣೆಯಬಾರದೇ?

ಭಾಷೆಯ, ಅಲಂಕಾರಗಳ ಮಾತು ಹಾಗಿರಲಿ. ಮುಖ್ಯ ವಿಷಯಕ್ಕೆ ಬರೋಣ. ಈ ಡಬಲ್ ಎಂಜಿನ್ ಅನ್ನುವ ಪರಿಕಲ್ಪನೆಯನ್ನು ದೇಶದ ಸಂವಿಧಾನದ ಚೌಕಟ್ಟಿನಲ್ಲಿ ಅರ್ಥ ಮಾಡಿಕೊಳ್ಳಲು ಹೊರಟರೆ, ಹಳೆಯ ಚಂದಮಾಮ ಕತೆಗಳ ನೆನಪಾಗುತ್ತದೆ. ಒಬ್ಬ ದೊಡ್ಡ ರಾಜ ಮತ್ತೊಬ್ಬ ರಾಜನಿಗೆ ಹೇಳುತ್ತಾನೆ: 'ನೀನು ನನ್ನ ಸಾಮಂತನಾಗು. ನಾನು ನಿನ್ನ, ನಿನ್ನ ರಾಜ್ಯದ, ನಿನ್ನ ಪ್ರಜೆಗಳ ಸಕಲ ಇಷ್ಟಾನಿಷ್ಟಗಳನ್ನೂ ಪೂರೈಸುತ್ತೇನೆ. ಇಲ್ಲದೇಹೋದರೆ ಪರಿಣಾಮ ಎದುರಿಸಲು ಸಿದ್ಧನಾಗು'. ಈಗ ಈ 'ಡಬಲ್ ಎಂಜಿನ್' ಎನ್ನುವ ಇಂಗ್ಲಿಷ್‌ನ ಯಾಂತ್ರಿಕ ಪದಪುಂಜವನ್ನು ಅನಾವರಣಗೊಳಿಸಿದಾಗ, ಅಲ್ಲಿರುವುದು ಕೂಡಾ ಇಂತಹದ್ದೊಂದು ಸಾಮಂತೀಕರಣದ ಮಾದರಿ. ಅದು ಭರವಸೆಯಲ್ಲ. ಅದು ಬೆದರಿಕೆ. ಈ ದೇಶದ ಮಹಾನ್ ಸಂವಿಧಾನ ಒದಗಿಸಿಕೊಟ್ಟಿರುವ ರಾಜ್ಯಗಳ ಸ್ವಾಯತ್ತತೆಯ ಒಕ್ಕೂಟ ವ್ಯವಸ್ಥೆಯನ್ನು ಬುಡಮೇಲುಗೊಳಿಸುವ ಕೇಂದ್ರೀಕರಣದ ರಾಜಕೀಯ.

'ಇಲ್ಲೂ ನಮ್ಮದೇ ಸರ್ಕಾರ ಇಲ್ಲದೇಹೋದರೆ ಗಲಭೆಗಳಾಗುತ್ತವೆ' ಅಂತ ದೆಹಲಿಯಿಂದ ಬಂದ ದೊಡ್ಡ ನಾಯಕರೊಬ್ಬರು ಕನ್ನಡಿಗರಿಗೆ ಎಚ್ಚರಿಕೆ ನೀಡಿರುವುದು ಕೂಡ 'ಡಬಲ್ ಎಂಜಿನ್'ನ ವೇಗಕ್ಕೆ ಕರ್ನಾಟಕದ ರಾಜಕೀಯ ಎತ್ತ ಸಾಗಬಹುದು ಎನ್ನುವುದಕ್ಕೊಂದು ಸಿಗ್ನಲ್. ಡಬಲ್ ಎಂಜಿನ್ ಸರ್ಕಾರ ಇದ್ದರೆಮಾತ್ರಅಭಿವೃದ್ಧಿ, ಕರ್ನಾಟಕದಲ್ಲೊಂದು ಎಂಜಿನ್, ದೆಹಲಿಯಲ್ಲಿ ಇನ್ನೊಂದು ಎಂಜಿನ್ ಇದ್ದರೆ ಕರ್ನಾಟಕದ ಅಭಿವೃದ್ಧಿ ಆಗುವುದಿಲ್ಲ ಎಂದೂ, ಕರ್ನಾಟಕದಲ್ಲಿ ಬೇರೊಂದು ಪಕ್ಷದ ನೇತೃತ್ವದ ಸರ್ಕಾರ ಇದ್ದರೆ ಕೇಂದ್ರದ ಯೋಜನೆಗಳನ್ನು ರಾಜ್ಯದಲ್ಲಿ ಜಾರಿಗೊಳಿಸಲು ತೊಡಕಾಗುತ್ತದೆ ಎಂಬಿತ್ಯಾದಿ ಆಧಾರರಹಿತ ಆತಂಕಗಳಿಗೆ ಕರ್ನಾಟಕ ಎಂದೋ ಉತ್ತರ ನೀಡಿ ಆಗಿದೆ. ಚರಿತ್ರೆಯನ್ನು ಮರೆತವರು ಅಥವಾ ಮರೆತಂತೆ ನಟಿಸುವವರು ಮಾತ್ರ ಈಗಾಗಲೇ ನಿವಾರಣೆಯಾದ ಆತಂಕಗಳನ್ನು ಕೂಡಾ ಮತ್ತೆ ಮತ್ತೆ ಜನರ ಮುಂದಿಡುವ ಪ್ರಯತ್ನ ಮಾಡುವುದು.

1983ರ ನಂತರ ಈ ರಾಜ್ಯದಲ್ಲಿ ಕಾಂಗ್ರೆಸ್ಸಿನ ಏಕಸ್ವಾಮ್ಯ ರಾಜಕೀಯ ಕೊನೆಗೊಂಡ ನಂತರ ರಾಜ್ಯದ ಮತದಾರರು ಯಾವತ್ತೂ ದೆಹಲಿಯಲ್ಲಿ ಒಂದು ಪಕ್ಷದ ನೇತೃತ್ವದ ಸರ್ಕಾರ ಇದ್ದಾಗ, ಕರ್ನಾಟಕದಲ್ಲಿ ಇನ್ನೊಂದು ಪಕ್ಷದ ನೇತೃತ್ವದ ಸರ್ಕಾರ ಇರುವ ಹಾಗೆ ನೋಡಿಕೊಂಡಿದ್ದಾರೆ. ಅಂದರೆ, ಸ್ವಂತ ವಿವೇಚನೆಯನ್ನು ಬಳಸಿ ಕರ್ನಾಟಕದ ಮತದಾರರು ಈ ಡಬಲ್ ಎಂಜಿನ್ ಸರ್ಕಾರದ ಪರಿಕಲ್ಪನೆಯನ್ನು ಎಂದೋ ತಿರಸ್ಕರಿಸಿದ್ದಾರೆ.

1983ರಲ್ಲಿ ಕರ್ನಾಟಕದಲ್ಲಿ ಜನತಾ ಪಕ್ಷದ ನೇತೃತ್ವದ ಸರ್ಕಾರ ಬಂದಾಗ ಕೇಂದ್ರದಲ್ಲಿ ಇದ್ದದ್ದು ಇಂದಿರಾ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ. 1985ರಲ್ಲಿ ಮತ್ತೆ ಕರ್ನಾಟಕದಲ್ಲಿ ಜನತಾ ಪಕ್ಷದ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಕೇಂದ್ರದಲ್ಲಿ ಇದ್ದದ್ದು ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ. 1989ರಲ್ಲಿ ಇಲ್ಲಿ ಭಾರಿ ಬಹುಮತದೊಂದಿಗೆ ಕಾಂಗ್ರೆಸ್ ನೇತೃತ್ವದ ಸರ್ಕಾರ ಮತ್ತೆ ಅಧಿಕಾರಕ್ಕೆ ಬಂದಾಗ, ಕೇಂದ್ರದಲ್ಲಿ ಇದ್ದದ್ದು ವಿ.ಪಿ. ಸಿಂಗ್ ನೇತೃತ್ವದ ಜನತಾದಳ ಸರ್ಕಾರ. 1994ರಲ್ಲಿ ಇಲ್ಲಿ ದೇವೇಗೌಡರ ನೇತೃತ್ವದ ಜನತಾದಳ ಗೆದ್ದು ಸರ್ಕಾರ ರಚಿಸಿದಾಗ ಕೇಂದ್ರದಲ್ಲಿ ಇದ್ದದ್ದು ಪಿ.ವಿ.ನರಸಿಂಹ ರಾವ್ ನೇತೃತ್ವದ ಕಾಂಗ್ರೆಸ್ ಸರ್ಕಾರ. 1999ರಲ್ಲಿ ಕರ್ನಾಟಕದಲ್ಲಿ ಎಸ್.ಎಂ.ಕೃಷ್ಣ ನೇತೃತ್ವದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗ ಕೇಂದ್ರದಲ್ಲಿ ಇದ್ದದ್ದು ವಾಜಪೇಯಿ ಅವರ ಬಿಜೆಪಿ ನೇತೃತ್ವದ ಸರ್ಕಾರ. 2006ರಲ್ಲಿ ಇಲ್ಲಿ ಜನತಾದಳ ಮತ್ತು ಬಿಜೆಪಿ ಸಮ್ಮಿಶ್ರ ಸರ್ಕಾರ ಅಧಿಕಾರ ಹಿಡಿದಾಗ ಕೇಂದ್ರದಲ್ಲಿ ಇದ್ದದ್ದು ಕಾಂಗ್ರೆಸ್ ನೇತೃತ್ವದ ಸರ್ಕಾರ.

2008ರಲ್ಲಿ ಮೊದಲ ಬಾರಿಗೆ ಬಿಜೆಪಿ ಇಲ್ಲಿ ಸರ್ಕಾರ ರಚಿಸಿದಾಗ ಕೇಂದ್ರದಲ್ಲಿ ಅಧಿಕಾರ ಹೊಂದಿದ್ದದ್ದು ಕಾಂಗ್ರೆಸ್. 2013ರಲ್ಲಿ ಇಲ್ಲಿ ಕಾಂಗ್ರೆಸ್ ಗೆದ್ದು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಮೊದಲ ಒಂದು ವರ್ಷ ಬಿಟ್ಟರೆ ನಂತರ ಕೇಂದ್ರದಲ್ಲಿ ಇದ್ದದ್ದು ಬಿಜೆಪಿಯ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ. ಮಧ್ಯೆ ಅಲ್ಲೊಮ್ಮೆ ಇಲ್ಲೊಮ್ಮೆ ಸಣ್ಣ ಅವಧಿಗಳಿಗೆ ಕೇಂದ್ರದಲ್ಲಿ ಮತ್ತು ಕರ್ನಾಟಕದಲ್ಲಿ ಒಂದೇ ಪಕ್ಷ ಅಧಿಕಾರದಲ್ಲಿ ಇದ್ದದ್ದು ಬಿಟ್ಟರೆ ನಾಲ್ಕು ವರ್ಷಗಳ ಕಾಲ ಸುದೀರ್ಘ ಅವಧಿಗೆ ಕೇಂದ್ರದಲ್ಲಿ ಮತ್ತು ಕರ್ನಾಟಕದಲ್ಲಿ ಒಂದೇ ಪಕ್ಷ ಅಧಿಕಾರ ಹಿಡಿದದ್ದು ಈಗ 2019 ಮತ್ತು 2023ರ ನಡುವೆ ಮಾತ್ರ. ಕರ್ನಾಟಕದಲ್ಲೊಂದು ಪ್ರಾದೇಶಿಕ ಪಕ್ಷ ಇಲ್ಲದೇ ಇರಬಹುದು. ಆದರೆ ಇಲ್ಲೊಂದು ಪ್ರಾದೇಶಿಕ ಪ್ರಜ್ಞೆ ಇದೆ ಎನ್ನುವುದಕ್ಕೆ ಇದುವೇ ಸಾಕ್ಷಿ.

ಹೀಗೆ ಕರ್ನಾಟಕದ ಮತದಾರರು ಕೇಂದ್ರದಲ್ಲಿ ಒಂದು ಪಕ್ಷ ಅಧಿಕಾರದಲ್ಲಿದ್ದಾಗ ರಾಜ್ಯದಲ್ಲಿ ಇನ್ನೊಂದು ಪಕ್ಷಕ್ಕೆ ಮನ್ನಣೆ ನೀಡುತ್ತಾ ಬಂದದ್ದು ಸರಿಯಾಗಿಯೇ ಇತ್ತು ಎನ್ನುವುದನ್ನು ಆ ಅವಧಿಯಲ್ಲಿ ಈ ರಾಜ್ಯ ಕಂಡ ಅಭಿವೃದ್ಧಿಯೇ ಹೇಳುತ್ತದೆ. ದೇಶದಲ್ಲಿ ಹತ್ತರ ಜತೆ ಹನ್ನೊಂದು ಎನ್ನುವಂತಿದ್ದ ಕರ್ನಾಟಕ ಆ ಅವಧಿಯಲ್ಲಿ ರಾಷ್ಟ್ರದ ಗಮನ ಸೆಳೆಯಿತು. ದೇಶದ ಎಲ್ಲೆಡೆಗಳಿಂದ ಉದ್ಯೋಗ ಅರಸಿ ಜನ ಕರ್ನಾಟಕಕ್ಕೆ ಬರುವ ಹಾಗಾಯಿತು. ಅದಾಗಲೇ ಚೆನ್ನೈ, ಹೈದರಾಬಾದ್‌ನಂತಹ ಮೆಟ್ರೊ ನಗರಗಳನ್ನು ಹೊಂದಿದ್ದ ಕಾರಣಕ್ಕೆ ತಮಿಳುನಾಡು ಮತ್ತು ಆಂಧ್ರಪ್ರದೇಶ ರಾಜ್ಯಗಳು ಪಡೆದ ಖ್ಯಾತಿಗೆ ಸಮದಂಡಿಯಾಗಿ ಕರ್ನಾಟಕ ಕೂಡ ಬೆಂಗಳೂರನ್ನು ಬೆಳೆಸಿ, ದೇಶದ ಆರ್ಥಿಕ ನಕ್ಷೆಯಲ್ಲಿ ಪುಟಿದೆದ್ದದ್ದು ಆಗಲೇ. ಬೇರೆ ಪಕ್ಷದ ನೇತೃತ್ವದ ಸರ್ಕಾರ ಇದ್ದ ಕಾರಣ ಕೇಂದ್ರದ ಯೋಜನೆಗಳಿಗೆ ಇಲ್ಲಿ ತೊಂದರೆ ಆದ ಕತೆ ಯಾರೂ ಕೇಳಿಲ್ಲ. ಈ ಕಾರಣಕ್ಕೆ ಅಭಿವೃದ್ಧಿ ಕುಂಠಿತಗೊಂಡಿತ್ತು ಅಂತ ಯಾವ ವರದಿಯೂ ಹೇಳಿಲ್ಲ.

ಡಬಲ್ ಎಂಜಿನ್ ಸರ್ಕಾರ ಇಲ್ಲದೆಯೇ ಕರ್ನಾಟಕ ಬೆಳೆದಿದೆ ಎನ್ನುವುದಕ್ಕೆ ಕಣ್ಣಿಗೆ ರಾಚುವಂತಹ ರೀತಿಯ ಪುರಾವೆಗಳಿವೆ. ತದ್ವಿರುದ್ಧವಾಗಿ, ಕೇಂದ್ರದಿಂದ ಅನ್ಯಾಯ ಆಗುತ್ತಿದೆ, ಕರ್ನಾಟಕಕ್ಕೆ ಸಿಗಬೇಕಿರುವ ತೆರಿಗೆ ಪಾಲು ಸಿಗುತ್ತಿಲ್ಲ, ಕರ್ನಾಟಕದ ರಾಜಕೀಯ ನಾಯಕರು ಸ್ವಯಂ ಶಕ್ತಿಯಿಂದ ವಿಜೃಂಭಿಸುವುದನ್ನು ಕೇಂದ್ರದಲ್ಲಿರುವ ನಾಯಕರು ಸಹಿಸುವುದಿಲ್ಲ ಎಂಬಂತಹ ಆಪಾದನೆಗಳೆಲ್ಲಾ ಕೇಳಿಬಂದದ್ದು ಕರ್ನಾಟಕದಲ್ಲಿ ಡಬಲ್ ಎಂಜಿನ್ ಸರ್ಕಾರ ಇದ್ದ ಅವಧಿಯಲ್ಲಿ. 'ಡಬಲ್ ಎಂಜಿನ್ ಸರ್ಕಾರ' ಎಂದರೆ ಕರ್ನಾಟಕವನ್ನು ದೆಹಲಿಯಲ್ಲಿ ಕುಳಿತವರೇ ಕೈಗೊಂಬೆಗಳ ಮೂಲಕ ಆಳುವುದು, ಅವರೇ ಬಂದು ಚುನಾವಣೆ ನಡೆಸುವುದು, ರಾಜ್ಯ ಸರ್ಕಾರ ನಿಮಿತ್ತ ಮಾತ್ರ, ರಾಜ್ಯ ನಾಯಕರು ನೆಪ ಮಾತ್ರ ಎನ್ನುವುದು 2023ರ ಚುನಾವಣಾ ಕಣದಲ್ಲಿ ಎದ್ದು ಕಾಣಿಸುತ್ತಿದೆ.

ಹಾಗಾಗಿ 'ಡಬಲ್ ಎಂಜಿನ್' ಸರ್ಕಾರದ ಪ್ರತಿಪಾದನೆ ಏನಿದೆ ಅದು ಕರ್ನಾಟಕದ ರಾಜಕೀಯ ವಿವೇಚನೆಯ ಮೇಲೆ ನಡೆಯುತ್ತಿರುವ ಪ್ರಹಾರ. ಸಂವಿಧಾನದ ಪ್ರಕಾರ, ರಾಜ್ಯದ ಅಭಿವೃದ್ಧಿಯ ಹೊಣೆಗಾರಿಕೆಯು ರಾಜ್ಯಗಳ ಪ್ರಾಥಮಿಕ ಜವಾಬ್ದಾರಿ. ಕೇಂದ್ರ ಸರ್ಕಾರಕ್ಕೆ ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಇಲ್ಲಿ ಬೇರೊಂದು ಪಕ್ಷದ ನೇತೃತ್ವದ ಸರ್ಕಾರ ಇದ್ದರೆ ಅಡ್ಡಿಯಾಗುತ್ತದೆ ಎಂದು ಹೇಳುವುದೇ ಅಸಂಬದ್ಧ. ಹಾಗೊಂದು ವೇಳೆ ತೊಡಕುಗಳೇನಾದರೂ ಆಗಿದ್ದಿದ್ದರೆ ಅವುಗಳನ್ನು ಜನರ ಮುಂದೆ ಬಿಡಿಸಿಟ್ಟರೆ ಯಾವ ಪಕ್ಷವನ್ನು ಆಯ್ದುಕೊಳ್ಳಬೇಕು ಎಂದು ಅವರೇ ನಿರ್ಣಯಿಸುತ್ತಾರೆ. ಅದಕ್ಕಾಗಿ 'ಡಬಲ್ ಎಂಜಿನ್' ಸರ್ಕಾರ ಎಂಬ ಅಸಹಜ ಮಾದರಿಯೊಂದನ್ನು ತೋರಿಸಿ ಜನರನ್ನು ಮರುಳು ಮಾಡಬೇಕಿಲ್ಲ.

ಚುರುಮುರಿ

ಕನ್ನಡ ತುತ್ತೂರಿ

• ಮಣ್ಣೆರಾಜು

'ಕನ್ನಡ ನಾಡಿನ ಅಭಿವೃದ್ಧಿಗೆ ರಾಜಕೀಯ ನಾಯಕರು ನಾ ಮುಂದು, ತಾ ಮುಂದು ಎಂದು ಮುಗಿಬೀಳ್ತಿದ್ದಾರೆ. ಇವರಿಗೆ ಕನ್ನಡಿಗರ ಮೇಲೆ ಅದೆಷ್ಟು ಕಾಳಜಿ ಅಲ್ವಾ?' ಸುಮಿ ಕೇಳಿದಳು.

'ಹೌದ್ಹೌದು. ಕರ್ನಾಟಕದ ಅಭಿವೃದ್ಧಿಯ ಜವಾಬ್ದಾರಿಯನ್ನು ಪ್ರಧಾನಿ ಮೋದಿಗೆ ವಹಿಸಿ ಅಂತ ಅಮಿತ್ ಶಾ ಸಲಹೆ ಕೊಟ್ಟಿದ್ದಾರೆ. ಮೋದಿ ಕೈಗೆ ಕರ್ನಾಟಕ ಕೊಡಬೇಡಿ, ಅಭಿವೃದ್ಧಿಗೆ ನಾವಿದ್ದೇವೆ ಎಂದು ಪ್ರಿಯಾಂಕಾ ಗಾಂಧಿ ಹೇಳಿದ್ದಾರೆ. ರಾಷ್ಟ್ರೀಯ ಪಕ್ಷಗಳಿಗೆ ಕನ್ನಡಿಗರ ನಾಡಿಮಿಡಿತ ಗೊತ್ತಿಲ್ಲ, ಅಭಿವೃದ್ಧಿಗೆ ಪ್ರಾದೇಶಿಕ ಪಕ್ಷದ ಕೈ ಹಿಡಿಯಿರಿ ಎಂದು ದೇವೇಗೌಡರು ಹೇಳಿದ್ದಾರೆ' ಅಂದ ಶಂಕ್ರಿ.

'ಕನ್ನಡ ರಾಜ್ಯದ ಅಭಿವೃದ್ಧಿಯ ಸಂಕಲ್ಪ ತೊಟ್ಟು ಚುನಾವಣೆ ಪ್ರಚಾರಕ್ಕಾಗಿ ದೆಹಲಿಯ ದಂಡನಾಯಕರು ಬಂದು ಬೀಡುಬಿಟ್ಟಿದ್ದಾರೆ. ಹೇಗೋ, ನಾಡು ಅಭಿವೃದ್ಧಿಯಾಗಿ ಕನ್ನಡಿಗರು ಉದ್ಧಾರವಾದರೆ ಸಾಕು'.

'ಬಸವಣ್ಣ, ರಾಯಣ್ಣ, ಓಬವ್ವ, ರಾಣಿ ಚೆನ್ನಮ್ಮ, ಕುವೆಂಪುರಂತಹ ಮಹನೀಯರ ಗುಣಗಾನ ಮಾಡುವ ದೆಹಲಿ ನಾಯಕರು, ಅವರನ್ನೂ ಚುನಾವಣಾ ವೇದಿಕೆಗೆ ಎಳೆತರುತ್ತಿದ್ದಾರೆ. ಕನ್ನಡಿಗರ ವೇಷಭೂಷಣ ತೊಟ್ಟು ನಮ್ಮ ಕಲೆ, ಸಂಸ್ಕೃತಿ, ಭಾಷೆಯನ್ನು ಹಾಡಿ ಹೊಗಳುತ್ತಾ ಕನ್ನಡಿಗರನ್ನು ರೋಮಾಂಚನಗೊಳಿಸುತ್ತಿದ್ದಾರೆ'.

'ವೇಷಭೂಷಣ ಕನ್ನಡದ್ದಾದರೂ ತಮ್ಮ ಹಿಂದಿ ಭಾಷಣ ಕನ್ನಡಿಗರಿಗೆ ಅರ್ಥವಾಗದು, ಮಾತೃಭಾಷೆಯಲ್ಲೇ ಕನ್ನಡಿಗರ ಮನಸ್ಸು ತಟ್ಟಬೇಕು ಎಂದು ದೆಹಲಿ ನಾಯಕರು ಭಾಷಣದ ಆರಂಭದಲ್ಲಿ ಒಂದೆರಡು ಸಾಲಿನ ಕನ್ನಡ ಮಾತನಾಡಲು ಶುರು ಮಾಡಿದ್ದಾರೆ'.

'ಹೌದು, ನಾವು ಹಿಂದಿ ಕಲಿತಿದ್ದರೆ ಅವರ ಭಾಷಣ ಅರ್ಥ ಮಾಡಿಕೊಳ್ಳಬಹುದಿತ್ತು. ಹಿಂದಿ ಹೇರಿಕೆ ಒಲ್ಲೆ ಎಂದು ಕನ್ನಡಿಗರು ಹಟ ಮಾಡಿದ್ದಾರೆ. ಹಾಗಾಗಿ ಹಿಂದಿ ನಾಯಕರೇ ಕನ್ನಡ ಮಾತನಾಡಲು ಪ್ರಯತ್ನ ಮಾಡುತ್ತಿದ್ದಾರೆ. ಮುಂದಿನ ಚುನಾವಣೆಗಳ ಹೊತ್ತಿಗೆ ಕನ್ನಡದಲ್ಲೇ ಪೂರ್ಣ ಭಾಷಣ ಮಾಡುವಷ್ಟು ಪರಿಣತರಾಗಬಹುದು, ಕಾಯೋಣ...' ಎಂದ ಶಂಕ್ರಿ.

ಸಂಗತ

ಕರಪತ್ರದ ಮೇಲೇಕೆ ರಕ್ತದ ಬಿಂದು?

ನಾಯಕರು ರಕ್ತಪಾತದ ಬಗ್ಗೆ ಮಾತನಾಡುತ್ತಾ ಹೋದರೆ, ಕ್ರಿಯೆಗೆ ಪ್ರತಿಕ್ರಿಯೆ ಎಲ್ಲಿಗೆ ಹೋಗಿ ಮುಟ್ಟುತ್ತದೆ ಎಂಬ ಯೋಚನೆ ದಿಗಿಲು ಮೂಡಿಸುವಂತಹದ್ದು

• ಡಾ. ಲಕ್ಷ್ಮಣ ವಿ.ಎ.

ಬೆಂಗಳೂರಿನ ಹೊರವಲಯದ, ಐ.ಟಿ. ಕಂಪನಿಗಳಿರುವ ಪ್ರದೇಶದಲ್ಲಿ ವೈದ್ಯನಾಗಿರುವ ನನ್ನ ಬಳಿ ಬರುವವರಲ್ಲಿ, ವೈರಲ್‌ಪೀಡಿತ ಜ್ವರ, ಕೆಮ್ಮು, ನೆಗಡಿಗಿಂತ ಹೆಚ್ಚಾಗಿ ಸುಸ್ತು, ಆಯಾಸ, ದಾಹ, ಏದುಸಿರು ಮತ್ತು ಋತುಸ್ರಾವದಲ್ಲಿ ಏರುಪೇರಿನಂತಹ ತೊಂದರೆಗಳಿಂದ ನರಳುವವರೇ ಹೆಚ್ಚು ಮಂದಿ. ಇದಕ್ಕೆಲ್ಲಾ ಕಾರಣ ಅವರ ಆಹಾರಶೈಲಿ, ಅನಾರೋಗ್ಯಕರ ಅಭ್ಯಾಸಗಳು, ಬಡತನ ಮತ್ತು ಇದರ ಫಲಿತಾಂಶವಾಗಿ ಬಂದೆರಗುವ ರಕ್ತಹೀನತೆ.

ಸಾಧಾರಣ ರಕ್ತಹೀನತೆಯನ್ನು ಆಹಾರಶೈಲಿಯಿಂದ ಗುಣಪಡಿಸಬಹುದು. ಮಧ್ಯಮ ಮಟ್ಟದ ರಕ್ತಹೀನತೆಯನ್ನು ಮಾತ್ರೆ, ಸಿರಪ್ಪು, ಚುಚ್ಚುಮದ್ದಿನಿಂದ ವಾಸಿ ಮಾಡಬಹುದು. ಆದರೆ ತೀವ್ರತರವಾದ ರಕ್ತಹೀನತೆಯನ್ನು ರಕ್ತಪೂರಣದಿಂದಲೇ ವಾಸಿ ಮಾಡಬೇಕು. ಇಂತಹ ರಕ್ತವನ್ನು ಕೃತಕವಾಗಿ ತಯಾರಿಸಲು ಅಸಾಧ್ಯವಾದ್ದರಿಂದ, ಬೇರೊಂದು ಜೀವಿಯ ದೇಹದಿಂದಲೇ ರಕ್ತ ಪಡೆಯಬೇಕು. ಅದಕ್ಕಾಗಿಯೇ ರಕ್ತದಾನ ಎಂಬುದು ಜೀವದಾನದಷ್ಟೇ ಶ್ರೇಷ್ಠ.

ಹುಬ್ಬಳ್ಳಿಯಲ್ಲಿ ಇತ್ತೀಚೆಗೆ ರಾಜ್ಯದ ಪ್ರಭಾವಿ ನಾಯಕರೊಬ್ಬರು ಚುನಾವಣಾ ಭಾಷಣ ಮಾಡುತ್ತಾ, ಎದುರಾಳಿ ನಾಯಕನನ್ನು ಸೋಲಿಸಿಯೇ ತೀರುತ್ತೇನೆ, ಇದನ್ನು ರಕ್ತದಲ್ಲಿ ಬೇಕಾದರೂ ಬರೆದುಕೊಡುತ್ತೇನೆ ಎಂದು ಹೇಳಿದರು. ಅವರ ಸೋಲು ಖಚಿತ ಎಂಬ ಅತಿ ಆತ್ಮವಿಶ್ವಾಸದಲ್ಲಿ ಈ ಮಾತು ಹೇಳಿದ್ದಾರೆಂದು ತಿಳಿದು ಸುಮ್ಮನಾಗಬಹುದಿತ್ತು. ಆದರೆ ಅದೇ ಎದುರಾಳಿಯ ಪ್ರಚಂಡ ಅಭಿಮಾನಿಯೊಬ್ಬರು ಅದೇ ದಿನ ತಮ್ಮ ರಕ್ತವನ್ನು ಬಸಿದು ಬರೆದಿದ್ದ, 'ನಮ್ಮ ನಾಯಕ ಗೆದ್ದೇ ಗೆಲ್ಲುತ್ತಾನೆ' ಎಂಬ ಪತ್ರವನ್ನು ಪ್ರದರ್ಶಿಸಿದಾಗ ಅತೀವ ಆತಂಕವಾಯಿತು. ಕರ್ನಾಟಕ ಈಗ ಚುನಾವಣಾ ಪ್ರಚಾರದ ಉತ್ತುಂಗದ ಬಿಸಿಯಲ್ಲಿರುವ ಈ ಹೊತ್ತಿನಲ್ಲಿ, ಹೀಗೆ ಪ್ರತಿಯೊಬ್ಬ ನಾಯಕರೂ ರಕ್ತಪಾತದ ಬಗ್ಗೆ ಮಾತನಾಡುತ್ತಾ ಹೋದರೆ, ಕ್ರಿಯೆಗೆ ಪ್ರತಿಕ್ರಿಯೆ ಎಲ್ಲಿಗೆ ಹೋಗಿ ಮುಟ್ಟುತ್ತದೆ ಎಂಬ ಯೋಚನೆ ದಿಗಿಲು ಮೂಡಿಸುವಂತಹದ್ದು.

ಇದು ಬರೀ ರಕ್ತದ ವಿಚಾರವಲ್ಲ. ಒಬ್ಬ ನಾಯಕ ಆಡುವ ಅಶ್ಲೀಲ ನುಡಿಗಳು, ಹಿಂಸೆಯನ್ನು ಪ್ರಚೋದಿಸುವ ಮಾತುಗಳು ಅವರ ಅನುಯಾಯಿಗಳ ಮೇಲೆ ಎಷ್ಟೆಲ್ಲಾ ರೀತಿಯಲ್ಲಿ ಪರಿಣಾಮ ಬೀರುತ್ತವೆ ಎನ್ನುವುದಕ್ಕೆ ಈ ಪ್ರಕರಣ ನಿದರ್ಶನವಾಗಿದೆ.

ರಕ್ತವೆಂದರೆ ಜೀವ, ರಕ್ತವೆಂದರೆ ತೇಜಸ್ಸು, ರಕ್ತವೆಂದರೆ ನಮ್ಮ ದೇಹದ ಕಲ್ಮಶಗಳನ್ನು ವಿಸರ್ಜಿಸುವಲ್ಲಿ ಸಹಕಾರಿಯಾಗುವ ಸಂಜೀವಿನಿ. ಇಂತಹ ಅಮೂಲ್ಯವಾದ ರಕ್ತದ ಹನಿಯ ಬಿಂದುಗಳು ಚುನಾವಣಾ ಕರಪತ್ರಗಳ ಮೇಲೆ ಮೂಡಿ ವ್ಯರ್ಥವಾಗುವುದು ಸಮಾಜದ ಮೇಲೆ ಸಹಜವಾಗಿ ನಕಾರಾತ್ಮಕ ಪ್ರಭಾವ ಬೀರುತ್ತದೆ. ರಕ್ತಪಾತವನ್ನು ಯಾವ ದೇಶವೂ ತನ್ನ ಹೆಮ್ಮೆಯ ಗುರುತೆಂದು ಬಿಂಬಿಸಿಕೊಂಡಿಲ್ಲ. ಬದಲಾಗಿ ರಕ್ತಪಾತಕ್ಕೆ ತೀವ್ರ ವಿಷಾದವನ್ನೇ ವ್ಯಕ್ತಪಡಿಸಿದ್ದು ಗಮನಿಸಬೇಕಾದ ಅಂಶ. ಭಾರತವು ಸ್ವಾತಂತ್ರ್ಯ ಸಂಪಾದಿಸಿದ್ದು ಅಹಿಂಸೆಯಿಂದ ಎಂದು ಪ್ರತಿಯೊಬ್ಬ ಭಾರತೀಯನೂ ಹೆಮ್ಮೆಯಿಂದ ಹೇಳಿಕೊಳ್ಳಬಲ್ಲ.

ಕನ್ನಡದ ಕವಿ ಮತ್ತು ಸ್ವಾತಂತ್ರ್ಯ ಹೋರಾಟಗಾರ ಕಯ್ಯಾರ ಕಿಞ್ಞಣ್ಣ ರೈ ತಮ್ಮ ಒಂದು ಕವಿತೆಯಲ್ಲಿ ಹೀಗೆ ಹೇಳಿದ್ದಾರೆ: ಎನ್ನೆದೆಯ ಬಿಸಿ ರಕ್ತ ಕುದಿ ಕುದಿಸಿ ಮಸಿ ಮಾಡಿ, ನಾ ಬರೆಯಬಲ್ಲೆನೇ ನಾನು ಕವಿಯು, ವಿಶ್ವ ಜನನಿಯ ಗರ್ಭ ಮಾತೃಭೂಮಿಯ ಬಸಿರು, ತಾನ್ ತಪಿಸುತಿರೆ ಹೇಳಲಾವ ಪರಿಯು.

ದೇಶ ಪರಕೀಯರ ದಾಸ್ಯದಲ್ಲಿದ್ದಾಗ ಈ ಕವಿತೆ ಬರೆದ ಕವಿ, ತಾನು ಲೇಖನಿಯನ್ನೇ ಖಡ್ಗವಾಗಿಸಿ ಮಸಿಯ ರಕ್ತದಲ್ಲಿ ಕವಿತೆ ಬರೆದು, ಸ್ವಾತಂತ್ರ್ಯಕ್ಕಾಗಿ ಬಲಿಯಾದ ಬಂಧುಗಳನ್ನು ನೆನೆಯಬಲ್ಲೆ ಎಂದು ಹೇಳುವಲ್ಲಿಗೆ, ಅವರ ದೇಶಪ್ರೇಮದ ಕಿಚ್ಚು, ಉತ್ಕಟತೆ ಗೋಚರವಾಗುತ್ತದೆ. ರಕ್ತವೆಂಬ ರೂಪಕವು ತ್ಯಾಗ, ಬಲಿದಾನದ ಸಂಕೇತವಾಗಿ ದೇಹದಲ್ಲಿ ಹುರುಪು ತುಂಬಬೇಕೆ ವಿನಾ ಅದು ಬೀದಿಯಲ್ಲಿ ಬಿದ್ದು ರಕ್ತಪಾತ ಆಗಬಾರದು ಎಂಬ ಕವಿಯ ಆಶಯವೂ ಇಲ್ಲಿದೆ.

ರಕ್ತದ ಮಹತ್ವವನ್ನು ಸಾರಲು, 'ರಕ್ತದಾನ ಮಹಾದಾನ'ವೆಂದು ಹೇಳುತ್ತೇವೆ. ಆದರೆ ಇಂದಿಗೂ ಸಕಾಲದಲ್ಲಿ ರಕ್ತ ಸಿಗದೆ ಎಷ್ಟೋ ಪ್ರಾಣಗಳು ಬಲಿಯಾಗುತ್ತವೆ. ಭಾರತದಲ್ಲಿ ಪ್ರತಿವರ್ಷ ಐದು ಕೋಟಿ ಯುನಿಟ್‌ನಷ್ಟು ರಕ್ತಕ್ಕೆ ಬೇಡಿಕೆ ಇದೆ, ಆದರೆ ಪೂರೈಕೆ ಮಾತ್ರ ಎರಡೂವರೆ ಕೋಟಿ ಮಾತ್ರ. ವಿಜ್ಞಾನ ಎಷ್ಟೆಲ್ಲಾ ಮುಂದುವರಿದರೂ ರಕ್ತವನ್ನು ಕೃತಕವಾಗಿ ಸೃಷ್ಟಿಸಲು ಸಾಧ್ಯವಾಗಿಲ್ಲ.

ರಕ್ತ ಮತ್ತು ಕಣ್ಣೀರು ಪ್ರತಿ ಚುನಾವಣೆಯಲ್ಲಿ ಮಾರಾಟವಾಗುವ ಜನಪ್ರಿಯ ಸರಕುಗಳು. ರಕ್ತಪಾತದ ಮಾತುಗಳು ರೋಷ ಉಕ್ಕಿಸಿದರೆ, ಕಣ್ಣೀರಿನ ಮಾತುಗಳು ಭಾವುಕತೆಯನ್ನು ಸೃಷ್ಟಿಸುತ್ತವೆ. ಮನುಷ್ಯನು ರೋಷದಲ್ಲೂ ಭಾವುಕತೆಯಲ್ಲೂ ತನ್ನ ವಿವೇಕ ಕಳೆದುಕೊಳ್ಳುತ್ತಾನೆ. ಹೆಚ್ಚು ಹೆಚ್ಚು ರಕ್ತಪಾತದ ದೃಶ್ಯಗಳಿರುವ ಚಿತ್ರಗಳು ಗಲ್ಲಾಪೆಟ್ಟಿಗೆಯಲ್ಲಿ ಗೆದ್ದಿರುತ್ತವೆ. ಕಣ್ಣೀರ ಕೋಡಿ ಹರಿಸುವ ಧಾರಾವಾಹಿಗಳು ಅತಿ ಹೆಚ್ಚು ಜನಪ್ರಿಯತೆಯನ್ನು ಹೊಂದಿರುತ್ತವೆ. ಚುನಾವಣೆಯ ಇಂತಹ ಸೂಕ್ಷ್ಮ ಸಂದರ್ಭಗಳಲ್ಲಿ ನಾಯಕರು ಇದರ ಲಾಭ ಪಡೆಯಲು ಗರಿಷ್ಠ ಪ್ರಯತ್ನ ಪಡುತ್ತಿರುತ್ತಾರೆ. ವಿವೇಕ ಕಳೆದುಕೊಂಡ ಮತದಾರ ಅವಿವೇಕಿಯನ್ನು ಆಯ್ಕೆ ಮಾಡುತ್ತಾನೆ. ಕಣ್ಣೀರಿಗೊಂದು ಭಾವನಾತ್ಮಕ ಬೆಸುಗೆ ಇದೆ. ಇದು ಪ್ರೀತಿ ಇದ್ದರಷ್ಟೇ ಹೊರಬರುವ ಒಳಸೆಲೆ. ಇಲ್ಲಿ ಮತದಾರ ನಿಜದ ಕಣ್ಣೀರು ಯಾವುದು ಮತ್ತು ಮೊಸಳೆ ಕಣ್ಣೀರು ಯಾವುದು ಎಂಬುದನ್ನು ಅಳೆಯುವಷ್ಟು ಪ್ರಬುದ್ಧನಾದರೆ ಸಾಕು.

ಬುಲೆಟ್ಟುಗಳಿಂದ, ರಕ್ತಪಾತದಿಂದ ಮಾಡಲಾಗದ ಕ್ರಾಂತಿಗಳನ್ನು ಚುನಾವಣಾ ಬ್ಯಾಲೆಟ್ಟಿನಿಂದ ಮಾಡಲು ಸಾಧ್ಯ. ಹೀಗಾಗಿ, ಮತದಾರರಿಗೆ ತಮ್ಮ ಅಮೂಲ್ಯ ಮತವನ್ನು ರಕ್ತ ಮತ್ತು ಕಣ್ಣೀರಿನ ಪ್ರಭಾವಕ್ಕೆ ಒಳಗಾಗದಂತೆ ನೋಡಿಕೊಂಡು, ನಿಜದ ಪ್ರಭುತ್ವವನ್ನು ಆರಿಸುವ ದೊಡ್ಡ ಜವಾಬ್ದಾರಿ ಕೂಡ ಇದೆ.

ವಾಚಕರ ವಾಣಿ

ಸಾಧನೆ ಮೇಲೆ ಮತ ಯಾಚನೆ ಯಾಕಿಲ್ಲ?

ಚುನಾವಣಾ ಪ್ರಚಾರದ ಸಮಯದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು 'ಬಿಜೆಪಿಗೆ ಮತ ನೀಡಿ, ಇಲ್ಲದಿದ್ದರೆ ನಿಮಗೆ ಮೋದಿಯವರ ಆಶೀರ್ವಾದ ಸಿಗುವುದಿಲ್ಲ' ಎಂದೂ, ಒಕ್ಕೂಟ ಸರ್ಕಾರದ ಗೃಹ ಸಚಿವರಾದ ಅಮಿತ್ ಶಾ ಅವರು 'ಕಾಂಗ್ರೆಸ್ಸಿಗೆ ಮತ ನೀಡಿದರೆ ದಂಗೆಗಳಾಗುತ್ತವೆ' ಎಂದೂ, ಪ್ರಧಾನಿ ನರೇಂದ್ರ ಮೋದಿ ಅವರು 'ಕಾಂಗ್ರೆಸ್ 91 ಬಾರಿ ನನ್ನನ್ನು ನಿಂದಿಸಿದೆ. ಆದ್ದರಿಂದ ಬಿಜೆಪಿಗೆ ಮತ ನೀಡಿ' ಎಂದೂ ಕರೆ ನೀಡಿದ್ದಾರೆ. ಆದರೆ ಇವರ್‍ಯಾರೂ ಕರ್ನಾಟಕದ ಬಿಜೆಪಿ ನೇತೃತ್ವದ ಸರ್ಕಾರದ ಸಾಧನೆ ನೋಡಿ ಮತ ನೀಡಿ ಎಂದು ಕೇಳುತ್ತಿಲ್ಲ. ಹಾಗಾದರೆ ರಾಜ್ಯ ಸರ್ಕಾರ ಏನೂ ಕೆಲಸ ಮಾಡಿಲ್ಲ ಎಂದು ಅರ್ಥವೇ ಅಥವಾ ಭಾವನಾತ್ಮಕ ವಿಷಯಗಳೇ ರಾಜ್ಯದ ಅಭಿವೃದ್ಧಿಗೆ ಪೂರಕ ಎಂದು ತಿಳಿಯಬೇಕೇ? ಗೊಂದಲವಾಗುತ್ತಿದೆ!

ಎಚ್.ಎಸ್.ನಂದಕುಮಾರ್, ಮಂಗಳೂರು

ಮನೆಯಲ್ಲೇ ಮತದಾನ: ಇವರಿಗೂ ಇರಲಿ ಅವಕಾಶ

ಈ ಬಾರಿ ವಿಧಾನಸಭಾ ಚುನಾವಣೆಯಲ್ಲಿ 80 ವರ್ಷ ಮೇಲ್ಪಟ್ಟವರಿಗೆ ಮನೆಯಿಂದಲೇ ಮತ ಚಲಾಯಿಸಲು ಅವಕಾಶ ಕಲ್ಪಿಸಿರುವುದರಿಂದ, ಮತ ಚಲಾವಣೆ ಪ್ರಮಾಣ ಅಲ್ಪ ಪ್ರಮಾಣದಲ್ಲಿ ಹೆಚ್ಚಾಗುವುದರಲ್ಲಿ ಅನುಮಾನವಿಲ್ಲ. ಇದು ಸ್ವಾಗತಾರ್ಹ ನಡೆ. ಆದರೆ ಪುಟ್ಟ ಮಗುವಿರುವ ತಾಯಂದಿರು, ಅಪಘಾತದಿಂದ ವಿಶ್ರಾಂತಿ ಪಡೆಯುತ್ತಿರುವವರು ಸೇರಿದಂತೆ ಮತ ಚಲಾಯಿಸಲು ಅನಿವಾರ್ಯವಾಗಿ ಮತಗಟ್ಟೆಗೆ ಬರಲಾಗದವರಿಗಾಗಿ, ಅವರು ಇರುವ ಸ್ಥಳದಲ್ಲೇ ಮತದಾನಕ್ಕೆ ಅವಕಾಶ ಕಲ್ಪಿಸುವುದು ಒಳ್ಳೆಯದು. ಆಗ ಮತದಾನದ ಪ್ರಮಾಣವನ್ನು ಇನ್ನಷ್ಟು ಹೆಚ್ಚಿಸಲು ಸಾಧ್ಯ.

ನಗರ ಗುರುದೇವ್ ಭಂಡಾರ್ಕರ್, ಹೊಸನಗರ

ಪೂರಕ ಪರೀಕ್ಷೆ: ತಾರತಮ್ಯವೇಕೆ?

ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವ ಸುಮಾರು 15 ಶೈಕ್ಷಣಿಕ ಸ್ವಾಯತ್ತ ತಾಂತ್ರಿಕ ಶಿಕ್ಷಣ ಕಾಲೇಜುಗಳ ವಿದ್ಯಾರ್ಥಿಗಳಿಗೆ ಸೆಮಿಸ್ಟರ್ ಪರೀಕ್ಷೆ ನಡೆಸಲಾಗುತ್ತಿದೆ. ಈ ಪರೀಕ್ಷೆಯಲ್ಲಿ ಕಡಿಮೆ ಅಂತರದಲ್ಲಿ ಅನುತ್ತೀರ್ಣರಾದ, ಹಾಜರಾತಿ ಮತ್ತು ಆಂತರಿಕ ಪರೀಕ್ಷೆಯಲ್ಲಿ ತೃಪಿಕರವಾಗಿರುವ ವಿದ್ಯಾರ್ಥಿಗಳಿಗೆ ಫಲಿತಾಂಶ ಪ್ರಕಟವಾದ 10-15 ದಿನಗಳಲ್ಲಿ ಪೂರಕ ಪರೀಕ್ಷೆ ಬರೆಯಲು ಅವಕಾಶ ನೀಡಲಾಗುತ್ತಿದೆ (ದ್ವಿತೀಯ ಪಿಯುಸಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೂ ಈ ಅವಕಾಶ ನೀಡಲಾಗುತ್ತಿದೆ). ಹಾಗೆಯೇ ಹೆಚ್ಚು ವಿಷಯಗಳಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸೆಮಿಸ್ಟರ್ ಪರೀಕ್ಷೆ ನಡೆಸುವ ಮೂಲಕ ಅವರೂ ಹಿಂಬಾಕಿ ವಿಷಯಗಳಲ್ಲಿ ಪಾಸಾಗಿ ಪದವಿ ಮುಂದುವರಿಸಲು ಅವಕಾಶ ಪಡೆಯುತ್ತಾರೆ.

ವಿದ್ಯಾರ್ಥಿಸ್ನೇಹಿಯಾದ ಈ ಪ್ರಕ್ರಿಯೆಯು ನಿಗದಿತ ನಾಲ್ಕು ವರ್ಷಗಳ ಅವಧಿಯಲ್ಲಿಯೇ ಯಶಸ್ವಿಯಾಗಿ ಪದವಿ ಪೂರ್ಣಗೊಳಿಸಲು ಸಹಕಾರಿಯಾಗುತ್ತಿದೆ. ಆದರೆ ಇದೇ ವಿಶ್ವವಿದ್ಯಾಲಯದ ಸಂಯೋಜಿತ, ಸಂಪೂರ್ಣ ಶೈಕ್ಷಣಿಕ ನಿಯಂತ್ರಣದಲ್ಲಿಯೇ ಬರುವ ಸ್ವಾಯತ್ತರಹಿತ ಎಂಜಿನಿಯರಿಂಗ್ ಕಾಲೇಜುಗಳಲ್ಲಿ, ಸುಮಾರು 55,000ಕ್ಕೂ ಹೆಚ್ಚಿನ ಸಂಖ್ಯೆಯ ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳು ಎಂಜಿನಿಯರಿಂಗ್ ಪದವಿ, ಎಂಸಿಎ, ಎಂಬಿಎ ಪದವಿ ಪಡೆಯಬೇಕೆಂಬ ಮಹತ್ವಾಕಾಂಕ್ಷೆಯೊಂದಿಗೆ ಪ್ರವೇಶ ಪಡೆಯುತ್ತಾರೆ. ಈ ವಿದ್ಯಾರ್ಥಿಗಳು ಒಂದೆರಡು ವಿಷಯಗಳಲ್ಲಿ ಕಡಿಮೆ ಅಂಕಗಳ ಅಂತರದಲ್ಲಿ ಅನುತ್ತೀರ್ಣರಾದರೆ, ಪೂರಕ ಪರೀಕ್ಷೆ ಬರೆಯಲು ಅವರಿಗೆ ಅವಕಾಶ ಇರುವುದಿಲ್ಲ. ಇದು ಯುವ ವಿದ್ಯಾರ್ಥಿಗಳ ಆತ್ಮಸ್ಥೈರ್ಯ ಕುಗ್ಗುವಂತೆ ಮಾಡಿದೆ. ಕಡಿಮೆ ಅಂತರದಲ್ಲಿ ಅನುತ್ತೀರ್ಣರಾದ ಈ ವಿದ್ಯಾರ್ಥಿಗಳಿಗೂ ಸ್ವಾಯತ್ತ ತಾಂತ್ರಿಕ ಕಾಲೇಜುಗಳ ಮಾದರಿಯಲ್ಲಿಯೇ ಪೂರಕ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದೇ ಆದರೆ ಅವರು ಸಹ ಅಲ್ಪಶ್ರಮದ ಮೂಲಕ ಉತ್ತಮ ಸಾಧನೆ ಮಾಡಿ ಹೆಚ್ಚು ಅಂಕಗಳೊಡನೆ ಉತ್ತೀರ್ಣರಾಗಬಲ್ಲರು. ಈ ಬಗ್ಗೆ ವಿಶ್ವವಿದ್ಯಾಲಯದ ಕುಲಪತಿ ಮತ್ತು ಸಂಬಂಧಪಟ್ಟ ಶಿಕ್ಷಣ ತಜ್ಞರು ಸಮಾಲೋಚನೆ ನಡೆಸಿ ನಿರ್ಧಾರಕ್ಕೆ ಬರಬೇಕು.

ಆರ್.ಕುಮಾರ್, ಬೆಂಗಳೂರು

ನಿಂದಕರಿರಬೇಕು...

ನಿಂದಕರಿರಬೇಕು ಜಗದೊಳು
ಎಂದಿದ್ದಾರೆ ನಮ್ಮ ವಚನಕಾರರು,
ಹಾಗೆಯೇ, ಹೊಗಳುವವರನ್ನು
ಹೊನ್ನಶೂಲಕ್ಕೇರಿಸುವವರು ಎಂದಿದ್ದಾರೆ.
ಹಾಗಾಗಿ, ಬೈಗುಳವನ್ನು
ಲೆಕ್ಕ ಹಾಕುವುದರಲ್ಲೇನಿದೆ?
ಭವ್ಯ ಭಾರತ ಕಟ್ಟಬೇಕಾದ ಸವಾಲು
ನಮ್ಮ ಮುಂದಿದೆ...

ಜೆ.ಬಿ.ಮಂಜುನಾಥ
ಪಾಂಡವಪುರ

ಕರ್ನಾಟಕದಲ್ಲೂ ಢಂ ಢಂ ಸಂಸ್ಕೃತಿ?!

ಅತಿರೇಕದ ಮಾತುಗಳನ್ನಾಡಿ ಚಪ್ಪಾಳೆ, ಕೇಕೆ, ಸಿಳ್ಳೆ ಗಿಟ್ಟಿಸಿಕೊಳ್ಳುವ ಹಿಂಸಾ ನಾಲಿಗೆಯ ರಾಜಕಾರಣಿಗಳಲ್ಲಿ ಬಸನಗೌಡ ಪಾಟೀಲ ಯತ್ನಾಳರೂ ಒಬ್ಬರು. ಕುಂದಗೋಳ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಾ, 'ಉತ್ತರಪ್ರದೇಶ ಮಾದರಿಯ ಆಡಳಿತವನ್ನು ಕರ್ನಾಟಕಕ್ಕೂ ತರುತ್ತೇವೆ... ಹಿಂದೂಗಳ ಬಗ್ಗೆ ಮತ್ತು ಕರ್ನಾಟಕದ ವಿರುದ್ಧ ಏನಾದರೂ ಮಾತನಾಡಿದರೆ 'ಢಂ... ಢಂ...' ಅಂತ ಶೂಟ್ ಮಾಡಲಾಗುವುದು...' ಎಂದೆಲ್ಲ ಆಣಿಮುತ್ತು ಉದುರಿಸಿದ್ದಾರೆ. ಉತ್ತರಪ್ರದೇಶದಲ್ಲಿ ಸಂವಿಧಾನಪ್ರಣೀತ ಕಾನೂನು, ಸುವ್ಯವಸ್ಥೆಯ ಹನನವಾಗಿದೆ. ಅರಾಜಕತೆಯನ್ನೇ ಮಹತ್ಸಾಧನೆ ಎಂಬಂತೆ ಕೆಲ ಅಪ್ರಬುದ್ಧರು ಅಟ್ಟಕ್ಕೇರಿಸಿದ್ದಾರೆ. ಬಸವ, ಅಲ್ಲಮ, ಶರೀಫ, ಕನಕ, ಪುರಂದರರ ಈ ನಾಡು ಉತ್ತರಪ್ರದೇಶದಂತೆ ಆದೀತೆ? ಹಾಗಾದಲ್ಲಿ ಅದು ದುರಂತವೇ ಸರಿ. ಮತದಾರರ ಅಮೂಲ್ಯ ಮತ ಏನನ್ನೂ ಸಾಧ್ಯಗೊಳಿಸಬಲ್ಲದು. ಕನ್ನಡಿಗರು ಪ್ರಾಜ್ಞರು ಎಂಬ ಗಾಢ ನಂಬಿಕೆ ನಮ್ಮಂಥವರದು.

ರಾಮಚಂದ್ರ ಎಸ್. ಕುಲಕರ್ಣಿ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಕನ್ನಡ ಸಿನಿ ಸಮ್ಮಾನ’ದ ಮೊದಲ ಹೆಜ್ಜೆಗಳು

ಚಂದನವನದ ಚಂದದ ಸಮ್ಮಾನ ಯಾರ್ಯಾರ ಮುಡಿಗೇರಲಿದೆ ಎನ್ನುವ ಕುತೂಹಲಕ್ಕೆ ಇನ್ನೇನು ಕೆಲವೇ ದಿನಗಳಲ್ಲಿ ಉತ್ತರ ದೊರೆಯಲಿದೆ. ಈ ಹೊತ್ತು, **‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’**ಕ್ಕೆ 2022ರಲ್ಲಿ ಬಿಡುಗಡೆಯಾದ ಚಿತ್ರಗಳನ್ನು ಹೆಕ್ಕಿದ ಕ್ಷಣಗಳನ್ನು ಮೆಲುಕು ಹಾಕುವ ಸಮಯ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’-ಇದು ಚಂದನವನದ ಪ್ರತಿಭೆಗಳನ್ನು ಗುರುತಿಸುವ ಹಾಗೂ ಭಾರತೀಯ ಸಿನಿಮಾರಂಗದಲ್ಲಿ ನಮ್ಮ ಚಿತ್ರರಂಗದ ಅಭೂತಪೂರ್ವ ಪರಂಪರೆಯನ್ನು ಎತ್ತಿಹಿಡಿಯುವ ವೇದಿಕೆ. ಪ್ರಜಾವಾಣಿ @75 ಸಂಭ್ರಮಾಚರಣೆಯ ಸಂದರ್ಭದಲ್ಲೇ ‘ಸಿನಿ ಸಮ್ಮಾನ’ದಂಥ ಅದ್ದೂರಿ, ವರ್ಣರಂಜಿತ ಕಾರ್ಯಕ್ರಮಕ್ಕೆ ದಿನಗಣನೆ ಆರಂಭವಾಗಿದೆ. ‘ಕನ್ನಡ ಸಿನಿ ಸಮ್ಮಾನ’ ವೇದಿಕೆಯ ಸೃಷ್ಟಿಯೇ ವಿಶೇಷ.

‘ಸಿನಿಮಾ ಪ್ರಶಸ್ತಿ’ ವಿಚಾರದಲ್ಲಿ ಇದು ‘ಪ್ರಜಾವಾಣಿ’ಯ ಚೊಚ್ಚಲ ಪ್ರಯತ್ನ. ಹೀಗಾಗಿ ಇಡೀ ಪತ್ರಿಕಾ ಬಳಗದವರಿಗೂ ಇದು ಹೊಸತು. ಪ್ರತಿಷ್ಠಿತ ಪ್ರಶಸ್ತಿಗಳ ಮಾದರಿಯಲ್ಲೇ ಮಾನದಂಡಗಳನ್ನೇ ಇಟ್ಟುಕೊಂಡು 2022ರಲ್ಲಿ ಬಿಡುಗಡೆಯಾದ ಸಿನಿಮಾಗಳನ್ನು ಈ ಬಾರಿಯ ಪ್ರಶಸ್ತಿಗೆ ಪರಿಗಣಿಸಬೇಕೆಂಬ ಮೊದಲ ನಿರ್ಧಾರದಿಂದ ‘ಸಿನಿ ಸಮ್ಮಾನ’ದ ಹೆಜ್ಜೆ ಆರಂಭವಾಯಿತು. ಶೂನ್ಯದಿಂದ ಆರಂಭವಾದ ಪ್ರಕ್ರಿಯೆ ಇದು. ವಿಶ್ವಾಸಾರ್ಹತೆಯಿಂದ ಕೂಡಿದ ಹಾಗೂ ಪಾರದರ್ಶಕವಾಗಿ ಸಿನಿಮಾಗಳ ಆಯ್ಕೆಯಾಗಬೇಕು ಎನ್ನುವ ದೃಷ್ಟಿಯಿಂದ ಎರಡು ಹಂತಗಳ ತೀರ್ಪುಗಾರರ ಮಂಡಳಿ ರಚಿಸಲಾಯಿತು. ಮುಖ್ಯ ತೀರ್ಪುಗಾರರು ಮತ್ತು ತಾಂತ್ರಿಕ ತೀರ್ಪುಗಾರರ ಮಂಡಳಿ ರಚನೆಯಿಂದ ‘ಸಿನಿ ಸಮ್ಮಾನ’ಕ್ಕೊಂದು ರೂಪ ದೊರೆಯಿತು.

2022 ಚಂದನವನ ನಂದನವನವಾಗಿ ಗುರುತಿಸಿಕೊಂಡ ವರ್ಷ. ಕೆಲವು ಸಿನಿಮಾಗಳು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಮಿಂಚಿದರೆ, ಮತ್ತಷ್ಟು ಸಿನಿಮಾಗಳು ತಮ್ಮ ಗಟ್ಟಿ ವಸ್ತುವಿಷಯಗಳಿಂದ ಪ್ರೇಕ್ಷಕರನ್ನು ಸೆಳೆದವು. ಹಲವು ಶುಕ್ರವಾರಗಳಲ್ಲಿ ಐದಾರು ಸಿನಿಮಾಗಳು ಬಿಡುಗಡೆಯಾದ ಉದಾಹರಣೆಗಳೂ ಸಾಕಷ್ಟಿವೆ. ಇಷ್ಟೊಂದು ದತ್ತಾಂಶ ಸಂಗ್ರಹಿಸುವ ಸವಾಲು ತಂಡದ ಮುಂದಿತ್ತು.

ಇದಕ್ಕಾಗಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ, ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಹಾಗೂ ಚಿತ್ರರಂಗದಲ್ಲಿ ಸಕ್ರಿಯರಾಗಿರುವವರಿಂದ ಮಾಹಿತಿ ಸಂಗ್ರಹಿಸಲಾಯಿತು. ಇವುಗಳನ್ನು ಸೆನ್ಸಾರ್ ಮಂಡಳಿಯ ಮಾಹಿತಿಯೊಂದಿಗೆ ತಾಳೆ ಹಾಕಿ ನೋಡಲಾಯಿತು. ಆಯಾ ಚಿತ್ರದ ನಿರ್ಮಾಪಕರು, ನಿರ್ದೇಶಕರ ಹೆಸರು ಹಾಗೂ ಸಂಪರ್ಕ ಸಂಖ್ಯೆಗಳನ್ನು ಸಂಗ್ರಹಿಸಿ, ಅವರನ್ನು ಸಂಪರ್ಕಿಸಲಾಯಿತು. ಮುಂದಿನ ಹಂತದಲ್ಲಿ ತೀರ್ಪುಗಾರರಿಗೆ ಸಿನಿಮಾಗಳನ್ನು ಪ್ರದರ್ಶಿಸಲು ಸಿನಿಮಾಗಳ ಸಂಗ್ರಹ ಪ್ರಕ್ರಿಯೆ ಆರಂಭಿಸಲಾಯಿತು. ಈ ಸಂದರ್ಭದಲ್ಲಿ ಆಡಿಟ್ ಪಾರ್ಟ್ನರ್ ಆಗಿ ಜೊತೆಯಾಗಿದ್ದದ್ದು ‘ಇವೈ’ ಎಂಬ ಸಂಸ್ಥೆ. ‘ಸಿನಿ ಸಮ್ಮಾನ’ದ ಪ್ರಕ್ರಿಯೆ, ನಿಯಮಗಳ ರೂಪುರೇಷೆ ಸಿದ್ಧಪಡಿಸಿದ್ದೇ ಈ ಸಂಸ್ಥೆ. ಆಯಾ ನಿರ್ಮಾಪಕರಿಂದ ಲಿಂಕ್ ಮೂಲಕ 120ಕ್ಕೂ ಅಧಿಕ ಸಿನಿಮಾಗಳನ್ನು ಪಡೆದುಕೊಳ್ಳಲಾಯಿತು. ಇವುಗಳನ್ನು ಹಂಚುವ ಹಾಗೂ ತೀರ್ಪುಗಾರರಿಂದ ಪ್ರತಿಕ್ರಿಯೆ ಪಡೆಯುವ ಜವಾಬ್ದಾರಿಯನ್ನು ‘ಇವೈ’ ವಹಿಸಿಕೊಂಡಿತ್ತು.

ಪ್ರಸ್ತುತ ಎಲ್ಲ ಸಿನಿಮಾಗಳನ್ನು ವೀಕ್ಷಿಸಿರುವ ತಾಂತ್ರಿಕ ತೀರ್ಪುಗಾರರ ಮಂಡಳಿ ಸದಸ್ಯರು 15 ವಿಭಾಗಗಳಲ್ಲಿ ನಾಮನಿರ್ದೇಶನಗಳನ್ನು ಆಯ್ಕೆ ಮಾಡಿದ್ದಾರೆ. ಇವುಗಳನ್ನು ಅಕಾಡೆಮಿ ಸದಸ್ಯರ ಮತದಾನಕ್ಕಾಗಿ ಕಳುಹಿಸಲಾಗಿದೆ. ಜೊತೆಗೆ ‘ಜನ ಮೆಚ್ಚಿದ ನಟ’, ‘ಜನ ಮೆಚ್ಚಿದ ನಟಿ’, ‘ಜನ ಮೆಚ್ಚಿದ ಸಿನಿಮಾ’, ‘ಜನ ಮೆಚ್ಚಿದ ಸಂಗೀತ’ ಹೀಗೆ ನಾಲ್ಕು ವಿಭಾಗಗಳಲ್ಲಿ ಜನರೇ ಮತದಾನ ಮಾಡಿ ಕಲಾವಿದರ ಮುಡಿಗೆ ವಿಜಯದ ಕಿರೀಟ ತೊಡಿಸಬಹುದು.

ಲಿಂಕ್: https://www.prajavani.net/cinesamman

ತಾಂತ್ರಿಕ ತೀರ್ಪುಗಾರರ ಮಂಡಳಿ ತಜ್ಞರ ಪ್ರತಿಕ್ರಿಯೆ

ಸಮ್ಮಾನ ಸಕಾಲಿಕ

ಒಂದು ಪ್ರಶಸ್ತಿಗೆ ಘನತೆ ಬರಬೇಕಿದ್ದರೆ ದೊಡ್ಡ ಸಂಸ್ಥೆ ಅದನ್ನು ನೀಡಬೇಕು. ಕನ್ನಡ ನೆಲದಲ್ಲಿ ಜನನಾಡಿ ಎನಿಸಿರುವ ‘ಪ್ರಜಾವಾಣಿ’ಯಂತಹ ಸಂಸ್ಥೆ ಈ ಕೆಲಸ ಮಾಡುತ್ತಿರುವುದು ಅಭಿನಂದನೀಯ. ಭಾಷೆ, ಚಳವಳಿಗೆ ಸಿನಿಮಾ ರಂಗದವರನ್ನು ಒಂದುಗೂಡಿಸುವುದರಿಂದ ಹಿಡಿದು ಚಿತ್ರೋದ್ಯಮದಲ್ಲಿ ಅನೇಕ ಮೊದಲುಗಳನ್ನು ನೀಡಿದ ಸಂಸ್ಥೆಯ ಪ್ರಶಸ್ತಿ ಆಯ್ಕೆ ಪ್ರಕ್ರಿಯೆ ಬಹಳ ಅಚ್ಚುಕಟ್ಟಾಗಿದೆ.

ಗಂಗಾಧರ ಮೊದಲಿಯಾರ್
ಸಿನಿಮಾ ವಿಮರ್ಶಕ

ವಿವರವಾದ ಮಾಹಿತಿ

2022ರಲ್ಲಿ ಬಿಡುಗಡೆಗೊಂಡ ಸಿನಿಮಾಗಳು ಆಯ್ಕೆಗೆ ಬಂದಿದ್ದವು. ಅದಕ್ಕೂ ಮೊದಲು ಹಿನ್ನೆಲೆಯಲ್ಲಿ ಪ್ರಶಸ್ತಿಗಾಗಿ ಸಾಕಷ್ಟು ಕೆಲಸ ಮಾಡಿದ್ದಾರೆ ಎಂಬುದು ಮೊದಲ ಸಭೆಯಲ್ಲಿಯೇ ತಿಳಿಯಿತು. ಪ್ರಜಾವಾಣಿಯಂತಹ ಸಂಸ್ಥೆ ಪ್ರಶಸ್ತಿ ನೀಡುತ್ತಿದೆ ಎಂದರೆ ನಿರೀಕ್ಷೆ ಹೆಚ್ಚು. ಜತೆಗೆ ವಿಶ್ವಾಸಾರ್ಹತೆ ಕೂಡ. ಸಿನಿಮಾಗಳನ್ನು ನೋಡಲು ಮಾರ್ಗದರ್ಶನ ನೀಡುವ ವಿವರವಾದ ಗೂಗಲ್ ಶೀಟ್ ನೀಡಿ, ಮಾನದಂಡಗಳನ್ನು ಸ್ಪಷ್ಟವಾಗಿ ವಿವರಿಸಿದ್ದರು. ಇದೊಂದು ಉತ್ತಮ ಪ್ರಕ್ರಿಯೆ ಎನಿಸಿತು. ಅನೇಕ ಸ್ತರಗಳಲ್ಲಿ ಆಯ್ಕೆ ನಡೆಯುತ್ತಿರುವುದರಿಂದ ಇದೊಂದು ಪಾರದರ್ಶಕ ಮತ್ತು ನ್ಯಾಯಯುತ ಪ್ರಕ್ರಿಯೆ ಎನಿಸುತ್ತದೆ.

ಹರೀಶ್ ಮಲ್ಯ, ಸಿನಿಮಾ ವಿಮರ್ಶಕ

ವೃತ್ತಿಪರವಾಗಿದೆ



ಆಯ್ಕೆ ಪ್ರಕ್ರಿಯೆ ಉತ್ತಮವಾಗಿದೆ. ವೃತ್ತಿಪರವಾಗಿದೆ. ಆಯ್ಕೆಗೆ ನೀಡಿದ ಸಿನಿಮಾಗಳ ಸಂಖ್ಯೆ ಸ್ವಲ್ಪ ಹೆಚ್ಚಾದಂತೆ ಅನಿಸಿತು. ಅತ್ಯುತ್ತಮ ಸಿನಿಮಾ ಸೇರಿದಂತೆ ಎರಡು–ಮೂರು ವಿಭಾಗಗಳಲ್ಲಿ ಪ್ರಶಸ್ತಿ ಸಾಕಾಗಿತ್ತೇನೊ ಎನ್ನುವುದು ನನ್ನ ವೈಯಕ್ತಿಕ ಅನಿಸಿಕೆ. ಆದರೆ ಎಲ್ಲ ತಂತ್ರಜ್ಞರನ್ನು ಗುರುತಿಸಲು ಈ ವಿಭಾಗಗಳು ಅನಿವಾರ್ಯವೂ ಹೌದು. ಒಟ್ಟಾರೆಯಾಗಿ ಉತ್ತಮವಾದ ಪ್ರಕ್ರಿಯೆ.

ಎಂ.ಕೆ.ರಾಘವೇಂದ್ರ
ಸಿನಿಮಾ ವಿಮರ್ಶಕ

ಉದ್ಯಮದ ಚಿಮ್ಮುಹಲಗೆ

ಕನ್ನಡದ ಸಂದರ್ಭದಲ್ಲಿ ‘ಪ್ರಜಾವಾಣಿ’ ಸಿನಿ ಸಮ್ಮಾನವನ್ನು ರೂಪಿಸಿ, ಅನುಷ್ಠಾನಕ್ಕೆ ತರಲು ಹೊರಟಿರುವುದು ಭಾರತೀಯ ಚಲನಚಿತ್ರ ಇತಿಹಾಸದಲ್ಲಿ ಮಹತ್ವದ ಹೆಜ್ಜೆ. ಪತ್ರಿಕೆಗೆ ಸಿನಿಮಾ ಸಂಸ್ಕೃತಿ ಬೆಳೆಸಿದ ಸುದೀರ್ಘ ಇತಿಹಾಸವಿದೆ. ಇಂಥ ಪತ್ರಿಕೆ ಪ್ರಶಸ್ತಿ ನೀಡುತ್ತಿರುವುದು ಘನತೆ ಹೆಚ್ಚಿಸುತ್ತದೆ. ಸಮಾಜದ ಒಳಿತು, ಕೆಡಕಿಗೆ ಕನ್ನಡಿ ಹಿಡಿಯುವ ಸಿನಿಮಾ ಸಂಸ್ಕೃತಿಯನ್ನು ಪತ್ರಿಕೆ ಬೆಳೆಸಿದೆ. 1970–80ರ ದಶಕದಲ್ಲಿ ಸಿನಿಮಾ ಚಳವಳಿ ರೂಪ ಪಡೆಯಲು ಕಾರಣವಾದ ಪತ್ರಿಕೆ ನೀಡುತ್ತಿರುವ ಪ್ರಶಸ್ತಿ ಒಂದಷ್ಟು ಜನರಿಗೆ ಉತ್ತೇಜನ ನೀಡಬಹುದು. ಉದ್ಯಮದ ಚಿಮ್ಮುಹಲಗೆಯಾಗಿ ಕೆಲಸ ಮಾಡಬಹುದು.

ಎಂ.ಕೆ.ಭಾಸ್ಕರ್ ರಾವ್, ಸಿನಿಮಾ ವಿಮರ್ಶಕ

ಕಟ್ಟುನಿಟ್ಟಿನ ಆಯ್ಕೆ

ಒಟ್ಟಾರೆ ಆಯ್ಕೆ ಪ್ರಕ್ರಿಯೆ ಚೆನ್ನಾಗಿತ್ತು. ರಾಜ್ಯ ಮತ್ತು ರಾಷ್ಟ್ರ ಮಟ್ಟದ ಆಯ್ಕೆ ವಿಧಾನಗಳಲ್ಲಿ ಬಳಸುವ ಮಾನದಂಡಗಳನ್ನೇ ಇಲ್ಲಿ ಬಳಸಿದ್ದಾರೆ. ನನ್ನ ಪಾಲಿಗೆ ಬಂದ 25 ಸಿನಿಮಾಗಳಲ್ಲಿ 5 ಸಿನಿಮಾಗಳನ್ನು ಮುಂದಿನ ಸುತ್ತಿಗೆ ಕಳುಹಿಸುವುದು ಸವಾಲು ಎನಿಸಲಿಲ್ಲ. ಪ್ರಾಥಮಿಕ ಸುತ್ತು ಆಗಿರುವುದರಿಂದ ಆಯ್ಕೆ ಅತ್ಯಂತ ಕಟ್ಟುನಿಟ್ಟಾಗಿತ್ತು. ಮುಂದಿನ ಹಂತಗಳಲ್ಲಿ ಪಟ್ಟಿ ಮತ್ತಷ್ಟು ಶೋಧಿಸಲ್ಪಡುತ್ತದೆ.

ಪ್ರತಿಭಾ ನಂದಕುಮಾರ್
ಕವಯಿತ್ರಿ, ಸಿನಿಮಾ ವಿಮರ್ಶಕಿ

ತುಂಬ ವಿಶ್ವಾಸಾರ್ಹ

ಖುಷಿಯ ವಿಷಯವೆಂದರೆ ‘ಸಿನಿ ಸಮ್ಮಾನ’ ನನ್ನ ಬಳಗದ ಕಾರ್ಯಕ್ರಮ ಎನ್ನಿಸಿತು. ‘ಪ್ರಜಾವಾಣಿ’ ಎಂದಾಕ್ಷಣ ವಿಶ್ವಾಸಾರ್ಹತೆ ಇರುತ್ತದೆ. ಪ್ರಕ್ರಿಯೆ ಉತ್ತಮವಾಗಿತ್ತು. ಪ್ರಶಸ್ತಿ ಒಬ್ಬರ ನಿರ್ಧಾರ ಅಲ್ಲ, ಮೂರು ಸ್ತರಗಳಲ್ಲಿ ಫಿಲ್ಟರ್ ಆಗುತ್ತದೆ. ಈ ಪ್ರಕ್ರಿಯೆ ನಂಬಿಕೆಗೆ ಯೋಗ್ಯ ಎನಿಸಿತು. ಈ ಪ್ರಶಸ್ತಿ ಮುಂದೆ ದೊಡ್ಡ ಮಟ್ಟಕ್ಕೆ ಬೆಳೆಯಲಿ. ಅರ್ಥಪೂರ್ಣ ಪ್ರಶಸ್ತಿ ಎನಿಸಿತು.

ಶ್ರುತಿ, ಸಿನಿಮಾ ವಿಮರ್ಶಕಿ

ಪಾದರ್ಶಕವಾಗಿದೆ

ಇಡೀ ಆಯ್ಕೆ ಪ್ರಕ್ರಿಯೆಯಲ್ಲಿ ಪ್ರಜಾಪ್ರಭುತ್ವಕ್ಕೆ ಬೆಲೆ ನೀಡಿರುವುದು ಎದ್ದು ಕಾಣುತ್ತದೆ. ಇತಿಹಾಸ ಮತ್ತು ಸಾಂಸ್ಕೃತಿಕ ಹಿನ್ನೆಲೆ ಗಮನಿಸಿದರೆ ‘ಪ್ರಜಾವಾಣಿ’ಯಂತಹ ಸಂಸ್ಥೆ ಮಾತ್ರ ಈ ರೀತಿ ಪ್ರಕ್ರಿಯೆ ನಡೆಸಿ ಪ್ರಶಸ್ತಿ ನೀಡಲು ಸಾಧ್ಯ. ಅತ್ಯಂತ ಪಾರದರ್ಶಕವಾದ ಪ್ರಕ್ರಿಯೆ. ಪ್ರಕ್ರಿಯೆ ವೈವಿಧ್ಯಮಯವಾಗಿದೆ.

ಸಂಧ್ಯಾರಾಣಿ, ಸಿನಿಮಾ ಬರಹಗಾರ್ತಿ

ಉತ್ತಮ ವೇದಿಕೆ

ವಿಭಿನ್ನವಾದ ಅನುಭವ. ಸಿನಿಮಾವನ್ನು ಪ್ರಶಸ್ತಿ ಮಾನದಂಡದಿಂದ ನೋಡುವುದು ಬೇರೆ ಅನುಭವ. ಹೆಚ್ಚು ಎಚ್ಚರಿಕೆ ಬೇಕಾಗುತ್ತೆ. ಪ್ರಜ್ಞಾಪೂರ್ವಕವಾಗಿ ನೋಡುತ್ತೇವೆ. ಪ್ರಕ್ರಿಯೆ ಸರಳವಾಗಿತ್ತು. ಉತ್ತಮ ಕೆಟಗೆರಿಗಳು ಇದ್ದವು. ಉತ್ತಮ ಸಿನಿಮಾಗಳು ಬಂದಿದ್ದವು. ಚೆನ್ನಾಗಿದ್ದ ಸಿನಿಮಾಗಳು ಖುಷಿ ಕೊಟ್ಟವು. ಭರವಸೆ ಹುಟ್ಟಿಸುವಂತಹ ಪ್ರತಿಭೆಗಳಿಗೆ ಉತ್ತಮ ವೇದಿಕೆ ಅನ್ನಿಸಿತು.

ಪ್ರೀತಿ ನಾಗರಾಜ್, ರಂಗಕರ್ಮಿ, ವಿಮರ್ಶಕಿ

ಜವಾಬ್ದಾರಿ ಕೆಲಸ

ಜವಾಬ್ದಾರಿಯುತ ಕೆಲಸ ಎನ್ನಿಸಿತು. ಖುಷಿಯಿಂದ ಸಿನಿಮಾ ನೋಡಿ ಅಭಿಪ್ರಾಯ ತಿಳಿಸಿರುವೆ. ಮೂರು – ನಾಲ್ಕು ಹಂತಗಳಲ್ಲಿ ಆಯ್ಕೆ ಪ್ರಕ್ರಿಯೆ ನಡೆದಿರುವುದರಿಂದ ಅತ್ಯುತ್ತಮ ಸಿನಿಮಾಗಳಿಗೇ ಪ್ರಶಸ್ತಿ ಬರುತ್ತದೆ. ಯಾರಿಗೂ ಅನ್ಯಾಯವಾಗುವುದಿಲ್ಲ.

ಪ್ರೇಮ್‌ಕುಮಾರ್ ಹರಿಯಬ್ಬೆ,
ಸಿನಿಮಾ ವಿಮರ್ಶಕ

ಉತ್ತಮ ಆಯ್ಕೆ ಪ್ರಕ್ರಿಯೆ

ಒಟ್ಟಾರೆಯಾಗಿ ಇದು ಒಂದು ಉತ್ತಮ ಆಯ್ಕೆ ಪ್ರಕ್ರಿಯೆ. ಪ್ರಶಸ್ತಿಗಳು ವಿಪರೀತವಾಗಿರುವ ಹೊತ್ತಿನಲ್ಲಿ ಮತ್ತೊಂದು ಪ್ರಶಸ್ತಿ ಬೇಕೆ ಎನಿಸುವುದು ಸಹಜ. ಆದರೆ ‘ಪ್ರಜಾವಾಣಿ’ಯಂತಹ ಸಂಸ್ಥೆ ಪ್ರಶಸ್ತಿ ನೀಡುವುದು ಪ್ರಶಸ್ತಿಯ ವಿಶ್ವಾಸಾರ್ಹತೆ ಹೆಚ್ಚಿಸುತ್ತದೆ. ನಂಬಿಕೆ ಉಳಿಸಿಕೊಳ್ಳುವಂತಹ ಆಯ್ಕೆ ಪ್ರಕ್ರಿಯೆ ಇದಾಗಿದೆ.

ಎಸ್. ವಿಶ್ವನಾಥ್, ಸಿನಿಮಾ ವಿಮರ್ಶಕ

ಜೂ.1ಕ್ಕೆ ‘ಕಿಚ್ಚ’ನ ಹೊಸ ಪ್ರಾಜೆಕ್ಟ್ ಶುರು

ಸ್ಯಾಂಡಲ್‌ವುಡ್‌ನ ಅಭಿನಯ ಚಕ್ರವರ್ತಿ ‘ಕಿಚ್ಚ’ ಸುದೀಪ್ ಅವರ ಕೊನೆಯ ಸಿನಿಮಾ ಬಂದಿದ್ದು ಕಳೆದ ವರ್ಷ ಜುಲೈನಲ್ಲಿ. ‘ವಿಕ್ರಾಂತ್ ರೋಣ’ ಬಳಿಕ ಸುದೀಪ್ ಅವರ ಹೊಸ ಪ್ರಾಜೆಕ್ಟ್‌ಗಳು ಸೆಟ್ಟೇರಿರಲಿಲ್ಲ. ಈ ನಡುವೆ ಕರ್ನಾಟಕ ಚಲನಚಿತ್ರ ಕಪ್, ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನಲ್ಲಿ ತೊಡಗಿಸಿಕೊಂಡಿದ್ದ ಸುದೀಪ್ ಅವರು ಸದ್ಯ ಹಲವು ಅಭ್ಯರ್ಥಿಗಳ ಪರ ಚುನಾವಣಾ ಪ್ರಚಾರ ನಡೆಸುತ್ತಿದ್ದಾರೆ.

ಈ ಸಂದರ್ಭದಲ್ಲೇ ತಮ್ಮ ಸಿನಿಪಯಣದ ಸುದ್ದಿಯೊಂದನ್ನು ಸುದೀಪ್ ಟ್ವಿಟರ್‌ನಲ್ಲಿ ಹಂಚಿಕೊಂಡಿದ್ದಾರೆ. ಸುದೀಪ್ ಅವರ ಮುಂದಿನ ಸಿನಿಮಾ ಯಾವುದು ಎನ್ನುವ ಅಭಿಮಾನಿಗಳ ಪ್ರಶ್ನೆಗೆ ಈ ಟ್ವೀಟ್‌ನಿಂದ ಸುಳಿವು ಸಿಕ್ಕಿದೆ. ‘ನಾನು ಒಪ್ಪಿಕೊಂಡಿರುವ ಮೂರು ಸಿನಿಮಾಗಳ ಪೈಕಿ ಒಂದು ಸಿನಿಮಾದ ಪ್ರೊಮೊ ಶೂಟ್ ಮೇ 22ರಿಂದ ಆರಂಭವಾಗಲಿದೆ. ಜೂನ್ 1ರಂದು ಆ ಚಿತ್ರದ ಮುಹೂರ್ತ ನಡೆಯಲಿದೆ. ಈ ಚಿತ್ರದ ಕಥೆ ಹಾಗೂ ಜಾನರ್ ನನ್ನನ್ನು ಹೆಚ್ಚು ಉತ್ಸುಕನನ್ನಾಗಿ ಮಾಡಿದೆ ಹಾಗೂ ಈ ಚಿತ್ರಕ್ಕಾಗಿ ನಾನು ಕಾಯುತ್ತಿದ್ದೆ’ ಎಂದು ಟ್ವೀಟ್‌ನಲ್ಲಿ ಸುದೀಪ್ ಉಲ್ಲೇಖಿಸಿದ್ದಾರೆ.

ಈ ಟ್ವೀಟ್ ಸುದೀಪ್ ಅಭಿಮಾನಿಗಳಿಗೆ ಸಂಭ್ರಮ ತಂದಿದೆ. ಸಾವಿರಾರು ಜನರು ಇದನ್ನು ಲೈಕ್ ಮಾಡಿ ರಿಟ್ವೀಟ್ ಮಾಡಿದ್ದಾರೆ. ಸುಮಾರು ಒಂದು ವರ್ಷದ ಬಳಿಕ ಸುದೀಪ್ ಅವರು ತಮ್ಮ ಮುಂದಿನ ಪ್ರಾಜೆಕ್ಟ್ ಬಗ್ಗೆ ಮಾತನಾಡಿದ್ದಾರೆ. ಸುದೀಪ್ ಅವರ ಮುಂದಿನ ಸಿನಿಮಾ ‘ಬಿಲ್ಲಾ ರಂಗ ಭಾಷಾ’ ಎಂದು ಹೇಳಲಾಗುತ್ತಿದೆ. ಈ ಮೂಲಕ ‘ವಿಕ್ರಾಂತ್ ರೋಣ’ ಬಳಿಕ ಅನೂಪ್ ಭಂಡಾರಿ ಮತ್ತೊಮ್ಮೆ ಸುದೀಪ್ ಅವರಿಗೆ ಆ್ಯಕ್ಷನ್ ಕಟ್ ಹೇಳಲಿದ್ದಾರೆ. ಆದರೆ ಈ ಕುರಿತು ಚಿತ್ರತಂಡದಿಂದ ಅಧಿಕೃತ ಮಾಹಿತಿ ಇಲ್ಲ.

ಸುದೀಪ್

ಮುಧೋಳ ಹಿಡಿದು ಬಂದ ವಿಕ್ರಮ್!

ನಟ ವಿ.ರವಿಚಂದ್ರನ್ ಪುತ್ರ ವಿಕ್ರಮ್ ರವಿಚಂದ್ರನ್ ‘ಮುಧೋಳ’ ಹಿಡಿದುಕೊಂಡು ಬಂದಿದ್ದಾರೆ. ವಿಕ್ರಮ್ ಎರಡನೇ ಚಿತ್ರದ ಶೀರ್ಷಿಕೆ ಘೋಷಣೆಯಾಗಿದ್ದು, ಚಿತ್ರಕ್ಕೆ ‘ಮುಧೋಳ’ ಎಂಬ ಹೆಸರು ಇಡಲಾಗಿದೆ.

‘ತ್ರಿವಿಕ್ರಮ್’ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ವಿಕ್ರಮ್ ಅವರ ಎರಡನೇ ಚಿತ್ರದ ಶೂಟಿಂಗ್ ಆರಂಭವಾಗಿದೆ. ಚಿತ್ರದ ಟೀಸರ್ ಬಿಡುಗಡೆಗೊಂಡಿದ್ದು, ಇದೊಂದು ರಕ್ತಸಿಕ್ತ ಚರಿತ್ರೆ ಹೊಂದಿರುವ ಚಿತ್ರವೆಂಬುದು ಮೇಲ್ನೋಟಕ್ಕೆ ಗೊತ್ತಾಗುತ್ತಿದೆ. ರಗಡ್ ಅವತಾರದಲ್ಲಿ ಕಾಣಿಸಿಕೊಂಡಿರುವ ವಿಕ್ರಮ್ ಮತ್ತೊಂದು ಗ್ಯಾಂಗ್‌ಸ್ಟರ್ ಸಿನಿಮಾಕ್ಕೆ ಸಜ್ಜಾಗಿದ್ದಾರೆ. ಚಿತ್ರಕ್ಕೆ ಶೀರ್ಷಿಕೆ ಆಯ್ಕೆ ಮಾಡಿದ್ದು ರವಿಚಂದ್ರನ್ ಅವರೇ ಎನ್ನುವುದು ವಿಶೇಷ. ಕಾರ್ತಿಕ್ ರಾಜನ್ ಈ ಸಿನಿಮಾಗೆ ಆ್ಯಕ್ಷನ್ ಕಟ್ ಹೇಳಿದ್ದು, ಇದು ಇವರ ಚೊಚ್ಚಲ ಚಿತ್ರ.

‘ಈ ಚಿತ್ರದ ಮೂಲಕ ವಿಕೆಆರ್ ಎಂಬ ಹೊಸ ಬ್ರ್ಯಾಂಡ್ ಸೃಷ್ಟಿಸಲು ಹೊರಟಿರುವೆ. ವಿಕೆಆರ್ ಎಂದರೆ, ವಿಕ್ರಮ್ ರವಿಚಂದ್ರನ್ ಅನ್ನೋದು ತುಂಬಾ ಜನಕ್ಕೆ ಗೊತ್ತಿದೆ. ಇದು ವೀರಸ್ವಾಮಿ ರವಿಚಂದ್ರನ್ ಎಂದು ಕೂಡ ಆಗುತ್ತದೆ’ ಎಂದಿದ್ದಾರೆ ವಿಕ್ರಮ್. ಯುವರಾಜ್ ಚಂದ್ರನ್ ಸಂಗೀತ ನಿರ್ದೇಶನ, ಮಾಸ್ತಿ ಸಂಭಾಷಣೆ, ಸಂದೀಪ್ ವಲ್ಲೂರಿ ಛಾಯಾಗ್ರಹಣ ಚಿತ್ರಕ್ಕಿದೆ. ರಕ್ಷಾ ವಿಜಯಕುಮಾರ್ ಹಾಗೂ ಸಿಲ್ಕು ಕಣ್ಣನ್ ಚಿತ್ರದ ನಿರ್ಮಾಪಕರು.

ಮುಧೋಳ

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ **‘ತೀರಿಕೊಂಡಿರುವ** ತಮ್ಮ ಹೆಣ್ಣುಮಕ್ಕಳ ದೇಹದ ಮೇಲೆ ಅತ್ಯಾಚಾರದಂತಹ ಕೃತ್ಯಗಳು ನಡೆಯಬಾರದು ಎಂಬ ಕಾರಣಕ್ಕೆ ಮೃತರ ಗೋರಿಯ ಮೇಲೆ ಕಬ್ಬಿಣದ ಬಾಗಿಲು ಅಳವಡಿಸಿ ಬೀಗ ಹಾಕಲಾಗಿದೆ. ಇದು ಪಾಕಿಸ್ತಾನದ ನಿಜ ಸ್ಥಿತಿ’ ಎಂದು ಹೇಳಲಾಗುವ ಚಿತ್ರವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಈ ಸುದ್ದಿಯನ್ನು ಮೊದಲು ಪ್ರಕಟಿಸಿದ್ದು ‘ಎಎನ್‌ಐ ಡಿಜಿಟಲ್’ ಸುದ್ದಿಸಂಸ್ಥೆ. ‘ಡೈಲಿ ಟೈಮ್’ ವೆಬ್‌ಸೈಟ್‌ನಲ್ಲಿದ್ದ ‘ಅನ್‌ಸೇಫ್ ಗ್ರೇವ್ಸ್’ ಎಂಬ ಲೇಖನವನ್ನು ಅದು ಪ್ರಕಟಿಸಿದೆ. ದೇಶದ ಬಹುತೇಕ ರಾಷ್ಟ್ರೀಯ ಸುದ್ದಿ ಸಂಸ್ಥೆಗಳು ಲೇಖನದ ಜೊತೆ ಈ ಚಿತ್ರವನ್ನು ಪ್ರಕಟಿಸಿವೆ. ಆದರೆ ಲೇಖನದ ಜೊತೆ ಬಳಸಲಾದ ಚಿತ್ರ ತಪ್ಪಾಗಿದೆ.

✓ **‘ಸಾಮಾಜಿಕ ಜಾಲತಾಣಗಳಲ್ಲಿ** ಹರಿದಾಡುತ್ತಿರುವ ಈ ಚಿತ್ರವು ಎಎನ್‌ಐ ಡಿಜಿಟಲ್‌ನಲ್ಲಿ ಪ್ರಕಟವಾದ ಡೈಲಿ ಟೈಮ್‌ನ ಲೇಖನದಲ್ಲಿ ಇಲ್ಲ’ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ. ಈ ಚಿತ್ರ ಪಾಕಿಸ್ತಾನಕ್ಕೆ ಸಂಬಂಧಿಸಿದ್ದಲ್ಲ. ಇದು ಹೈದರಾಬಾದ್‌ನ ಮದನ್‌ಪೇಟೆ ಎಂಬಲ್ಲಿರುವ ಸ್ಮಶಾನಕ್ಕೆ ಸಂಬಂಧಪಟ್ಟಿದೆ. ಸ್ಮಶಾನದಲ್ಲಿ ಜಾಗದ ಕೊರತೆಯಿದ್ದು, ಮೃತದೇಹಗಳನ್ನು ಹೂಳಿರುವ ಜಾಗದಲ್ಲೇ ಹೊಸ ಗುಂಡಿ ತೆಗೆಯುವುದು ಸಾಮಾನ್ಯವಾಗಿದೆ. ಇದನ್ನು ತಪ್ಪಿಸುವ ಸಲುವಾಗಿ ವ್ಯಕ್ತಿಯೊಬ್ಬರು ಎರಡು ತಿಂಗಳ ಹಿಂದೆ ಈ ತಂತ್ರ ಪ್ರಯೋಗಿಸಿದ್ದರು. ಗುಂಡಿ ತೆಗೆಯಲು ಸಾಧ್ಯವಾಗಬಾರದು ಎಂಬ ಉದ್ದೇಶದಿಂದ, ತಮ್ಮ ತಾಯಿಯ ಗೋರಿಯ ಸುತ್ತಲೂ ಕಬ್ಬಿಣದ ಬಾಗಿಲು ಅಳವಡಿಸಿ ಅದಕ್ಕೆ ಬೀಗ ಹಾಕಿದ್ದರು. ತಮ್ಮನ್ನು ಸಂಪರ್ಕಿಸದೇ ಹೀಗೆ ಮಾಡಲಾಗಿದೆ ಎಂದು ಸ್ಮಶಾನದ ಉಸ್ತುವಾರಿ ನೋಡಿಕೊಳ್ಳುವವರು ಹೇಳಿದ್ದಾರೆ ಎಂದು ಆಲ್ಟ್ ನ್ಯೂಸ್ ವರದಿ ಮಾಡಿದೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಮೇ 3, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ತ್ರಯೋದಶಿ ಗಂ. 23-50, ನಕ್ಷತ್ರ: ಹಸ್ತ ಗಂ. 20.56 ಯೋಗ: ಹರ್ಷಣ ಗಂ. 11-27, ಕರಣ: ಕೌಲವ ಗಂ. 11-39, ಮೇಷ ಮಾಸದ 19 ನೇ ದಿನ, ಮಳೆನಕ್ಷತ್ರ: ಭರಣಿ 2. ರಾಹುಕಾಲ : ಮಧ್ಯಾಹ್ನ 12-00 – 01-30, ಸೂರ್ಯೋದಯ : 06-12 ಸೂರ್ಯಾಸ್ತ : 06-43, ಮುಸ್ಲಿಂ ದಿನಾಂಕ : 12 ಶವ್ವಾಲ್. ದಿನ ವಿಶೇಷ : ಪಕ್ಷ ಪ್ರದೋಷ, ದಾದಾ ಚೆಲ್ಲಾರಾಮ್‌ರವರ ಜನ್ಮದಿನೋತ್ಸವ (ಸಿಂಧಿ).
ಅದೃಷ್ಟ ಸಂಖ್ಯೆ : 4, 12

ಮೇಷ: ಯಾವುದೇ ಕೆಲಸ ಮಾಡುವ ಮುನ್ನ ಅದರ ಫಲಾಫಲಗಳನ್ನು ಅರಿತು ಕಠಿಣ ಪರಿಶ್ರಮದಿಂದ ಕಾರ್ಯನಿರ್ವಹಿಸಿದಲ್ಲಿ ಕಹಿಯ ಸನ್ನಿವೇಶಗಳು ಸಹಜ ಸ್ಥಿತಿಗೆಮರಳಲಿವೆ. ಔಷಧಿ ಮಾರಾಟಗಾರರಿಗೆ ಹೆಚ್ಚಿನ ಲಾಭ ಸಿಗುವುದು.

ವೃಷಭ: ಸಾಮಾಜಿಕ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ಆಗುತ್ತದೆ. ಕಾರ್ಖಾನೆ ಕೆಲಸಗಾರರಿಗೆ ಹೆಚ್ಚಿನ ಕೆಲಸ. ದೊಡ್ಡ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಯೋಚಿಸಿ ಪರಿಹರಿಸಿಕೊಳ್ಳುವ ಮಾರ್ಗವನ್ನು ಕಂಡುಕೊಳ್ಳಿ.

ಮಿಥುನ: ಇಂದು ಮಕ್ಕಳಿಂದ ಅಚ್ಚರಿಯ ಸುದ್ದಿಯೊಂದನ್ನು ಕೇಳುವಿರಿ. ಉದ್ಯೋಗ ಬದಲಿಸುವ ವಿಚಾರದಲ್ಲಿ ಚೆನ್ನಾಗಿ ಯೋಚಿಸುವುದು ಉತ್ತಮ. ಅಂದುಕೊಂಡಿರುವ ಕೆಲಸಗಳು ಉತ್ತಮವಾಗಿ ನೆರವೇರಿ ನೆಮ್ಮದಿ ಇರುವುದು.

ಕರ್ಕಾಟಕ: ಯೋಜನೆಗಳು ಕಾರ್ಯಗತಗೊಳ್ಳಲು ಪ್ರಯತ್ನ ನಡೆಸಬೇಕಾಗುವುದು. ಮನುಷ್ಯ ಪ್ರಯತ್ನದ ಜತೆ ಮಹಾ ಗಣಪತಿಯ ಮೊರೆ ಹೋಗುವುದರಿಂದ ಕಾರ್ಯ ಸಿದ್ಧಿಯಾಗಲಿದೆ. ಆರೋಗ್ಯದಲ್ಲಿ ವ್ಯತ್ಯಯ ಕಾಣಲಿದೆ.

ಸಿಂಹ: ಹಣಕಾಸಿನ ವ್ಯಾಮೋಹ ತೊಂದರೆಗಳಿಗೆ ಕಾರಣವಾಗದಂತೆ ನೋಡಿಕೊಳ್ಳಿ. ಅಧಿಕಾರ, ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ. ಕೆಲಸದಲ್ಲಿ ಬದಲಾವಣೆ ಕಾಣಲಿದ್ದೀರಿ . ಜೀವನ ಶೈಲಿಯೂ ಬದಲಾಗಲಿದೆ.

ಕನ್ಯಾ: ಬದುಕನ್ನು ಒಂದು ವ್ಯವಸ್ಥೆಗೆ ತರಲು ದಿನದ ಅಲ್ಪ ಸಮಯವನ್ನು ಮೀಸಲಿಡಿ. ಇದರಿಂದ ನಿಮ್ಮ ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ವಿದ್ಯಾರ್ಥಿಗೆ ಶಿಕ್ಷಣ ಮುಂದುವರೆಸಲು ಬಂಧುಗಳ ಸಹಾಯ ದೊರಕುವುದು.

ತುಲಾ: ಮೇಲಧಿಕಾರಿಗಳು ಹಾಗೂ ಹಿರಿಯರು ಇಂದಿನ ನಿಮ್ಮ ಕೆಲಸಗಳಲ್ಲಿ ನಿಮಗೆ ಸಹಕಾರ ನೀಡುತ್ತಾರೆ. ವ್ಯಾಪಾರದಲ್ಲಿ ಮಿಶ್ರಫಲವಿರುವುದು. ಖರೀದಿಯಲ್ಲಿ ಮೋಸ ಹೋಗುವ ಲಕ್ಷಣವಿರುವುದರಿಂದ ಗಮನವಿರಲಿ.

ವೃಶ್ಚಿಕ: ಅಡುಗೆ ಕೆಲಸ ಮಾಡುವವರಿಗೆ ಹೆಚ್ಚಿನ ಕೆಲಸ, ಬೇಡಿಕೆ ಹಾಗೂ ಲಾಭವಿರುವುದು. ವಿರೋಧಿಗಳು ರಾಜಿಯಾಗುವ ಸಾಧ್ಯತೆ ಇದೆ. ಅಸಾಧಾರಣ ರೀತಿಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುತ್ತೀರಿ.

ಧನು: ಬಾಲ್ಯದಲ್ಲಿ ಕಲಿತ ಅಥವಾ ತಿಳಿದುಕೊಂಡಿದ್ದ ಕೆಲ ಇತರೆ ವಿಷಯಗಳು ವೃತ್ತಿಪರವಾಗಿ ಉಪಯೋಗಕ್ಕೆ ಬರಲಿದೆ. ರಾಜಕೀಯ ವ್ಯಕ್ತಿಗಳಿಗೆ ನಂಬಿಕೆ ದ್ರೋಹ ಅಥವಾ ಅಪಪ್ರಚಾರದಂತಹ ಸಮಸ್ಯೆ ಎದುರಾಗಬಹುದು.

ಮಕರ: ಕುಟುಂಬದ ಸಮಸ್ಯೆಯತ್ತ ಗಮನ ನೀಡುವುದನ್ನು ಮರೆಯದಿರಿ. ದಾಂಪತ್ಯದಲ್ಲಿ ಅನ್ಯೋನ್ಯತೆ ಕಾಪಾಡಿಕೊಳ್ಳುವುದು ಜವಾಬ್ದಾರಿಯಾಗಿರುತ್ತದೆ. ಗಣಿತಜ್ಞರಿಗೆ, ಸಂಗೀತಗಾರರಿಗೆ ಅವಕಾಶಗಳು ದೊರೆಯುವುದು.

ಕುಂಭ: ಸಂಸಾರ ನಿರ್ವಹಣೆ ಸಲಭವೆನಿಸುವುದಿಲ್ಲ. ನಿಮ್ಮ ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯವಾಗುವುದು. ಮಕ್ಕಳ ಹಿತಾಸಕ್ತಿಗಳಿಗೆ ಹೆಚ್ಚು ಗಮನ ಕೊಡಿ. ಅಗತ್ಯಗಳನ್ನು ಪೂರೈಸಿ.

ಮೀನ: ನಿಮ್ಮನ್ನು ನೀವೇ ವಿಮರ್ಶಿಕೊಳ್ಳಿ ನಿಮ್ಮ ನಡವಳಿಕೆಯ ತಪ್ಪುಗಳು ಅರಿವಾಗುವುದು. ಬಿಸಿನೆಸ್ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜೊತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು. ಆರ್ಥಿಕ ಸಮಸ್ಯೆ ನಿಮ್ಮ ನಿದ್ದೆ ಕೆಡಿಸಲಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ

ಪುರಾತನ ಲೋಕ

ಬಲು ಹಳೆಯ ಲೋಕವಿದು ಬಲು ಪುರಾತನ ಲೋಕ |
ಬೆಳೆದಿರ್ಪುದಿದು ಕೋಟಿರಸಗಳನು ಪೀರ್ದು ||
ಸುಲಭವಲ್ಲದರ ಸ್ವಭಾವವನು ಮಾರ್ಪಡಿಸೆ |
ಸಲದಾತುರತೆಯದಕೆ- ಮಂಕುತಿಮ್ಮ || 875 ||

ಪದ-ಅರ್ಥ: ಬೆಳೆದಿರ್ಪುದಿದು = ಬೆಳೆದಿರ್ಪುದು(-ಬೆಳೆದಿಹುದು) + ಇದು, ಪೀರ್ದು = ಹೀರಿಕೊಂಡು, ಸುಲಭವಲ್ಲದರ = ಸುಲಭವಲ್ಲ + ಅದರ, ಮಾರ್ಪಡಿಸೆ = ಬದಲಾಯಿಸಲು, ಸಲದಾತುರತೆಯದಕೆ = ಸಲದು(ಸಲ್ಲದು) + ಆತುರತೆ + ಅದಕೆ.

ವಾಚ್ಯಾರ್ಥ: ಇದು ಬಹಳ ಹಳೆಯ ಲೋಕ, ತುಂಬ ಪುರಾತನವಾದ ಲೋಕ. ಕೋಟಿ ರಸಗಳನ್ನು ಹೀರಿ ಅದು ಬೆಳೆದು ನಿಂತಿದೆ. ಅದರ ಸ್ವಭಾವವನ್ನು ಬದಲಾಯಿಸುವುದು ಸುಲಭವಲ್ಲ ಮತ್ತು ಬದಲಾಯಿಸಲು ಅವಸರದ ಪ್ರಯತ್ನಗಳೂ ಅಸಾಧ್ಯ.

ವಿವರಣೆ: ಈ ಲೋಕ ಬಹಳ ಪುರಾತನವಾದದ್ದು. ವಿಜ್ಞಾನಿಗಳ ಅಂದಾಜಿನಂತೆಯೇ ಇದಕ್ಕೆ 450 ಕೋಟಿ ವರ್ಷಗಳಾಗಿವೆ. ಇದು ಪ್ರಾರಂಭದಿಂದಲೂ ಹೀಗೆಯೇ ಇತ್ತೇ? ಇಲ್ಲ. ಮೊದಲು ಬಿಸಿಗಾಳಿಯಾಗಿ ಸುತ್ತುತ್ತಿದ್ದುದು ನಿಧಾನವಾಗಿ ತಂಪಾಗತೊಡಗಿತು. ಸಾವಿರಾರು ವರ್ಷಗಳ ಕಾಲ ಒಂದೇ ಸಮನೆ ಸುರಿದ ಮಳೆಯಿಂದ ಅದರ ಮೇಲ್ಮೈ ಸಾವಕಾಶವಾಗಿ ತಂಪಾಗುತ್ತ ಬಿರುಸಾಯಿತು. ಒಳಗೆ ಲಾವಾ ಕುದಿಯುತ್ತಲೇ ಇತ್ತು. ಸಾವಿರ, ಸಾವಿರ ವರ್ಷಗಳ ಕಾಲ ಅನೇಕ ಪ್ರಕ್ರಿಯೆಗಳಿಗೆ ಒಳಗಾಗಿ ಈ ಹಂತಕ್ಕೆ ಬಂದಿದೆ. ಅದನ್ನು ಕಗ್ಗ ಸುಂದರವಾಗಿ “ಬೆಳೆದಿರ್ಪುದು ಕೋಟಿ ರಸಗಳನು ಪೀರ್ದು” ಎನ್ನುತ್ತದೆ. ಅದೆಷ್ಟು ಕೋಟಿ ಕೋಟಿ ರಸಾಯನಿಕ ಕ್ರಿಯೆಗಳಿಗೆ ಅದು ತುತ್ತಾಗಿದೆಯೊ? ಅದೆಷ್ಟು ವಾತಾವರಣದ ಬದಲಾವಣೆಗೆ ಪಕ್ಕಾಗಿದೆಯೊ? ನಂತರ ಬಂದ ಸಸ್ಯರಾಸಿ, ಜೀವಿಗಳು ಮತ್ತು ಕೊನೆಗೆ ಬಂದಿರುವ ಮನುಷ್ಯ ಅದೆಷ್ಟು ಪ್ರಯೋಗಗಳನ್ನು ಈ ಪ್ರಪಂಚದ ಮೇಲೆ ಮಾಡಿವೆಯೊ? ಇಂಥ ಹಳೆಯ ಪ್ರಪಂಚವನ್ನು, ಅದರ ಸ್ವಭಾವವನ್ನು ಬದಲಿಸುವುದು ಸುಲಭವೇ? ಸಾಧ್ಯವೇ? ಸ್ವಾಮೀ ವಿವೇಕಾನಂದರು ಹೇಳುತ್ತಾರೆ, ಅದನ್ನು ಬದಲಾಯಿಸಲು ಹೋಗುವುದು ಬೇಡ. ಅದು ತನ್ನ ಕಾರ್ಯವಿಧಿಯಂತೆ ತಾನೇ ಬದಲಾಗುತ್ತ ಹೋಗುತ್ತದೆ. ಅವರು ಹೇಳುತ್ತಾರೆ, ಪ್ರಪಂಚ ಒಂದು ವ್ಯಾಯಾಮಶಾಲೆ ಇದ್ದಂತೆ. ನಾವು ವ್ಯಾಯಾಮ ಶಾಲೆಗೆ ಹೋಗುವುದು ಯಾಕೆ? ಅದನ್ನು ಸರಿ ಮಾಡಲಿಕ್ಕಾ? ನಾವುಹೋಗುವುದು ನಮ್ಮ ಶರೀರವನ್ನು ಗಟ್ಟಿ ಮಾಡಿಕೊಳ್ಳುವುದಕ್ಕೆ ಅಲ್ಲವೆ? ಅಲ್ಲಿದ್ದ ಉಪಕರಣಗಳನ್ನು ಬಳಸಿಕೊಂಡು, ಅಲ್ಲಿಯ ಗುರುಗಳಿಂದ ವ್ಯಾಯಾಮವನ್ನು ಕಲಿತು, ಅಭ್ಯಾಸ ಮಾಡಿ ಶರೀರವನ್ನು ಹುರಿಮಾಡಿಕೊಳ್ಳುವುದು ಉದ್ದೇಶ. ಅಂತೆಯೇ ನಾವು ಪ್ರಪಂಚವನ್ನು ತಕ್ಷಣವೇ ಬದಲಿಸುವ, ರಿಪೇರಿ ಮಾಡುವ ಉಮೇದು ಬೇಡ. ಪ್ರಪಂಚಕ್ಕೆ ನಾವು ಬಂದಿರುವುದು ಇಲ್ಲಿಯ ಅನುಭವಗಳಿಂದ ನಮ್ಮ ಜೀವನವನ್ನು ಭದ್ರಮಾಡಿಕೊಳ್ಳಲಿಕ್ಕೆ. ಇಲ್ಲಿ ದೊರಕುವ ಸಂಪರ್ಕಗಳು, ಅವಕಾಶಗಳು, ಸುಖ-ದು:ಖಗಳು ನಮ್ಮನ್ನು ಕುಲುಕಿ, ಕುಟ್ಟಿ ಗಟ್ಟಿ ಮಾಡುತ್ತವೆ. ಹೀಗೆ ನಮ್ಮನ್ನು ಕುಟ್ಟುತ್ತ, ತಳ್ಳುತ್ತ ಪ್ರಪಂಚವೂ ನಿಧಾನಕ್ಕೆ ಬದಲಾಗುತ್ತದೆ. ಅದಕ್ಕೇ ಕಗ್ಗ ಹೇಳುತ್ತದೆ, ಪ್ರಪಂಚವನ್ನು ಬದಲಿಸುವ ಆತುರತೆ ಬೇಡ. ಆ ಆತುರತೆ ನಮ್ಮನ್ನು ಗುದ್ದಿ ಹಣ್ಣು ಮಾಡೀತು.

ಪದಬಂಧ 5307

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ತಂದೆಯ ತಂದೆ (4)
3.ನಗುವಿನಿಂದ ಕೂಡಿದ ಮುಖ (4)
5.ದುರಸ್ತಿಯನ್ನು ಹೀಗೆನ್ನಿ (3)
6.ವತ್ಸ ನಡುವಿರುವ ವರ್ಷ (4)
7.ಯತಿಗೆ ದೊರೆತಿರುವ ಸೋಡಿ (4)
9.ಈ ತರ ಬಂದಿರುವ ಏರ್ಪಾಟು (4)
11.ಸಂಭ್ರಮಕ್ಕಿಲ್ಲಿ ಗರ ಬಡಿದಿದೆ! (4)
13.ಕೈಯನ್ನು ಕೊನೆಗಿಟ್ಟಿರುವ ಆಳು (3)
14.ಜರಿ ಸೀರೆಯಲ್ಲಿರುವ ಬೆಲೆಯುಳ್ಳ ಮಣಿ (4)
15.ಒಳ್ಳೆಯ ಅಭಿಪ್ರಾಯ (4)

ಮೇಲಿಂದ ಕೆಳಕ್ಕೆ
2.ಓಡುತ್ತಾಹೋಗಿ ಸುದ್ದಿ ಮುಟ್ಟಿಸುವವನು (4)
3. ಮೂರು ಮೈಲುಗಳ ಒಂದು ಅಳತೆ (4)
4.ಆಕಾಶದಲ್ಲಿ ಸಂಚರಿಸುವಂಥದ್ದು (2)
6.ಸಂತನಲ್ಲಿರುವ ಗುರುತು (3)
8.ಇಲ್ಲಿ ಅಂಧಕಾರ ಕವಿದಿದೆ (3)
10.ಈತ ಕೆಟ್ಟ ನಡತೆಯವನು (4)
11.ಸರಸ ಹಾಗೂ ವಿರಸ ಸಮನಾಗಿರುವಿಕೆ (4)
12.ಗಂಡು ಕೋಳಿಯಿದು (2)



5306ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಲೆಮಾರಿ 3.ಆಘ್ರಾಣಿಸು
5.ನಿಜ 7.ತಿರುಕ
8.ಹಂತ 9.ಜಲ
10.ಅಸುರ 12.ಕರ
14.ನರಾಕೃತಿ 15.ಪರಸ್ಪರ

ಮೇಲಿಂದ ಕೆಳಕ್ಕೆ:
1.ಅವಧಾನಿ 2.ರಿಯಾಯಿತಿ
3.ಆಮುಷ್ಮಿಕ 4.ಸುರಕ್ಷಿತ
6.ಜಟಿಲ 8.ಹಂತಕ
9.ಜಮಖಾನ 10.ಅನುಮತಿ
11.ರಜನಿಪ 13.ರತ್ನಾಕರ

ಸುಡೊಕು 5693

	7	6		4				9
	9			7		3		
7	8			2			5	3
			4		5			7
6		5		8			2	
		7					9	5
	5	2			7			
9		1		5	8	2		4

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5692 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18065
ಇಂದಿನ ಅಂತ್ಯ	18147
▲	82
ದಿನದ ಗರಿಷ್ಠ	18180

ಕೊಬ್ಬರಿ ಧಾರಣೆ

ಅರಸೀಕೆರೆ	₹8900-9440
ಕೆ.ಆರ್. ಪೇಟೆ (ಇತರ)	₹8250-8250

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹460
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹465

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1610(1620)
ಸೋಯಾ (ರಿಫೈನ್ಡ್)	₹960(960)
ಸೂರ್ಯಕಾಂತಿ (ರಿಫೈನ್ಡ್)	₹1010(1015)
ಪಾಮೋಲಿನ್	₹935(820)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1,100
ಮಧ್ಯಮ	₹600-800
ಸಣ್ಣ	₹300-500

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)
₹ 209-462
ದ್ವಿತಳಿ (ಬಿ.ವಿ)
₹250-617

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹145
ಗುಡ್ ಲಾಟ್	₹133

‘ಜಾಗತಿಕ ಬೆಳವಣಿಗೆಗೆ ಭಾರತದ ಕೊಡುಗೆ ಶೇ 15’

ಪ್ರಜಾವಾಣಿ ವಾರ್ತೆ

ನವದೆಹಲಿ: ಭಾರತವು ಅತ್ಯಂತ ವೇಗದ ಬೆಳವಣಿಗೆ ಕಾಣುವ ಅರ್ಥ ವ್ಯವಸ್ಥೆ ಎಂಬ ಖ್ಯಾತಿಯನ್ನು 2023ರಲ್ಲಿಯೂ ಉಳಿಸಿಕೊಳ್ಳಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಹೇಳಿದೆ. ಅಲ್ಲದೆ, ವಿಶ್ವದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಈ ವರ್ಷ ಭಾರತದ ಪಾಲು ಶೇಕಡ 15.4ರಷ್ಟು ಇರಲಿದೆ ಎಂದು ಅದು ಹೇಳಿದೆ.

ಭಾರತ ಮತ್ತು ಚೀನಾ ಒಟ್ಟಾಗಿ, ವಿಶ್ವದ ಅರ್ಥ ವ್ಯವಸ್ಥೆಯ ಬೆಳವಣಿಗೆಗೆ ಸರಿಸುಮಾರು ಅರ್ಧದಷ್ಟು ಕೊಡುಗೆ ನೀಡಲಿವೆ. ಚೀನಾ ದೇಶವು ಜಾಗತಿಕ ಆರ್ಥಿಕ ಬೆಳವಣಿಗೆಗೆ ಶೇಕಡ 34.9ರಷ್ಟು ಕೊಡುಗೆ ನೀಡಲಿದೆ. ಜಾಗತಿಕ ಆರ್ಥಿಕ ಬೆಳವಣಿಗೆಯಲ್ಲಿ ಈ ಬಾರಿ ಏಷ್ಯಾದ ಪಾಲು ಶೇ 70ರಷ್ಟು ಇರಲಿದೆ ಎಂದು ಐಎಂಎಫ್ ಅಂದಾಜು ಮಾಡಿದೆ.

‘ಹಣಕಾಸಿನ ನೀತಿಗಳು ಬಿಗಿಯಾಗಿದ್ದರೂ, ಏಷ್ಯಾದ ಮಾರುಕಟ್ಟೆಗಳಲ್ಲಿ ಆಂತರಿಕ ಬೇಡಿಕೆಯು ಬಲಿಷ್ಠವಾಗಿಯೇ ಉಳಿದಿದೆ’ ಎಂದು ಐಎಂಎಫ್ ತಿಳಿಸಿದೆ. ಈ ವರ್ಷದಲ್ಲಿ ಏಷ್ಯಾದ ಬೆಳವಣಿಗೆಯು ಶೇಕಡ 4.6ರಷ್ಟು ಇರಲಿದೆ ಎಂದು ಅದು ಅಂದಾಜು ಮಾಡಿದೆ. ಐಎಂಎಫ್ ಈ ಮೊದಲು ಸಿದ್ಧಪಡಿಸಿದ್ದ ಅಂದಾಜಿನಲ್ಲಿ, ಏಷ್ಯಾದ ಬೆಳವಣಿಗೆ ಶೇಕಡ 4.3ರಷ್ಟು ಇರಲಿದೆ ಎಂದು ಹೇಳಿತ್ತು.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಷೇರುಪೇಟೆಯಲ್ಲಿ ತೇಜಿ ವಹಿವಾಟು

ಮುಂಬೈ (ಪಿಟಿಐ): ವಿದೇಶಿ ಬಂಡವಾಳದ ಒಳಹರಿವು ಹಾಗೂ ಏಪ್ರಿಲ್ ತಿಂಗಳಲ್ಲಿ ಜಿಎಸ್‌ಟಿ ಸಂಗ್ರಹವು ದಾಖಲೆ ಮಟ್ಟಕ್ಕೆ ಹೆಚ್ಚಳವಾಗಿದ್ದು ದೇಶದ ಷೇರುಪೇಟೆಗಳಲ್ಲಿ ಮಂಗಳವಾರ ತೇಜಿ ವಹಿವಾಟು ನಡೆಯಲು ನೆರವಾದವು. ಹೂಡಿಕೆದಾರರು ಇನ್ಫೊಸಿಸ್ ಮತ್ತು ರಿಲಯನ್ಸ್ ಇಂಡಸ್ಟ್ರೀಸ್‌ನ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸತತ ಎಂಟನೆಯ ದಿನವೂ ಏರಿಕೆ ಕಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ ಕೂಡ ಏರಿಕೆ ದಾಖಲಿಸಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರೆಲ್‌ಗೆ ಶೇ0.38 ಕಡಿಮೆ ಆಗಿದ್ದು 79.03 ಡಾಲರ್‌ಗೆ ತಲುಪಿದೆ.

ಹಣಕಾಸಿನ ಬಿಕ್ಕಟ್ಟಿಗೆ ಸಿಲುಕಿದ ಕಂಪನಿ • ಎನ್‌ಸಿಎಲ್‌ಟಿಗೆ ಅರ್ಜಿ

3 ದಿನ ‘ಗೋ ಫಸ್ಟ್’ ಸೇವೆ ಇಲ್ಲ

ಮುಂಬೈ (ಪಿಟಿಐ): ವಾಡಿಯಾ ಸಮೂಹದ ಒಡೆತನದ ‘ಗೋ ಫಸ್ಟ್’ ವಿಮಾನಯಾನ ಕಂಪನಿಯು, ತನ್ನ ವಿಮಾನ ಸೇವೆಗಳನ್ನು ಬುಧವಾರದಿಂದ ಮೂರು ದಿನಗಳವರೆಗೆ ಅಮಾನತುಗೊಳಿಸಿದೆ. ಹಣಕಾಸಿನ ತೀವ್ರ ಬಿಕ್ಕಟ್ಟಿನ ನಡುವೆ ಕಂಪನಿ ಈ ತೀರ್ಮಾನ ಕೈಗೊಂಡಿದೆ.

ವಿಮಾನ ಸೇವೆ ರದ್ದಾಗಿದ್ದಕ್ಕೆ ಸಂಬಂಧಿಸಿದಂತೆ, ಟಿಕೆಟ್ ದರವನ್ನು ಪ್ರಯಾಣಿಕರಿಗೆ ಹಿಂದಿರುಗಿಸಲಾಗುತ್ತದೆ ಎಂದು ಅದು ತಿಳಿಸಿದೆ.

ಅಲ್ಲದೆ, ತನಗೆ ಹಣಕಾಸಿನ ಹೊಣೆಗಾರಿಕೆಗಳನ್ನು ನಿಭಾಯಿಸಲು ಸಾಧ್ಯವಾಗುತ್ತಿಲ್ಲ ಎಂದು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಸ್ವಯಂಪ್ರೇರಿತವಾಗಿ ತಿಳಿಸಿದೆ. ಕಂಪನಿಯ ಮುಖ್ಯಸ್ಥ ಕೌಶಿಕ್ ಖೋನಾ ಅವರು ಈ ವಿಚಾರ ಬಹಿರಂಗ ಪಡಿಸಿದ್ದಾರೆ.

ವಿಮಾನಯಾನ ಕಂಪನಿಯು ತನ್ನ 28 ವಿಮಾನಗಳ ಹಾರಾಟವನ್ನು ನಿಲ್ಲಿಸಿದೆ. ಇದು ಕಂಪನಿಯ ಬಳಿ ಇರುವ ಒಟ್ಟು ವಿಮಾನಗಳ ಪೈಕಿ ಅರ್ಧದಷ್ಟಕ್ಕಿಂತ ಹೆಚ್ಚು. ಪ್ರಾಟ್ ಆ್ಯಂಡ್ ವಿಟ್ನಿ ಕಂಪನಿಯು ಎಂಜಿನ್‌ಗಳನ್ನು ಪೂರೈಕೆ ಮಾಡದ ಕಾರಣದಿಂದಾಗಿ ವಿಮಾನ ಹಾರಾಟ ಸ್ಥಗಿತಗೊಳಿಸಲಾಗಿದೆ ಎಂದು ಗೋ ಫಸ್ಟ್ ಹೇಳಿದೆ. ಇದು ವಿಮಾನಯಾನ ಕಂಪನಿಗೆ ಹಣಕಾಸಿನ ಬಿಕ್ಕಟ್ಟನ್ನು ತಂದಿತ್ತಿದೆ.

ಹಣಕಾಸಿನ ಹೊಣೆಗಾರಿಕೆಯನ್ನು ನಿಭಾಯಿಸಲು ಆಗುತ್ತಿಲ್ಲ ಎಂದು ಸ್ವಯಂಪ್ರೇರಿತವಾಗಿ ಎನ್‌ಸಿಎಲ್‌ಟಿಗೆ ತಿಳಿಸಬೇಕಾಗಿದ್ದುದು ದುರದೃಷ್ಟಕರ. ಆದರೆ, ಕಂಪನಿಯ ಹಿತಾಸಕ್ತಿಯನ್ನು ಕಾಯಲು ಇದನ್ನು ಮಾಡಬೇಕಿತ್ತು ಎಂದು ಖೋನಾ ಹೇಳಿದ್ದಾರೆ.

ಈ ಬೆಳವಣಿಗೆಗಳ ಕುರಿತು ಕಂಪನಿಯು ಕೇಂದ್ರ ಸರ್ಕಾರಕ್ಕೆ ಕೂಡ ಮಾಹಿತಿ ನೀಡಿದೆ. ಎನ್‌ಸಿಎಲ್‌ಟಿ ತನ್ನ ಮನವಿಯನ್ನು ಸ್ವೀಕರಿಸಿದ ನಂತರದಲ್ಲಿ ವಿಮಾನ ಹಾರಾಟ ಮತ್ತೆ ಆರಂಭವಾಗುತ್ತದೆ ಎಂದು ಖೋನಾ ಹೇಳಿದ್ದಾರೆ. ಗೋ ಫಸ್ಟ್ ಕಂಪನಿಯಲ್ಲಿ ಒಟ್ಟು ಐದು ಸಾವಿರಕ್ಕೂ ಹೆಚ್ಚು ನೌಕರರು ಇದ್ದಾರೆ. ಗೋ ಫಸ್ಟ್ ಕಂಪನಿಯು 17 ವರ್ಷಕ್ಕೂ ಹೆಚ್ಚಿನ ಅವಧಿಯಿಂದ ಕಾರ್ಯಾಚರಣೆ ನಡೆಸುತ್ತಿದೆ.

ಕಂಪನಿಗೆ ನೋಟಿಸ್: ಎರಡು ದಿನಗಳಮಟ್ಟಿಗೆ ವಿಮಾನ ಹಾರಾಟ ರದ್ದುಗೊಳಿಸಲು ಕಂಪನಿ ತೀರ್ಮಾನಿಸಿದ ನಂತರ, ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ಕಂಪನಿಗೆ ನೋಟಿಸ್ ಜಾರಿಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು -	470

ಅಡಿಕೆ
ಬಂಟ್ವಾಳ

ಕೋಕ	12500-25000
ಹೊಸತು	27500-40000
ಹಳತು	48000-53000

ಕಾರ್ಕಳ

ಹೊಸತು	30000-40000
ಹಳತು	40000-53000

ಕುಂದಾಪುರ

ಹಳೆಚಾಲಿ	43000-46000
ಹೊಸಚಾಲಿ	36000-39000

ಸಾಗರ

ಬಿಳಿಗೋಟು	29411-30349
ಚಾಲಿ	34599-36429
ಕೋಕ	30699-30699
ಕೆಂಪುಗೋಟು	30919-34729
ರಾಶಿ	45009-46799
ಸಿಪ್ಪೆಗೋಟು	14631-20829

ಶಿವಮೊಗ್ಗ

ಬೆಟ್ಟೆ	47569-52500
ಗೊರಬಲು	17009-34299
ರಾಶಿ	30509-48499
ಸರಕು	47699-80796

ಶಿರಸಿ

ಬೆಟ್ಟೆ	34289-45099
ಬಿಳಿಗೋಟು	23100-31899
ಚಾಲಿ	34199-36800
ಕೆಂಪುಗೋಟು	28699-34161
ರಾಶಿ	42018-45799

ಯಲ್ಲಾಪುರ

ಅಪಿ	50499-54865
ಬಿಳಿಗೋಟು	24699-33499
ಚಾಲಿ	33499-40686
ಕೋಕ	16899-31299
ಕೆಂಪುಗೋಟು	24899-34299
ರಾಶಿ	40101-48699
ತಟ್ಟಿಬೆಟ್ಟೆ	36599-45379

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15400	15350	185.60 ಸೆಂಟ್ಸ್
ಎಸಿ	7980	7600	7800	
ಆರ್‌ಪಿ	10500	10650	10450	ಲಂಡನ್
ಆರ್‌ಸಿ	5830	228	5650	2409 ಡಾಲರ್ಸ್

ಅಮೆರಿಕ: ಕಡ್ಡಾಯ ಲಸಿಕೆ ನೀತಿ ಮುಂದಿನವಾರ ವಾಪಸ್

ವಾಷಿಂಗ್ಟನ್ (ಎಪಿ): ಕೋವಿಡ್–19 ಲಸಿಕೆ ಕಡ್ಡಾಯವಾಗಿ ಪಡೆಯಬೇಕು ಎಂಬ ನೀತಿಯನ್ನು ಮುಂದಿನ ವಾರದಿಂದ ಕೈಬಿಡಲು ಅಮೆರಿಕ ಸರ್ಕಾರ ನಿರ್ಧರಿಸಿದೆ ಎಂದು ಶ್ವೇತಭವನ ತಿಳಿಸಿದೆ.

ಸರ್ಕಾರಿ ನೌಕರರು, ಗುತ್ತಿಗೆದಾರರು ಮತ್ತು ವಿದೇಶಿ ಪ್ರಯಾಣಿಕರಿಗೆ ಅನ್ವಯವಾಗುತ್ತಿದ್ದ ಕಡ್ಡಾಯ ಲಸಿಕೆ ನಿಯಮವು ಮೇ 11ಕ್ಕೆ ಕೊನೆಗೊಳ್ಳಲಿದೆ. ಈ ಮಧ್ಯೆ ಆರೋಗ್ಯ ಸಿಬ್ಬಂದಿ, ಗಡಿಯಲ್ಲಿರುವ ವಿದೇಶಿ ಪ್ರಜೆಗಳಿಗೆ ಲಸಿಕೆ ನೀಡುವ ಪ್ರಕ್ರಿಯೆಯನ್ನು ನಿಲ್ಲಿಸಲು ಸರ್ಕಾರ ಕ್ರಮ ಕೈಗೊಂಡಿದೆ ಎಂದು ಅದು ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ

2-5-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1620(1630)
ಒಂದು ವಾರದ ಡೆಲಿವರಿ	1615(1625)
ಸೋಯಾ ಕಚ್ಚಾ	860(850)
ಪಾಮ್ ವಾರದ ಡೆಲಿವರಿ	933(818)
ಸೂರ್ಯಕಾಂತಿ ಎಣ್ಣೆ ಕಚ್ಚಾ	880(895)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60100(60450)
ಬೆಳ್ಳಿ ಕೆ.ಜಿ 74200(75500)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಜಾರ್ಜ್‌ಫ್ಲಾಯ್ಡ್ ಹತ್ಯೆ ಪ್ರಕರಣ: ಮಾಜಿ ಅಧಿಕಾರಿ ಅಪರಾಧಿ

ಮಿನಿಯಾಪೊಲಿಸ್ (ಎಪಿ): ಕಪ್ಪು ವರ್ಣೀಯ ಜಾರ್ಜ್ ಫ್ಲಾಯ್ಡ್ ಎಂಬಾತನ ಹತ್ಯೆಗೆ ಕುಮ್ಮಕ್ಕು ನೀಡಿದ ಪ್ರಕರಣದಲ್ಲಿ ಮಿನಿಯಾಪೊಲಿಸ್‌ನ ಮಾಜಿ ಪೊಲೀಸ್ ಅಧಿಕಾರಿ ಟೌ ಥಾವೊ ಕೂಡ ಅಪರಾಧಿ ಎಂದು ಕೋರ್ಟ್ ತೀರ್ಪು ನೀಡಿದೆ.

ಎರಡೂ ಕಡೆಯವರ ವಾದ–ಪ್ರತಿವಾದ, ಲಿಖಿತ ಸಾಕ್ಷ್ಯಗಳನ್ನು ಪರಿಶೀಲಿಸಿದ ಹೆನ್ನೆಪಿನ್ ಕೌಂಟಿ ನ್ಯಾಯಾಧೀಶ ಪೀಟರ್ ಕ್ಯಾಹಿಲ್ ಅವರು ಸೋಮವಾರ ಈ ತೀರ್ಪು ನೀಡಿದ್ದು, ಮಂಗಳವಾರ ಆದೇಶ ಹೊರಬಿದ್ದಿದೆ. ಥಾವೊ ಸುಮಾರು ಒಂಬತ್ತು ವರ್ಷಗಳ ಸೇವಾ ಅನುಭವದ ಹೊರತಾಗಿಯೂ ಕೃತ್ಯ ನಡೆಯುವಾಗ ಧೈರ್ಯ ಮತ್ತು ಕರುಣೆ ತೋರಿಸಲಿಲ್ಲವೆಂದು ಪ್ರಾಸಿಕ್ಯೂಟರ್‌ಗಳು ತಮ್ಮ ವಾದ ಮಂಡಿಸಿದ್ದರು.

ಫ್ಲಾಯ್ಡ್ ಹತ್ಯೆ ಪ್ರಕರಣದಲ್ಲಿ ಫ್ಲಾಯ್ಡ್‌ನ ನಾಗರಿಕ ಹಕ್ಕುಗಳನ್ನು ಉಲ್ಲಂಘಿಸಿದ್ದಕ್ಕಾಗಿ ಟೌ ಥಾವೊ ಅಪರಾಧಿ ಎಂದು ಈಗಾಗಲೇ ಫೆಡರಲ್ ಕೋರ್ಟ್ ತೀರ್ಪು ನೀಡಿತ್ತು. ಈ ಪ್ರಕರಣದಲ್ಲಿ ಭಾಗಿಯಾದ ನಾಲ್ಕು ಮಾಜಿ ಅಧಿಕಾರಿಗಳ ಪೈಕಿ ಟೌ ಥಾವೊ ಕೊನೆಯವನು.

2020ರ ಮೇ 25ರಂದು ಮಾಜಿ ಪೊಲೀಸ್ ಅಧಿಕಾರಿ ಡೆರೆಕ್ ಚೌವಿನ್ ಎಂಬಾತ ಜಾರ್ಜ್‌ಫ್ಲಾಯ್ಡ್‌ನ ಕುತ್ತಿಗೆಯನ್ನು ಮಂಡಿಯಿಂದ ನೆಲಕ್ಕೆ ಒಂಬತ್ತೂವರೆ ನಿಮಿಷಗಳ ಕಾಲ ಒತ್ತಿಹಿಡಿದು ಹತ್ಯೆ ಮಾಡುವಾಗ, ಫ್ಲಾಯ್ಡ್ ರಕ್ಷಿಸಲು ಮುಂದಾದವರನ್ನು ತಡೆದ ಆರೋಪ ಟೌ ಥಾವೊ ಮೇಲಿತ್ತು.

ಪ್ರಶ್ನೋತ್ತರ

ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ಮಂಜುನಾಥ, ಸಹಕಾರ ನಗರ, ಬೆಂಗಳೂರು

• **ಪ್ರಶ್ನೆ: ನಮ್ಮ ತಂದೆಯವರು ಒಂದು ವರ್ಷ ಹಿಂದೆ ನಮ್ಮ ಮನೆ ಮಾರಾಟ ಮಾಡಿ ಬಂದ ಹಣವನ್ನು ಬಂಡವಾಳ ವೃದ್ಧಿ ಖಾತೆಯಲ್ಲಿ (ಸುಮಾರು ₹ 50 ಲಕ್ಷ) ಹೂಡಿಕೆ ಮಾಡಿದ್ದರು. ನಂತರ ಅವರು ನಿಧನರಾದರು. ನಾವು ಈಗ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇವೆ. ನನಗೆ ತಿಳಿದಂತೆ ಹೊಸ ಮನೆಯನ್ನು 3 ವರ್ಷದೊಳಗೆ ಅಥವಾ ಇನ್ನೊಂದು ಮನೆಯನ್ನು 2 ವರ್ಷದೊಳಗೆ ಖರೀದಿಸಬೇಕು. ತಂದೆಯವರ ಮರಣಾನಂತರ ಆ ಖಾತೆಯಲ್ಲಿನ ಹಣವನ್ನು ನಾವು ಈ ಮೇಲಿನಂತೆ ಹೊಸ ಮನೆಗಾಗಿ ಉಪಯೋಗಿಸಬೇಕೇ? ಈಗ ನಮ್ಮಲ್ಲಿ ಹೊಸ ಮನೆ ಹೊಂದುವ ವಿಚಾರ ಇಲ್ಲ. ಹಾಗಿದ್ದರೆ ಹಣ ಹಿಂಪಡೆಯುವಾಗ ತೆರಿಗೆ ಬರುತ್ತದೆಯೇ?**

ಉತ್ತರ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 54 ಅಡಿ, ಯಾವುದೇ ಮನೆ ಮಾರಾಟ ಮಾಡಿದಾಗ ತೆರಿಗೆ ಉಳಿತಾಯ ಮಾಡಲು ಬಂಡವಾಳ ವೃದ್ಧಿ ಖಾತೆಯಲ್ಲಿ ಹಣ ಹೂಡಿಕೆ ಮಾಡಿ ತೆರಿಗೆ ತಗ್ಗಿಸುವ ಅವಕಾಶ ಮಾಡಿಕೊಡಲಾಗಿದೆ. ತೆರಿಗೆದಾರರಿಗೆ ಯಾವುದೇ ರೀತಿಯ ಖಚಿತ ನಿರ್ಧಾರ ಕೈಗೊಳ್ಳಲು ಒಂದೇ ಹಂತದಲ್ಲಿ ಸಾಧ್ಯವಾಗದಿದ್ದಾಗ ಯೋಚಿಸಿ ನಿರ್ಧಾರ ಕೈಗೊಳ್ಳಲು ಇದು ನೆರವಾಗುತ್ತದೆ. ಆದರೆ ಹೂಡಿಕೆ ಮಾಡಿದ ವ್ಯಕ್ತಿ ಕಾರಣಾಂತರದಿಂದ ತನ್ನ ನಿರ್ಧಾರ ಬದಲಿಸಿ, ಮನೆ ಕೊಳ್ಳುವ ಅಥವಾ ಕಟ್ಟಿಸುವ ಬದಲು ಖಾತೆಯಲ್ಲಿನ ಮೊತ್ತವನ್ನು ಹಿಂಪಡೆದಾಗ, ಹಿಂದೆ ಪಡೆದಿದ್ದ ವಿನಾಯಿತಿಗಳನ್ನು ತೆರಿಗೆ ನಿಯಮದನ್ವಯ ಊರ್ಜಿತಗೊಳಿಸಲು ಸಾಧ್ಯವಾಗದ ಸಂದರ್ಭಗಳಲ್ಲಿ ಸಹಜವಾಗಿ ತೆರಿಗೆ ಕಟ್ಟಬೇಕಾಗುತ್ತದೆ.

ಆದರೆ ನಿಮ್ಮ ವಿಚಾರದಲ್ಲಿ ಬಂದಿರುವ ಪ್ರಶ್ನೆ ತುಸು ಭಿನ್ನವಾದುದು. ನಿಮ್ಮ ತಂದೆಯವರು ಹೊಸ ಮನೆ ಖರೀದಿಸಲು ಉದ್ದೇಶಿಸಿ ಸುಮಾರು ₹ 50 ಲಕ್ಷವನ್ನು ಬಂಡವಾಳ ವೃದ್ಧಿ ಖಾತೆಯಲ್ಲಿ ಹೂಡಿಕೆ ಮಾಡಿದ್ದರು. ಆ ಬಳಿಕ ಅವರು ನಿಧನರಾದರು. ಈಗ ಆ ಮೊತ್ತದ ವಾರಾಸುದಾರರು ನೀವು. ಖಾತೆಯ ನಿಯಮಾವಳಿಯ ಪ್ರಕಾರ ನೀವು ಫಾರಂ-ಎಚ್ ಹಾಗೂ ಇತರ ಅಗತ್ಯ ದಾಖಲೆಗಳನ್ನು ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿ ಹಣ ಹಿಂಪಡೆಯಬಹುದು.

ಈ ಸಂದರ್ಭದಲ್ಲಿ ಉದ್ಭವಿಸುವ ಸಹಜ ಪ್ರಶ್ನೆ ಎಂದರೆ, ಮೃತರ ಉತ್ತರಾಧಿಕಾರಿಗಳು ಖಾತೆಯಲ್ಲಿದ್ದ ಹಣವನ್ನು ಪಡೆದಾಗ ತೆರಿಗೆ ಪಾವತಿಸಬೇಕೆ ಎಂಬುದು. ಆದಾಯ ತೆರಿಗೆಯ ಸುತ್ತೋಲೆ ಸಂಖ್ಯೆ 743, (ದಿನಾಂಕ 6-5-1996) ಅನ್ವಯ ಇಂತಹ ಮೊತ್ತ ಕಾನೂನುಬದ್ಧ ಉತ್ತರಾಧಿಕಾರಿಗಳ ಕೈಗೆ ಹಸ್ತಾಂತರ ಆದಾಗ ತೆರಿಗೆಗೆ ಒಳಪಡುವುದಿಲ್ಲ. ಈ ಹಿನ್ನೆಲೆಯಲ್ಲಿ, ನೀವು ನಿಮ್ಮ ತಂದೆಯವರು ಬಂಡವಾಳ ವೃದ್ಧಿ ಖಾತೆಯಲ್ಲಿ ಹೂಡಿಕೆ ಮಾಡಿದ ಹಣವನ್ನು ಹಿಂಪಡೆದಾಗ ತೆರಿಗೆ ಕಟ್ಟುವ ಅಗತ್ಯವಿಲ್ಲ. ಹೀಗಾಗಿ ಹೊಸ ಮನೆಯ ಮೇಲೆ ಹೂಡಿಕೆ ಮಾಡುವ ವಿಚಾರವನ್ನು ನಿಮ್ಮ ಸಮಯ, ಅನುಕೂಲದ ಪ್ರಕಾರ ಮಾಡಬಹುದು.

ಸಂಜೀವಕುಮಾರ್ ಶಿವನಗೌಡರ್

• **ಪ್ರಶ್ನೆ: ನಾನು ನನ್ನ ಪೋಷಕರಿಗೆ ಆರೋಗ್ಯ ವಿಮೆ ಮಾಡಿದ್ದೇನೆ. ಪ್ರೀಮಿಯಂ ಮೊತ್ತವನ್ನು ನಾನು ಪಾವತಿ ಮಾಡಿದ್ದೇನೆ. ನನ್ನ ತಂದೆ ನಿವೃತ್ತ ಸರ್ಕಾರಿ ಉದ್ಯೋಗಿ ಮತ್ತು ತಾಯಿ ಗೃಹಿಣಿ. ಸೆಕ್ಷನ್ 80ಡಿ ಅಡಿಯಲ್ಲಿ ನಾನು ಆದಾಯ ತೆರಿಗೆ ವಿನಾಯಿತಿ ಪಡೆದುಕೊಳ್ಳಬಹುದೇ?**

ಉತ್ತರ: ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಡಿ ಪ್ರಕಾರ, ತೆರಿಗೆದಾರರು ವಿಮಾ ಕಂತುಗಳ ಪಾವತಿಗೆ ಆದಾಯ ತೆರಿಗೆ ವಿನಾಯಿತಿ ಪಡೆಯಬಹುದು. ಪತಿ-ಪತ್ನಿ, ತಂದೆ–ತಾಯಿ ಹಾಗೂ ತಮ್ಮ ಮೇಲೆ ಅವಲಂಬಿತರಾಗಿರುವ ಮಕ್ಕಳ ಹೆಸರಲ್ಲಿ ಪಾವತಿಸುವ ಆರೋಗ್ಯ ವಿಮಾ ಪ್ರೀಮಿಯಂ ಮೊತ್ತಕ್ಕೆ ವಿನಾಯಿತಿ ಇದೆ.

1. ತೆರಿಗೆದಾರ ಹಾಗೂ ಕುಟುಂಬ: 60 ವರ್ಷಕ್ಕಿಂತ ಕಡಿಮೆ ವಯಸ್ಸಿನ ತೆರಿಗೆದಾರರಿಗೆ ಇದರ ಗರಿಷ್ಠ ವಿನಾಯಿತಿ ಮೊತ್ತ ₹ 25,000. ಅದೇ ರೀತಿ 60 ವರ್ಷ ಮೇಲ್ಪಟ್ಟ ತೆರಿಗೆದಾರರಾಗಿದ್ದರೆ ಮಿತಿ ₹ 50,000. ಕುಟುಂಬ ವರ್ಗದಲ್ಲಿ ತೆರಿಗೆದಾರ, ಪತಿ ಅಥವಾ ಪತ್ನಿ ಹಾಗೂ ಅವಲಂಬಿತರಾಗಿರುವ ಮಕ್ಕಳು ಒಳಪಡುತ್ತಾರೆ.
2. ತೆರಿಗೆದಾರನ 60 ವರ್ಷ ಮೀರಿರದ ಪೋಷಕರು: ಈ ವರ್ಗದಲ್ಲಿ ಪೋಷಕರ ಹೆಸರಲ್ಲಿ ಪಡೆಯುವ ವಿಮೆಗೆ ₹ 25,000ದವರೆಗೆ ವಿನಾಯಿತಿ ಲಭ್ಯವಿದೆ.
3. ತೆರಿಗೆದಾರನ 60 ವರ್ಷ ಮೀರಿದ ಪೋಷಕರು: ಒಂದು ವೇಳೆ ಪೋಷಕರ ವಯಸ್ಸು 60 ವರ್ಷಕ್ಕಿಂತ ಮೇಲ್ಪಟ್ಟಿದ್ದರೆ, ₹ 50,000ದವರೆಗೆ ವಿನಾಯಿತಿ ಪಡೆದುಕೊಳ್ಳಲು ಅವಕಾಶ ಇದೆ.
4. ವೈದ್ಯಕೀಯ ವೆಚ್ಚ: ಇಲ್ಲಿ ಗಮನಿಸಬೇಕಾದ ಇನ್ನೊಂದು ಅಂಶವೆಂದರೆ, 60 ವರ್ಷ ಮೀರಿದ ತೆರಿಗೆದಾರರು ಅಥವಾ ಅವರ ಪೋಷಕರು ಒಂದು ವೇಳೆ ಯಾವುದೇ ವಿಮಾ ಕಂಪನಿಯಿಂದ ವಿಮೆ ಪಡೆಯದಿದ್ದಲ್ಲಿ, ಸ್ವಂತ ಹಣದಿಂದ ವೈದ್ಯಕೀಯ ವೆಚ್ಚ ಭರಿಸಬೇಕಾಗುತ್ತದೆ. ಅಂತಹ ಮೊತ್ತಕ್ಕೂ ತೆರಿಗೆದಾರು ವಿನಾಯಿತಿ ಪಡೆಯಬಹುದು. ಇದರ ಮಿತಿ ತೆರಿಗೆದಾರನಿಗೆ ₹ 50,000 ಹಾಗೂ ಆತನ ಪೋಷಕರಿಗೆ ಸಂಬಂಧಿಸಿದ ವಿನಾಯಿತಿ ₹ 50,000. ತೆರಿಗೆ ವಿನಾಯಿತಿ ಪಡೆಯಲು, ಈ ಮೇಲಿನ ವೈದ್ಯಕೀಯ ವೆಚ್ಚ ಅಥವಾ ಪ್ರೀಮಿಯಂ ಪಾವತಿ, ನಗದು ಮೂಲಕ ಆಗಿರಬಾರದು ಎಂಬ ನಿಯಮ ಇದೆ.

ನೀವು ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಳ್ಳುವವರಾದರೆ ಈ ವಿನಾಯಿತಿ ಸಿಗಲಾರದು. ಹಳೆಯ ತೆರಿಗೆ ಪದ್ಧತಿ ಅನುಸರಿಸುವವರಿಗಷ್ಟೇ ಈ ರೀತಿಯ ವಿನಾಯಿತಿಗಳು ಲಭ್ಯ. ನಿಮ್ಮ ತಂದೆ 60 ವರ್ಷ ಮೀರಿರುವ ಕಾರಣ ₹ 50,000ದವರೆಗೆ ಪೋಷಕರ ವರ್ಗದ ಅಡಿ ವಿನಾಯಿತಿ ಇದೆ. ತೆರಿಗೆದಾರರಾಗಿ ನಿಮಗೆ ಸಿಗುವ ₹ 25,000 ವಿನಾಯಿತಿ ಪ್ರತ್ಯೇಕ. ಹೀಗಾಗಿ ಎರಡೂ ತೆರಿಗೆ ಪದ್ಧತಿಯಡಿ ತೆರಿಗೆ ಎಷ್ಟು ತೆರಿಗೆ ಬರುತ್ತದೆ ಎಂಬುದನ್ನು ಲೆಕ್ಕ ಹಾಕಿ ನಿರ್ಧಾರ ಕೈಗೊಳ್ಳಿ. ನೇರವಾಗಿ ತೆರಿಗೆ ಲಾಭ ಇಲ್ಲದಿದ್ದರೂ, ವಿಮಾ ಪ್ರಯೋಜನ ಪಡೆಯಲು ಪ್ರೀಮಿಯಂ ಮುಂದುವರಿಸಿ.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.
ಇ–ಮೇಲ್:businessdesk@prajavani.co.in

ಬ್ರಿಟನ್ ರಾಜ 3ನೇ ಚಾರ್ಲ್ಸ್ ಪಟ್ಟಾಭಿಷೇಕ: ಭಾರತದ ಸಾಧಕರಿಗೆ ಆಮಂತ್ರಣ



ಲಂಡನ್ (ಪಿಟಿಐ): ಇದೇ ಶನಿವಾರ ನಡೆಯಲಿರುವ ಬ್ರಿಟನ್ ರಾಜ ಮೂರನೇ ಚಾರ್ಲ್ಸ್ ಪಟ್ಟಾಭಿಷೇಕದಲ್ಲಿ ಪಾಲ್ಗೊಳ್ಳಲು ಭಾರತೀಯ ಸಮುದಾಯದ ಕೆಲ ಯುವ ಸಾಧಕರಿಗೆ ಆಮಂತ್ರಣ ನೀಡಲಾಗಿದೆ. ಇವರು ರಾಜಮನೆತನದ ವಿವಿಧ ದತ್ತಿ ಸಂಸ್ಥೆಗಳಲ್ಲಿ ತರಬೇತಿ ಪಡೆದು ಅವರ ಆಯ್ಕೆಯ ಕ್ಷೇತ್ರಗಳಲ್ಲಿ ಉತ್ತಮ ಸಾಧನೆ ಮಾಡುತ್ತಿರುವವರು.

ಪಟ್ಟಾಭಿಷೇಕ ಸಮಾರಂಭದಲ್ಲಿ ಪಾಲ್ಗೊಳ್ಳಲಿರುವ ಸಂಭವನೀಯ ಅತಿಥಿಗಳ ಕಿರುಪಟ್ಟಿಯನ್ನು ಸೋಮವಾರ ಸಂಜೆ ಬಿಡುಗಡೆ ಮಾಡಲಾಗಿದೆ.

ಮೂರನೇ ಚಾರ್ಲ್ಸ್ ಅವರು ಸ್ಥಾಪಿಸಿರುವ ಪ್ರಿನ್ಸ್ಸ್ ಫೌಂಡೇಷನ್ಸ್ ಬಿಲ್ಡಿಂಗ್ಸ್ ಕ್ರಾಫ್ಟ್ ಪ್ರೋಗ್ರಾಮ್ ಮತ್ತು ಪ್ರಿನ್ಸ್ಸ್ ಫೌಂಡೇಷನ್ ಸ್ಕೂಲ್ ಆಫ್ ಟ್ರೆಡಿಷನಲ್ ಆರ್ಟ್ಸ್ ಸಂಸ್ಥೆಗಳಿಂದ ಪದವಿ ಪಡೆದಿರುವ ಭಾರತದ ಆರ್ಕಿಟೆಕ್ಚರ್ ಸೌರಭ್ ಪಡ್ಕೆ ಅವರು ಆಮಂತ್ರಿತರ ಪಟ್ಟಿಯಲ್ಲಿ ಸೇರಿದ್ದಾರೆ.

ದತ್ತಿ ಕಾರ್ಯಗಳಲ್ಲಿ ಅಪೂರ್ವ ಸಾಧನೆ ತೋರಿದ ಕಾರಣಕ್ಕಾಗಿ ಪ್ರಿನ್ಸ್ಸ್ ಟ್ರಸ್ಟ್ ಗ್ಲೋಬಲ್ ಅವಾರ್ಡ್– 2022 ಪ್ರಶಸ್ತಿಗೆ ಭಾಜನರಾದ ಗುಲ್ಫಾಶಾ ಮತ್ತು 2022ರಲ್ಲಿ ಪ್ರಿನ್ಸ್ಸ್ ಟ್ರಸ್ಟ್ ಕೆನಡ ಯೂಥ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಂ ತರಬೇತಿಯನ್ನು ಪೂರ್ಣಗೊಳಿಸಿ, ಬಾಣಸಿಗನಾಗಿ ಖ್ಯಾತರಾಗುತ್ತಿರುವ ಭಾರತ ಮೂಲದ ಕೆನಡ ವ್ಯಕ್ತಿ ಜಯ್ ಪಟೇಲ್ ಅವರು ಆಮಂತ್ರಿತರ ಪಟ್ಟಿಯಲ್ಲಿದ್ದಾರೆ.

ಇವರಲ್ಲದೇ, ರಾಜಮನೆತನದ ದತ್ತಿ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡಿದ ಜಗತ್ತಿನ ಸುಮಾರು 400 ಯುವಕರು ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ.

ಭಾರತದ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು ಸಮಾರಂಭದಲ್ಲಿ ಭಾರತವನ್ನು ಪ್ರತಿನಿಧಿಸಲಿದ್ದಾರೆ.

ಕೆನಡಾ: ಮೋಸ್ಟ್ ವಾಂಟೆಡ್ ಪಟ್ಟಿಯಲ್ಲಿ ಗೋಲ್ಡಿ ಬ್ರಾರ್

ಟೊರಂಟೊ (ಪಿಟಿಐ): ವಿವಿಧ ಪ್ರಕರಣಗಳಲ್ಲಿ ಬೇಕಾಗಿರುವ ಪ್ರಮುಖ 25 ಅಪರಾಧಿಗಳ ಪಟ್ಟಿಯಲ್ಲಿ ಖ್ಯಾತ ಗಾಯಕ ಸಿಧು ಮೂಸೆವಾಲ ಹತ್ಯೆ ಪ್ರಕರಣದ ಆರೋಪಿ ಸತೀಂದರ್ ಸಿಂಗ್ ಬ್ರಾರ್ ಅಲಿಯಾಸ್ ಗೋಲ್ಡಿ ಬ್ರಾರ್ ಹೆಸರನ್ನು ಕೆನಡಾ ಸರ್ಕಾರವು ಸೇರಿಸಿದೆ.

ಭಾರತವು ಕಳೆದ ವರ್ಷ ಜೂನ್‌ನಲ್ಲಿ ಬ್ರಾರ್ ಬಂಧನಕ್ಕೆ ಅನುವು ಮಾಡಿಕೊಡುವ ‘ರೆಡ್ ಕಾರ್ನರ್’ ನೋಟಿಸ್ ಜಾರಿ ಮಾಡಿದ ನಂತರ ಪಂಜಾಬ್ ಮೂಲದ ಲಾರೆನ್ಸ್ ಬಿಷ್ಣೋಯಿ ಗ್ಯಾಂಗ್‌ನ ಪಾತಕಿ ಬ್ರಾರ್‌ಗಾಗಿ ಕೆನಡಾದ ಪೊಲೀಸರು ಹುಡುಕಾಟ ನಡೆಸುತ್ತಿದ್ದಾರೆ ಎಂದು ದೆಹಲಿಯಲ್ಲಿರುವ ಕೆನಡಾ ಹೈಕಮಿಷನ್ ಹೇಳಿಕೆಯಲ್ಲಿ ತಿಳಿಸಿದೆ. ಪಂಜಾಬ್‌ನ ಬ್ರಾರ್, 2017ರಲ್ಲಿ ವಿದ್ಯಾರ್ಥಿ ವೀಸಾ ಪಡೆದು ಕೆನಡಾಗೆ ತೆರಳಿದ್ದ. ಬಳಿಕ ಲಾರೆನ್ಸ್ ಗ್ಯಾಂಗ್‌ನಲ್ಲಿ ಸಕ್ರಿಯನಾಗಿದ್ದ. ಈ ಸಂಬಂಧ ತನಿಖೆ ನಡೆಯುತ್ತಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಕಾಳಿ ಮಾತೆಗೆ ಅವಹೇಳನ: ಕ್ಷಮೆ ಯಾಚಿಸಿದ ಉಕ್ರೇನ್ ಸಚಿವೆ

ಲಂಡನ್(ಪಿಟಿಐ): ಕಾಳಿ ಮಾತೆಯನ್ನು ‘ವಿಕೃತ ರೀತಿ’ಯಲ್ಲಿ ಚಿತ್ರಿಸಿದ್ದಕ್ಕೆ ಉಕ್ರೇನ್‌ನ ವಿದೇಶಾಂಗ ಉಪ ಸಚಿವೆ ಎಮಿನ್ ಡಿಝೆಪರೋವ ಅವರು ಮಂಗಳವಾರ ಕ್ಷಮೆ ಯಾಚಿಸಿದ್ದಾರೆ.

‘ನಮ್ಮ ದೇಶದ ಜನರು ಭಾರತದ ಅನನ್ಯ ಸಂಸ್ಕೃತಿಯನ್ನು ಗೌರವಿಸುತ್ತಾರೆ. ಉಭಯ ದೇಶಗಳ ನಡುವಣ ಸಹಕಾರ ಇನ್ನಷ್ಟು ವೃದ್ಧಿಸಲಿದೆ’ ಎಂದು ಅವರು ಟ್ವೀಟ್ ಮಾಡಿದ್ದಾರೆ. ಉಕ್ರೇನ್‌ನ ರಕ್ಷಣಾ ಸಚಿವಾಲಯ ಕೂಡ ಈ ಕುರಿತು ಕ್ಷಮೆ ಕೋರಿದೆ.

ಸ್ಫೋಟದ ಹೊಗೆಯ ಸುರುಳಿ ನಡುವೆ ಕಾಳಿ ಮಾತೆ ಚಿತ್ರವನ್ನು ಚಿತ್ರಿಸಿ ‘ವರ್ಕ್ ಆಫ್ ಆರ್ಟ್’ ಎಂಬ ಶೀರ್ಷಿಕೆಯೊಂದಿಗೆ ಉಕ್ರೇನ್‌ನ ರಕ್ಷಣಾ ಸಚಿವಾಲಯವು ಏಪ್ರಿಲ್ 30ರಂದು ಟ್ವೀಟ್ ಮಾಡಿತ್ತು. ಈ ಟ್ವೀಟ್‌ಗೆ ಸಾಮಾಜಿಕ ಮಾಧ್ಯಮಗಳಲ್ಲಿ ವ್ಯಾಪಕ ಟೀಕೆ ವ್ಯಕ್ತವಾಗಿತ್ತು. ಬಳಿಕ ಟ್ವೀಟ್ ಅನ್ನು ಅಳಿಸಲಾಗಿತ್ತು. ‘ಈ ಮೂಲಕ ಉಕ್ರೇನ್, ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವು ಉಂಟು ಮಾಡಿದೆ’ ಎಂದು ವರದಿಯಾಗಿತ್ತು.

2ನೇ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಆರ್. ನಿರ್ಮಲ

ನೀವು ನಮ್ಮ ಹೃದಯವನ್ನು ಪ್ರೀತಿ, ಸ್ಫೂರ್ತಿ ಮತ್ತು ಉತ್ತೇಜನದಿಂದ ಸ್ಪರ್ಶಿಸಿದ ಪ್ರತೀ ಬಾರಿಯೂ ನೀವು ಅಮರರಾದಿರಿ. ನೀವು ನಮ್ಮ ನೆನಪುಗಳಲ್ಲಿ ನಂಬಿಕೆಗಳಲ್ಲಿ ಮತ್ತು ತಮ್ಮ ಕಾರ್ಯಗಳಲ್ಲಿ ಜೀವಂತವಾಗಿದ್ದೀರಿ.

ನಿಮ್ಮನ್ನು ಸದಾ ನೆನಪಿನಲ್ಲಿಟ್ಟಿರುವ
ಮಗ, ಸೊಸೆ ಮತ್ತು ಮೊಮ್ಮಕ್ಕಳು

2ನೇ ವರ್ಷದ ಚಿರಸ್ಮರಣೆ

ಶ್ರೀ ವಿ. ದಿಲೀಪ್
ಜನನ: 17-07-1984 - ಮರಣ: 03-05-2021
ವರಹಾಸಂದ್ರ, ಗುಬ್ಬಿ ತಾಲ್ಲೂಕು, ತುಮಕೂರು.
ನೀವು ನಮ್ಮ ನಗಲಿ ಇಂದಿಗೆ ಎರಡು ವರ್ಷವಾಗಿದೆ ನಿಮ್ಮ ಸವಿ ನೆನಪಿನಲ್ಲಿರುವ ನಿಮ್ಮ ಪ್ರೀತಿಯ
ಮಗ ವಿ. ಡಿ. ಸೋಹಾನ್ ಪಟೇಲ್,
ತಂದೆ ಶ್ರೀ ವಿ. ಎನ್. ವಿಶ್ವೇಶ್, ತಾಯಿ ಲೀಲಾವತಿ ಹಾಗೂ ಪತ್ನಿ ಶಿವರಂಜಿನಿ ಮತ್ತು ಪಟೇಲ್ ವಂಶಸ್ಥರು.

LOOKING FOR JOB OPPORTUNITY

Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ M.R.S.ಕಂಪನಿಗೆ ಆಫೀಸ್ ಕೆಲಸಕ್ಕೆ ಮಹಿಳೆಯರು PUC,BA,BCom,BSc, BBM, MA, M.Com, MSc, G.N.M., A.N.M, BSc/MSc Nursing ಆಗಿರುವಂತಹ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ-ವಸತಿ ಸಂಬಳ 15,000 ರಿಂದ 17,000/- ಬೆಂಗಳೂರು-56 ತಕ್ಷಣ ಸಂಪರ್ಕಿಸಿ: 7349463892, 8904463086

ಬೆಂಗಳೂರಿನಲ್ಲಿ ಮನೆ ಕೆಲಸ ಮಾಡುವವರು, ಮಕ್ಕಳನ್ನು ನೋಡಿ ಕೊಳ್ಳುವವರು (ಮಹಿಳೆ) ಬೇಕಾಗಿದ್ದಾರೆ. ಸಂಬಳ :10k ರಿಂದ 15k ಉಚಿತ ಊಟ ವಸತಿ ಸೌಲಭ್ಯವಿದೆ ಸಂಪರ್ಕಿಸಿ: 8296577964

Marketing & Sales

ASM- AREA Sales Manager with 4 Yrs Experience in Pesticide or Fertilizers marketing in Karnataka State. 12 posts to be filled. Email- hr@hifield-ag.com. Pls call - 8380012272, 8380012271

Hotel

ಪುರುಷ ಸಹಾಯಕರು ಬೇಕಾಗಿದ್ದಾರೆ ರಾಮನಗರ ಬಳಿಯಿರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ. ಸಂಪರ್ಕಿಸಿ: 9945935638/ 9738386489

Domestic Helpers / Housekeeping

ಬೆಂಗಳೂರಿನ ಇಂದಿರಾನಗರದಲ್ಲಿರುವ ಮನೆಗೆ ಮಹಿಳಾ ಮನೆಗೆಲಸದ ಹೆಂಗಸು ಬೇಕಾಗಿದ್ದಾರೆ. ಸಂಬಳ ರೂ.15000/, ಚಿಕ್ಕಸಂಸಾರಕ್ಕೆ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ: 9845058243

ವೈಯಕ್ತಿಕ

Lost

ಶುದ್ಧ ಕ್ರಯಪತ್ರ ಕಳೆದಿದೆ
ಶ್ರೀ ಸುರೇಶ್ ಎಂ ಬಿನ್ ಮರಿಯಪ್ಪರವರ ಹೆಸರಿಗೆ ಶ್ರೀ ಜಯರಾಂ ಎಮ್ ಬಿನ್ ಲೇಟ್ ಮುನಿವೆಂಕಟಪ್ಪರವರಿಂದ ಮಹದೇವಪುರ ಉಪನೋಂದಣಾಧಿಕಾರಿಗಳ ಕಛೇರಿಯಂದ ದಿ: 13–09–20211 ರಂದು ರಿಜಿಸ್ಟರ್ ನಂ. MDP-1-04208/2011-12 ರಲ್ಲಿ ನೋಂದಣಿಯಾಗಿದ್ದ ಶುದ್ಧ ಕ್ರಯಪತ್ರ ಕಳೆದುಹೋಗಿರುತ್ತೆ. ಈ ಬಗ್ಗೆ ಪೊಲೀಸ್ ದೂರು ಸಹ ನೀಡಲಾಗಿದೆ. ಯಾರಿಗಾದರೂ ದೊರೆತಲ್ಲಿ ಸಂಪರ್ಕಿಸಿ: 7899795967

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತಪರಿಹಾರ ಸ್ತ್ರೀಪುರುಷ ವಶೀಕರಣಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಶಿಕ್ಷಣ

Training

EVS TRAINING Center Haswini Tech Bangalore Electrical Car Scooter Manufacturing Assembly Servicing Repairing Placements Call 8790471108

ಪ್ರವಾಸ

Travel

13.05.2023 ರಿಂದ 6 ದಿನಗಳು 2x2 A/c ಬಸ್ಸಿನಲ್ಲಿ ಇಬ್ಬರಿಗೆ 1 ರೂಮ್ ರಾಮೇಶ್ವರ,ಕನ್ಯಾಕುಮಾರಿ, ತ್ರಿವೇಂಡ್ರಂ,ಆಲಪಿಬೋಟಿಂಗ್, ಕೋವಲಂಬೀಚ್, ಗುರುವಾಯೂರು 20.5.2023ರಿಂದ 4ದಿನಗಳು 2x2 A/c ಬಸ್ಸಿನಲ್ಲಿ ಇಬ್ಬರಿಗೆ 1 ರೂಮ್ ಶಿರಡಿ,ಪಂಡಾರಪುರ,ಕೊಲ್ಲಾಪುರ, ಕೂಡಲಸಂಗಮ,ಬಿಜಾಪುರ, ಶನಿಸಿಂಗನಪುರ 20.06.2023ರಿಂದ 10ದಿನಗಳು 2x2 A/c ಬಸ್ಸಿನಲ್ಲಿ ಇಬ್ಬರಿಗೆ 1 ರೂಮ್ ಬಾಂಬೆ,ಶಿರಡಿ,ಗೋವಾ,ಪಂಡಾರಪುರ,ಗೋಕರ್ಣ,ತ್ರೈಬುಕೇಶ್ವರ, ಕೂಡಲಸಂಗಮ 23.07.2023ರಿಂದ 7ದಿನಗಳ ಪ್ರವಾಸ ಭದ್ರಾಚಲಂ,ಹೈದ್ರಾಬಾದ್,ಶ್ರೀಶೈಲ, ವಿಜಯವಾಡ,ಮಂತ್ರಾಲಯ, ರಾಮೋಜಿ ಫಿಲಂಸಿಟಿ, ಯಾದಗಿರಿಗುಡ್ಡ,ಮಂಗಳಗಿರಿ. ವಿಚಾರಿಸಿ: ಶ್ರೀ ಗುರುರಾಜ ಟ್ರಾವೆಲ್ಸ್ 9900124333, 9611082432, 8123099913

07.07.2023 ಸಿಂಗಾಪುರ್ ಮಲೇಶಿಯಾ,ಥೈಲ್ಯಾಂಡ್ 7/11 ದಿನಗಳು. 15.06.2023 10.07.2023 ಭೂತಾನ್ 8 ದಿನಗಳು. 10.06.2023 18.07.2023 ನೇಪಾಳ 9 ದಿನಗಳು. 29.05.2023 ಅಸ್ಸಾಂ,ಮೇಘಾಲಯ, ಅರುಣಾಚಲಪ್ರದೇಶ 9 ದಿನಗಳು. 16.05.2023 25.06.2023 ಗ್ಯಾಂಗ್‌ಟಾಕ್ ಡಾರ್ಜಲಿಂಗ 6 ದಿನಗಳು. ಸಂಪರ್ಕಿಸಿ: ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ. ಬೆಂಗಳೂರು.03 9448402248 7022547922

1.6.2023 ದೆಹಲಿ,ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಅಯೋಧ್ಯಾ,ಕಾಶಿ 11.6.2023 ಯಮುನೋತ್ರಿ,ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ, ನೈಮಿಶರಣ್ಯ, ಅಯೋಧ್ಯಾ,ಕಾಶಿ 29-6-2023 ಅಮರನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

DH ಪ್ರಜಾವಾಣಿ
BOOK YOUR AD FOR SUNDAY & GET 50% OFF* ON WEEKDAYS
*conditions apply
For Lineage & Single/ Multi Column Classifieds Display ads
For more information Contact:
9845114560 : 9731810277
9901641752 : 9886213331
080 - 45557163 / 164

ಸಂಕ್ಷಿಪ್ತ ಸುದ್ದಿ

ಕೇಂದ್ರೀಯ ವಿ.ವಿ: ಬೋಧಕರ ನೇಮಕಾತಿಗೆ ಪೋರ್ಟಲ್

ನವದೆಹಲಿ (ಪಿಟಿಐ): ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿ ಬೋಧಕರ ನೇಮಕಾತಿಗಾಗಿ 'ಸಿಯು–ಚಾಯನ್' ಹೆಸರಿನ ಏಕೀಕೃತ ನೇಮಕಾತಿ ಪೋರ್ಟಲ್ ಅನ್ನು ವಿಶ್ವವಿದ್ಯಾಲಯ ಅನುದಾನ ಆಯೋಗವು (ಯುಜಿಸಿ) ಆರಂಭಿಸಿದೆ.

'ಈ ಪೋರ್ಟಲ್ ಸಂಪೂರ್ಣ ಬಳಕೆದಾರ ಸ್ನೇಹಿಯಾಗಿದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಎಲ್ಲ ಪಾಲುದಾರರ ಅಗತ್ಯಗಳನ್ನು ಪೂರೈಸುತ್ತದೆ. ವಿಶ್ವವಿದ್ಯಾಲಯಗಳು ಮತ್ತು ಅರ್ಜಿದಾರರಿಗೆ ಅನುಕೂಲವಾಗುವಂತೆ, ಆಯಾಯ ವಿ.ವಿಗಳಲ್ಲಿ ನೇಮಕಾತಿ ಪ್ರಕ್ರಿಯೆಯನ್ನು ವಿವಿಗಳೇ ಸ್ವತಂತ್ರವಾಗಿ ನಡೆಸಲು ಸಾಧ್ಯವಾಗುವಂತೆ ಈ ಪೋರ್ಟಲ್ ಅನ್ನು ಯುಜಿಸಿಯು ಅಭಿವೃದ್ಧಿಪಡಿಸಿದೆ' ಎಂದು ಯುಜಿಸಿ ಅಧ್ಯಕ್ಷ ಜಗದೀಶ್ ಕುಮಾರ್ ಮಂಗಳವಾರ ತಿಳಿಸಿದ್ದಾರೆ.

ಫಾಸ್ಟ್ಯಾಗ್: ಒಂದೇ ದಿನ ₹193 ಕೋಟಿ ಟೋಲ್ ಸಂಗ್ರಹ

ನವದೆಹಲಿ: ಹೆದ್ದಾರಿಗಳಲ್ಲಿ ಟೋಲ್ ಸಂಗ್ರಹಕ್ಕೆ ಫಾಸ್ಟ್ಯಾಗ್ ವ್ಯವಸ್ಥೆ ಅಳವಡಿಸಿದ ನಂತರ ಟೋಲ್ ಸಂಗ್ರಹವು ದಾಖಲೆಯ ಏರಿಕೆ ಕಂಡಿದೆ. ಈ ವರ್ಷದ ಏಪ್ರಿಲ್ 29ರಂದು ದೇಶದಾದ್ಯಂತ ಒಂದೇ ದಿನ ಫಾಸ್ಟ್ಯಾಗ್ ಮೂಲಕ 1.16 ಕೋಟಿ ವಹಿವಾಟು ನಡೆದು, ಒಟ್ಟು ₹193.15 ಕೋಟಿ ಸಂಗ್ರಹವಾಗಿದ್ದು, ಇದು ದಾಖಲೆಯಾಗಿದೆ.

'ಸರ್ಕಾರವು ಫಾಸ್ಟ್ಯಾಗ್ ವ್ಯವಸ್ಥೆಯನ್ನು 2021ರ ಫೆಬ್ರುವರಿಯಿಂದ ಕಡ್ಡಾಯಗೊಳಿಸಿದೆ. ಇದರಿಂದ ಟೋಲ್ ಪ್ಲಾಜಾಗಳ ಸಂಖ್ಯೆ 770 ರಿಂದ 1,228ಕ್ಕೆ ಏರಿಕೆಯಾಗಿವೆ. ಇದರಲ್ಲಿ 339 ರಾಜ್ಯಗಳ ಟೋಲ್ ಪ್ಲಾಜಾಗಳೂ ಸೇರಿವೆ. 6.9 ಕೋಟಿ ಫಾಸ್ಟ್ಯಾಗ್‌ಗಳನ್ನು ಬಳಕೆದಾರರಿಗೆ ವಿತರಿಸಿದ್ದು, ಇವು ಶೇ 97ರಷ್ಟು ಬಳಕೆಯಾಗುತ್ತಿವೆ' ಎಂದು ಕೇಂದ್ರ ರಸ್ತೆ ಸಾರಿಗೆ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಗುಂಡಿನ ದಾಳಿಯ ಆರೋಪಿ ಟಿಲ್ಲೂ ತಿಹಾರ್ ಜೈಲಿನಲ್ಲೇ ಹತ್ಯೆ

ನವದೆಹಲಿ (ಪಿಟಿಐ): ರೋಹಿಣಿ ಕೋರ್ಟ್‌ನಲ್ಲಿ 2021ರಲ್ಲಿ ನಡೆದಿದ್ದ ಗುಂಡಿನ ದಾಳಿ ಪ್ರಕರಣದ ಆರೋಪಿ ಟಿಲ್ಲೂ ತಾಜ್‌ಪುರಿಯಾನನ್ನು ಗೋಗಿ ಗ್ಯಾಂಗ್ ಸದಸ್ಯರು ಮಂಗಳವಾರ ತಿಹಾರ್ ಜೈಲಿನಲ್ಲಿ ಹತ್ಯೆ ಮಾಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಬೆಳಿಗ್ಗೆ 6.30ರ ಸುಮಾರಿಗೆ ಹತ್ಯೆ ಆಗಿದೆ. ತೀವ್ರವಾಗಿ ಗಾಯಗೊಂಡಿದ್ದ ಟಿಲ್ಲೂನನ್ನು ದೀನ ದಯಾಳ್ ಉಪಾಧ್ಯಾಯ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸದೆ ಆತ ಮೃತಪಟ್ಟಿದ್ದಾನೆ' ಎಂದು ಕಾರಾಗೃಹ ಅಧಿಕಾರಿಗಳು ತಿಳಿಸಿದ್ದಾರೆ.

ಆಧಾರ್: ಮೊಬೈಲ್ ಸಂಖ್ಯೆ ಪರಿಶೀಲನೆಗೆ ಅವಕಾಶ

ನವದೆಹಲಿ: ಆಧಾರ್ ಹೊಂದಿರುವವರು, ಆಧಾರ್‌ಗೆ ಜೋಡಿಸಿರುವ ತಮ್ಮ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸ ಸರಿ ಇದೆಯೇ ಎಂಬುದನ್ನು ಪರಿಶೀಲಿಸಿಕೊಳ್ಳುವ ವ್ಯವಸ್ಥೆಯನ್ನು ಭಾರತೀಯ ವಿಶಿಷ್ಟ ಗುರುತು ಚೀಟಿ ಪ್ರಾಧಿಕಾರ (ಯುಐಡಿಎಐ) ಜಾರಿಗೆ ತಂದಿದೆ.

ಆಧಾರ್ ಜತೆಗೆ ತಪ್ಪಾದ ಅಥವಾ ಬಳಕೆಯಲ್ಲಿ ಇಲ್ಲದ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸ ಜೋಡಣೆಯಾಗಿದ್ದರೆ, ಆಧಾರ್ ದೃಢೀಕರಣದ ವೇಳೆ ತೊಂದರೆಯಾಗುತ್ತದೆ. ಆಧಾರ್ ದೃಢೀಕರಣದ ವೇಳೆ ಒಟಿಪಿ ಬೇರೆ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್‌ಗೆ ಹೋದರೆ, ದೃಢೀಕರಣ ಸಾಧ್ಯವಿಲ್ಲ. ಈ ಸಮಸ್ಯೆಯನ್ನು ಬಗೆಹರಿಸಲು ಈ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಯುಐಡಿಎಐ ಹೇಳಿದೆ.

myaadhaar.uidai.gov.in ಜಾಲತಾಣದಲ್ಲಿ ಅಥವಾ mAadhaar ಅಪ್ಲಿಕೇಷನ್‌ನಲ್ಲಿ, 'Verify email/mobile Number' ವಿಭಾಗದಲ್ಲಿ ಮೊಬೈಲ್ ಸಂಖ್ಯೆ ಮತ್ತು ಇ–ಮೇಲ್ ವಿಳಾಸವನ್ನು ಪರಿಶೀಲಿಸಿಕೊಳ್ಳಬಹುದು.

ಅಚ್ಚರಿಯ ನಿರ್ಧಾರ ಪ್ರಕಟಿಸಿದ ಎನ್‌ಸಿಪಿ ವರಿಷ್ಠ: ನಿರ್ಧಾರ ಬದಲಿಸುವಂತೆ ಕಾರ್ಯಕರ್ತರು, ಮುಖಂಡರ ಒತ್ತಾಯ

ಅಧ್ಯಕ್ಷ ಗಾದಿಗೆ ಶರದ್ ಪವಾರ್ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಮುಂಬೈ: ರಾಷ್ಟ್ರ ರಾಜಕಾರಣದಲ್ಲಿ ವಿಶಿಷ್ಟ ಛಾಪು ಮೂಡಿಸಿರುವ ಮುತ್ಸದ್ದಿ ನಾಯಕ ಶರದ್ ಪವಾರ್ ಅವರು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಅಧ್ಯಕ್ಷ ಗಾದಿ ತೊರೆಯುವ ನಿರ್ಧಾರ ಪ್ರಕಟಿಸಿದ್ದಾರೆ.

ರಾಜೀನಾಮೆ ನಿರ್ಧಾರದಿಂದ ಹಿಂದೆ ಸರಿಯುವಂತೆ ಪಕ್ಷದ ಹಿರಿಯ ಮುಖಂಡರು ಹಾಗೂ ಕಾರ್ಯಕರ್ತರಿಂದ ಒತ್ತಡ ಹೆಚ್ಚಿದ ಬೆನ್ನಲ್ಲೇ ತೀರ್ಮಾನ ಮರು ಪರಿಷ್ಕರಿಸಲು ಎರಡರಿಂದ ಮೂರು ದಿನಗಳ ಕಾಲಾವಕಾಶ ಕೋರಿದ್ದಾರೆ.

ಸೋನಿಯಾ ಗಾಂಧಿ ಅವರ ನಾಯಕತ್ವದ ವಿರುದ್ಧ ಬಂಡಾಯ ಎದ್ದಿದ್ದಕ್ಕಾಗಿ, 1999ರ ಮೇ 20ರಂದು ಕಾಂಗ್ರೆಸ್ ಪಕ್ಷದಿಂದ ಉಚ್ಚಾಟಿತರಾಗಿದ್ದ ಪವಾರ್, ಅದೇ ವರ್ಷ ಜೂನ್ 10ರಂದು ಎನ್‌ಸಿಪಿ ಸ್ಥಾಪಿಸಿದ್ದರು. ಅಂದಿನಿಂದಲೂ ಪಕ್ಷದ ಅಧ್ಯಕ್ಷರಾಗಿದ್ದರು.

ನಾರಿಮನ್ ಪಾಯಿಂಟ್‌ನಲ್ಲಿರುವ ಯಶವಂತ್‌ರಾವ್ ಚವ್ಹಾಣ್ ಕೇಂದ್ರದಲ್ಲಿ ಮಂಗಳವಾರ ನಡೆದ ತಮ್ಮ ಆತ್ಮಚರಿತ್ರೆಯ ಪರಿಷ್ಕೃತ ಆವೃತ್ತಿಯ ಬಿಡುಗಡೆ ಕಾರ್ಯಕ್ರಮದಲ್ಲಿ ಅವರು ರಾಜೀನಾಮೆ ನಿರ್ಧಾರ ಪ್ರಕಟಿಸಿದರು. ಈ ವೇಳೆ ಪತ್ನಿ ಪ್ರತಿಭಾ, ಪುತ್ರಿ ಸುಪ್ರಿಯಾ ಸುಳೆ, ಮಹಾರಾಷ್ಟ್ರ ವಿಧಾನಸಭೆ ವಿರೋಧ ಪಕ್ಷದ ನಾಯಕ ಅಜಿತ್ ಪವಾರ್ ಹಾಗೂ ಪಕ್ಷದ ಇತರ ಮುಖಂಡರು ಇದ್ದರು.

82 ವರ್ಷದ ಪವಾರ್ ಅವರ ಈ ದಿಢೀರ್ ತೀರ್ಮಾನವು ರಾಜಕೀಯ ವಲಯದಲ್ಲಿ ಸಂಚಲನ ಮೂಡಿಸಿತ್ತು. ಪಕ್ಷದ ನಾಯಕರು ಹಾಗೂ ಕಾರ್ಯಕರ್ತರನ್ನು ಬೆರಗುಗೊಳ್ಳುವಂತೆ ಮಾಡಿತ್ತು.

ಪಕ್ಷವು ಬಣಗಳಾಗಿ ಇಬ್ಭಾಗವಾಗಿದೆ. ಅಜಿತ್ ಪವಾರ್, ಸುಪ್ರಿಯಾ ಸುಳೆ ಹಾಗೂ ಇತರರು ಗುಂಪು ಕಟ್ಟಿಕೊಂಡಿದ್ದು, ನಾಯಕತ್ವಕ್ಕಾಗಿ ತೆರೆಮರೆಯಲ್ಲಿ ಕಸರತ್ತು ನಡೆಸುತ್ತಿದ್ದಾರೆ ಎಂದು ಹೇಳಲಾಗಿತ್ತು. ಇದರ ನಡುವೆಯೇ ಪವಾರ್ ರಾಜೀನಾಮೆ ಘೋಷಿಸಿದ್ದಾರೆ.

'ನನ್ನಿಂದ ತೆರವಾಗಿರುವ ಸ್ಥಾನಕ್ಕೆ ಚುನಾವಣೆ ನಡೆಸುವ ಸಂಬಂಧ ನಿರ್ಧಾರ ಕೈಗೊಳ್ಳುವುದಕ್ಕಾಗಿ ಎನ್‌ಸಿಪಿ ಸದಸ್ಯರನ್ನೊಳಗೊಂಡ ಸಮಿತಿಯೊಂದನ್ನು ನೇಮಿಸಬೇಕು' ಎಂದು ಪವಾರ್ ಸೂಚಿಸಿದರು.

ಈ ವೇಳೆ ಸಭಾಂಗಣದಲ್ಲಿ ನೆರೆದಿದ್ದ ಕಾರ್ಯಕರ್ತರು ಪವಾರ್ ಪರ ಘೋಷಣೆಗಳನ್ನು ಕೂಗಿದರು. ವೇದಿಕೆ ಏರಿದ ಕೆಲ ಮುಖಂಡರು ಅವರನ್ನು ಸುತ್ತುವರಿದರು. ರಾಜೀನಾಮೆ ನಿರ್ಧಾರ ಹಿಂಪಡೆಯುವಂತೆ ಒತ್ತಾಯಿಸಿದರು.

ಈ ವೇಳೆ ಮಧ್ಯಪ್ರವೇಶಿಸಿದ ಪಕ್ಷದ ನಾಯಕ ಪ್ರಫುಲ್ ಪಟೇಲ್, 'ಅವರ ಆರೋಗ್ಯ ಸರಿ ಇಲ್ಲ. ಮನೆಗೆ ಹೋಗಲು ಅನುವು ಮಾಡಿಕೊಡಿ' ಎಂದು ಕಾರ್ಯಕರ್ತರಲ್ಲಿ ವಿನಂತಿಸಿದರು.

ಸಂಜೆ ಹೊತ್ತಿಗೆ ಪಕ್ಷದ ಮುಖಂಡರು ಸಭೆ ನಡೆಸಿದರು. ಬಳಿಕ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದ ಅಜಿತ್ ಪವಾರ್, 'ನಿರ್ಧಾರ ಹಿಂಪಡೆಯುವಂತೆ ಪವಾರ್ ಅವರನ್ನು ಕೋರಿದ್ದೇವೆ. ತೀರ್ಮಾನ ಮರು ಪರಿಷ್ಕರಿಸಲು ಎರಡರಿಂದ ಮೂರು ದಿನಗಳ ಕಾಲಾವಕಾಶ ಕೋರಿದ್ದಾರೆ' ಎಂದು ತಿಳಿಸಿದರು.

'ಪವಾರ್ ಅವರ ರಾಜೀನಾಮೆಯನ್ನು ನೀವೆಲ್ಲಾ ತಪ್ಪಾಗಿ ಅರ್ಥೈಸಿಕೊಂಡಿದ್ದೀರಿ. ಅಧ್ಯಕ್ಷ ಹುದ್ದೆಗೆ ರಾಜೀನಾಮೆ ನೀಡಿದ್ದಾರೆ ಎಂದ ಮಾತ್ರಕ್ಕೆ ಅವರು ಪಕ್ಷವನ್ನೇ ತೊರೆದಿದ್ದಾರೆ ಎಂದರ್ಥವಲ್ಲ. ಈಗ ಮಲ್ಲಿಕಾರ್ಜುನ ಖರ್ಗೆ ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದಾರೆ. ಸೋನಿಯಾ ಗಾಂಧಿ ಆ ಪಕ್ಷವನ್ನು ಮುನ್ನಡೆಸುತ್ತಿದ್ದಾರೆ. ಪವಾರ್ ಅವರ ವಯಸ್ಸು ಹಾಗೂ ಇನ್ನಿತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಹೊಸ ನಾಯಕತ್ವದ ಬಗ್ಗೆ ಚಿಂತಿಸಿದ್ದೇವೆ. ಹೊಸ ನಾಯಕರು ಪವಾರ್ ಅವರ ಮಾರ್ಗದರ್ಶನದ ಅಡಿಯಲ್ಲೇ ಕೆಲಸ ಮಾಡಲಿದ್ದಾರೆ' ಎಂದಿದ್ದಾರೆ.

ಶರದ್ ಪವಾರ್ ಅವರು ಪತ್ನಿ ಪ್ರತಿಭಾ ಅವರೊಂದಿಗೆ ಸಮಾಲೋಚನೆ ನಡೆಸಿದರು – ಪಿಟಿಐ ಚಿತ್ರ

ಪವಾರ್ ನುಡಿ

'1960ರ ಮೇ 1ರಂದು ರಾಜಕೀಯ ಪಯಣ ಶುರುವಾಗಿತ್ತು. 63 ವರ್ಷಗಳ ಈ ಹಾದಿಯಲ್ಲಿ ಹಲವು ಹುದ್ದೆಗಳನ್ನು ಅಲಂಕರಿಸಿ ಮಹಾರಾಷ್ಟ್ರ ಹಾಗೂ ದೇಶಕ್ಕಾಗಿ ಕೆಲಸ ಮಾಡಿದ್ದೇನೆ. ರಾಜ್ಯಸಭಾ ಸದಸ್ಯತ್ವ ಕೊನೆಗೊಳ್ಳಲು ಇನ್ನೂ ಮೂರು ವರ್ಷ ಇದೆ. ಈ ಅವಧಿಯಲ್ಲಿ ಮಹಾರಾಷ್ಟ್ರ ಹಾಗೂ ಈ ದೇಶಕ್ಕೆ ಸಂಬಂಧಿಸಿದ ಸಮಸ್ಯೆಗಳತ್ತ ಗಮನ ಹರಿಸುತ್ತೇನೆ. 1960ರ ಮೇ 1ರಿಂದ 2023ರ ಮೇ 1ರವರೆಗಿನ ಸುದೀರ್ಘ ಅವಧಿಯ ಸಾರ್ವಜನಿಕ ಬದುಕಿಗೆ ಕೊನೆ ಹಾಡುವುದು ಅಗತ್ಯ. ಹೀಗಾಗಿಯೇ ಈ ನಿರ್ಧಾರ ಕೈಗೊಂಡಿದ್ದೇನೆ' ಎಂದು ಪವಾರ್ ಹೇಳಿದ್ದಾರೆ.

'ಶಿಕ್ಷಣ, ಕೃಷಿ, ಸಹಕಾರ, ಕ್ರೀಡೆ, ಸಂಸ್ಕೃತಿ ಹೀಗೆ ಹಲವು ಕ್ಷೇತ್ರಗಳಲ್ಲಿ ಇನ್ನಷ್ಟು ಕೆಲಸ ಮಾಡಬೇಕೆಂಬ ಹಂಬಲ ಇದೆ. ಯುವಕರು, ವಿದ್ಯಾರ್ಥಿಗಳು, ದುಡಿಯುವ ವರ್ಗದವರು, ದಲಿತರು, ಬುಡಕಟ್ಟು ಸಮುದಾಯದವರು ಹಾಗೂ ಸಮಾಜದಲ್ಲಿನ ಇತರೆ ಕೆಳಸ್ತರದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ದಿಸೆಯಲ್ಲಿ ಕೆಲಸ ಮಾಡುವತ್ತ ಚಿತ್ತ ಹರಿಸಬೇಕೆಂದುಕೊಂಡಿದ್ದೇನೆ' ಎಂದಿದ್ದಾರೆ.

ಪ್ರಮುಖ ಅಂಶಗಳು

- ಅಧ್ಯಕ್ಷ ಗಾದಿಗೆ ಏರುವ ಬಯಕೆ ನನಗಿಲ್ಲ: ಅಜಿತ್ ಪವಾರ್
- ರಾಷ್ಟ್ರ ಹಾಗೂ ರಾಜ್ಯದಲ್ಲಿ ಪಕ್ಷದ ಮೇಲೆ ಬಿಗಿ ಹಿಡಿತ ಇರುವವರೇ ಅಧ್ಯಕ್ಷ ಸ್ಥಾನದ ಪ್ರಬಲ ಆಕಾಂಕ್ಷಿ: ಸುಪ್ರಿಯಾ ಸುಳೆ
- ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿರುವ ಪ್ರಫುಲ್ ಪಟೇಲ್, ಜಯಂತ್ ಪಾಟೀಲ್, ಛಗನ್ ಭುಜಬಲ್
- ಒಂದೊಮ್ಮೆ ಪವಾರ್, ರಾಜೀನಾಮೆ ನಿರ್ಧಾರಕ್ಕೆ ಬದ್ಧವಾದರೆ ರಾಷ್ಟ್ರಮಟ್ಟದಲ್ಲಿ ಪ್ರತಿಪಕ್ಷಗಳ ಒಗ್ಗಟ್ಟಿಗೆ ಹಿನ್ನಡೆ
- ಮಹಾರಾಷ್ಟ್ರದಲ್ಲಿನ ಮಹಾ ವಿಕಾಸ ಆಘಾಡಿ ಮೈತ್ರಿಕೂಟವು ಸರಿ ದಾರಿಯಲ್ಲಿ ಸಾಗುವುದು ಕಷ್ಟ

ಉದ್ಧವ್ ಠಾಕ್ರೆ ಹೋರಾಟ ನಡೆಸದೆಯೇ ಸಿ.ಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಪಕ್ಷದೊಳಗಿನ ಭಿನ್ನಮತ ಶಮನಗೊಳಿಸಲೂ ವಿಫಲರಾದರು
ಶರದ್ ಪವಾರ್, ಎನ್‌ಸಿಪಿ ವರಿಷ್ಠ

ರಾಜ್ಯ ಹಾಗೂ ರಾಷ್ಟ್ರಕ್ಕೆ ಪವಾರ್ ಅವರ ಅಗತ್ಯವಿದೆ. ಅವರು ಪಕ್ಷದ ಅಧ್ಯಕ್ಷರಾಗಿಯೇ ಇರಬೇಕು ಎಂಬುದು ಎಲ್ಲರ ಒತ್ತಾಸೆ
ಅನಿಲ್ ದೇಶ್‌ಮುಖ್
ಎನ್‌ಸಿಪಿ ನಾಯಕ

ಪವಾರ್ ಅವರ ರಾಜೀನಾಮೆ ತೀರ್ಮಾನ ಎನ್‌ಸಿಪಿಯ ಆಂತರಿಕ ವಿಚಾರ. ಈ ಕುರಿತು ಈಗಲೇ ಪ್ರತಿಕ್ರಿಯೆ ನೀಡುವುದು ಸರಿಯಲ್ಲ
ದೇವೇಂದ್ರ ಫಡಣವೀಸ್
ಮಹಾರಾಷ್ಟ್ರ ಉಪ ಮುಖ್ಯಮಂತ್ರಿ

ಕೊಳಕು ರಾಜಕಾರಣದಿಂದ ಬೇಸತ್ತು ಬಾಳಾ ಠಾಕ್ರೆ ರಾಜೀನಾಮೆ ನೀಡಿದ್ದರು. ಪವಾರ್ ಕೂಡ ಅದೇ ಹಾದಿ ಅನುಸರಿಸಿದ್ದಾರೆ
ಸಂಜಯ್ ರಾವುತ್, ಶಿವಸೇನಾ ಸಂಸದ

ಭವಿಷ್ಯದ ಕುರಿತು ಯೋಚಿಸಿಯೇ ಪವಾರ್ ಈ ನಿರ್ಧಾರ ಕೈಗೊಂಡಿರುತ್ತಾರೆ. ಬೇರೆ ಏನೋ ಯೋಜನೆ ಇಟ್ಟುಕೊಂಡೇ ರಾಜೀನಾಮೆಯ ನಿರ್ಧಾರಕ್ಕೆ ಬಂದಿರುತ್ತಾರೆ
ತಾರೀಕ್ ಅನ್ವರ್, ಕಾಂಗ್ರೆಸ್ ನಾಯಕ

'ಬಿಲ್ಕಿಸ್ ಪ್ರಕರಣ: ದಾಖಲೆ ಸಲ್ಲಿಸಲು ಸಿದ್ಧ'

ಒಂದನೇ ಪುಟದಿಂದ...

'ದಾಖಲೆಗಳನ್ನು ನೀಡದೇ ಇರುವ ಹಕ್ಕು ನಮಗೆ ಇದೆ. ಹಾಗಾಗಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸುವುದಿಲ್ಲ. ನಿಮ್ಮ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಕುರಿತೂ ಚಿಂತನೆ ನಡೆಸಿದ್ದೇವೆ' ಎಂದು ಏಪ್ರಿಲ್ 18ರಂದು ನಡೆದಿದ್ದ ವಿಚಾರಣೆಯಂದು ಕೇಂದ್ರ ಹಾಗೂ ಗುಜರಾತ್ ಸರ್ಕಾರ, ಪೀಠಕ್ಕೆ ತಿಳಿಸಿದ್ದವು. ಇದಕ್ಕೆ ಪ್ರತಿಕ್ರಿಯಿಸಿದ್ದ ಪೀಠವು, 'ದಾಖಲೆಗಳನ್ನು ಸಲ್ಲಿಸದಿದ್ದರೆ ನ್ಯಾಯಾಂಗ ನಿಂದನೆ ಆಗಲೂಬಹುದು' ಎಂದು ಎಚ್ಚರಿಕೆ ನೀಡಿತ್ತು.

ಮಂಗಳವಾರ ನಡೆದ ವಿಚಾರಣೆಯ ವೇಳೆ, ಕೇಂದ್ರ ಹಾಗೂ ಗುಜರಾತ್ ಸರ್ಕಾರಗಳ ಪರ ವಾದಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, ದಾಖಲೆಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸುವುದಾಗಿ ಹೇಳಿದ್ದಾರೆ. ಜೊತೆಗೆ ಮಾರ್ಚ್ 27ರ ಆದೇಶವನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸುವುದಿಲ್ಲ ಎಂದೂ ಹೇಳಿದ್ದಾರೆ.

'ರಿಟ್ ಅರ್ಜಿ ವಿಚಾರಣೆಗೆ ಅರ್ಹವೇ?': 'ಅಪರಾಧಿಗಳನ್ನು ಅವಧಿಗೂ ಮುನ್ನ ಬಿಡುಗಡೆ ಮಾಡಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ವಿಚಾರಣೆಗೆ ಅರ್ಹವೇ' ಎಂದು ಸಾಲಿಸಿಟರಲ್ ಜನರಲ್ ತುಷಾರ್ ಮೆಹ್ತಾ ಪ್ರಶ್ನಿಸಿದರು.

'ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಸಂತ್ರಸ್ತೆ ಸಲ್ಲಿಸಿಲ್ಲ. ಮೂರನೇ ವ್ಯಕ್ತಿಗಳು ಸಲ್ಲಿಸಿದ್ದಾರೆ. ಹೀಗೆ ಮೂರನೇ ವ್ಯಕ್ತಿಗಳು ಅರ್ಜಿ ಸಲ್ಲಿಸಬಹುದೇ? ಇಂಥ ಅರ್ಜಿಗಳ ವಿಚಾರಣೆ ನಡೆಸುವುದು ತಪ್ಪು ಸಂಪ್ರದಾಯಕ್ಕೆ ಎಡೆಮಾಡಿಕೊಡುತ್ತದೆ' ಎಂದೂ ಅಭಿಪ್ರಾಯಪಟ್ಟರು.

'ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಮರುಪರಿಶೀಲನೆ ಮಾಡಬೇಕು ಎಂದು ಅರ್ಜಿ ಸಲ್ಲಿಕೆಯಾಗಿತ್ತು. ಈ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾ ಮಾಡಿತ್ತು. ವಜಾ ಮಾಡಿರುವುದನ್ನು ಪ್ರಶ್ನಿಸಿ ಮತ್ತೊಂದು ರಿಟ್ ಅರ್ಜಿ ಸಲ್ಲಿಸಲು ಕಾನೂನಿನಲ್ಲಿ ಅವಕಾಶ ಇಲ್ಲ' ಎಂದು ಕೇಂದ್ರ ಹಾಗೂ ಗುಜರಾತ್ ಸರ್ಕಾರ ವಾದಿಸಿತು.

ಮುಂದಿನ ವಿಚಾರಣೆಯನ್ನು ಜುಲೈನ ಎರಡನೇ ವಾರದಲ್ಲಿ ಮಾಡುವುದಾಗಿ ನ್ಯಾಯಾಲಯ ಹೇಳಿತು.

ಯಾಕಿಷ್ಟು ತರಾತುರಿ?: ಬಿಲ್ಕಿಸ್ ಬಾನು ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆಗಳನ್ನು ಯಾಕಿಷ್ಟು 'ತರಾತುರಿ'ಯಲ್ಲಿ ನಡೆಸಲು ಬಯಸುತ್ತೀದ್ದೀರಿ? ಎಂದು ಅಪರಾಧಿಗಳ ಪರ ಹಾಜರಿದ್ದ ವಕೀಲರಾದ ಸಿದ್ಧಾರ್ಥ್ ಹಾಗೂ ರಿಷಿ ಮಲ್ಹೋತ್ರ ಕೇಳಿದರು. 'ಬೇಸಿಗೆ ರಜೆ ಪ್ರಾರಂಭಕ್ಕೂ ಮೊದಲೇ ಮುಂದಿನ ವಿಚಾರಣೆ ನಡೆಸಿ' ಎಂದು ಕೇಳಿಕೊಂಡ ಬಿಲ್ಕಿಸ್ ಬಾನು ಪರ ವಕೀಲರಿಗೆ ಅಪರಾಧಿಗಳ ಪರ ವಕೀಲರು ಈ ರೀತಿ ಪ್ರಶ್ನಿಸಿದರು.

'ನಾವು ವಿಚಾರಣೆ ನಡೆಸುವುದು ಇಷ್ಟವಿಲ್ಲ ಎಂದು ತೋರುತ್ತದೆ'

'ನಮ್ಮ ಪೀಠವು ರಿಟ್ ಅರ್ಜಿ ಹಾಗೂ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆಯನ್ನು ನಡೆಸಬಾರದು ಎನ್ನುವ ಅಭಿಪ್ರಾಯ ಅಪರಾಧಿಗಳಿಗೆ ಇದ್ದಂತಿದೆ' ಎಂದು ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಹಾಗೂ ಬಿ.ವಿ. ನಾಗರತ್ನ ಅವರಿದ್ದ ಪೀಠವು ತೀವ್ರ ಅಸಮಾಧಾನ ವ್ಯಕ್ತಪಡಿಸಿತು.

'ಅಪರಾಧಿಗಳ ಪರ ವಕೀಲರು ಏನು ಮಾಡುತ್ತಿದ್ದಾರೆ ಎನ್ನುವುದು ಗೊತ್ತಾಗುತ್ತಿದೆ. ನಾನು ಜೂನ್ 16ಕ್ಕೆ ನಿವೃತ್ತಿಯಾಗುತ್ತಿದ್ದೇನೆ. ಮೇ 19 ನನ್ನ ಕರ್ತವ್ಯದ ಕೊನೇ ದಿನ. ಈ ಕಾರಣಕ್ಕಾಗಿ ನಿಮಗೆ ಈ ಪೀಠ ಈ ಅರ್ಜಿಗಳ ವಿಚಾರಣೆ ನಡೆಸುವುದು ಇಷ್ಟವಿಲ್ಲ' ಎಂದು ನ್ಯಾಯಮೂರ್ತಿ ಜೋಸೆಫ್ ಹೇಳಿದರು.

'ಅರ್ಜಿದಾರರು ಸಲ್ಲಿಸಿರುವ ಪ್ರಮಾಣಪತ್ರಕ್ಕೆ ಪ್ರತಿ ಪ್ರಮಾಣಪತ್ರ ಸಲ್ಲಿಸಲು ನೀವು ವಿಳಂಬ ಮಾಡಿದ್ದೀರಿ. ನಮಗೆ ನೋಟಿಸ್ ಸಿಕ್ಕಿಲ್ಲ ಎಂದು ಕೆಲವರು ಹೇಳುತ್ತೀರಿ. ಇದಕ್ಕೆ ನೀವು ಅರ್ಜಿದಾರರ ಪರ ವಕೀಲರನ್ನು ದೂರುತ್ತೀರಿ' ಎಂದು ಹೇಳಿದರು.

'ನೀವು ಮೊದಲು ವಕೀಲರು. ನಿಮ್ಮ ಕರ್ತವ್ಯದ ಬಗ್ಗೆ ಪ್ರಜ್ಞೆ ಇರಲಿ. ಈ ಪ್ರಕರಣವನ್ನು ನೀವು ಗೆಲ್ಲಬಹುದು ಅಥವಾ ಸೋಲಬಹುದು. ಅದೇನೆ ಇದ್ದರೂ ಕರ್ತವ್ಯವನ್ನು ನೀವು ಮರೆಯಬಾರದು' ಎಂದು ಎಚ್ಚರಿಕೆ ನೀಡಿದರು.

ಗೌರವ ವಂದನೆ

ಭಾರತವು ಮಾಲ್ದೀವ್ಸ್‌ಗೆ ಕರಾವಳಿ ಗಸ್ತು ನೌಕೆಯನ್ನು ನೀಡಿದೆ. ಮಾಲೆಯಲ್ಲಿ ಮಂಗಳವಾರ ನಡೆದ ಕಾರ್ಯಕ್ರಮದಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು, ನೌಕೆಯನ್ನು ಮಾಲ್ದೀವ್ಸ್ ರಕ್ಷಣಾ ಸಚಿವೆ ಮರಿಯಾ ದೀದಿ ಅವರಿಗೆ ಹಸ್ತಾಂತರಿಸಿದರು. ಆನಂತರ ಮಾಲ್ದೀವ್ಸ್ ನೌಕಾಪಡೆ ಸಿಬ್ಬಂದಿ ವಂದನೆ ಅರ್ಪಿಸಿದರು – ಪಿಟಿಐ ಚಿತ್ರ

ಅಶ್ರಫ್, ಅತೀಕ್ ಹತ್ಯೆ ಉಲ್ಲೇಖಿಸಿದ ಯೋಗಿ

'ಮಾಫಿಯಾದವರು ಇನ್ನು ಮುಂದೆ ಜನರನ್ನು 'ಭಯ' ಪಡಿಸಲು ಸಾಧ್ಯವಿಲ್ಲ. ಹಿಂದೆ ರಾಜ್ಯವು ಕೋಮುಗಲಭೆಗೆ ಹೆಸರಾಗಿತ್ತು. ಆದರೆ, ಈಗ ಪರಿಸ್ಥಿತಿ ಬದಲಾಗಿದೆ'

'ಪ್ರಕೃತಿ ಎಲ್ಲರ ಲೆಕ್ಕವನ್ನೂ ಚುಕ್ತಾ ಮಾಡುತ್ತದೆ'

ಲಖನೌ: 'ಪ್ರಕೃತಿಯು ಯಾರಿಗೂ ಅನ್ಯಾಯ ಮಾಡುವುದಿಲ್ಲ ಮತ್ತು ಯಾರಿಗೂ ಅನ್ಯಾಯವಾಗುವುದನ್ನು ಸಹಿಸಿಕೊಳ್ಳುವುದೂ ಇಲ್ಲ. ಆದರೆ, ಅದು ಎಲ್ಲರ ಲೆಕ್ಕವನ್ನೂ ಚುಕ್ತಾ ಮಾಡುತ್ತದೆ' ಎಂದು ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಮಂಗಳವಾರ ಹೇಳಿದರು. ಕಳೆದ ತಿಂಗಳು ಹತ್ಯೆಯಾದ ಅಶ್ರಫ್ ಹಾಗೂ ಅತೀಕ್ ಸಹೋದರರನ್ನು ಉಲ್ಲೇಖಿಸಿ ಯೋಗಿ ಅವರು ಈ ಮಾತುಗಳನ್ನು ಆಡಿದ್ದಾರೆ.



ಯೋಗಿ ಆದಿತ್ಯನಾಥ

ಕ್ಯಾಮೆರಾಗಳ ಎದುರೇ ಸಹೋದರರ ಹತ್ಯೆ ನಡೆದ ಬಳಿಕ, ಉತ್ತರ ಪ್ರದೇಶದ ಸಚಿವ ಸುರೇಶ್ ಖನ್ನಾ ಅವರು 'ಪವಿತ್ರ ನ್ಯಾಯದಾನ'ವಾಗಿದೆ ಎಂದು ಹೇಳಿದ್ದರು. ಈಗ ಮುಖ್ಯಮಂತ್ರಿ ಅವರೇ ಹತ್ಯೆಯನ್ನು 'ಪ್ರಕೃತಿಯು ಎಲ್ಲರ ಲೆಕ್ಕವನ್ನೂ ಚುಕ್ತಾ ಮಾಡುತ್ತದೆ' ಎಂದು ಬಣ್ಣಿಸಿದ್ದಾರೆ.

ಪ್ರಯಾಗರಾಜ್‌ನಲ್ಲಿ ನಡೆದ ಸಾರ್ವಜನಿಕ ರ‍್ಯಾಲಿವೊಂದರಲ್ಲಿ ಮಾತನಾಡಿದ ಅವರು, 'ರಾಮ ಮಾನಸ ಚರಿತ' ಕಾವ್ಯದ ಪದ್ಯವೊಂದನ್ನು ಉಲ್ಲೇಖಿಸಿ, 'ಕರ್ಮವು ಎಲ್ಲರ ಜೀವನದಲ್ಲಿ ಪ್ರಮುಖವಾದ ಅಂಶ. ನಮ್ಮ ಪಾಪಗಳಿಗೆ ಬೆಲೆ ತೆರಲೇಬೇಕು' ಎಂದರು.

'ಮಾಫಿಯಾದವರ ಹಿಡಿತದಲ್ಲಿರುವ ಭೂಮಿಯನ್ನು ಕಸಿದುಕೊಂಡು ಅದೇ ಜಾಗದಲ್ಲಿ ಬಡವರಿಗೆ ಮನೆ ನಿರ್ಮಿಸುವ ಕಾರ್ಯವನ್ನು ಮುಂದುವರಿಸುತ್ತೇವೆ. ನಮ್ಮ ಸರ್ಕಾರವು ಓಲೈಕೆ ರಾಜಕಾರಣವನ್ನು ಮಾಡುವುದಿಲ್ಲ. ಸಮಾಜದ ಎಲ್ಲ ವರ್ಗದ ಜನರಿಗಾಗಿ ಕೆಲಸ ಮಾಡುತ್ತದೆ. ಸ್ವಜನ ಪಕ್ಷಪಾತ, ಜಾತಿವಾದ ಮತ್ತು ಕುಟುಂಬ ರಾಜಕಾರಣಕ್ಕೆ ನಮ್ಮ ಸರ್ಕಾರದಲ್ಲಿ ಸ್ಥಾನವಿಲ್ಲ' ಎಂದರು.

'ಬಾಕಿ ವೇತನ ಪಾವತಿಗೆ ಆದ್ಯತೆ ಇಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಂಪನಿ ದಿವಾಳಿಯಾಗಿ, ಆಸ್ತಿ ಮಾರಾಟದ ಸ್ಥಿತಿ ಬಂದಾಗ ನೌಕರರ ಬಾಕಿ ವೇತನ ಪಾವತಿಗೆ ಆದ್ಯತೆ ನೀಡಬೇಕು ಎಂದು ನಿರ್ದೇಶನ ನೀಡಲು ಸಾಧ್ಯವಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ಸಂಬಂಧ ಜಾರಿಯಲ್ಲಿರುವ ಕಾನೂನುಗಳ ಪ್ರಕಾರವೇ ಬಾಕಿ ಪಾವತಿ ನಡೆಯಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಮೋಸರ್ ಬೇರ್ ಕರ್ಮಚಾರಿ ಸಂಘಟನೆ'ಯು ಈ ಸಂಬಂಧ ಅರ್ಜಿ ಸಲ್ಲಿಸಿತ್ತು. ಕಂಪನಿಯ ಆಸ್ತಿ ಮಾರಾಟದ ನಂತರ ಸಾಲ ಮರುಪಾವತಿಗೆ ಆದ್ಯತೆ ಇದೆ. ಆ ಆದ್ಯತೆಯನ್ನು ವಜಾಗೊಳಿಸಿ, ನೌಕರರ 24 ತಿಂಗಳ ವೇತನ ಬಾಕಿ ಪಾವತಿಗೆ ನಿರ್ದೇಶನ ನೀಡಿ ಎಂದು ಸಂಘಟನೆಯು ಕೋರಿತ್ತು.

ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಸಂಜೀವ್ ಖನ್ನಾ ಅವರಿದ್ದ ಪೀಠವು ಅರ್ಜಿಯ ವಿಚಾರಣೆ ನಡೆಸಿತ್ತು. ಪೀಠವು, ದಿವಾಳಿ ಮತ್ತು ಆಸ್ತಿ ನಗದೀಕರಣದ ವೇಳೆ ಯಾವ ಬಾಕಿಗಳನ್ನು ಮೊದಲು ಪಾವತಿಸಬೇಕು ಹಾಗೂ ನೌಕರರ ಬಾಕಿ ವೇತನವನ್ನು ಯಾವಾಗ ಪಾವತಿಸಬೇಕು ಎಂಬುದನ್ನು ಸಂಬಂಧಿತ ಕಾಯ್ದೆಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಕಂಪನಿಗೆ ಸಾಲ ನೀಡಿದ್ದವರಿಗೇ ಮರುಪಾವತಿಯಲ್ಲಿ ಆದ್ಯತೆ ಇದೆ. ಈ ಆದ್ಯತಾ ಶ್ರೇಣಿ ವ್ಯವಸ್ಥೆಯನ್ನು ಬದಲಿಸಿದರೆ, ಸಾಲ ನೀಡಿದವರ ಹಕ್ಕುಗಳಿಗೆ ಚ್ಯುತಿಯಾಗುತ್ತದೆ. ಹೀಗಾಗಿ ಆದ್ಯತೆಯನ್ನು ಬದಲಿಸಲು ಸಾಧ್ಯವಿಲ್ಲ' ಎಂದು ಹೇಳಿದೆ. ಅರ್ಜಿಯನ್ನು ವಜಾ ಮಾಡಿದೆ.

'ಸುಪ್ರೀಂ' ಸುದ್ದಿಗಳು

ದೆಹಲಿ ಗಲಭೆ: ಜಾಮೀನು ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ (ಪಿಟಿಐ): ದೆಹಲಿಯಲ್ಲಿ 2020ರಲ್ಲಿ ನಡೆದಿದ್ದ ಗಲಭೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ವಿದ್ಯಾರ್ಥಿ ಹೋರಾಟಗಾರರಿಗೆ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ದೆಹಲಿ ಪೊಲೀಸರು ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ವಜಾ ಮಾಡಿತು.

ನ್ಯಾಯಮೂರ್ತಿಗಳಾದ ಎಸ್.ಕೆ.ಕೌಲ್, ಎ.ಅಮಾನುಲ್ಲಾ ಅವರು ಈ ಕುರಿತ ಆದೇಶ ಹೊರಡಿಸಿದರು. ವಿದ್ಯಾರ್ಥಿ ಹೋರಾಟಗಾರರಾದ ನತಾಶಾ ನಾರ್ವಾಲ್, ದೇವಾಂಗನಾ ಕಾಲಿಟಾ, ಆಸಿಫ್ ಇಕ್ಬಾಲ್ ತನ್ಹಾ ಅವರಿಗೆ ಹೈಕೋರ್ಟ್ 2021ರ ಜೂನ್ 15ರಂದು ಜಾಮೀನು ನೀಡಿತ್ತು.

'ಮರಣದಂಡನೆಗೆ ಬೇರೆ ವಿಧಾನ: ಸಮಿತಿ ರಚನೆ ಪ್ರಕ್ರಿಯೆ ಪ್ರಗತಿಯಲ್ಲಿದೆ'

ನವದೆಹಲಿ (ಪಿಟಿಐ): 'ಮರಣದಂಡನೆ ವಿಧಿಸಲಾದ ಅಪರಾಧಿಗೆ ಶಿಕ್ಷೆ ಜಾರಿ ಮಾಡಲು ನೇಣಿಗೇರಿಸುವ ಬದಲು ಕಡಿಮೆ ನೋವಿನ ವಿಧಾನಗಳು ಇವೆಯೇ ಎಂಬುದರ ಕುರಿತು ಅಧ್ಯಯನ ನಡೆಸಿ ವರದಿ ನೀಡಲು ತಜ್ಞರ ಸಮಿತಿ ರಚಿಸಲಾಗುವುದು' ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮಂಗಳವಾರ ತಿಳಿಸಿತು.

ಈ ಸಂಬಂಧ ವಕೀಲ ರಿಷಿ ಮಲ್ಹೋತ್ರಾ ಅವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಿದ್ದು. ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಹಾಗೂ ನ್ಯಾಯಾಮೂರ್ತಿ ಜೆ.ಬಿ. ಪಾರ್ದೀವಾಲಾ ಅವರಿದ್ದ ಪೀಠವು ಈ ಅರ್ಜಿಯ ವಿಚಾರಣೆ ನಡೆಸಿತು.

'ಸಮಿತಿಗೆ ತಜ್ಞರ ಹೆಸರನ್ನು ಶಿಫಾರಸು ಮಾಡುವ ಪ್ರಕ್ರಿಯೆಯು ಕೊನೇ ಹಂತದಲ್ಲಿದೆ' ಎಂದು ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ನ್ಯಾಯಾಲಯಕ್ಕೆ ತಿಳಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠವು, 'ಬೇಸಿಗೆ ರಜೆಯ ಬಳಿಕ ವಿಚಾರಣೆಗೆ ದಿನಾಂಕ ನಿಗದಿ ಮಾಡುತ್ತೇವೆ' ಎಂದಿತು.

ಪೆನ್ನಾರ್: ವಿಚಾರಣೆ ಮುಂದೂಡಿಕೆ

ನವದೆಹಲಿ: ಕರ್ನಾಟಕ ಹಾಗೂ ತಮಿಳುನಾಡು ನಡುವಣ ಪೆನ್ನಾರ್ (ದಕ್ಷಿಣ ಪಿನಾಕಿನಿ) ನದಿ ವಿವಾದದ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಜುಲೈ 5ಕ್ಕೆ ಮುಂದೂಡಿದೆ.

ನ್ಯಾಯಮೂರ್ತಿಗಳಾದ ಎಂ.ಆರ್.ಶಾ ಹಾಗೂ ಮನೋಜ್ ಮಿಶ್ರಾ ಅವರನ್ನು ಒಳಗೊಂಡ ದ್ವಿಸದಸ್ಯ ಪೀಠವು ಪ್ರಕರಣದ ವಿಚಾರಣೆಯನ್ನು ಮಂಗಳವಾರ ನಡೆಸಿತು. ಈ ವೇಳೆ, ಕೇಂದ್ರ ಜಲ ಆಯೋಗದ ವಕೀಲರು, 'ನ್ಯಾಯಮಂಡಳಿ ಸ್ಥಾಪನೆಗೆ ಸಿದ್ಧಪಡಿಸಿರುವ ಟಿಪ್ಪಣಿಗೆ ಕೇಂದ್ರ ಸಚಿವ ಸಂಪುಟದ ಒಪ್ಪಿಗೆ ಬೇಕು. ಬಳಿಕ ಅಧಿಸೂಚನೆ ಪ್ರಕಟವಾಗಬೇಕು. ಅದಕ್ಕಾಗಿ ಕಾಯುತ್ತಿದ್ದೇವೆ' ಎಂದು ತಿಳಿಸಿದರು. ಬಳಿಕ ವಿಚಾರಣೆ ಮುಂದೂಡಲಾಯಿತು.

ಗೋವಾ ಚುನಾವಣೆಗೆ ಅಬಕಾರಿ ಹಗರಣದ ಹಣ: ಇ.ಡಿ ಆರೋಪ

ನವದೆಹಲಿ(ಪಿಟಿಐ): ಅಬಕಾರಿ ಲಾಬಿಯಿಂದ ಕಿಕ್‌ಬ್ಯಾಕ್ ರೂಪದಲ್ಲಿ ಪಡೆಯಲಾಗಿದೆ ಎನ್ನಲಾದ ₹100 ಕೋಟಿಯನ್ನು ಆಮ್ ಆದ್ಮಿ ಪಕ್ಷವು (ಎಎಪಿ) 2022ರ ಗೋವಾ ವಿಧಾನ ಸಭಾ ಚುನಾವಣೆಯ ಪ್ರಚಾರ ಕಾರ್ಯಕ್ಕೆ ಖರ್ಚು ಮಾಡಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ಆರೋಪಿಸಿದೆ.

ದೆಹಲಿ ಅಬಕಾರಿ ನೀತಿ ಹಗರಣದ ಜೊತೆನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ಇ.ಡಿ. ಸಲ್ಲಿಸಿರುವ ಪೂರಕ ಆರೋಪ ಪಟ್ಟಿಯಲ್ಲಿ ಈ ಆರೋಪ ಮಾಡಲಾಗಿದೆ.

'ಚಾರಿಯೆಟ್ ಪ್ರೊಡಕ್ಷನ್ ಮೀಡಿಯಾ ಪ್ರೈವೆಟ್ ಲಿ. ಮತ್ತು ಅದರ ಮಾಲೀಕ ರಾಜೇಶ್ ಜೋಶಿ ಸೇರಿದಂತೆ ಹಲವರು ₹100 ಕೋಟಿ ಹಣ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾಗಿರುವುದು ತನಿಖೆಯಿಂದ ತಿಳಿದುಬಂದಿದೆ' ಎಂದೂ ಇ.ಡಿ. ಆರೋಪಿಸಿದೆ.

ಗೋವಾ ಚುನಾವಣೆಯ ಸಂದರ್ಭದಲ್ಲಿ ಎಎಪಿ ಪರವಾಗಿ ಜಾಹೀರಾತು ನೀಡಲು ಹವಾಲ ಜಾಲದ ಮೂಲಕ ₹30 ಕೋಟಿ ವರ್ಗಾವಣೆಯಾಗಿರುವುದು ತನಿಖೆಯಿಂದ ಬಹಿರಂಗಗೊಂಡಿದೆ ಎಂದೂ ಆರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ.

ಎಎಪಿಯು ಈ ಆರೋಪಗಳನ್ನು ತಳ್ಳಿಹಾಕಿದೆ. ಹಿಂದಿನ ಆರೋಪಪಟ್ಟಿಗಳಂತೆ ಇದರಲ್ಲಿಯೂ ಎಎಪಿ ಸಂಸದ ರಾಘವ ಛಡ್ಡಾ ಅವರ ಹೆಸರನ್ನು ಇ.ಡಿ. ಉಲ್ಲೇಖಿಸಿದೆ.

ಪ್ರಮಾಣಪತ್ರ ನೀಡಿದ ವೇದಿಕೆಯನ್ನು ಪ್ರಶ್ನಿಸಿ ಎಂದ ಸುಪ್ರೀಂ ಕೋರ್ಟ್

'ದಿ ಕೇರಳ ಸ್ಟೋರಿ' ಬಿಡುಗಡೆಗೆ ತಡೆಯಿಲ್ಲ

ನವದೆಹಲಿ (ಪಿಟಿಐ): 'ದಿ ಕೇರಳ ಸ್ಟೋರಿ' ಸಿನಿಮಾದ ಬಿಡುಗಡೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಈ ಕುರಿತು ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆಗೆ ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್ ಮತ್ತು ಬಿ.ವಿ.ನಾಗರತ್ನ ಅವರ ನ್ಯಾಯಪೀಠವು ನಿರಾಕರಿಸಿದೆ.

'ಸಿನಿಮಾ ಶುಕ್ರವಾರ ಬಿಡುಗಡೆಯಾಗಲಿದ್ದು, ಇದರ ಟ್ರೇಲರ್ 1.6 ಕೋಟಿ ವೀಕ್ಷಣೆಯನ್ನು ಪಡೆದಿದೆ' ಎಂದು ವಕೀಲರಾದ ಕಪಿಲ್ ಸಿಬಲ್ ಮತ್ತು ನಿಜಾಮ್ ಪಾಶಾ ಅವರು ನ್ಯಾಯಪೀಠಕ್ಕೆ ತಿಳಿಸಿದರು.

'ಈ ಸಿನಿಮಾವು ಅಪಪ್ರಚಾರದಿಂದ ಕೂಡಿದೆ ಮತ್ತು ಇದು ದ್ವೇಷ ಭಾಷಣದ ಕೆಟ್ಟ ರೂಪವಾಗಿದೆ' ಎಂದು ಪಾಶಾ ಅವರು ಹೇಳಿದರು.

'ದಿ ಕೇರಳ ಸ್ಟೋರಿ' ಚಿತ್ರದ ಪೋಸ್ಟರ್

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠವು, ದ್ವೇಷ ಭಾಷಣಗಳಲ್ಲಿ ಹಲವು ವಿಧಗಳಿವೆ. ಈ ಸಿನಿಮಾ ಪ್ರಮಾಣಪತ್ರವನ್ನು ಪಡೆದಿದೆ ಮತ್ತು ಸೆನ್ಸಾರ್ ಮಂಡಳಿಯಿಂದ ಪ್ರಮಾಣೀಕರಣಗೊಂಡಿದೆ. ಇದು ಒಬ್ಬ ವ್ಯಕ್ತಿಯು ವೇದಿಕೆಯಲ್ಲಿ ನಿಂತು ಅನಿಯಂತ್ರಿತವಾಗಿ ಭಾಷಣ ಮಾಡಿದಂತಲ್ಲ. ನಿಮಗೆ ಸಿನಿಮಾದ ಬಿಡುಗಡೆಯನ್ನು ತಡೆಯಬೇಕೆಂದಿದ್ದರೆ ಸಿನಿಮಾವನ್ನು ಪ್ರಮಾಣೀಕರಣ ಮಾಡಿರುವ ವೇದಿಕೆಯಲ್ಲಿ ಪ್ರಶ್ನಿಸಿ' ಎಂದಿದೆ.

ಯಾವುದು ಅಗತ್ಯವೊ ಅದನ್ನು ಮಾಡುತ್ತೇವೆ ಎಂದು ಆಗ ಸಿಬಲ್ ಅವರು ತಿಳಿಸಿದರು.

'ಸಿನಿಮಾ ಬಿಡುಗಡೆ ಪ್ರಶ್ನಿಸಿ ಮೊದಲು ಹೈಕೋರ್ಟ್‌ಗೆ ಹೋಗಿ' ಎಂದು ನಾಗರತ್ನ ಅವರು ಹೇಳಿದರು. ಸಿನಿಮಾ ಶೀಘ್ರ ಬಿಡುಗಡೆಗೊಳ್ಳಲಿರುವುದರಿಂದ ಅಲ್ಲಿಗೆ ತೆರಳಲು ಸಮಯವಿಲ್ಲ ಎಂದು ಪಾಶಾ ಅವರು ತಿಳಿಸಿದರು.

'ನಾವು ಈ ಕುರಿತು ವಿಚಾರಣೆ ಕೈಗೊಂಡರೆ ಎಲ್ಲರೂ ಸುಪ್ರೀಂ ಕೋರ್ಟ್‌ಗೆ ಬರುತ್ತಾರೆ' ಎಂದೂ ನ್ಯಾಯಪೀಠ ಹೇಳಿದೆ.

ಮತಾಂತರ ಕಥಾವಸ್ತುವನ್ನು ಹೊಂದಿರುವ ಈ ಹಿಂದಿ ಸಿನಿಮಾಕ್ಕೆ ಈಗಾಗಲೇ ಹಲವರು ವಿರೋಧ ವ್ಯಕ್ತಪಡಿಸಿದ್ದಾರೆ.

ಸುಪ್ರೀಂ ಕೋರ್ಟ್ ಮೊರೆ ಹೋದ ಮುಸ್ಲಿಂ ಸಂಘಟನೆ

'ದಿ ಕೇರಳ ಸ್ಟೋರಿ' ಸಿನಿಮಾವನ್ನು ಚಿತ್ರ ಮಂದಿರಗಳಲ್ಲಿ ಪ್ರದರ್ಶಿಸುವುದಕ್ಕೆ ಮತ್ತು ಒಟಿಟಿ ವೇದಿಕೆಗಳಲ್ಲಿ ಬಿಡುಗಡೆ ಮಾಡುವುದಕ್ಕೆ ಅನುಮತಿ ನೀಡಬಾರದು ಎಂದು ಕೇಂದ್ರ ಸರ್ಕಾರಕ್ಕೆ ಮತ್ತು ಚಲನಚಿತ್ರ ಪ್ರಮಾಣೀಕರಣ ಮಂಡಳಿಗೆ (ಸಿಬಿಎಫ್‌ಸಿ) ನಿರ್ದೇಶನ ನೀಡಬೇಕೆಂದು ಕೋರಿ ಜಮೀಯತ್ ಉಲೇಮಾ ಎ ಹಿಂದ್ ಸಂಘಟನೆಯು ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಈ ಸಿನಿಮಾವು ದೇಶದಲ್ಲಿ ವಿವಿಧ ವಿಭಾಗಗಳ ಜನರ ನಡುವೆ ದ್ವೇಷ ಮತ್ತು ಶತ್ರುತ್ವ ಉಂಟುಮಾಡಲಿದೆ ಎಂದು ಸಂಘಟನೆಯು ಅರ್ಜಿಯಲ್ಲಿ ಹೇಳಿದೆ. ಸನ್‌ಶೈನ್ ಪಿಕ್ಚರ್ಸ್ ಪ್ರೈವೆಟ್ ಲಿಮಿಟೆಡ್ ನಿರ್ಮಿಸಿರುವ ಈ ಚಿತ್ರವನ್ನು ಸುದಿಪ್ತೊ ಸೆನ್ ನಿರ್ದೇಶಿಸಿದ್ದಾರೆ. ಇದು ಹಿಂದಿ, ಮಲಯಾಳ, ತಮಿಳು ಮತ್ತು ತೆಲುಗು ಭಾಷೆಗಳಲ್ಲಿ ದೇಶದಾದ್ಯಂತ ಬಿಡುಗಡೆಗೊಳ್ಳುವ ನಿರೀಕ್ಷೆ ಇದೆ ಎಂದು ಮೂಲಗಳು ತಿಳಿಸಿವೆ.

'ಲವ್ ಜಿಹಾದ್'ಗೆ ಬಲಿಪಶುಗಳಾಗಿ ಸಿರಿಯಾ ಮತ್ತು ಅಫ್ಗಾನಿಸ್ತಾನಕ್ಕೆ ತಲುಪಿರುವ ಯುವತಿಯರ ಕಥೆಯನ್ನು ಆಧರಿಸಿ ಈ ಚಿತ್ರ ನಿರ್ಮಿಸಲಾಗಿದೆ ಎಂದು ಹೇಳಲಾಗಿದೆ.

ಕುಸ್ತಿಪಟುಗಳ ಪ್ರತಿಭಟನೆಗೆ ಆಮ್ ಆದ್ಮಿ ಪಕ್ಷ ಬೆಂಬಲ

ನವದೆಹಲಿ (ಪಿಟಿಐ): ಆಮ್ ಆದ್ಮಿ ಪಕ್ಷದ (ಎಎಪಿ) ದೆಹಲಿ ಶಾಸಕರು, ಪಾಲಿಕೆ ಸದಸ್ಯರು ಸೇರಿ 360 ಹಳ್ಳಿಗಳ ಪ್ರತಿನಿಧಿಗಳು ಜಂತರ್‌ಮಂತರ್‌ಗೆ ಬುಧವಾರ ಭೇಟಿ ನೀಡಿ ಕುಸ್ತಿಪಟುಗಳ ಪ್ರತಿಭಟನೆಯನ್ನು ಬೆಂಬಲಿಸಿ, ಒಗ್ಗಟ್ಟು ಪ್ರದರ್ಶಿಸಲಿದ್ದಾರೆ ಎಂದು ಪಕ್ಷವು ಹೇಳಿದೆ.

ಮಾಧ್ಯಮಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಎಎಪಿ ದೆಹಲಿ ಘಟಕದ ಸಂಚಾಲಕ ಗೋಪಾಲ್ ರಾಯ್, ಪಕ್ಷದ ಪ್ರತಿನಿಧಿಗಳು ಬೆಳಿಗ್ಗೆ 11 ಗಂಟೆಗೆ ಪ್ರತಿಭಟನೆ ಸ್ಥಳಕ್ಕೆ ಭೇಟಿಕೊಡಲಿದ್ದಾರೆ. ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿರುವ ಆರೋಪ ಎದುರಿಸುತ್ತಿರುವ ಬಿಜೆಪಿ ಸಂಸದ ಹಾಗೂ ಭಾರತೀಯ ಕುಸ್ತಿ ಫೆಡರೇಷನ್ ಅಧ್ಯಕ್ಷ (ಡಬ್ಲ್ಯುಎಫ್‌ಐ) ಬ್ರಿಜ್ ಭೂಷಣ್ ಶರಣ್ ಸಿಂಗ್ ವಜಾಕ್ಕೆ ಆಗ್ರಹಿಸಿ ಕುಸ್ತಿಪಟುಗಳು ಏ.23ರಿಂದ ನಡೆಸುತ್ತಿರುವ ಪ್ರತಿಭಟನೆಯನ್ನು ಬೆಂಬಲಿಸಲಿದ್ದಾರೆ ಎಂದು ಹೇಳಿದ್ದಾರೆ.

ದೇಶಕ್ಕೆ ಕೀರ್ತಿ ತಂದುಕೊಟ್ಟ ಕುಸ್ತಿಪಟುಗಳು ಇಂದು ಪ್ರತಿಕೂಲ ಪರಿಸ್ಥಿತಿ ಎದುರಿಸುತ್ತಿದ್ದಾರೆ. ಕುಸ್ತಿಪಟುಗಳ ಬಗ್ಗೆ ಬಿಜೆಪಿಯು ಅಪಪ್ರಚಾರದಲ್ಲಿ ತೊಡಗಿದೆ. ಇದನ್ನು ಇಡೀ ದೇಶದ ಜನರು ನೋಡುತ್ತಿದ್ದಾರೆ ಎಂದು ರಾಯ್ ಹೇಳಿದರು.

'ಕುಸ್ತಿಪಟುಗಳಿಗೆ ನ್ಯಾಯ ಒದಗಿಸಿ'

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯ ಅಥ್ಲೀಟ್ಸ್ ಕಮಿಷನ್ ಸದಸ್ಯ ಓಂ ಪ್ರಕಾಶ್ ಕರಹಾನಾ ಅವರು ಕುಸ್ತಿಪಟುಗಳನ್ನು ಬೆಂಬಲಕ್ಕೆ ನಿಂತಿದ್ದಾರೆ. 'ತಮ್ಮ ಹಕ್ಕುಗಳಿಗಾಗಿ ಹೋರಾಟ ನಡೆಸುತ್ತಿರುವ ಕ್ರೀಡಾಪಟುಗಳಿಗೆ ನ್ಯಾಯ ಒದಗಿಸಬೇಕು' ಎಂದು ಮಂಗಳವಾರ ಹೇಳಿದ್ದಾರೆ.

ಷಾಟ್‌ಪಟ್‌ನಲ್ಲಿ ಏಷ್ಯನ್ ಚಾಂಪಿಯನ್ ಆಗಿದ್ದ 36 ವರ್ಷದ ಓಂ ಪ್ರಕಾಶ್ ಅವರು, 'ಅಥ್ಲೀಟುಗಳ ಆರೋಪಗಳನ್ನು ಕಡೆಗಣಿಸುವುದು ಸರಿಯಲ್ಲ. ಇದರಿಂದ ಹಾನಿಯಾಗುವುದು ಕ್ರೀಡೆಗೇ. ಕ್ರೀಡಾಪಟುಗಳು ವ್ಯವಸ್ಥೆಯ ಮೇಲೆ ವಿಶ್ವಾಸವನ್ನೂ ಕಳೆದುಕೊಳ್ಳುತ್ತಾರೆ' ಎಂದರು.

ವಿರಾಟ್– ಗಂಭೀರ್ ಜಟಾಪಟಿ; ಭಾರಿ ದಂಡ

ಲಖನೌ (ಪಿಟಿಐ): ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಬ್ಯಾಟರ್ ವಿರಾಟ್ ಕೊಹ್ಲಿ ಹಾಗೂ ಲಖನೌ ಸೂಪರ್ ಜೈಂಟ್ಸ್ ತಂಡದ ಮೆಂಟರ್ ಗೌತಮ್ ಗಂಭೀರ್ ಅವರಿಗೆ ದಂಡ ವಿಧಿಸಲಾಗಿದೆ. ಇಬ್ಬರೂ ತಮ್ಮ ಪಂದ್ಯ ಶುಲ್ಕವನ್ನು ಸಂಪೂರ್ಣವಾಗಿ ದಂಡ ರೂಪದಲ್ಲಿ ಭರಿಸಬೇಕಿದೆ.

ಸೋಮವಾರ ರಾತ್ರಿ ಏಕನಾ ಕ್ರೀಡಾಂಗಣದಲ್ಲಿ ಉಭಯ ತಂಡಗಳೂ ಮುಖಾಮುಖಿಯಾಗಿದ್ದವು. ಇದರಲ್ಲಿ ಆರ್‌ಸಿಬಿ ಜಯಗಳಿಸಿತು. ಪಂದ್ಯದ ನಂತರ ವಿರಾಟ್ ಹಾಗೂ ಗೌತಮ್ ನಡುವೆ ಜಟಾಪಟಿ ನಡೆದಿತ್ತು. ಮಾತಿನ ಚಕಮಕಿ ತೀವ್ರಗೊಂಡಾಗ ಲಖನೌ ತಂಡದ ನಾಯಕ ಕೆ.ಎಲ್. ರಾಹುಲ್ ಮತ್ತು ಸಹ ಆಟಗಾರರು ಮಧ್ಯಪ್ರವೇಶಿಸಿ ಇಬ್ಬರನ್ನೂ ಶಾಂತಗೊಳಿಸಲು ಪ್ರಯತ್ನಿಸಿದರು.

ಪಂದ್ಯದ ನಂತರ ಉಭಯ ತಂಡದ ಆಟಗಾರರು ಪರಸ್ಪರ ಹಸ್ತಲಾಘವ ನೀಡುವ ಸಂದರ್ಭದಲ್ಲಿ ಲಖನೌ ತಂಡದ ನವೀನ್ ಉಲ್ ಹಕ್ ಮತ್ತು ಕೊಹ್ಲಿ ನಡುವೆ ಮಾತಿನ ಚಕಮಕಿ ನಡೆಯಿತು. ಇದರಿಂದಾಗಿ ನವೀನ್‌ಗೂ ಪಂದ್ಯ ಶುಲ್ಕದ ಶೇ 50ರಷ್ಟು ದಂಡ ಹಾಕಲಾಗಿದೆ.

ಐಪಿಎಲ್ ನಿಯಮಾವಳಿಯ 2.21ನೇ ನಿಯಮವನ್ನು ಉಲ್ಲಂಘಿಸಿದ್ದರಿಂದ ದಂಡ ವಿಧಿಸಲಾಗಿದೆ.

ದೆಹಲಿಯ ಗಂಭೀರ್ ಮತ್ತು ಕೊಹ್ಲಿ ಇಬ್ಬರೂ ಕೆಲವು ವರ್ಷಗಳ ಹಿಂದೆ ಭಾರತ ತಂಡದಲ್ಲಿ ಜೊತೆಗೆ ಆಡಿದವರು. 2011ರಲ್ಲಿ ಏಕದಿನ ಕ್ರಿಕೆಟ್ ವಿಶ್ವಕಪ್ ಗೆದ್ದ ತಂಡದಲ್ಲಿ ಇಬ್ಬರೂ ಇದ್ದರು.

ಹತ್ತು ವರ್ಷಗಳ ಹಿಂದೆಯೂ ಐಪಿಎಲ್‌ನಲ್ಲಿ ಇವರಿಬ್ಬರಿಗೂ ಜಗಳ ನಡೆದಿತ್ತು. ಆಗ ಗಂಭೀರ್ ಕೋಲ್ಕತ್ತ ನೈಟ್ ರೈಡರ್ಸ್ ತಂಡದಲ್ಲಿ ಆಡುತ್ತಿದ್ದರು. ಬೆಂಗಳೂರಿನಲ್ಲಿ ನಡೆದಿದ್ದ ಪಂದ್ಯದಲ್ಲಿ ಇಬ್ಬರೂ ಮಾತಿನ ಚಕಮಕಿ ನಡೆಸಿದ್ದರು.

ಹೋದ ತಿಂಗಳು ಬೆಂಗಳೂರಿನಲ್ಲಿ ಇವೆರಡು ತಂಡಗಳ ನಡುವಣ ಪಂದ್ಯದ ವೇಳೆ ನಡೆದ ಘಟನೆಯೇ ಈಗಿನ ಪ್ರಕರಣಕ್ಕೆ ಕಾರಣ. ಮುಯ್ಯಿ ತೀರಿಸಿಕೊಳ್ಳಲು ಬೆಂಗಳೂರಿನ ತಂಡ ಕಾದಿತ್ತು ಎಂದು ಆರ್‌ಸಿಬಿ ನಿರ್ದೇಶಕ ಮೈಕ್ ಹೆಸನ್ ಅಭಿಪ್ರಾಯಪಟ್ಟಿದ್ದಾರೆ.

ವಿರಾಟ್ ಕೊಹ್ಲಿ ಹಾಗೂ ಗೌತಮ್ ಗಂಭೀರ್ ಮಾತಿನ ಚಕಮಕಿ –ಟ್ವಿಟರ್ ಚಿತ್ರ

ಏಪ್ರಿಲ್ 10ರಂದು ಉಭಯ ತಂಡಗಳು ಹಣಾಹಣಿ ನಡೆಸಿದ್ದವು. ಅದರಲ್ಲಿ ಲಖನೌ ರೋಚಕ ಜಯ ಸಾಧಿಸಿತ್ತು. ಪಂದ್ಯದ ನಂತರ ಕ್ರೀಡಾಂಗಣಕ್ಕೆ ಬಂದಿದ್ದ ಗಂಭೀರ್, ಆರ್‌ಸಿಬಿ ಅಭಿಮಾನಿಗಳತ್ತ 'ಬಾಯಿ ಮುಚ್ಚಿಕೊಂಡಿರಿ' ಎಂದು ಸಂಜ್ಞೆ ಮಾಡಿದ್ದರು.

'ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅವತ್ತು ಆಗಿದ್ದ ಸೋಲು ಮತ್ತು ಘಟನೆಗೆ ಮುಯ್ಯಿ ತೀರಿಸಿಕೊಳ್ಳುವ ಛಲದಲ್ಲಿ ನಾವಿದ್ದೆವು. ಈ ಘಟನೆ ಅದರ ಮುಂದುವರಿದ ಭಾಗವಾಗಿದೆ' ಎಂದು ಮೈಕ್ ಹೆಸನ್ ಟ್ವಿಟರ್‌ನಲ್ಲಿ ಹಾಕಿರುವ ವಿಡಿಯೊದಲ್ಲಿ ಹೇಳಿದ್ದಾರೆ.

ಕೊಹ್ಲಿಯನ್ನು ಬೆಂಬಲಿಸಿರುವ ನಾಯಕ ಫಫ್ ಡುಪ್ಲೆಸಿ, 'ವಿರಾಟ್ ಈ ರೀತಿ ಆಕ್ರಮಣಶೀಲರಾಗಿರುವುದನ್ನು ನೋಡಲು ಖುಷಿಯಾಗುತ್ತದೆ. ಅವರ ಅತ್ಯುತ್ತಮ ಫಾರ್ಮ್ ಇದಾಗಿದೆ' ಎಂದಿದ್ದಾರೆ.

ಆದರೆ ಈ ಘಟನೆ ಕುರಿತು ಬೇಸರ ವ್ಯಕ್ತಪಡಿಸಿರುವ ಮಾಜಿ ಕ್ರಿಕೆಟಿಗ ಅನಿಲ್ ಕುಂಬ್ಳೆ, 'ಆಟದಲ್ಲಿ ಬಹಳಷ್ಟು ಭಾವಗಳು, ಆವೇಶಗಳು ಪ್ರಕಟವಾಗುವುದು ಸಾಮಾನ್ಯ. ಆದರೆ ಅದನ್ನು ಈ ರೀತಿ ತೋರಿಸುವುದು ಸರಿಯಲ್ಲ. ಇದನ್ನು ಒಪ್ಪಲಾಗದು' ಎಂದಿದ್ದಾರೆ.

'ಪಂದ್ಯದಲ್ಲಿ ಪೈಪೋಟಿ ಇರಲಿ. ಆದರೆ ಒಮ್ಮೆ ಪಂದ್ಯ ಮುಗಿದ ನಂತರ ಉಭಯ ತಂಡಗಳ ಆಟಗಾರರು ಪರಸ್ಪರ ಕೈಕುಲುಕಿ ಶುಭ ಕೋರಬೇಕು. ವೈಯಕ್ತಿಕ ಸಂಗತಿಗಳನ್ನು ಕ್ರೀಡಾಂಗಣದೊಳಗೆ ತರಬಾರದು. ಈಗ ನಡೆದಿರುವ ಬೆಳವಣಿಗೆ ಒಳ್ಳೆಯದಲ್ಲ' ಎಂದು ಕುಂಬ್ಳೆ ಹೇಳಿದ್ದಾರೆ.

'ಆರ್‌ಸಿಬಿಯ ವಿರಾಟ್ ಕೊಹ್ಲಿ ಹಾಗೂ ಲಖನೌ ಮೆಂಟರ್ ಗೌತಮ್ ಗಂಭೀರ್ ಅವರಿಗೆ ಆರ್ಟಿಕಲ್ 2.21ರ ನಿಯಮದಲ್ಲಿ ಲೆವೆಲ್ 2 ಅಪರಾಧ ಎಂದು ಪರಿಗಣಿಸಿ ಸಂಪೂರ್ಣ ಪಂದ್ಯ ಶುಲ್ಕವನ್ನು ದಂಡವಾಗಿ ವಿಧಿಸಲಾಗಿದೆ. ನವೀನ್ ಉಲ್ ಹಕ್ ಅವರದ್ದು ಲೆವೆಲ್ -1 ಅಪರಾಧವೆಂದು ಪರಿಗಣಿಸಿ ಶುಲ್ಕದ ಅರ್ಧಭಾಗ ದಂಡ ಹಾಕಲಾಗಿದೆ' ಎಂದು ಐಪಿಎಲ್ ಆಡಳಿತ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

'ಏನೋ ಹೇಳ್ತಿದ್ದಿಯಲ್ಲ, ಹೇಳು...'

ವಿರಾಟ್ ಕೊಹ್ಲಿ ಹಾಗೂ ಗೌತಮ್ ಗಂಭೀರ್ ಅವರ ನಡುವಣ ಕಿಡಿನುಡಿಗಳನ್ನು ಪ್ರತ್ಯಕ್ಷದರ್ಶಿಯೊಬ್ಬರು ಸುದ್ದಿಸಂಸ್ಥೆಗೆ ಬಹಿರಂಗಪಡಿಸಿದ್ದಾರೆ.

'ಟಿವಿಯಲ್ಲಿ ನೀವು ನೋಡಿರಬಹುದು. ತಮ್ಮನ್ನು ಗುರಾಯಿಸಿದ್ದು ಯಾಕೆ ಎಂದು ಲಖನೌ ತಂಡದ ಕೈಲ್ ಮೇಯರ್ಸ್, ಕೊಹ್ಲಿಯನ್ನು ಪ್ರಶ್ನಿಸಿದ್ದರು. ಅದಕ್ಕೆ ಪ್ರತಿಯಾಗಿ ಕೊಹ್ಲಿ ಕೂಡ ನೀವು ನನ್ನನ್ನು ಯಾಕೆ ಗುರಾಯಿಸಿದಿರಿ ಎಂದು ಕೇಳಿದ್ದರು. ಇದು ಕಾವೇರುವ ಸಾಧ್ಯತೆಯನ್ನು ಗ್ರಹಿಸಿದ ಗೌತಮ್ ಗಂಭೀರ್ ಮಧ್ಯಪ್ರವೇಶಿಸಿ ಮೇಯರ್ಸ್ ಅವರನ್ನು ಎಳೆದುಕೊಂಡು ಹೋದರು. ಆಗ ವಿರಾಟ್ ಅವರು ಗಂಭೀರ್‌ಗೆ ಏನೋ ಅಂದರು. ಇದರಿಂದ ಕುಪಿತರಾದ ಗೌತಮ್, ಏನೋ ಹೇಳ್ತಿದ್ದಿಯಲ್ಲ. ಹೇಳು ಅಂದರು' ಎಂದು ಪ್ರತ್ಯಕ್ಷದರ್ಶಿ ಹೇಳಿದರು.

'ನಾನು ನಿಮಗೇನೂ ಅಂದೇ ಇಲ್ಲ. ನೀವು ಯಾಕೆ ಮಧ್ಯ ಬರುತ್ತಿರುವಿರಿ' ಎಂದು ಕೊಹ್ಲಿ, ಗಂಭೀರ್ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಗೌತಮ್, 'ನನ್ನ ತಂಡದ ಆಟಗಾರನಿಗೆ ನೀನು ಬೈದಿದ್ದಿಯಾ. ಆದ್ದರಿಂದ ನನ್ನ ಕುಟುಂಬಕ್ಕೆ (ತಂಡ) ಬೈಯ್ದಂತೆ' ಎಂದರು. 'ಹಾಗಿದ್ದರೆ ನಿಮ್ಮ ಕುಟುಂಬವನ್ನು ಜೋಪಾನ ಮಾಡಿಕೊಳ್ಳಿ' ಎಂದು ವಿರಾಟ್ ಜೋರಾಗಿಯೇ ಪ್ರತಿಕ್ರಿಯಿಸಿದರು.

'ಈಗ ನೀನು ನನಗೆ ಕಲಿಸುತ್ತಿಯಾ ಎಂದು ಗಂಭೀರ್ ಕೇಳಿದರು. ಆಗ ಸಹ ಆಟಗಾರರು ಇಬ್ಬರನ್ನೂ ಸಮಾಧಾನಪಡಿಸಲು ಪ್ರಯತ್ನಿಸಿ ಬೇರೆ ಕಡೆ ಕರೆದೊಯ್ದರು.' ಎಂದು ಪ್ರತ್ಯಕ್ಷದರ್ಶಿ ಹೇಳಿದರು. 'ಎರಡು ಕಡೆಯಿಂದ ಮಕ್ಕಳ ಜಗಳದಂತೆ ಕಂಡಿತು' ಎಂದರು.

ಮೇಯರ್ಸ್ ಬ್ಯಾಟಿಂಗ್ ಮಾಡುವಾಗ ವಿರಾಟ್ ಗುರಾಯಿಸಿದ್ದರು. ಆಗಲೂ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿತ್ತು. ಲಖನೌ ತಂಡದ ಕೊನೆಯ ಬ್ಯಾಟರ್ ನವೀನ್ ಉಲ್ ಹಕ್ ಅವರನ್ನು ಕೊಹ್ಲಿ ಕೆಣಕಿದಾಗ ನಾನ್‌ಸ್ಟ್ರೈಕರ್ ನಲ್ಲಿದ್ದ ಅಮಿತ್ ಮಿಶ್ರಾ ಅಂಪೈರ್‌ಗೆ ದೂರು ನೀಡಿದ್ದರು.

ಶಮಿ ದಾಳಿ ವ್ಯರ್ಥ •ಅಮನ್ ಅರ್ಧಶತಕ •ಇಶಾಂತ್, ಖಲೀಲ್ ಮಿಂಚು

ಗುಜರಾತ್‌ಗೆ ಆಘಾತ ನೀಡಿದ ಡೆಲ್ಲಿ

ಅಹಮದಾಬಾದ್ (ಪಿಟಿಐ): ಇಶಾಂತ್ ಶರ್ಮಾ ಕೊನೆಯ ಓವರ್‌ನಲ್ಲಿ ನಡೆಸಿದ ಬಿಗುವಾದ ಬೌಲಿಂಗ್ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡ, ಐಪಿಎಲ್ ಪಂದ್ಯದಲ್ಲಿ ಅಗ್ರಸ್ಥಾನದಲ್ಲಿರುವ ಗುಜರಾತ್ ಟೈಟನ್ಸ್‌ಗೆ ಆಘಾತ ನೀಡಿತು.

ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಡೇವಿಡ್ ವಾರ್ನರ್ ಬಳಗ ಐದು ರನ್‌ಗಳಿಂದ ಗೆದ್ದಿತು. ಮೊದಲು ಬ್ಯಾಟ್ ಮಾಡಿದ ಡೆಲ್ಲಿ ತಂಡ, ವೇಗಿ ಮೊಹಮ್ಮದ್ ಶಮಿ (11ಕ್ಕೆ 4) ಅವರ ಬಿಗುವಾದ ದಾಳಿಗೆ ತತ್ತರಿಸಿ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 130 ರನ್ ಗಳಿಸಿತು. ಅಮನ್ ಹಕೀಂ ಖಾನ್ (51; 44ಎ, 4X3, 6X3) ಅರ್ಧಶತಕದ ಮೂಲಕ ಆಸರೆಯಾದರು.

ಬಲಿಷ್ಠ ಬ್ಯಾಟಿಂಗ್ ಕ್ರಮಾಂಕ ಹೊಂದಿರುವ ಹಾರ್ದಿಕ್ ಪಾಂಡ್ಯ ನೇತೃತ್ವದ ಟೈಟನ್ಸ್ ಈ ಗುರಿಯನ್ನು ಸುಲಭವಾಗಿ ಬೆನ್ನಟ್ಟಲಿದೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ಡೆಲ್ಲಿ ತಂಡದ ಶಿಸ್ತಿನ ಬೌಲಿಂಗ್ ಮುಂದೆ ಪರದಾಟ ನಡೆಸಿ, 6 ವಿಕೆಟ್‌ಗಳಿಗೆ 126 ರನ್ ಗಳಿಸಲಷ್ಟೇ ಶಕ್ತವಾಯಿತು. ಹಾರ್ದಿಕ್ (ಅಜೇಯ 59, 53) ನಡೆಸಿದ ಹೋರಾಟ ಸಾಕಾಗಲಿಲ್ಲ. ಇಶಾಂತ್ (23ಕ್ಕೆ 2), ಖಲೀಲ್ ಅಹ್ಮದ್ (24ಕ್ಕೆ 2) ಮತ್ತು ಕುಲದೀಪ್ ಯಾದವ್ (15ಕ್ಕೆ 1) ಗಮನ ಸೆಳೆದರು.

ಡೆಲ್ಲಿ ತಂಡದ ಇಶಾಂತ್ ಶರ್ಮಾ (ಎಡದಿಂದ ಎರಡನೆಯವರು) ಸಹ ಆಟಗಾರರ ಜತೆ ಸಂಭ್ರಮಿಸಿದರು –ಎಎಫ್‌ಪಿ ಚಿತ್ರ

ಸಾಧಾರಣ ಗುರಿ ಬೆನ್ನಟ್ಟಿದ ಹಾಲಿ ಚಾಂಪಿಯನ್ನರು ಆರಂಭದಲ್ಲೇ ಆಘಾತ ಅನುಭವಿಸಿದರು. ಅತ್ಯುತ್ತಮ ಫಾರ್ಮ್‌ನಲ್ಲಿರುವ ಶುಭಮನ್ ಗಿಲ್, ವೃದ್ಧಿಮಾನ್ ಸಹಾ, ವಿಜಯ್ ಶಂಕರ್ ಮತ್ತು ಡೇವಿಡ್ ಮಿಲ್ಲರ್ ಬೇಗನೇ ಔಟಾದರು. ಸ್ಕೋರ್ 32 ಆಗುವಷ್ಟರಲ್ಲಿ 4 ವಿಕೆಟ್‌ಗಳು ಬಿದ್ದವು.

ಈ ವೇಳೆ ಜತೆಯಾದ ಪಾಂಡ್ಯ ಮತ್ತು ಅಭಿನವ್ ಮನೋಹರ್ (26 ರನ್, 33 ಎ.) ಐದನೇ ವಿಕೆಟ್‌ಗೆ 62 ರನ್ ಸೇರಿಸಿದರು. 18ನೇ ಓವರ್‌ನಲ್ಲಿ ಮನೋಹರ್ ವಿಕೆಟ್ ಪಡೆದ ಖಲೀಲ್ ಈ ಜತೆಯಾಟ ಮುರಿದರು.

ಕೊನೆಯ ಎರಡು ಓವರ್‌ಗಳಲ್ಲಿ 33 ರನ್‌ಗಳು ಬೇಕಿದ್ದವು. ಎನ್ರಿಚ್ ನಾಕಿಯಾ ಬೌಲ್ ಮಾಡಿದ 19ನೇ ಓವರ್ ಮೊದಲ ಮೂರು ಎಸೆತಗಳಲ್ಲಿ 3 ರನ್‌ಗಳು ಮಾತ್ರ ಬಂದವು. ಆದರೆ ರಾಹುಲ್ ತೆವಾಟಿಯಾ (20 ರನ್, 7 ಎ.) ಮುಂದಿನ ಮೂರು ಎಸೆತಗಳನ್ನು ಸಿಕ್ಸರ್‌ಗೆ ಅಟ್ಟಿ ಗೆಲುವಿನ ಆಸೆ ಚಿಗುರುವಂತೆ ಮಾಡಿದರು.

ಇಶಾಂತ್ ಬೌಲ್ ಮಾಡಿದ ಅಂತಿಮ ಓವರ್‌ನಲ್ಲಿ 12 ರನ್‌ಗಳ ಅವಶ್ಯಕತೆಯಿತ್ತು. ಒತ್ತಡದ ನಡುವೆಯೂ ಉತ್ತಮ ಬೌಲ್ ಮಾಡಿದ ಅನುಭವಿ ವೇಗಿ, ತೆವಾಟಿಯಾ ವಿಕೆಟ್ ಪಡೆದರಲ್ಲದೆ ಆರು ರನ್ ಮಾತ್ರ ಬಿಟ್ಟುಕೊಟ್ಟರು.

ಶಮಿ ಮಿಂಚು, ಅಮನ್ ಆಸರೆ: ಟಾಸ್ ಗೆದ್ದ ಡೆಲ್ಲಿ ತಂಡದ ನಾಯಕ ಡೇವಿಡ್ ವಾರ್ನರ್ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡರು. ಶಮಿ ಹಾಕಿದ ಮೊದಲ ಎಸೆತದಲ್ಲಿಯೇ ಬ್ಯಾಟರ್ ಫಿಲಿಪ್ ಸಾಲ್ಟ್ ಅವರು ಡೇವಿಡ್ ಮಿಲ್ಲರ್‌ಗೆ ಕ್ಯಾಚಿತ್ತರು. ನಂತರದ ಓವರ್‌ನಲ್ಲಿ ವಾರ್ನರ್ ರನೌಟ್ ಆದರು.

ಇನಿಂಗ್ಸ್‌ನ ಮೂರು ಮತ್ತು ಐದನೇ ಓವರ್‌ನಲ್ಲಿ ಸ್ವಿಂಗ್ ಎಸೆತಗಳ ಅಸ್ತ್ರ ಪ್ರಯೋಗಿಸಿದ ಶಮಿ ಡೆಲ್ಲಿ ತಂಡಕ್ಕೆ ದೊಡ್ಡ ಆಘಾತ ನೀಡಿದರು. ರಿಲೀ ರೊಸೊ, ಮನೀಷ್ ಪಾಂಡೆ ಹಾಗೂ ಪ್ರಿಯಂ ಗಾರ್ಗ್ ವಿಕೆಟ್ ತಮ್ಮದಾಗಿಸಿಕೊಂಡರು. ಇದರಿಂದಾಗಿ ತಂಡವು ಕೇವಲ 23 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಕಂಗಾಲಾಯಿತು.

ಈ ಹೊತ್ತಿನಲ್ಲಿ ಜೊತೆಗೂಡಿದ ಅಕ್ಷರ್ ಪಟೇಲ್ (27; 30ಎ) ಹಾಗೂ ಅಮನ್ ಇನಿಂಗ್ಸ್‌ಗೆ ಬಲ ತುಂಬಿದರು. ಆರನೇ ವಿಕೆಟ್ ಜೊತೆಯಾಟದಲ್ಲಿ 50 ರನ್ ಸೇರಿಸಿದರು. ಒಂದು ಸಿಕ್ಸರ್ ಮತ್ತು ಎರಡು ಬೌಂಡರಿ ಬಾರಿಸಿದ ಅಕ್ಷರ್ 14ನೇ ಓವರ್‌ನಲ್ಲಿ ಮೋಹಿತ್ ಶರ್ಮಾ ಎಸೆತಕ್ಕೆ ಔಟಾದರು. ಅಮನ್ 7ನೇ ವಿಕೆಟ್‌ಗೆ ರಿಪಲ್ ಪಟೇಲ್ (23; 13ಎ) ಜೊತೆ 53 ರನ್ ಸೇರಿಸಿದರು.

ಸ್ಕೋರ್ ಕಾರ್ಡ್

ಡೆಲ್ಲಿ ಕ್ಯಾಪಿಟಲ್ಸ್ 8ಕ್ಕೆ 130 (20 ಓವರ್)
ಸಾಲ್ಟ್ ಸಿ ಮಿಲ್ಲರ್ ಬಿ ಶಮಿ 0 (1ಎ)
ವಾರ್ನರ್ ರನೌಟ್ (ರಶೀದ್) 2 (2ಎ)
ಪ್ರಿಯಂ ಸಿ ಸಹಾ ಬಿ ಶಮಿ 10 (14ಎ)
ರಿಲಿ ಸಿ ಸಹಾ ಬಿ ಶಮಿ 8 (6ಎ, 4X2)
ಮನೀಷ್ ಸಿ ಸಹಾ ಬಿ ಶಮಿ 1 (4ಎ)
ಅಕ್ಷರ್ ಸಿ ರಶೀದ್ ಬಿ ಮೋಹಿತ್ 27 (30ಎ, 4X2, 6X1)
ಅಮನ್ ಸಿ ಮನೋಹರ್ ಬಿ ರಶೀದ್ 51 (44ಎ, 4X3, 6X3)
ರಿಪಲ್ ಸಿ ಹಾರ್ದಿಕ್ ಬಿ ಮೋಹಿತ್ 23 (13ಎ, 4X2, 6X1)
ನಾಕಿಯಾ ಔಟಾಗದೆ 3 (6ಎ)
ಕುಲದೀಪ್ ಔಟಾಗದೆ 0 (1ಎ)
ಇತರೆ: 5 (ಲೆಗ್‌ಬೈ 1, ನೋಬಾಲ್ 1, ವೈಡ್ 3)
ವಿಕೆಟ್ ಪತನ: 1-0 (ಫಿಲ್ ಸಾಲ್ಟ್, 0.1), 2-6 (ಡೇವಿಡ್ ವಾರ್ನರ್, 1.1), 3-16 (ರಿಲಿ ರೊಸ್ಸೊ, 2.5), 4-22 (ಮನೀಷ್ ಪಾಂಡೆ, 4.1), 5-23 (ಪ್ರಿಯಂ ಗರ್ಗ್, 4.6), 6-73 (ಅಕ್ಷರ್ ಪಟೇಲ್, 13.6), 7-126 (ಅಮನ್ ಹಕೀಂ ಖಾನ್, 18.3), 8-130 (ರಿಪಲ್ ಪಟೇಲ್, 19.5)
ಬೌಲಿಂಗ್: ಮೊಹಮ್ಮದ್ ಶಮಿ 4–0–11–4, ಹಾರ್ದಿಕ್ ಪಾಂಡ್ಯ 1–0–10–0, ಜೋಶ್ ಲಿಟ್ಲ್ 3–0–27–0, ರಶೀದ್ ಖಾನ್ 4–0–28–1, ನೂರ್ ಅಹಮದ್ 4–0–20–0, ಮೋಹಿತ್ ಶರ್ಮಾ 4–0–33–2

ಗುಜರಾತ್ ಟೈಟನ್ಸ್ 6ಕ್ಕೆ 125 (20 ಓವರ್)
ವೃದ್ಧಿಮಾನ್ ಸಿ ಸಾಲ್ಟ್ ಬಿ ಖಲೀಲ್ 0 (6ಎ)
ಶುಭಮನ್ ಸಿ ಮನೀಷ್ ಬಿ ನಾಕಿಯಾ 6 (7ಎ, 4X1)
ಹಾರ್ದಿಕ್ ಔಟಾಗದೆ 59 (53ಎ, 4X7)
ಶಂಕರ್ ಬಿ ಇಶಾಂತ್ 6 (9ಎ, 4X1)
ಮಿಲ್ಲರ್ ಬಿ ಕುಲದೀಪ್ 0 (3ಎ)
ಮನೋಹರ್ ಸಿ ಅಮನ್ ಬಿ ಅಹಮದ್ 26 (33ಎ, 6X1)
ತೆವಾಟಿಯಾ ಸಿ ರಿಲಿ ಬಿ ಇಶಾಂತ್ 20 (7ಎ, 6X3)
ರಶೀದ್ ಔಟಾಗದೆ 3 (2ಎ)
ಇತರೆ: 5 (ವೈಡ್ 5)
ವಿಕೆಟ್ ಪತನ: 1-0 (ವೃದ್ಧಿಮಾನ್ ಸಹಾ, 0.6), 2-18 (ಶುಭಮನ್ ಗಿಲ್, 3.1), 3-26 (ವಿಜಯ್ ಶಂಕರ್, 4.6), 4-32 (ಡೇವಿಡ್ ಮಿಲ್ಲರ್, 6.4), 5-94 (ಅಭಿನವ್ ಮನೋಹರ್, 17.1), 6-122 (ರಾಹುಲ್ ತೆವಾಟಿಯಾ, 19.4)
ಬೌಲಿಂಗ್: ಖಲೀಲ್ ಅಹಮದ್ 4–1–24–2, ಇಶಾಂತ್ ಶರ್ಮಾ 4–0–23–2, ಎನ್ರಿಚ್ ನಾಕಿಯಾ 4–0–39–1, ಕುಲದೀಪ್ ಯಾದವ್ 4–0–15–1, ಅಕ್ಷರ್ ಪಟೇಲ್ 4–0–24–0

ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್‌ಗೆ 5 ರನ್‌ಗಳ ಜಯ

ಮುಂಬೈಗೆ ಪಂಜಾಬ್ ಸವಾಲು

ಹಿಂದಿನ ಪಂದ್ಯಗಳ ಗೆಲುವಿನಿಂದ ಇತ್ತಂಡಗಳಲ್ಲಿ ವಿಶ್ವಾಸ

ಮೊಹಾಲಿ (ಪಿಟಿಐ): ಐದು ಬಾರಿಯ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡ, ಬುಧವಾರ ನಡೆಯುವ ಐಪಿಎಲ್‌ನ ಮಹತ್ವದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವನ್ನು ಎದುರಿಸಲಿದೆ. ಟೂರ್ನಿಯಲ್ಲಿ ಏರಿಳಿತ ಕಾಣುತ್ತಿರುವ ಪಂಜಾಬ್ ವಿರುದ್ಧದ ಈ ಪಂದ್ಯ ಮುಂಬೈ ತಂಡದ ಸಾಮರ್ಥ್ಯಕ್ಕೆ ಸತ್ವಪರೀಕ್ಷೆಯಾಗಲಿದೆ.

ಪಂದ್ಯ ಗೆದ್ದಲ್ಲಿ ಮುಂಬೈ ತಂಡ ಪಾಯಿಂಟ್ ಪಟ್ಟಿಯಲ್ಲಿ ಬಡ್ತಿ ಪಡೆಯಲಿದೆ. ಸೋತಲ್ಲಿ ಕಳೆದ ಸಲದಂತೆ ತಳಕ್ಕಿಳಿಯುವ ಆತಂಕ ಎದುರಾಗಲಿದೆ. ಕಳೆದ ಆವೃತಿಯಲ್ಲಿ ಮುಂಬೈ ಕೊನೆಯ (10ನೇ) ಸ್ಥಾನ ಪಡೆದಿತ್ತು. ಸದ್ಯ ಎಂಟು ಪಂದ್ಯಗಳಿಂದ ಎಂಟು ಪಾಯಿಂಟ್ಸ್ ಗಳಿಸಿರುವ ರೋಹಿತ್ ಬಳಗ ಏಳನೇ ಸ್ಥಾನದಲ್ಲಿದೆ.

ವಾಂಖೆಡೆಯಲ್ಲಿ ಎರಡು ದಿನಗಳ ಹಿಂದೆ ರಾಯಲ್ಸ್ ತಂಡದ 212 ರನ್‌ಗಳ ಗುರಿಯನ್ನು ಮೂರು ಎಸೆತಗಳಿರುವಂತೆ ದಾಟಿದ್ದು ಮುಂಬೈ ತಂಡಕ್ಕೆ ಅಗತ್ಯವಿದ್ದ 'ಟಾನಿಕ್' ಒದಗಿಸಿದೆ.

ಸಿಂಗಪುರ ಸಂಜಾತ ಆಸ್ಟ್ರೇಲಿಯಾ ಆಟಗಾರ ಟಿಮ್ ಡೇವಿಡ್ 14 ಎಸೆತಗಳಲ್ಲಿ 45 ರನ್‌ಗಳ ಸ್ಫೋಟಕ ಇನಿಂಗ್ಸ್ ಆಡಿದ್ದರಿಂದ ಮುಂಬೈ ಇಂಡಿಯನ್ಸ್ ಸೋಲಿನ ದವಡೆಯಿಂದ ಪಾರಾಗಿ ಸಂಭ್ರಮ ಆಚರಿಸಿತ್ತು. ಸೂರ್ಯಕುಮಾರ್ ಯಾದವ್, ಕ್ಯಾಮರೂನ್ ಗ್ರೀನ್, ಇಶಾನ್ ಕಿಶನ್, ತಿಲಕ್ ವರ್ಮ ಅವರೂ ಉಪಯುಕ್ತ ಕಾಣಿಕೆ ನೀಡಿದ್ದರು. ಆದರೆ ನಾಯಕ ರೋಹಿತ್ ಶರ್ಮಾ ಅವರಿಂದ ಸ್ಥಿರ ಪ್ರದರ್ಶನ ಬರುತ್ತಿಲ್ಲ. ಅವರ ಉತ್ತಮ ಇನಿಂಗ್ಸ್ ಆಡಿದಲ್ಲಿ ತಂಡದ ವಿಶ್ವಾಸ ವೃದ್ಧಿಸಲಿದೆ.

ಮುಂಬೈ ಇಂಡಿಯನ್ಸ್ ತಂಡದ ಟಿಮ್ ಡೇವಿಡ್

ಕಿಂಗ್ಸ್ ತಂಡ ಆಕ್ರಮಣಕಾರಿ ಆಟಕ್ಕೆ ಹೆಸರು ಪಡೆದಿದೆ. ಸಮಸ್ಯೆ ಎಂದರೆ ಮೇಲಿನ ಕ್ರಮಾಂಕದ ಆಟಗಾರರ ಪರದಾಟ. ಶಿಖರ್ ಧವನ್ ಮತ್ತು ಕೆಲಮಟ್ಟಿಗೆ ಅವರ ಆರಂಭದ ಜೊತೆಗಾರ ಪ್ರಭಸಿಮ್ರನ್ ಸಿಂಗ್ ಬಿಟ್ಟರೆ ಉಳಿದವರಿಂದ ಸ್ಥಿರ ಪ್ರದರ್ಶನ ಬಂದಿಲ್ಲ. ಆದರೆ ಏ. 30ರಂದು ಸಿಎಸ್‌ಕೆ ವಿರುದ್ಧ ಚೆಪಾಕ್‌ನಲ್ಲೇ 200 ರನ್‌ಗಳ ಗುರಿ ದಾಟಿ ಜಯಗಳಿಸಿರುವುದು ತಂಡದಲ್ಲಿ ಚೈತನ್ಯ ಮೂಡಿಸಿದೆ.

ಧವನ್– ಪ್ರಭಸಿಮ್ರನ್ ಉತ್ತಮ ಆರಂಭದ ನಂತರ ಲಿಯಾಮ್ ಲಿವಿಂಗ್‌ಸ್ಟೋನ್, ಸ್ಯಾಮ್ ಕರನ್ ಮತ್ತು ವಿಕೆಟ್ ಕೀಪರ್– ಬ್ಯಾಟರ್ ಜೀತೇಶ್ ಶರ್ಮ ತಂಡವನ್ನು ಗೆಲುವಿನ ಹಾದಿಯಲ್ಲಿ ಮುನ್ನಡೆಸಿದ್ದರು. ಪಂಜಾಬ್ ಬ್ಯಾಟರ್‌ಗಳು ವೇಗಿ ಜೋಫ್ರಾ ಆರ್ಚರ್ ದಾಳಿಯನ್ನು ಹೇಗೆ ನಿಭಾಯಿಸುತ್ತಾರೆ ಎಂಬ ಕುತೂಹಲವಿದೆ.

ಪಂದ್ಯ ಆರಂಭ: ರಾತ್ರಿ 7.30.

ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಹಣಾಹಣಿ ಇಂದು

ಲಖನೌ ತಂಡಕ್ಕೆ ಗಾಯದ ಸಮಸ್ಯೆ

ಲಖನೌ (ಪಿಟಿಐ): ಐಪಿಎಲ್ ಪಂದ್ಯದಲ್ಲಿ ಬುಧವಾರ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು ಎದುರಿಸಲಿರುವ ಲಖನೌ ಸೂಪರ್ ಜೈಂಟ್ಸ್ ತಂಡಕ್ಕೆ ಆಟಗಾರರ ಗಾಯದ ಸಮಸ್ಯೆ ಕಾಡುತ್ತಿದೆ.

ನಾಯಕ ಕೆ.ಎಲ್.ರಾಹುಲ್ ಮತ್ತು ವೇಗದ ಬೌಲರ್ ಜೈದೇವ್ ಉನದ್ಕತ್ ಅವರು ಗಾಯಗೊಂಡಿದ್ದು, ಈ ಪಂದ್ಯದಲ್ಲಿ ಕಣಕ್ಕಿಳಿಯುವುದು ಅನುಮಾನ. ಸೋಮವಾರ ನಡೆದಿದ್ದ ಪಂದ್ಯದಲ್ಲಿ ಆರ್‌ಸಿಬಿ ಕೈಯಲ್ಲಿ ಎದುರಾದ 18 ರನ್‌ಗಳ ಸೋಲು ಕೂಡಾ ತಂಡವನ್ನು ಒತ್ತಡಕ್ಕೆ ಸಿಲುಕಿಸಿದೆ.

126 ರನ್‌ಗಳ ಸಾಧಾರಣ ಗುರಿಯನ್ನು ಬೆನ್ನಟ್ಟುವಲ್ಲಿ ವಿಫಲವಾಗಿದ್ದ, ಲಖನೌ ತಂಡ 19.5 ಓವರ್‌ಗಳಲ್ಲಿ 108 ರನ್‌ಗಳಿಗೆ ಆಲೌಟಾಗಿತ್ತು. ಆ ಸೋಲಿನ ಆಘಾತದಿಂದ ಹೊರಬಂದು ಚೆನ್ನೈ ತಂಡದ ಸವಾಲಿಗೆ ಸಜ್ಜಾಗಬೇಕಿದೆ.

ರಾಹುಲ್ ಅವರು ಫೀಲ್ಡಿಂಗ್ ವೇಳೆ ತೊಡೆಯ ಸ್ನಾಯು ಸೆಳೆತಕ್ಕೆ ಒಳಗಾಗಿದ್ದರು. ಕೊನೆಯದಾಗಿ ಬ್ಯಾಟಿಂಗ್‌ಗೆ ಬಂದಿದ್ದ ಅವರು ಮೂರು ಎಸೆತಗಳನ್ನು ಎದುರಿಸಿದ್ದರೂ, ಖಾತೆ ತೆರೆಯಲಿಲ್ಲ. ಜೈದೇವ್ ಅವರು ಭಾನುವಾರ ಅಭ್ಯಾಸದ ವೇಳೆ ಜಾರಿಬಿದ್ದು ಭುಜಕ್ಕೆ ಗಾಯವಾಗಿತ್ತು.

ರಾಹುಲ್ ಆಡದಿದ್ದರೆ ಕೈಲ್ ಮೇಯರ್ಸ್, ನಿಕೊಲಸ್ ಪೂರನ್, ಮಾರ್ಕಸ್ ಸ್ಟೊಯಿನಿಸ್ ಮತ್ತು ಕೃಣಾಲ್ ಪಾಂಡ್ಯ ಅವರ ಮೇಲಿನ ಜವಾಬ್ದಾರಿ ಹೆಚ್ಚಲಿದೆ.

ಲಖನೌ ತಂಡದ ಆಟಗಾರರು ಎದುರಿಸುತ್ತಿರುವ ಒತ್ತಡದ ಪರಿಸ್ಥಿತಿಯನ್ನು ತನ್ನ ಲಾಭಕ್ಕೆ ಬಳಸಿಕೊಳ್ಳಲು ಮಹೇಂದ್ರ ಸಿಂಗ್ ಧೋನಿ ನೇತೃತ್ವದ ಚೆನ್ನೈ ತಂಡ ಪ್ರಯತ್ನಿಸಲಿದೆ.

ಪಂದ್ಯ ಆರಂಭ: ಮಧ್ಯಾಹ್ನ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊ ಸಿನೆಮಾ ಆ್ಯಪ್

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	9	6	3	0	12	0.532
ರಾಜಸ್ಥಾನ	9	5	4	0	10	0.800
ಲಖನೌ	9	5	4	0	10	0.639
ಚೆನ್ನೈ	9	5	4	0	10	0.329
ಬೆಂಗಳೂರು	9	5	4	0	10	-0.030
ಪಂಜಾಬ್	9	5	4	0	10	-0.447
ಮುಂಬೈ	8	4	4	0	8	-0.502
ಕೋಲ್ಕತ್ತ	9	3	6	0	6	-0.147
ಹೈದರಾಬಾದ್	8	3	5	0	6	-0.577
ಡೆಲ್ಲಿ	9	3	6	0	6	-0.768

ಮಂಗಳವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	17

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	466

ಬಾಕ್ಸಿಂಗ್: ಪ್ರೀಕ್ವಾರ್ಟರ್‌ಗೆ ಆಶಿಶ್

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಟೋಕಿಯೊ ಒಲಿಂಪಿಯನ್ ಆಶಿಶ್ ಚೌಧರಿ ಅವರು ಇಲ್ಲಿ ನಡೆಯುತ್ತಿರುವ ಪುರುಷರ ವಿಶ್ವ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟಿದ್ದಾರೆ.

ಮಂಗಳವಾರ ನಡೆದ 80 ಕೆಜಿ ವಿಭಾಗದ ಸ್ಪರ್ಧೆಯ ಮೊದಲ ಸುತ್ತಿನ ಬೌಟ್‌ನಲ್ಲಿ ಆಶಿಶ್ 4–1ರಿಂದ ಇರಾನ್‌ನ ಮೇಯಸಮ್ ಗೆಸಲಾಗಿ ಅವರನ್ನು ಪರಾಭವಗೊಳಿಸಿದರು. ಈ ಫಲಿತಾಂಶದಲ್ಲಿ ರೆಫರಿಗಳ ತೀರ್ಮಾನ ಒಮ್ಮತವಾಗಿರಲಿಲ್ಲ.

28 ವರ್ಷದ ಆಶಿಶ್ ಅವರು ಎದುರಾಳಿಯ ಮೇಲೆ ಬಲಿಷ್ಠ ಪಂಚ್‌ಗಳನ್ನು ಪ್ರಯೋಗಿಸಿದರು. 2019ರ ಏಷ್ಯಾ ಚಾಂಪಿಯನ್‌ಷಿಪ್ ಬೆಳ್ಳಿ ಪದಕ ವಿಜೇತ ಭಾರತದ ಬಾಕ್ಸರ್, ಚುರುಕಿನ ಪಾದಚಲನೆ ಮತ್ತು ತಾಂತ್ರಿಕ ಸಾಮರ್ಥ್ಯದ ಬಲದಿಂದ ಮೇಯಸಮ್ ಅವರನ್ನು ಕಂಗೆಡಿಸಿದರು.

ಆಶಿಶ್ ಚೌಧರಿ

16ರ ಘಟ್ಟದಲ್ಲಿ ಆಶಿಶ್ ಅವರಿಗೆ ಕಠಿಣ ಸವಾಲು ಎದುರಾಗಿದ್ದು, ಎರಡು ಬಾರಿಯ ಒಲಿಂಪಿಕ್ ಚಾಂಪಿಯನ್, ಕ್ಯೂಬಾದ ಅರ್ಲೆನ್ ಲೊಪೆಜ್ ವಿರುದ್ಧ ಸೆಣಸಲಿದ್ದಾರೆ.

ಹರ್ಷಗೆ ನಿರಾಸೆ: ಇದೇ ಮೊದಲ ಬಾರಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿಸಿದ್ದ ಹರ್ಷ (86 ಕೆಜಿ ವಿಭಾಗ) ಮೊದಲ ಸುತ್ತಿನ ಬೌಟ್‌ನಲ್ಲಿ 0–5ರಿಂದ ಆಸ್ಟ್ರೇಲಿಯಾದ ಮೆಕ್‌ಅಲಿಸ್ಟರ್ ಎದುರು ಪರಾಭವಗೊಂಡರು.

ಬುಧವಾರ ನಡೆಯಲಿರುವ ಬೌಟ್‌ನಲ್ಲಿ ನಿಶಾಂತ್ ದೇವ್ (71 ಕೆಜಿ) ಅವರು ಅಜರ್‌ಬೈಜಾನ್‌ನ ಸರ್ಕಾನ್ ಅಲಿಯೆವ್ ಅವರಿಗೆ ಮುಖಾಮುಖಿಯಾಗಲಿದ್ದಾರೆ.

ಟೆಸ್ಟ್ ರ‍್ಯಾಂಕಿಂಗ್: ಭಾರತಕ್ಕೆ ಅಗ್ರಸ್ಥಾನ

ದುಬೈ (ಪಿಟಿಐ): ಭಾರತ ತಂಡವು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ ಮಂಗಳವಾರ ಪ್ರಕಟಿಸಿರುವ ವಾರ್ಷಿಕ ಟೆಸ್ಟ್ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಗಳಿಸಿದೆ.

ಭಾರತ ತಂಡ ಒಟ್ಟು 121 ಅಂಕಗಳೊಂದಿಗೆ ಅಗ್ರಸ್ಥಾನಕ್ಕೇರಿದೆ. ಈ ಹಾದಿಯಲ್ಲಿ ಆಸ್ಟ್ರೇಲಿಯಾ (116) ಹಾಗೂ ಇಂಗ್ಲೆಂಡ್ (114) ತಂಡಗಳನ್ನು ಹಿಂದಿಕ್ಕಿದೆ. 2020ರ ಮೇ ತಿಂಗಳಿಂದ 2022ರ ಮೇ ವರೆಗೆ ಪೂರ್ಣಪ್ರಮಾಣದಲ್ಲಿ ನಡೆದ ಟೆಸ್ಟ್ ಸರಣಿಗಳ ಫಲಿತಾಂಶಗಳನ್ನು ಪರಿಗಣಿಸಿ ಶ್ರೇಯಾಂಕ ನೀಡಲಾಗಿದೆ.

ಇದರಿಂದಾಗಿ 2019–20ರ ಸಾಲಿನಲ್ಲಿ ಆಸ್ಟ್ರೇಲಿಯಾ ತಂಡವು ತನ್ನ ತವರಿನಲ್ಲಿ ಪಾಕಿಸ್ತಾನ (2–0) ಹಾಗೂ ನ್ಯೂಜಿಲೆಂಡ್ (3–0) ಎದುರು ಸರಣಿ ಜಯಿಸಿದ್ದು ಪರಿಗಣಿಸಲಾಗಿಲ್ಲ. ಅಲ್ಲದೇ 2020ರ ಮಾರ್ಚ್‌ನಲ್ಲಿ ಭಾರತವೂ ನ್ಯೂಜಿಲೆಂಡ್ ಎದುರು ಸೋತಿದ್ದ ಸರಣಿಯೂ ಪರಿಗಣಿತವಾಗಿಲ್ಲ. ಇದರಿಂದಾಗಿ ಆಸ್ಟ್ರೇಲಿಯಾಕ್ಕೆ ರೇಟಿಂಗ್ ಪಾಯಿಂಟ್‌ಗಳು ಕಡಿಮೆಯಾದವು. 2021–22ರಲ್ಲಿ ಆಸ್ಟ್ರೇಲಿಯಾ ತಂಡವು 4–0ಯಿಂದ ಇಂಗ್ಲೆಂಡ್ ವಿರುದ್ಧ ಗೆದ್ದಿತ್ತು.

ಇಂಗ್ಲೆಂಡ್ ತಂಡವು ಮೂರನೇ ಸ್ಥಾನದಲ್ಲೇ ಮುಂದುವರಿದಿದೆ. ಆ್ಯಷಸ್ ಸರಣಿಯಲ್ಲಿ ಮತ್ತು ವೆಸ್ಟ್ ಇಂಡೀಸ್‌ನಲ್ಲಿ ಸರಣಿಗಳನ್ನು ಸೋತಿತ್ತು.

ಪುರುಷರ ಟಿ20 ತಂಡ ರ‍್ಯಾಂಕಿಂಗ್ ನಲ್ಲಿ ಭಾರತ ಅಗ್ರಸ್ಥಾನ ಗಳಿಸಿದೆ.

10ಕೆ: ನಿಕೊಲಸ್, ಐರಿನ್ ಸ್ಪರ್ಧೆ

ಬೆಂಗಳೂರು: ಕೆನ್ಯಾದ ನಿಕೊಲಸ್ ಕಿಪ್ಕೊರಿರ್ ಕಿಮೆಲಿ ಮತ್ತು ಐರಿನ್ ಚೆಪ್ಟಾಯ್ ಅವರು ಬೆಂಗಳೂರು ವಿಶ್ವ 10ಕೆ ಸ್ಪರ್ಧೆಯ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗಗಳಲ್ಲಿ ಸ್ಪರ್ಧಿಸಲಿದ್ದಾರೆ. ಸ್ಪರ್ಧೆಯ ಸಂಘಟಕರು ಮಂಗಳವಾರ ಪ್ರಕಟಣೆಯಲ್ಲಿ ಈ ವಿಷಯ ತಿಳಿಸಿದ್ದಾರೆ.

15ನೇ ಆವೃತ್ತಿಯ ಪ್ರತಿಷ್ಠಿತ ವಿಶ್ವ ಅಥ್ಲೆಟಿಕ್ಸ್ ಗೋಲ್ಡ್ ಲೇಬಲ್ ಸ್ಪರ್ಧೆಯು ಇದೇ 21ರಂದು ಉದ್ಯಾನನಗರಿಯಲ್ಲಿ ನಡೆಯಲಿದೆ.

ನಿಕೊಲಸ್ ಹಾಗೂ ಐರಿನ್ ಹಿಂದಿನ ಆವೃತ್ತಿಗಳಲ್ಲಿ ಕೂಟ ದಾಖಲೆಯೊಂದಿಗೆ ಚಾಂಪಿಯನ್ ಪಟ್ಟ ಧರಿಸಿದ್ದರು. ಪುರುಷರ ವಿಭಾಗದಲ್ಲಿ ನಿಕೊಲಸ್ 27 ನಿಮಿಷ 38 ಸೆಕೆಂಡುಗಳಲ್ಲಿ ಮತ್ತು ಮಹಿಳೆಯರ ವಿಭಾಗದಲ್ಲಿ ಐರಿನ್ 30 ನಿ. 35 ಸೆ.ಗಳಲ್ಲಿ ಗುರಿ ಮುಟ್ಟಿದ್ದರು.

'ಯಶಸ್ಸಿನ ಅಮಲು ತಲೆಗೇರದಿರಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೆದ್ದಾಗ ಹಿಗ್ಗದೇ ಸೋತಾಗ ಕುಗ್ಗದೆ ಒಂದೇ ರೀತಿಯ ಮನಸ್ಥಿತಿ ಮೈಗೂಡಿಸಿಕೊಳ್ಳಬೇಕು ಎಂದು ಯುವ ಅಥ್ಲೀಟ್‌ಗಳಿಗೆ ಖ್ಯಾತನಾಮ ಬಾಕ್ಸರ್ ಮೇರಿ ಕೋಮ್ ಕಿವಿಮಾತು ಹೇಳಿದರು.

ಗೋ ಸ್ಪೋರ್ಟ್ಸ್ ಸಂಸ್ಥೆ ಹಾಗೂ ಇನ್ಫೊಸಿಸ್ ಫೌಂಡೇಷನ್ ಮಂಗಳವಾರ ಜಂಟಿಯಾಗಿ ಇಲ್ಲಿ ಆಯೋಜಿಸಿದ್ದ 'ಗರ್ಲ್ಸ್ ಫಾರ್ ಗೋಲ್ಡ್' ಕಾರ್ಯಕ್ರಮದ ಸಂವಾದದಲ್ಲಿ ಅವರು ಮಾತನಾಡಿದರು.

'ಒಂದಷ್ಟು ಮಂದಿ ಜೂನಿಯರ್ ಅಥ್ಲೀಟ್‌ಗಳು ಅಂತರರಾಷ್ಟ್ರೀಯ ಮಟ್ಟದಲ್ಲಿ ಪದಕ ಗೆದ್ದ ಬಳಿಕ ಅಹಂಕಾರ ಬೆಳೆಸಿಕೊಳ್ಳುತ್ತಾರೆ. ಅವರ ಜೀವನಶೈಲಿಯೇ ಬದಲಾಗುತ್ತದೆ. ಯಾರಿಗೂ ಗೌರವ ನೀಡುವುದಿಲ್ಲ. ಅಂತಹ ಮನೋಭಾವ ತಾಳದೆ ನಿರ್ಲಿಪ್ತ ಭಾವದೊಂದಿಗೆ ಯಶಸ್ಸು ಸಾಧಿಸುತ್ತಾ ಮುನ್ನಡೆಯಬೇಕು' ಎಂದು ಹೇಳಿದರು.

ಮೇರಿ ಕೋಮ್

'ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದ ನಾನು ಎಲ್ಲ ಯಶಸ್ಸನ್ನು ಸಾಧಿಸಿದ್ದೇನೆ. ಆದರೆ ಒಲಿಂಪಿಕ್ಸ್ ಚಿನ್ನ ಒಂದೇ ಬಾಕಿ ಇದೆ. ಕಠಿಣ ಪರಿಶ್ರಮವೇ ಈ ಸಾಧನೆಗೆ ಕಾರಣ' ಎಂದರು.

ಈ ಸಂದರ್ಭದಲ್ಲಿ ಇನ್ಫೊಸಿಸ್ ಫೌಂಡೇಷನ್ ಅಧ್ಯಕ್ಷೆ ಸುಧಾಮೂರ್ತಿ ಕಾರ್ಯಕ್ರಮದಲ್ಲಿ ಹಾಜರಿದ್ದ ಅಥ್ಲೀಟ್‌ಗಳಿಗೆ ಶುಭ ಹಾರೈಸಿದರು.

ಗೋ ಸ್ಪೋರ್ಟ್ಸ್–ಇನ್ಫೊಸಿಸ್ ಒಪ್ಪಂದ: 13ರಿಂದ 19 ವರ್ಷದೊಳಗಿನ ಪ್ರತಿಭಾನ್ವಿತ ಮಹಿಳಾ ಅಥ್ಲೀಟ್‌ಗಳನ್ನು ಪ್ರೋತ್ಸಾಹಿಸುವ ಉದ್ದೇಶದೊಂದಿಗೆ ಗೋ ಸ್ಪೋರ್ಟ್ಸ್ ಹಾಗೂ ಇನ್ಫೊಸಿಸ್ ಫೌಂಡೇಷನ್ ಒಪ್ಪಂದ ಮಾಡಿಕೊಂಡಿವೆ. ದೇಶದಾದ್ಯಂತ ಆರಂಭದಲ್ಲಿ ಐದು ಅಕಾಡೆಮಿಗಳನ್ನು ಗುರುತಿಸಿ ಅವುಗಳ ಮೂಲಕ ಅಥ್ಲೀಟ್‌ಗಳಿಗೆ ನೆರವು ನೀಡಲಾಗುತ್ತದೆ.

'ವಿಶ್ವದರ್ಜೆಯ ತರಬೇತುದಾರರು ಮತ್ತಿತರ ಸೌಲಭ್ಯಗಳನ್ನು ಅಕಾಡೆಮಿಗಳ ಮೂಲಕ ಆಯ್ಕೆ ಮಾಡಲಾದ ಅಥ್ಲೀಟ್‌ಗಳಿಗೆ ನೀಡಲಾಗುತ್ತದೆ. 4 ವರ್ಷಗಳ ಯೋಜನೆಗೆ ಸದ್ಯ ₹ 30 ಕೋಟಿ ಅನುದಾನ ನೀಡಲಾಗುತ್ತಿದೆ. ಬಳಿಕ ಯೋಜನೆಯನ್ನು ವಿಸ್ತರಿಸಲಾಗುವುದು' ಎಂದು ಗೋ ಸ್ಪೋರ್ಟ್ಸ್ ಕಾರ್ಯನಿರ್ವಹಣಾಧಿಕಾರಿ ದೀಪ್ತಿ ಬೋಪಯ್ಯ ತಿಳಿಸಿದರು.

'ಪ್ರಕರಣಗಳ ಮುಚ್ಚಿಹಾಕಲು ಯತ್ನಿಸಿದ ಸಚಿವ'

ನವದೆಹಲಿ (ಪಿಟಿಐ): 'ಈ ಹಿಂದೆ ನಡೆದ ಲೈಂಗಿಕ ದೌರ್ಜನ್ಯದ ಕೆಲವು ಪ್ರಕರಣಗಳನ್ನು ಡಬ್ಲ್ಯುಎಫ್‌ಐ ಮುಚ್ಚಿಹಾಕಿತ್ತು. ಪ್ರಕರಣಗಳ ಕುರಿತು ಸೂಕ್ತ ಕ್ರಮ ಕೈಗೊಳ್ಳದ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಮೇಲುಸ್ತುವಾರಿ ಸಮಿತಿ ರಚಿಸುವ ಮೂಲಕ ಇದೇ ಹಾದಿ ಅನುಸರಿಸಿದರು' ಎಂದು ಕುಸ್ತಿಪಟು ವಿನೇಶಾ ಫೋಗಟ್ ಆರೋಪಿಸಿದ್ದಾರೆ.

'ಈ ಹಿಂದೆ ರಾಷ್ಟ್ರೀಯ ಶಿಬಿರದ ವೇಳೆ ಎರಡು ಬಾರಿ ಲೈಂಗಿಕ ದೌರ್ಜನ್ಯ ಪ್ರಕರಣದ ದೂರುಗಳು ವರದಿಯಾಗಿದ್ದವು. ಆದರೆ ಡಬ್ಲ್ಯುಎಫ್‌ಐ ಪ್ರಕರಣಗಳನ್ನು ಮುಚ್ಚಿಹಾಕುವಲ್ಲಿ ಯಶಸ್ವಿಯಾಗಿತ್ತು' ಎಂದು ವಿನೇಶಾ ಅವರು ಮಂಗಳವಾರ ಹೇಳಿದ್ದಾರೆ.

ತರಬೇತಿ ಶಿಬಿರ ಆರಂಭಿಸಲು ಆಗ್ರಹ: ಏಷ್ಯನ್ ಗೇಮ್ಸ್ ಪೂರ್ವಸಿದ್ಧತೆಗೆ ಸೂಕ್ತ ತರಬೇತಿಯ ಕೊರತೆಯಿರುವುದರಿಂದ ರಾಷ್ಟ್ರೀಯ ಶಿಬಿರಗಳನ್ನು ಭಾರತ ಕ್ರೀಡಾ ಪ್ರಾಧಿಕಾರ (ಎಸ್‌ಎಐ) ಪುನರಾರಂಭಿಸಬೇಕು ಎಂದು ಬ್ರಿಜ್‌ಭೂಷಣ್ ಶರಣ್ ಸಿಂಗ್ ವಿರುದ್ಧ ನಡೆಯುತ್ತಿರುವ ಪ್ರತಿಭಟನೆಯಲ್ಲಿ ಭಾಗಿಯಾಗದ ಕುಸ್ತಿಪಟುಗಳು ಆಗ್ರಹಿಸಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ರೊನಾಲ್ಡೊ 'ಶ್ರೀಮಂತ ಕ್ರೀಡಾಪಟು'



ನ್ಯೂಯಾರ್ಕ್ (ರಾಯಿಟರ್ಸ್): ಪೋರ್ಚುಗಲ್‌ನ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ವಾರ್ಷಿಕವಾಗಿ ಅತಿಹೆಚ್ಚು ಹಣ ಸಂಪಾದಿಸುವ ಕ್ರೀಡಾಪಟುಗಳ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿದ್ದಾರೆ.

ವೇತನ ಮತ್ತು ಇತರ ಮೂಲಗಳಿಂದ ಅವರು ವಾರ್ಷಿಕವಾಗಿ ₹ 1,111 ಕೋಟಿ ಗಳಿಸುತ್ತಿದ್ದಾರೆ ಎಂದು ಫೋಬ್ಸ್ ನಿಯತಕಾಲಿಕೆ ವರದಿ ಮಾಡಿದೆ. ಕಳೆದ ವರ್ಷ ಮ್ಯಾಂಚೆಸ್ಟರ್ ಯುನೈಟೆಡ್ ಕ್ಲಬ್‌ನಿಂದ ಸೌದಿ ಅರೇಬಿಯಾದ ಅಲ್ ನಸ್ರ್ ಕ್ಲಬ್ ಸೇರಿದ್ದರಿಂದ ಅವರ ವಾರ್ಷಿಕ ಗಳಿಕೆ ಹೆಚ್ಚಿದೆ. ಫುಟ್‌ಬಾಲ್ ಆಟಗಾರರಾದ ಅರ್ಜೆಂಟೀನಾದ ಲಯೊನೆಲ್ ಮೆಸ್ಸಿ (₹1,062 ಕೋಟಿ) ಮತ್ತು ಮತ್ತು ಫ್ರಾನ್ಸ್‌ನ ಎಂಬಾಪೆ (₹981 ಕೋಟಿ) ಕ್ರಮವಾಗಿ ಎರಡು ಹಾಗೂ ಮೂರನೇ ಸ್ಥಾನದಲ್ಲಿದ್ದಾರೆ.

ಮೆಸ್ಸಿಗೆ ಎರಡು ವಾರ ಅಮಾನತು ಶಿಕ್ಷೆ

ಪ್ಯಾರಿಸ್ (ರಾಯಿಟರ್ಸ್): ಅನುಮತಿ ಪಡೆಯದೆ ಸೌದಿ ಅರೇಬಿಯಾಕ್ಕೆ ಪ್ರಯಾಣಿಸಿದ್ದಕ್ಕೆ ಫುಟ್‌ಬಾಲ್ ಆಟಗಾರ ಲಯೊನೆಲ್ ಮೆಸ್ಸಿ ಅವರನ್ನು ಪಿಎಸ್‌ಜಿ ಕ್ಲಬ್ ಎರಡು ವಾರಗಳ ಅವಧಿಗೆ ಅಮಾನತು ಮಾಡಿದೆ.

ಮೆಸ್ಸಿ ಅವರು ಎರಡು ವಾರ ಯಾವುದೇ ಪಂದ್ಯ ಆಡುವಂತಿಲ್ಲ ಮತ್ತು ಸಹ ಆಟಗಾರರ ಜತೆ ಅಭ್ಯಾಸ ನಡೆಸುವಂತಿಲ್ಲ. ಎರಡು ವಾರಗಳ ಸಂಭಾವನೆಯನ್ನೂ ತಡೆಹಿಡಿಯಲಾಗುವುದು ಎಂದು ಕ್ಲಬ್ ಪ್ರಕಟಣೆ ತಿಳಿಸಿದೆ.

ಆರ್ಚರಿ: 4 ವಿಭಾಗಗಳಲ್ಲಿ ಫೈನಲ್‌ಗೆ ಭಾರತ

ತಾಷ್ಕೆಂಟ್, ಉಜ್ಬೆಕಿಸ್ತಾನ (ಪಿಟಿಐ): ಏಷ್ಯಾ ಕಪ್ ಸ್ಟೇಜ್ 2 ವಿಶ್ವ ರ‍್ಯಾಂಕಿಂಗ್ ಆರ್ಚರಿ ಟೂರ್ನಿಯಲ್ಲಿ ಭಾರತದ ಆರ್ಚರಿ ಸ್ಪರ್ಧಿಗಳು ಭರ್ಜರಿ ಆರಂಭ ಮಾಡಿದ್ದಾರೆ. ಮಂಗಳವಾರ ನಾಲ್ಕು ತಂಡ ವಿಭಾಗಗಳ ಸ್ಪರ್ಧೆಗಳಲ್ಲಿ ಫೈನಲ್ ತಲುಪಿದ್ದಾರೆ.

ಪುರುಷರ ರಿಕರ್ವ್ ತಂಡದಲ್ಲಿ ಅಗ್ರಶ್ರೇಯಾಂಕ ಪಡೆದಿರುವ ಮೃಣಾಲ್ ಚೌಹಾನ್, ತುಷಾರ್ ಶೆಲಕೆ ಮತ್ತು ಜಯಂತ್ ತಾಲೂಕ್ದಾರ್ ಅವರು ಸೆಮಿಫೈನಲ್‌ನಲ್ಲಿ 6-0 ಯಿಂದ ಉಜ್ಬೆಕಿಸ್ತಾನದ ಚೆನ್ ಯಾವೊ ಯುಯ್, ಮಿರ್ಜಾಲೊಲ್ ಕರೊರೊವ್ ಮತ್ತು ಅಮೀರ್‌ಖಾನ್ ಸದಿಕೊವ್ ಎದುರು ಗೆದ್ದರು.

ಶುಕ್ರವಾರ ನಡೆಯಲಿರುವ ಫೈನಲ್ ನಲ್ಲಿ ಭಾರತದ ಸ್ಪರ್ಧಿಗಳು ಚೀನಾ ತಂಡದ ಸವಾಲು ಎದುರಿಸುವರು. ಸಂಗೀತಾ, ಪ್ರಾಚಿ ಸಿಂಗ್ ಮತ್ತು ತನಿಶಾ ವರ್ಮಾ ಅವರಿದ್ದ ಮಹಿಳೆಯರ ರಿಕರ್ವ್ ತಂಡವು ನಾಲ್ಕರ ಘಟ್ಟದಲ್ಲಿ 6–0ಯಿಂದ ಸೌದಿ ಅರೇಬಿಯಾ ತಂಡಕ್ಕೆ ಸೋಲುಣಿಸಿ ಫೈನಲ್‌ಗೆ ಕಾಲಿಟ್ಟಿತು.

ಪುರುಷರ ಕಾಂಪೌಂಡ್ ಸ್ಪರ್ಧೆಯ ಸೆಮಿಫೈನಲ್‌ನಲ್ಲಿ ಭಾರತದ ಅಭಿಷೇಕ್ ವರ್ಮಾ, ಕುಶಾಲ್ ದಲಾಲ್ ಮತ್ತು ಅಮಿತ್ 236-221ರಿಂದ ಸೌದಿ ಅರೇಬಿಯಾ ತಂಡವನ್ನು ಸೋಲಿಸಿದರು. ಪ್ರಣೀತ್ ಕೌರ್, ಪ್ರಗತಿ ಮತ್ತು ರಾಗಿಣಿ ಅವರಿದ್ದ ಮಹಿಳೆಯರ ಕಾಂಪೌಂಡ್ ತಂಡವೂ ಫೈನಲ್‌ಗೆ ಸ್ಥಾನ ಖಚಿತಪಡಿಸಿಕೊಂಡಿತು.